ಗುರುವಾರ, ಅಕ್ಟೋಬರ್ 12, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂದಹಾಸ
ನವದೆಹಲಿಯಲ್ಲಿ ಬುಧವಾರ ನಡೆದ ಫ್ಯಾಷನ್ ಶೋನಲ್ಲಿ ಭಾಗವಹಿಸಿದ್ದ ನಟಿ ಹಿನಾ ಖಾನ್



‘ದೇಶದಲ್ಲಿ ರಾಜಕೀಯ ವಾತಾವರಣ ಕಲುಷಿತ’ • ‘ಜಯಪ್ರಕಾಶ್ ನಾರಾಯಣ ಹೋರಾಟದ ಮಾದರಿ ಅಗತ್ಯ’

ಮತ್ತೊಮ್ಮೆ ಕ್ರಾಂತಿಗೆ ನೆಲ ಹದ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ರಾಜಕೀಯ ವಾತಾವರಣ ಕಲುಷಿತವಾಗಿದ್ದು, ಮತ್ತೊಮ್ಮೆ ಸಂಪೂರ್ಣ ಕ್ರಾಂತಿಗೆ ದೇಶದ ನೆಲ ಹದವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಭಾರತ ಯಾತ್ರಾ ಕೇಂದ್ರ, ಲೋಕನಾಯಕ ಜೆ.ಪಿ. ವಿಚಾರ ವೇದಿಕೆ ಬುಧವಾರ ಹಮ್ಮಿಕೊಂಡಿದ್ದ ಜಯಪ್ರಕಾಶ್ ನಾರಾಯಣ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಬಿ.ಆರ್. ಪಾಟೀಲ ಅವರಿಗೆ ಜೆ.ಪಿ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ದೇಶದ ರಾಜಕೀಯ ವ್ಯವಸ್ಥೆ ಬದಲಾಗಬೇಕಿದೆ. ಈಗಿರುವ ಪರಿಸ್ಥಿತಿಯೇ ಮುಂದುವರಿದರೆ ಹೋರಾಟಗಾರರು, ಪ್ರಾಮಾಣಿಕರು ರಾಜಕೀಯ ಮಾಡದಂತಹ ಸ್ಥಿತಿ ನಿರ್ಮಾಣವಾಗಲಿದೆ. ಅದಕ್ಕಾಗಿ ಸಮಾನ ಮನಸ್ಕರು ಚರ್ಚಿಸಿ, ಜಯಪ್ರಕಾಶ್ ಅವರ ಹೋರಾಟದ ಮಾದರಿಯಲ್ಲಿ ಸಂಪೂರ್ಣ ಕ್ರಾಂತಿಗೆ ಮುನ್ನುಡಿ ಬರೆಯಬೇಕಿದೆ ಎಂದರು.

‘ನಾಲ್ಕು ವರ್ಷ ಆಡಳಿತ ನಡೆಸಿದ ಬಿಜೆಪಿ ರಾಜ್ಯವನ್ನು ಆರ್ಥಿಕವಾಗಿ ದಿವಾಳಿ ಮಾಡಿದೆ. ಕಾಮಗಾರಿ ಮಾಡಿದ್ದ ಬಾಕಿ ಬಿಲ್‌ಗಳ ಹೊರೆಯೇ ₹ 39 ಸಾವಿರ ಕೋಟಿ ಇದೆ. ಇಂತಹ ಆರ್ಥಿಕ ಮುಗ್ಗಟ್ಟಿನ ಸನ್ನಿವೇಶದಲ್ಲೂ ನಾಲ್ಕು ಗ್ಯಾರಂಟಿಗಳಿಗೆ ಹಣ ನೀಡಿದ್ದೇವೆ. ಐದನೇ ಗ್ಯಾರಂಟಿಯನ್ನು ಜನವರಿಯಲ್ಲಿ ಜಾರಿಗೆ ತರಲಿದ್ದು, ಎಷ್ಟೇ ಕಷ್ಟ ಎದುರಾದರೂ ಹಿಂದಡಿ ಇಡುವುದಿಲ್ಲ’ ಎಂದು ಭರವಸೆ ನೀಡಿದರು.

ಸಾಹಿತಿ ನಟರಾಜ್ ಹುಳಿಯಾರ್, ‘ಜಯಪ್ರಕಾಶ್ ನಾರಾಯಣ ಅವರು ಕಾಂಗ್ರೆಸ್ ವಿರೋಧಿಯಲ್ಲ. ಅವರದು ಅಧಿಕಾರದ ವಿರುದ್ಧದ ಹೋರಾಟ. ಅವರ ಹೋರಾಟವನ್ನು ಜಾತಿವಾದಿ, ಭ್ರಷ್ಟ, ವೈದಿಕ ಮನಃಸ್ಥಿತಿಯ ಕಾರ್ಯಕರ್ತರು ಹೈಜಾಕ್ ಮಾಡಿದ್ದರು. ಕೋಮುವಾದಿಗಳಿಗೆ ಅವರ ಹೆಸರು ಹೇಳುವ ಹಕ್ಕೂ ಇಲ್ಲ ಎಂದು ಟೀಕಿಸಿದರು. ನೆಹರೂ ಸಮಾಜವಾದಿಯೂ ಆಗಿದ್ದರು. ಕಾಂಗ್ರೆಸ್ ಸಮಾಜವಾದಿ ಚಿಂತನೆ ಅಳವಡಿಸಿಕೊಂಡಿತ್ತು. ಜೆಪಿ ತುರ್ತುಪರಿಸ್ಥಿತಿ ವಿರೋಧಿಸಿದರೂ, ಆ ಸಮಯದಲ್ಲಿ ತಂದ ಸಂವಿಧಾನದ 42 ತಿದ್ದುಪಡಿಯ ಜಾತ್ಯತೀತ, ಸಮಾಜವಾದಿ ಅಂಶಗಳನ್ನು ಶ್ಲಾಘಿಸಿದ್ದರು. ವಲ್ಲಭಭಾಯಿ ಪಟೇಲರು ನೆಹರೂ ಅವರಂತೆ ಪ್ರಗತಿವಾದಿಯಾಗಿರಲಿಲ್ಲ ಎಂದು ವಿಶ್ಲೇಷಿಸಿದರು.

ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್ ಅಧ್ಯಕ್ಷತೆ ವಹಿಸಿದ್ದರು. ಚಿತ್ರ ನಿರ್ದೇಶಕ ಟಿ.ಎನ್. ಸೀತಾರಾಂ. ವಿಧಾನ ಪರಿಷತ್ ಮಾಜಿ ಸದಸ್ಯರಾದ ಮೋಹನ್ ಕೊಂಡಜ್ಜಿ, ಎಂ.ಪಿ. ನಾಡಗೌಡ, ಸಾಹಿತಿ ವಸುಂಧರಾ ಭೂಪತಿ, ಕೆ.ವಿ.ನಾಗರಾಜಮೂರ್ತಿ ಉಪಸ್ಥಿತರಿದ್ದರು.



ಬೆಂಗಳೂರಿನಲ್ಲಿ ಬುಧವಾರ ಹಮ್ಮಿಕೊಂಡಿದ್ದ ಜಯಪ್ರಕಾಶ್ ನಾರಾಯಣ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಾಸಕ ಬಿ.ಆರ್. ಪಾಟೀಲ ಅವರಿಗೆ ಜೆ.ಪಿ ಪ್ರಶಸ್ತಿ ಪ್ರದಾನ ಮಾಡಿದರು. ಬಿ.ಎಲ್.ಶಂಕರ್, ಡಾ.ವಸುಂಧರಾ ಭೂಪತಿ, ನಟರಾಜ್ ಹುಳಿಯಾರ್, ಕೆ.ವಿ.ನಾಗರಾಜಮೂರ್ತಿ, ಟಿ.ಎನ್. ಸೀತಾರಾಂ ಇದ್ದರು –ಪ್ರಜಾವಾಣಿ ಚಿತ್ರ

‘ಸಿದ್ದರಾಮಯ್ಯ ಮೊದಲಿನಂತಿಲ್ಲ’

‘2013–2018ರ ಅವಧಿಯಲ್ಲಿ ಇದ್ದ ಸಿದ್ದರಾಮಯ್ಯ ಈಗಿಲ್ಲ’ ಎಂಬ ಶಾಸಕ ಬಿ.ಆರ್.ಪಾಟೀಲ ಅವರ ಮಾತಿಗೆ ಮುಖ್ಯಮಂತ್ರಿ ಕೆಲಹೊತ್ತು ವಿಚಲಿತರಾದರು.

ಮೊದಲ ಅವಧಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಸಮಾಜಕ್ಕೆ ಉಪಯುಕ್ತವಾದ ಸಾಕಷ್ಟು ನಿರ್ಧಾರಗಳನ್ನು ತೆಗೆದುಕೊಂಡಿದ್ದರು. ಈಗ ಆ ಧೈರ್ಯ ತೋರುತ್ತಿಲ್ಲ. ಸಮಾಜಕ್ಕೆ ಮತ್ತೆ ಅಂತಹ ಸಿದ್ದರಾಮಯ್ಯ ಬೇಕಿದೆ ಎಂದು ಪಾಟೀಲರು ಹೇಳಿದರು.

ಪಾಟೀಲರ ಮಾತಿಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ‘ವಯಸ್ಸಿನ ಕಾರಣಕ್ಕೆ ಬದಲಾದಂತೆ ಕಾಣಬಹುದು. ಆದರೆ, ತತ್ವ ಸಿದ್ಧಾಂತಗಳಲ್ಲಿ ಎಂದೂ ರಾಜಿಯಾಗಿಲ್ಲ. ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ಗ್ಯಾರಂಟಿ ಜಾರಿಗೆ ತಂದಿರುವೆ. ಅದಕ್ಕೆ ಜಾತಿ, ಧರ್ಮ ಇದೆಯಾ? ಈ ಸಿದ್ದರಾಮಯ್ಯ ಎಂದೂ ಜನಪರ ಇರುತ್ತಾನೆ’ ಎಂದರು.

‘ಬಿ.ಆರ್.ಪಾಟೀಲ ಮತ್ತು ನಾನು ಒಂದೇ ಸಮಯಕ್ಕೆ ರಾಜಕೀಯಕ್ಕೆ ಬಂದೆವು. ಅವನಷ್ಟು ಹೋರಾಟ ಮಾಡಿಲ್ಲ. ಅವನು ಜೈಲಿಗೂ ಹೋಗಿ ಬಂದ. ನಾನು ತುರ್ತು ಪರಿಸ್ಥಿತಿಯಲ್ಲಿ ಹೋರಾಟ ಮಾಡಿದರೂ, ಪೊಲೀಸರು ಜೈಲಿಗೆ ಕಳುಹಿಸಲಿಲ್ಲ. ಅದು ಬೇಸರ ತರಿಸಿತ್ತು’ ಎಂದು ಹೇಳಿದರು.

‘ಎಂಡಿಎನ್‌ರಿಂದ ಸಿಗರೇಟು ಕಲಿತಿದ್ದೆ’

ನಾನು ರಾಜಕೀಯಕ್ಕೆ ಬರಲು ರೈತ ನಾಯಕ ಎಂ.ಡಿ. ನಂಜುಂಡಸ್ವಾಮಿ ಅವರೇ ಕಾರಣ. ಕಾನೂನು ಕಾಲೇಜಿನಲ್ಲಿ ಓದುವಾಗ ಅವರು ನಮಗೆ ಪಾಠ ಮಾಡದಿದ್ದರೂ, ಅವರ ಜತೆ ರಾಜಕೀಯ ವಿಚಾರ ಚರ್ಚಿಸುತ್ತಿದ್ದೆವು. ಚಾರ್‌ಮಿನಾರ್ ಸಿಗರೇಟು ಸೇದುವುದನ್ನ ಕಲಿತದ್ದೂ ಅವರಿಂದಲೇ. ಅವರಿಂದ ಪ್ರೇರಿತನಾಗಿ ಪಂಚಾಯತಿ ಚುನಾವಣೆಗೆ ನಿಂತೆ. ಮೊದಲ ಪ್ರಯತ್ನದಲ್ಲೇ ಸೋತೆ. ಅಪ್ಪ ರಾಜಕೀಯ ಪ್ರವೇಶ ವಿರೋಧಿಸಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೆನಪು ಮೆಲುಕು ಹಾಕಿದರು.

ಸುದ್ದಿ 2 ನಿಮಿಷ

ಪರಶುರಾಮ ಥೀಮ್ ಪಾರ್ಕ್ ಪಿಐಎಲ್ ವಜಾ

ಬೆಂಗಳೂರು: ‘ಉಡುಪಿ ಜಿಲ್ಲೆಯ ಕಾರ್ಕಳ ಸಮೀಪದ ಬೈಲೂರಿನ ಉಮಿಕ್ಕಲ್ ಬೆಟ್ಟದ ಮೇಲಿನ ಪರಶುರಾಮ ಥೀಮ್ ಪಾರ್ಕ್ ನಿರ್ಮಾಣವು ಕಳಪೆ ಕಾಮಗಾರಿಯಿಂದ ಕೂಡಿದೆ’ ಎಂದು ಎಂದು ಆಕ್ಷೇಪಿಸಿ ಶ್ರೀರಾಮ ಸೇನೆ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಹಾಗೂ ಬೆಂಗಳೂರಿನ ಎಸ್.ಭಾಸ್ಕರನ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ಈ ಅರ್ಜಿ ವಿಚಾರಣೆ ನಡೆಸಿ, ‘ಅರ್ಜಿದಾರರು ತಮ್ಮ ಆಕ್ಷೇಪಣೆಯನ್ನು ಸೂಕ್ತ ಸಂದರ್ಭದಲ್ಲಿ ಸಂಬಂಧಿಸಿದ ಪ್ರಾಧಿಕಾರಗಳಿಗೆ ಮುಟ್ಟಿಸಿ ಪರಿಹಾರ ಪಡೆಯುವಲ್ಲಿ ವಿಫಲರಾಗಿದ್ದಾರೆ. ನಿರ್ಮಾಣ ಕಾಮಗಾರಿ ಮುಗಿಯುವ ಹಂತದಲ್ಲಿರುವಾಗ ಏಕಾಏಕಿ ಎಚ್ಚರಗೊಂಡು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ’ ಎಂದು ವಜಾಕ್ಕೆ ಕಾರಣ ನೀಡಿದೆ.



‘ಥೀಮ್ ಪಾರ್ಕ್ ನಿರ್ಮಾಣಕ್ಕೆ ಸರ್ಕಾರದ ಹಲವು ಇಲಾಖೆಗಳು ಅನುದಾನ ನೀಡಿವೆ. ಯೋಜನೆಗೆ ಈಗಾಗಲೇ ಒಟ್ಟು ₹ 8.72 ಕೋಟಿ ವೆಚ್ಚವಾಗಿದೆ. ಹೀಗಿರುವಾಗ, ಊಹೆ ಮತ್ತು ಪೂರ್ವಗ್ರಹಪೀಡಿತ ಭಾವನೆಗಳೊಂದಿಗೆ ಈ ಅರ್ಜಿ ಸಲ್ಲಿಸಲಾಗಿದೆ’ ಎಂದು ನ್ಯಾಯಪೀಠ ಹೇಳಿದೆ.

‘ಗೋಡ್ಸೆ ವೈಭವೀಕರಣ ಒಪ್ಪಲ್ಲ’

ಹುಬ್ಬಳ್ಳಿ: ‘ಮಹಾತ್ಮ ಗಾಂಧಿ ಅವರನ್ನು ಹತ್ಯೆ ಮಾಡಿದ ನಾಥೂರಾಮ್ ಗೋಡ್ಸೆ ಅವರ ವೈಭವೀಕರಣ ನಾನು ಒಪ್ಪಲ್ಲ’ ಎಂದು ನಮೋ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಹೇಳಿದರು.

‘ಜನ ಗಣ ಮನ– ಬೆಸೆಯೋಣ’ ಬೈಕ್ ಯಾತ್ರೆ ಹಿನ್ನೆಲೆಯಲ್ಲಿ ಬುಧವಾರ ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಗೋಡ್ಸೆ ಅವರನ್ನು ಮುಖ್ಯವಾಗಿ ಭಾರತ ಮತ್ತು ಹಿಂದೂ ಧರ್ಮದ ಕುರಿತು ಇರುವ ಆಲೋಚನೆಗಳಿಗೆ ಸಂಭ್ರಮಿಸಬಹುದು ಹೊರತು ಬೇರೆ ವಿಚಾರಗಳಿಗಲ್ಲ’ ಎಂದರು.

‘ತಲವಾರ್ ಹಿಡಿದುಕೊಂಡು ಟಿಪ್ಪು ಸುಲ್ತಾನ್, ಔರಂಗಜೇಬನ ಚಿತ್ರ ಹಾಕಿಕೊಂಡು ಮೆರೆಯುತ್ತಿರುವವರನ್ನು ಸಮರ್ಥಿಸುವ ಸರ್ಕಾರದ ಕೃತ್ಯ ಸಾವಿರ ಪಟ್ಟು ನೀಚ ಕೃತ್ಯ. ಇಡೀ ಸಮಾಜವನ್ನು ಇಬ್ಭಾಗ ಮಾಡಲು ಸರ್ಕಾರ ಮುಂದಾಗಿದೆಯೆಂದು ಅರ್ಥ’ ಎಂದು ಟೀಕಿಸಿದರು.

‘ಗುಣಮಟ್ಟ ಸರಿ ಇಲ್ಲವೆಂದೇ ಸರ್ಕಾರಿ ಶಾಲೆ ಬಿಡುವುದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳನ್ನು ಬಿಟ್ಟು ಅನುದಾನಿತ ಮತ್ತು ಖಾಸಗಿ ಶಾಲೆಗಳಿಗೆ ಹೋಗಿ ಸೇರಿದರೆ, ನಮ್ಮ ಶಾಲೆಗಳ ಗುಣಮಟ್ಟ ಸರಿ ಇಲ್ಲ ಎಂದೇ ಅರ್ಥ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ.

ವಿಧಾನಸೌಧದಲ್ಲಿ ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಸರ್ಕಾರಿ ಶಾಲೆಗಳ ಸುಮಾರು 53 ಸಾವಿರ ವಿದ್ಯಾರ್ಥಿಗಳು ಕಳೆದ ಐದು ವರ್ಷಗಳಲ್ಲಿ ಅನುದಾನಿತ ಶಾಲೆಗಳಿಗೆ ಮತ್ತು ಖಾಸಗಿ ಶಾಲೆಗಳಿಗೆ ಸೇರಿದ್ದಾರೆ ಎಂಬ ವರದಿಯನ್ನು ಗಂಭೀರವಾಗಿ ಪರಿಗಣಿಸಿದ್ದೇನೆ’ ಎಂದು ಹೇಳಿದರು.

ನ್ಯಾಯಾಲಯದ ತೀರ್ಪು ಹೊರಬಂದ ನಂತರ 13,500 ಶಿಕ್ಷಕರಿಗೆ ನೇಮಕಾತಿ ಆದೇಶ ಪತ್ರ ನೀಡಲಾಗುವುದು. ನ್ಯಾಯಾಲಯ ಇನ್ನು ಒಂದು ತಿಂಗಳಲ್ಲಿ ನೇಮಕಾತಿ ಆದೇಶ ಪತ್ರ ನೀಡಲು ಅನುಮತಿ ನೀಡಬಹುದು ಎಂದು ತಿಳಿಸಿದರು.

ರಾಜ್ಯದ ಸರ್ಕಾರಿ ಶಾಲೆಗಳಿಗೆ ಒಟ್ಟು 53 ಸಾವಿರ ಶಿಕ್ಷಕರ ಅಗತ್ಯ ಇದೆ. 20 ಸಾವಿರ ಶಿಕ್ಷಕರು ಸೇರ್ಪಡೆಯಾದರೆ ಈಗಿರುವ ಶಿಕ್ಷಕರ ಮೇಲಿನ ಒತ್ತಡ ಕಡಿಮೆ ಆಗಲಿದೆ. ಇನ್ನೂ 20 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಸಂಬಂಧ ಮುಖ್ಯಮಂತ್ರಿಯವರಿಗೆ ಪ್ರಸ್ತಾವ ಸಲ್ಲಿಸಲು ಉದ್ದೇಶಿಸಲಾಗಿದೆ. ಇದಕ್ಕೆ ಒಪ್ಪಿಗೆ ನೀಡಿದರೆ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಈ ನೇಮಕಾತಿಯೂ ಪೂರ್ಣಗೊಳ್ಳಲಿದೆ ಎಂದರು.

ರಾಜ್ಯದಲ್ಲಿ ಒಟ್ಟು ಮೂರು ಸಾವಿರ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ನಿರ್ಮಿಸಲು ಸರ್ಕಾರ ತೀರ್ಮಾನಿಸಿದೆ. ಈ ವರ್ಷ 500–600 ಶಾಲೆಗಳನ್ನು ಆರಂಭಿಸಲು ನಿರ್ಧರಿಸಲಾಗಿದೆ. ಈ ಶಾಲೆಗಳಲ್ಲಿ ಮೂಲಸೌಕರ್ಯಗಳು ಸೇರಿದಂತೆ ಎಲ್ಲ ರೀತಿಯ ಸೌಲಭ್ಯಗಳು ಇರಲಿವೆ. ಇದರಿಂದ ಮಕ್ಕಳಿಗೆ ಅನುಕೂಲವಾಗಲಿದೆ ಎಂದರು.

ನೆಗಳೂರು ಗ್ರಾಮಸ್ಥರಿಗೆ ‘ಆಧಾರ್’

ಪ್ರಜಾವಾಣಿ ವಾರ್ತೆ

ಗುತ್ತಲ (ಹಾವೇರಿ ಜಿಲ್ಲೆ): ಆಧಾರ್ ಕಾರ್ಡ್ ಇಲ್ಲದೆ ಪರದಾಡುತ್ತಿದ್ದ ನೆಗಳೂರಿನ 30ಕ್ಕೂ ಹೆಚ್ಚು ಗ್ರಾಮಸ್ಥರಿಗೆ ಗುತ್ತಲ ಪಟ್ಟಣದ ನೆಮ್ಮದಿ ಕೇಂದ್ರದಲ್ಲಿ ಹೊಸದಾಗಿ ಆಧಾರ್ ನೋಂದಣಿ ಮಾಡಿಸಿ, ಜಿಲ್ಲಾಡಳಿತವು ಸಮಸ್ಯೆ ಬಗೆಹರಿಸಿತು.

ಕಂದಾಯ ನಿರೀಕ್ಷಕ ಆರ್.ಎನ್. ಮಲ್ಲಾಡದ ಮತ್ತು ಗ್ರಾಮ ಲೆಕ್ಕಾಧಿಕಾರಿ ಫಕ್ಕೀರೇಶ ಬಾರ್ಕಿ ಅವರು ನೆಗಳೂರ ಗ್ರಾಮಕ್ಕೆ ಭೇಟಿ ನೀಡಿ, ಸಮಸ್ಯೆ ಎದುರಿಸುತ್ತಿದ್ದ ಗ್ರಾಮಸ್ಥರಿಗೆ ತಿಳಿವಳಿಕೆ ಪತ್ರ ನೀಡಿ, ಆಧಾರ್ ನೋಂದಣಿಗೆ ಬರಲು ಕೋರಿದರು.

ವರದಿ ಪರಿಣಾಮ

ಜಿಲ್ಲಾಧಿಕಾರಿ ರಘುನಂದನ ಮೂರ್ತಿ ಆದೇಶದಂತೆ, ಜಿಲ್ಲಾ ಆಧಾರ್ ಸಂಯೋಜಕ ಬಿ.ವೀರೇಶ ಅವರು ಗುತ್ತಲದ ನೆಮ್ಮದಿ ಕೇಂದ್ರಕ್ಕೆ ಬುಧವಾರ ಭೇಟಿ ನೀಡಿ ಸಮಸ್ಯೆಗಳನ್ನು ಪತ್ತೆಹಚ್ಚಿ ಗ್ರಾಮಸ್ಥರಿಗೆ ಹೊಸದಾಗಿ ನೋಂದಣಿ ಮಾಡಿಸಿದರು.

ಏಜೆನ್ಸಿಗಳ ಎಡವಟ್ಟು: ‘2010–11ರಲ್ಲಿ ರಾಷ್ಟ್ರೀಯ ಜನಸಂಖ್ಯಾ ನೋಂದಣಿ (ಎನ್‌ಪಿಆರ್) ಸಂದರ್ಭದಲ್ಲಿ ಖಾಸಗಿ ಏಜೆನ್ಸಿಗಳು ಸಂಗ್ರಹಿಸಿದ ದತ್ತಾಂಶಗಳಲ್ಲಿ ಕೆಲ ತಪ್ಪುಗಳಾಗಿವೆ. ಕುಟುಂಬ ಸದಸ್ಯರ ಬಯೋಮೆಟ್ರಿಕ್ ಅದಲು ಬದಲಾಗಿವೆ. ಅದೇ ಆಧಾರ್‌ಗೆ ಬಳಕೆಯಾಗಿದೆ. ಹೀಗಾಗಿ ಜನರು ಆಧಾರ್ ನೋಂದಣಿ ಮಾಡಿಸಿದಾಗ ಬಯೋ ಮೆಟ್ರಿಕ್ ಹೊಂದಾಣಿಕೆ ಆಗದೇ ಸಮಸ್ಯೆಗಳಾಗಿವೆ’ ಎಂದು ಕಂದಾಯ ಇಲಾಖೆ ಅಧಿಕಾರಿಗಳು ತಿಳಿಸಿದರು.

‘ಆಧಾರ್ ನೋಂದಣಿ ಮಾಡಿಸಿದ ನಂತರ ಸ್ವೀಕೃತಿ ಪತ್ರ ಕಳೆದಿರುವುದು, ಆಧಾರ್ ಅಪ್‌ಡೇಟ್‌ಗೆ ಅವಧಿ ಮೀರಿದ ನಂತರ ಹೋಗಿದ್ದು ಸೇರಿ ಕೆಲ ತಪ್ಪುಗಳು ಗ್ರಾಮಸ್ಥರಿಂದ ಆಗಿವೆ. ಕಾರ್ಮಿಕರ ಅಂಗೈಗೆರೆ ಅಳಿಸುವುದು, ಬದಲಾಗುವುದು ಸಾಮಾನ್ಯ. ಆದರೆ, ಕೈಗಳ 10 ಬೆರಳುಗಳನ್ನು ನಾಲ್ಕು ಬಾರಿ ಸ್ಕ್ಯಾನ್ ಮಾಡಿ, ಕಣ್ಣಿನ ಸ್ಕ್ಯಾನ್ ಜೊತೆ ಹೊಂದಾಣಿಕೆ ಮಾಡಿ, ಆಧಾರ್ ಕಾರ್ಡ್ ಪಡೆಯಬಹುದು’ ಎಂದು ಜಿಲ್ಲಾ ಆಧಾರ್ ಸಂಯೋಜಕ ಬಿ.ವೀರೇಶ ತಿಳಿಸಿದರು.

ಗ್ರಾಮಸ್ಥರ ಸಂತಸ: ‘ಈ ಹಿಂದೆ ತಪ್ಪಾಗಿ ಬಯೋಮೆಟ್ರಿಕ್ ಕೊಟ್ಟವರು, ಬೆಂಗಳೂರಿನ ಖನಿಜ ಭವನದ ಆಧಾರ್ ನೋಂದಣಿ ಕೇಂದ್ರಕ್ಕೆ ಹೋಗಿ ಹಿಂದಿನ ನೋಂದಣಿಗಳನ್ನು ರದ್ದುಪಡಿಸುವಂತೆ ಅಧಿಕಾರಿಗಳು ಸಲಹೆ ನೀಡಿದ್ದಾರೆ. ಹಾವೇರಿಯ ಜಿಲ್ಲಾ ಆಧಾರ್ ಸಂಯೋಜಕರು, ಖನಿಜ ಭವನದ ಅಧಿಕಾರಿಗಳನ್ನು ಫೋನ್‌ನಲ್ಲಿ ಸಂಪರ್ಕಿಸಿ ಸಮಸ್ಯೆ ಬಗೆಹರಿಸುವಂತೆ ಕೋರಿದ್ದಾರೆ. ಈ ಬಾರಿ ನಮಗೆಲ್ಲ ಆಧಾರ್ ಕಾರ್ಡ್ ಬರುವ ವಿಶ್ವಾಸ ಮೂಡಿದೆ’ ಎಂದು ಫಕ್ಕೀರಪ್ಪ ಶಿಡ್ಲಣ್ಣನವರ ಮತ್ತು ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದರು.

ಅಕ್ಟೋಬರ್ 8ರ ‘ಪ್ರಜಾವಾಣಿ’ ಸಂಚಿಕೆಯಲ್ಲಿ ಆಧಾರ ಕಾರ್ಡ್ ಇಲ್ಲದೇ ಸಂಕಷ್ಟಕ್ಕೆ ಸಿಲುಕಿರುವ ಗ್ರಾಮಸ್ಥರ ಕುರಿತು ವಿಶೇಷ ವರದಿ ಪ್ರಕಟವಾಗಿತ್ತು.


ಹಾವೇರಿ ತಾಲ್ಲೂಕಿನ ಗುತ್ತಲ ಪಟ್ಟಣದ ನೆಮ್ಮದಿ ಕೇಂದ್ರದಲ್ಲಿ ನೆಗಳೂರು ಗ್ರಾಮಸ್ಥರಿಗೆ ಹೊಸದಾಗಿ ಆಧಾರ್ ನೋಂದಣಿ ಮಾಡಿಸಲಾಯಿತು

> ನೆಗಳೂರು ಗ್ರಾಮಸ್ಥರಿಗೆ ಆಧಾರ್ ನೋಂದಣಿ ಮಾಡಿಸಿ, ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಂಡಿದ್ದೇವೆ. ಸೇವಾ ಕೇಂದ್ರದ ಆಪರೇಟರ್‌ಗಳಿಗೆ ಪುನಶ್ಚೇತನಾ ತರಬೇತಿ ಆಯೋಜಿಸುತ್ತೇವೆ
> **ರಘುನಂದನ ಮೂರ್ತಿ,** ಜಿಲ್ಲಾಧಿಕಾರಿ

ಶೌಚಾಲಯ ಕೊರತೆ: ವರದಿ ನೀಡಲು ಆಯೋಗ ಸೂಚನೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ‘ಒಂದು ಸಾವಿರಕ್ಕೂ ಅಧಿಕ ವಿದ್ಯಾರ್ಥಿನಿಯರು ಇರುವ ಜಿಲ್ಲೆಯ ಕುಷ್ಟಗಿ ಪಟ್ಟಣದ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಅಗತ್ಯವಿರುವಷ್ಟು ಶೌಚಾಲಯ ಇಲ್ಲದಿರುವುದು ದುರದೃಷ್ಟಕರ. ಈ ಕುರಿತು ಮೂರು ದಿನಗಳಲ್ಲಿ ವಿಸ್ತೃತ ವರದಿ ನೀಡಬೇಕು’ ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಪದವಿಪೂರ್ವ ಶಿಕ್ಷಣ ಇಲಾಖೆಯ ಇಲ್ಲಿನ ಉಪನಿರ್ದೇಶಕರಿಗೆ ಪತ್ರ ಬರೆದಿದೆ.

ಈ ಕುರಿತು ‘ಪ್ರಜಾವಾಣಿ’ಯ ಮುಖಪುಟದಲ್ಲಿ ಬುಧವಾರ ‘ಸಾವಿರ ವಿದ್ಯಾರ್ಥಿನಿಯರಿಗೆ ಇರುವುದೊಂದೇ ಶೌಚಾಲಯ’ ವಿಶೇಷ ವರದಿ ಪ್ರಕಟವಾಗಿತ್ತು.

ವರದಿ ಸ್ಪಂದನೆ

ಈ ವರದಿ ಉಲ್ಲೇಖಿಸಿರುವ ರಕ್ಷಣಾ ಆಯೋಗ ‘ಕಾಲೇಜಿನಲ್ಲಿ ಶೌಚಾಲಯ ನಿರ್ಮಿಸಲು ಜಾಗದ ಸೌಲಭ್ಯವಿದ್ದರೂ ಅವಶ್ಯಕವಾಗಿರುವ ಶೌಚಾಲಯ ಇಲ್ಲದ ದುಸ್ಥಿತಿ ವಿಷಾದನೀಯ. ಆಯೋಗ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದು, ಕೂಡಲೇ ಕ್ರಮ ಕೈಗೊಂಡು ವರದಿ ಸಲ್ಲಿಸಬೇಕು’ ಎಂದು ಪತ್ರದಲ್ಲಿ ಸೂಚಿಸಿದೆ.

ನೀಟ್ ಪಿ.ಜಿ: ಕೇಂದ್ರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯ (ನೀಟ್) ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಪಿ.ಜಿ. ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅರ್ಹತಾ ಅಂಕವನ್ನು ಶೂನ್ಯಕ್ಕೆ ಇಳಿಸಿ ಹೊರಡಿಸಿರುವ ಅಧಿಸೂಚನೆ ಹಿಂಪಡೆಯಲು ನಿರ್ದೇಶಿಸಬೇಕು’ ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹುಬ್ಬಳ್ಳಿಯ ಡಾ. ವಿನೋದ್ ಜಿ. ಕುಲಕರ್ಣಿ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಮೆಡಿಕಲ್ ಕೌನ್ಸೆಲಿಂಗ್ ಕಮಿಟಿ (ಎಂಸಿಸಿ) ಸೇರಿದಂತೆ ಇತರ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: ‘ಕಳೆದ ಹತ್ತು ವರ್ಷಗಳಿಂದ ನೀಟ್-ಪಿಜಿ ಕಟ್ ಆಫ್ ಅಂಕ ಶೇ 50ರಷ್ಟಿತ್ತು. ಆದರೆ, 2023ನೇ ಸಾಲಿನ ನೀಟ್-ಪಿಜಿ ಕೌನ್ಸೆ ಲಿಂಗ್‌ಗೆ ಹಾಜರಾಗಲು ಕಟ್ ಆಫ್ ಅಂಕಗಳನ್ನು ಶೂನ್ಯಕ್ಕೆ ಇಳಿಸಿ ಎಂಸಿಸಿ ಅಧಿಸೂಚನೆ ಹೊರಡಿಸಿದೆ. ಇದರಿಂದ ಖಾಸಗಿ ಮೆಡಿಕಲ್ ಕಾಲೇಜುಗಳ ಲಾಬಿ ಹೆಚ್ಚಲು ಅವಕಾಶ ಮಾಡಿಕೊಟ್ಟಂತಾಗುತ್ತದೆ’ ಎಂದು ದೂರಲಾಗಿದೆ.

‘ರೈತರ ಹಿತ ಕಾಯಲು ಸರ್ಕಾರ ಬದ್ಧ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಕಾವೇರಿ ನೀರು ಬಿಡುಗಡೆ ಕುರಿತು ನ್ಯಾಯಾಲಯ ಗಳು ಯಾವುದೇ ಆದೇಶ ನೀಡಿದರೂ ರಾಜ್ಯ ಸರ್ಕಾರವು ರೈತರ ಹಿತರಕ್ಷಣೆಗೆ ಬೇಕಾದ ಕ್ರಮಗಳನ್ನು ಕೈಗೊಳ್ಳಲಿದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.



ಶಿವಕುಮಾರ್

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಕಾವೇರಿ ಕಣಿವೆ ವ್ಯಾಪ್ತಿಯ ಕರ್ನಾಟಕ ಹಾಗೂ ತಮಿಳುನಾಡು ಜಲಾಶಯಗಳಲ್ಲಿ ಎಷ್ಟು ನೀರಿದೆ ಎಂಬ ಮಾಹಿತಿಯನ್ನು ಸುಪ್ರೀಂ ಕೋರ್ಟ್ ಪಡೆದಿದ್ದು, ಸದ್ಯ ನಿತ್ಯ 3 ಸಾವಿರ ಕ್ಯೂಸೆಕ್ ನೀರು ಬಿಡುಗಡೆಗೆ ಆದೇಶಿಸಿದೆ. ಪ್ರಸ್ತುತ ಕಾವೇರಿ ನದಿಯ ಒಳಹರಿವು 8–10 ಸಾವಿರ ಕ್ಯೂಸೆಕ್‌ಗೆ ಹೆಚ್ಚಿದೆ. 15 ದಿನದಲ್ಲಿ ನ್ಯಾಯಾಲಯವು ಸೂಚಿಸಿದಂತೆ ನದಿಯಿಂದ ನೀರು ಹರಿಸಲಾಗಿತ್ತು. ಆದರೆ ಬಿಳಿಗುಂಡ್ಲು ಮಾಪನ ಕೇಂದ್ರದಲ್ಲಿ ದಾಖಲಾದಂತೆ ಎರಡು ದಿನ ನಿಗದಿತ ಪ್ರಮಾಣಕ್ಕಿಂತ ಕಡಿಮೆ ನೀರು ಹೋಗಿದೆ. ಹಾಗೆಯೇ, ಬೆಂಗಳೂರಿನಲ್ಲಿ ಉತ್ತಮ ಮಳೆಯಾದ ದಿನಗಳಲ್ಲಿ ಸ್ವಲ್ಪ ಹೆಚ್ಚಿಗೆ ನೀರು ಹರಿದಿದೆ. ಇದನ್ನು ನ್ಯಾಯಾಲಯಕ್ಕೆ ಮನದಟ್ಟು ಮಾಡಲಾಗಿದೆ ಎಂದರು.

ಮೇಕೆದಾಟು ಅಣೆಕಟ್ಟೆ ನಿರ್ಮಾಣದ ಸಂಬಂಧ ಸದ್ಯದಲ್ಲೇ ಸುಪ್ರೀಂಕೋರ್ಟ್‌ಗೆ ದಾಖಲೆ ಸಲ್ಲಿಸಿ ಅನುಮತಿ ಕೋರಲಿದ್ದೇವೆ. ಸುಪ್ರೀಂ ಕೋರ್ಟ್ ಸಹ, ಕರ್ನಾಟಕವು ಅಣೆಕಟ್ಟೆ ನಿರ್ಮಿಸಿಕೊಂಡು ಪ್ರತಿ ವರ್ಷ ತಮಿಳುನಾಡಿಗೆ ಬಿಡಬೇಕಾದ 177 ಟಿಎಂಸಿ ನೀರು ನೀಡಿದರೆ ಏನು ತೊಂದರೆ ಎಂದು ತಮಿಳುನಾಡಿಗೆ ಕೇಳಿದೆ.

ಲೋಡ್‌ಶೆಡ್ಡಿಂಗ್ ನಿರ್ವಹಣೆ: ‘ರಾಜ್ಯದ 192 ತಾಲ್ಲೂಕಿನಲ್ಲಿ ಬರ ಪರಿಸ್ಥಿತಿ ಇದೆ. ಹೀಗಾಗಿ ಜಲ ವಿದ್ಯುತ್ ಉತ್ಪಾದನೆ ಕುಂಠಿತಗೊಂಡಿದೆ. ಆದಾಗ್ಯೂ ಸರ್ಕಾರವು ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿದೆ’ ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	100.64	5,578	6,165
ಹಾರಂಗಿ	2,859	2,856.87	1,939	1,200
ಕಬಿನಿ	2284.00	2,276.20	2,684	3,550
ಹೇಮಾವತಿ	2,922	2900.62	2,326	1,360
ಲಿಂಗನಮಕ್ಕಿ	1,819	1,787.65	3,139	5,948.88
ಸೂಪಾ (ಮೀ)	564	545.97	1,021	4,867
ಮಾಣಿ	595	581.28	194	708
ತುಂಗಭದ್ರಾ	1,633	1,615.41	970	9,025
ಮಲಪ್ರಭಾ	2079.50	2,064.03	0	194
ಘಟಪ್ರಭಾ	2,175	2,171.05	1,200	2,295
ಭದ್ರಾ	186	157.6	697	2,861
ಆಲಮಟ್ಟಿ (ಮೀ)	519.60	519.17	2,371	485
ನಾರಾಯಣಪುರ (ಮೀ)	492.25	490.95	00	239

* ನೆಲಮಟ್ಟದಿಂದ

ವಿದ್ಯುತ್ ಕ್ಷಾಮ; ಕೇಂದ್ರಕ್ಕೆ ಮೊರೆ

ನವದೆಹಲಿ: ಕರ್ನಾಟಕದಲ್ಲಿ ವಿದ್ಯುತ್ ಸಮಸ್ಯೆ ಬಿಗಡಾಯಿಸಿರುವುದರಿಂದ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಕೇಂದ್ರ ಇಂಧನ ಸಚಿವ ಆರ್.ಕೆ.ಸಿಂಗ್ ಅವರನ್ನು ಬುಧವಾರ ಸಂಜೆ ಭೇಟಿ ಮಾಡಿ ಕೇಂದ್ರದ ಗ್ರಿಡ್ ನಿಂದ ಹೆಚ್ಚುವರಿ ವಿದ್ಯುತ್ ಪೂರೈಕೆ ಮಾಡುವಂತೆ ಮನವಿ ಮಾಡಿದರು.

ರಾಜ್ಯವು ವಾಯು ಹಾಗೂ ಸೌರ ಮೂಲಗಳಿಂದ ಹೆಚ್ಚಿನ ವಿದ್ಯುತ್ ಉತ್ಪಾದನೆ ಮಾಡಲು ಒತ್ತು ನೀಡುತ್ತಿದೆ.ಈ ಮೂಲಕ ನವೀಕರಿಸಲಾಗದ ಇಂಧನಗಳ ಮೇಲಿನ ಅವಲಂಬನೆ ಕಡಿಮೆ ಮಾಡುತ್ತಿದೆ ಎಂದೂ ಜಾರ್ಜ್ ಅವರು ಕೇಂದ್ರ ಸಚಿವರಿಗೆ ತಿಳಿಸಿದರು.

‘ನಕ್ಷೆ ಮಂಜೂರಾತಿಗೆ ಆ್ಯಪ್ ಅಭಿವೃದ್ಧಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮನೆ ನಿರ್ಮಿಸಲು ನಕ್ಷೆ ಮಂಜೂರಾತಿ ಬಯಸುವವರಿಗೆ ಮುಖಾಮುಖಿರಹಿತ (ಫೇಸ್‌ಲೆಸ್) ಸೇವೆ ನೀಡಲು ತಂತ್ರಾಂಶ (ಆ್ಯಪ್) ಅಭಿವೃದ್ಧಿಪಡಿಸುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ.

ಬಿಬಿಎಂಪಿ ಕಾಯ್ದೆ 2020ರ ಕಲಂ 144(6)ಮತ್ತು (21)ರ ಅಂಶಗಳನ್ನು ಇತರ ಮಹಾನಗರ ಪಾಲಿಕೆ ಮತ್ತು ಸ್ಥಳೀಯ ಸಂಸ್ಥೆಗಳಿಗೂ ವಿಸ್ತರಿಸುವ ಕುರಿತ ಪರಿಶೀಲನೆ ನಡೆಸಲು ಖಂಡ್ರೆ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿ ರಚಿಸಲಾಗಿದ್ದು, ಈ ಸಮಿತಿಯ ಸಭೆ ಬುಧವಾರ ನಡೆಯಿತು. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಅನಧಿಕೃತ ಸ್ವತ್ತುಗಳನ್ನು ತೆರಿಗೆ ವ್ಯಾಪ್ತಿಗೆ ತರುವುದರಿಂದ ಆಗುವ ಸಾಧಕಬಾಧಕಗಳ ಬಗ್ಗೆಯೂ ಚರ್ಚೆ ನಡೆಯಿತು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಭೂಪರಿವರ್ತನೆ ಆಗದೆ, ಬಡಾವಣೆಗೆ ಅನುಮೋದನೆ ಪಡೆಯದೆ ಮತ್ತು ಮನೆಗಳಿಗೆ ನಕ್ಷೆಯ ಮಂಜೂರಾತಿಯೂ ಇಲ್ಲದೆ ಅನಧಿಕೃತವಾಗಿ ನಿರ್ಮಿಸುತ್ತಿರುವ ಮನೆಗಳಿಗೆ ಮತ್ತು ನಿವೇಶನಗಳಿಗೆ ‘ಬಿ’ ಖಾತೆ ನೀಡಲಾಗುತ್ತಿದೆ. ಇದನ್ನು ಯಾವುದಾದರೂ ಒಂದು ಹಂತದಲ್ಲಿ ನಿಲ್ಲಿಸಬೇಕಿದೆ. ಅದಕ್ಕೆ ರೂಪುರೇಷೆ ಸಿದ್ಧಪಡಿಸಲು ಅವರು ಸಲಹೆ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ನಕ್ಷೆ ಮಂಜೂರಾತಿ ಪಡೆದಿದ್ದರೂ ನಕ್ಷೆ ಉಲ್ಲಂಘಿಸಿ, ಹೆಚ್ಚುವರಿ ಅಂತಸ್ತು ನಿರ್ಮಿಸುವ ಮತ್ತು ಸೆಟ್ ಬ್ಯಾಕ್ ಬಿಡದೆ ನಿರ್ಮಿಸುವ ಕಟ್ಟಡಗಳ ವಿರುದ್ಧ ನಿರ್ಮಾಣ ಹಂತದಲ್ಲೇ ಕ್ರಮ ಕೈಗೊಳ್ಳಬೇಕು ಎಂದು ಅಭಿಪ್ರಾಯಪಟ್ಟ ಖಂಡ್ರೆ, ವಾರ್ಡ್ ಹಂತದಲ್ಲಿ ಅನಧಿಕೃತವಾಗಿ ತಲೆ ಎತ್ತುವ ಮನೆಗಳನ್ನು ನಿಯಂತ್ರಿಸದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಕಾನೂನಿನಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳ ನಿಯಮಗಳ ಅಡಿಯಲ್ಲಿ ಇರುವ ಅವಕಾಶ ಬಳಸಿಕೊಳ್ಳುವ ಬಗ್ಗೆಯೂ ಕಡತ ಮಂಡಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಶಾಮನೂರು ಹೇಳಿಕೆ ನಿಜ: ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಆಯಕಟ್ಟಿನ ಹುದ್ದೆಗಳಿಂದ ಲಿಂಗಾಯತರನ್ನು ಕಿತ್ತು ಹಾಕಲು ಮತ್ತು ಪ್ರಮುಖ ಹುದ್ದೆಗಳಿಗೆ ವರ್ಗಾವಣೆ ಮಾಡಬಾರದು ಎಂಬ ಸೂಚನೆ ಮುಖ್ಯಮಂತ್ರಿ ಮತ್ತು ಇತರ ಕೆಲವು ಸಚಿವರ ಕಚೇರಿಗಳಿಂದ ಹೋಗಿದೆ’ ಎಂದು ಮಾಜಿ ಸಚಿವ ಬಿ.ಸಿ.ಪಾಟೀಲ ದೂರಿದರು.

ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, ‘ಸರ್ಕಾರದಲ್ಲಿ ಲಿಂಗಾಯತ ಅಧಿಕಾರಿಗಳನ್ನು ನಿರ್ಲಕ್ಷಿಸುತ್ತಿರುವ ಕುರಿತು ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಹೇಳಿಕೆ ನೂರಕ್ಕೆ ನೂರು ನಿಜ’ ಎಂದು ಹೇಳಿದರು.

ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ತೊಲಗಿಸಲು ಮತ್ತು ಲೋಕಸಭೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲು ಜೆಡಿಎಸ್ ಜತೆಗೆ ಮೈತ್ರಿ ಮಾಡಿಕೊಳ್ಳುವ ವರಿಷ್ಠರ ನಿರ್ಧಾರ ಸರಿಯಾಗಿದೆ. ಈ ಹೊಂದಾಣಿಕೆ ಬಗ್ಗೆ ಕೆಲವರ ಆಕ್ಷೇಪ ಇರಬಹುದು. ಕ್ರಮೇಣ ಎಲ್ಲವೂ ಸರಿಹೋಗುತ್ತದೆ ಎಂದರು.

900 ರೈತರ ಆತ್ಮಹತ್ಯೆ: ರಾಜ್ಯದಲ್ಲಿ ಈ ವರ್ಷ ಸೆಪ್ಟೆಂಬರ್ ಅಂತ್ಯದವರೆಗೆ 900 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಕಾಂಗ್ರೆಸ್ ಸರ್ಕಾರ ರೈತರ ಸಂಕಷ್ಟಗಳಿಗೆ ಸ್ಪಂದಿಸುತ್ತಿಲ್ಲ ಎಂದು ಅವರು ಕಿಡಿಕಾರಿದರು. ಕಾಂಗ್ರೆಸ್ ಸರ್ಕಾರದ ನೀತಿಯ ಕಾರಣ ರೈತರ ಆತ್ಮಹತ್ಯೆ ಹೆಚ್ಚುತ್ತಿದೆ ಎಂದು ಪಾಟೀಲ ಹೇಳಿದರು.

ಧರ್ಮಸ್ಥಳ ಮಂಜುನಾಥ ಸ್ವಾಮಿಗೆ ಅನಿಸ್ ಪಾಷ ತುಲಾಭಾರ!

ಮುಸ್ಲಿಂ ಸ್ನೇಹಿತನ ಆರೋಗ್ಯಕ್ಕಾಗಿ ಹರಕೆ

• ಅನಿತಾ ಎಚ್.

ದಾವಣಗೆರೆ: ಮುಸ್ಲಿಂ ಸಮುದಾಯಕ್ಕೆ ಸೇರಿರುವ ಪ್ರಾಣ ಸ್ನೇಹಿತನ ಆರೋಗ್ಯ ಸುಧಾರಣೆಗಾಗಿ ಮಂಜುನಾಥ ಸ್ವಾಮಿಗೆ ಹರಕೆ ಹೊತ್ತಿದ್ದ ಹಿಂದೂ ಗೆಳೆಯ, ಧರ್ಮಸ್ಥಳಕ್ಕೆ ತೆರಳಿ ಸ್ನೇಹಿತನ ತುಲಾಭಾರ ನಡೆಸಿದ್ದಾರೆ.

ವಕೀಲ ಅನಿಸ್ ಪಾಷ ಹಾಗೂ ಅರುಣ್‌ಕುಮಾರ್ ದಶಕದಿಂದ ಸ್ನೇಹಿತರು. ಅರುಣ್‌ಕುಮಾರ್ ಅವರಿಗೆ ಸಂಬಂಧಿಸಿದ ಪ್ರಕರಣವೊಂದರ ವಕಾಲತ್ತು ವಹಿಸಿ, ಗೆದ್ದಿರುವ ಅನಿಸ್ ಪಾಷ ಕೊರೊನಾ ಸಂದರ್ಭ ಹೃದಯಸಂಬಂಧಿ ಕಾಯಿಲೆಗೆ ಒಳಗಾಗಿದ್ದರು, ಅವರು ‘ಗುಣಮುಖರಾಗಲಿ’ ಎಂದು ಅರುಣ್ ಮಂಜುನಾಥ ಸ್ವಾಮಿಗೆ ಹರಕೆ ಹೊತ್ತಿದ್ದರು.

ಸ್ನೇಹಿತ ಗುಣಮುಖರಾದ ಕಾರಣ ಕಳೆದ ವಾರವಷ್ಟೇ ಧರ್ಮಸ್ಥಳಕ್ಕೆ ಅನಿಸ್ ಪಾಷ ಅವರನ್ನು ಕರೆದೊಯ್ದು ದೇವರ ದರ್ಶನ ಮಾಡಿಸಿ, ಅಭಿಷೇಕ ಮಾಡಿಸಿ, ಅವರ ತುಲಾಭಾರ ಸೇವೆ ಸಲ್ಲಿಸಿದ್ದಾರೆ. ಇದಕ್ಕೆ ಸಹಕರಿಸಿದ ಮುಸ್ಲಿಂ ಸ್ನೇಹಿತ ಕೋಮು ಸೌಹಾರ್ದಕ್ಕೆ ಮಾದರಿಯಾಗಿದ್ದಾರೆ.

‘ನನ್ನ ವೃತ್ತಿಯಲ್ಲಿ ಸಾಕಷ್ಟು ಕಕ್ಷಿದಾರರನ್ನು ಕಂಡಿದ್ದೇನೆ. ಆದರೆ, ಕಕ್ಷಿದಾರರಾಗಿ ಪರಿಚಿತರಾದ ಅರುಣ್ ಕುಮಾರ್ ತುಂಬಾ ಹತ್ತಿರವಾದರು. ಇಬ್ಬರೂ ಕುಟುಂಬ ಸ್ನೇಹಿತರಾಗಿದ್ದೇವೆ. 2021ರಲ್ಲಿ ಇದ್ದಕ್ಕಿದ್ದಂತೆಯೇ ಎದೆ ನೋವು ಕಾಣಿಸಿಕೊಂಡಿದ್ದರಿಂದ ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆದೆ. ಹೃದಯದ ರಕ್ತನಾಳ ಎರಡು ಕಡೆ ಬ್ಲಾಕ್ ಆಗಿದ್ದರಿಂದ ಸ್ಟಂಟ್ ಅಳವಡಿಸಿದರು. ಈ ಸಂದರ್ಭ ಗೆಳೆಯ ಅರುಣ್ ನನ್ನ ಆರೋಗ್ಯ ಸುಧಾರಣೆಗಾಗಿ ಹರಕೆ ಹೊತ್ತಿದ್ದರು. ಈಚೆಗೆ ಧರ್ಮಸ್ಥಳಕ್ಕೆ ಒಟ್ಟಿಗೇ ತೆರಳಿ ಹರಕೆ ತೀರಿಸಿ ಬಂದೆವು’ ಎಂದು ಅನಿಸ್ ಪಾಷ ತಿಳಿಸಿದರು.

‘ನನ್ನ ಧರ್ಮ, ಆಚರಣೆಗಳು ಬೇರೆಯಾದರೂ ಅರುಣ್ ಅವರ ಧಾರ್ಮಿಕ ನಂಬಿಕೆಗಳಿಗೆ ಯಾವುದೇ ಧಕ್ಕೆಯಾಗದಂತೆ ಹರಕೆ ನೆರವೇರಿಸಿದ್ದೇನೆ. ದಯವೇ ಧರ್ಮದ ಮೂಲವಯ್ಯ ಎಂಬ ಬಸವಣ್ಣನವರ ವಚನ, ಇನ್ನೊಬ್ಬರ ಭಾವನೆಗಳಿಗೆ ಧಕ್ಕೆಯಾಗದಂತೆ ಬದುಕುವುದೇ ನಿಜವಾದ ಧರ್ಮ ಎಂಬ ಖುರಾನ್ ಸಾಲುಗಳಂತೆ ನಾವು ಎಲ್ಲರೊಳಗೆ ಒಂದಾಗಿ ಬದುಕುತ್ತಿದ್ದೇವೆ’ ಎಂದು ಅವರು ವಿವರಿಸಿದರು.

‘ಯಾರಿಂದಲೂ ನ್ಯಾಯ ಸಿಗದಿದ್ದಾಗ ವಕೀಲ ಅನಿಸ್ ಪಾಷ ಅವರು ನನಗೆ ನ್ಯಾಯ ಕೊಡಿಸಿದ್ದರು. ಅವರು ವಯಸ್ಸಿನಲ್ಲಿ ಹಿರಿಯರಾದರೂ ನಮ್ಮ ಸ್ನೇಹಕ್ಕೆ ಅಡ್ಡಿಯಾಗಿಲ್ಲ. ಬಡವರಿಗೆ ಉಚಿತ ಸೇವೆ ನೀಡುವ ಅವರು ಚೆನ್ನಾಗಿರಬೇಕು. ಅವರ ನೆರವು ಇನ್ನೂ ಕೆಲವರಿಗೆ ಸಿಗಬೇಕು ಎಂದು ಮಾಡಿಕೊಂಡಿದ್ದ ಹರಕೆ ತೀರಿಸಿದೆವು’ ಎಂದು ಅರುಣ್‌ಕುಮಾರ್ ಸಂತಸ ವ್ಯಕ್ತಪಡಿಸಿದರು.


ಧರ್ಮಸ್ಥಳಕ್ಕೆ ತೆರಳಿ ಹರಕೆ ಸಲ್ಲಿಸಿದ ವಕೀಲ ಅನಿಸ್ ಪಾಷ ಹಾಗೂ ಅರುಣ್‌ಕುಮಾರ್ (ಬಲತುದಿಯಲ್ಲಿ ಇರುವವರು). ಇತರ ಸ್ನೇಹಿತರು ಜತೆಗಿದ್ದಾರೆ

> ವಿವಿಧ ಧರ್ಮಗಳ ಜನ ಸೌಹಾರ್ದದಿಂದ ಬದುಕುತ್ತಿರುವ ದೇಶ ನಮ್ಮದು. ಇದಕ್ಕೆ ಕೆಲವರಿಂದ ಧಕ್ಕೆಯಾಗುತ್ತಿದೆ
> **ಅನಿಸ್ ಪಾಷ,** ವಕೀಲರು, ದಾವಣಗೆರೆ

> ಮನುಷ್ಯರು ಜತೆಗೆ ಬಾಳಲು ಸಾಧ್ಯವಿದೆ. ಮನುಷ್ಯತ್ವ ಅರಿತು ನಡೆದರೆ ಯಾವ ಸಮಸ್ಯೆಯೂ ಇರುವುದಿಲ್ಲ
> **ಅರುಣ್ ಕುಮಾರ್,** ದಾವಣಗೆರೆ

ಪಟಾಕಿ ದುರಂತ: ಲೋಕಾಯುಕ್ತ ಭೇಟಿ

32 ಪಟಾಕಿ ಮಳಿಗೆಗಳಿಗೆ ಬೀಗ • ಮೃತರ ಸಂಖ್ಯೆ 15ಕ್ಕೆ

ಪ್ರಜಾವಾಣಿ ವಾರ್ತೆ

ಆನೇಕಲ್: ಅತ್ತಿಬೆಲೆ ಪಟಾಕಿ ದುರಂತ ನಡೆದ ಸ್ಥಳಕ್ಕೆ ಬುಧವಾರ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪಟಾಕಿ ಮಳಿಗೆ ಮತ್ತು ಗೋದಾಮು ಸ್ಥಾಪನೆ ಎಲ್ಲ ನಿಯಮಗಳನ್ನು ಪಾಲಿಸಿದರೆ ಮಾತ್ರ ಅನುಮತಿ ನೀಡಬೇಕು. ನಿಯಮ ಪಾಲಿಸದ ಅಂಗಡಿಗಳನ್ನು ಮುಚ್ಚಿಸಬೇಕು. ಅಂಗಡಿ ಮತ್ತು ಗೋದಾಮು ಮಾಲೀಕರು ಆದಾಯ ಗಳಿಕೆಗಾಗಿ ನಿಯಮ ಉಲ್ಲಂಘನೆ ಮಾಡಬಾರದು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪೊಲೀಸ್, ಕಂದಾಯ ಮತ್ತು ಅಗ್ನಿಶಾಮಕ ಇಲಾಖೆಯು ಜಂಟಿ ತಪಾಸಣೆ ನಡೆಸಬೇಕು. ಪಟಾಕಿ ಮಳಿಗೆ ಮತ್ತು ಗೋದಾಮಿನಲ್ಲಿ ಅಕ್ರಮಗಳನ್ನು ಸಂಪೂರ್ಣ ನಿಲ್ಲಿಸಬೇಕು. ಈ ಕಾರ್ಯಾಚರಣೆ ನಿರಂತರವಾಗಿ ನಡೆಯಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ತಾಲ್ಲೂಕು ಆಡಳಿತದ ಅಧಿಕಾರಿಗಳ ತಂಡ ಪಟಾಕಿ ಅಂಗಡಿ ಮತ್ತು ಗೋದಾಮುಗಳ ಮೇಲೆ ದಾಳಿ ನಡೆಸಿ, ನಿಯಮ ಉಲ್ಲಂಘನೆ ಮತ್ತು ಎಸ್‌ಒಪಿ ಪಾಲಿಸದೆ 32 ಪಟಾಕಿ ಮಳಿಗೆಗಳನ್ನು ಮುಚ್ಚಿಸಿತು.

ಗಾಯಾಳು ಸಾವು: ಪಟಾಕಿ ದುರಂತದಲ್ಲಿ ಗಾಯಗೊಂಡು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾಗಿದ್ದ ದಿನೇಶ್ (17) ಚಿಕಿತ್ಸೆಗೆ ಸ್ಪಂದಿಸದೆ ಬುಧವಾರ ಮೃತಪಟ್ಟಿದ್ದಾರೆ. ಇದರಿಂದಾಗಿ ಮೃತರ ಸಂಖ್ಯೆ 15ಕ್ಕೇರಿದೆ.

ಮೃತ ದಿನೇಶ್ ತಮಿಳುನಾಡಿನ ವಾಣಿ ಅಂಬಾಡಿ ಸಮೀಪದ ವೆಲ್ಲಗುಟ್ಟ ಗ್ರಾಮದವರು.


ಆನೇಕಲ್ ತಾಲ್ಲೂಕಿನ ಅತ್ತಿಬೆಲೆ ಪಟಾಕಿ ದುರಂತ ನಡೆದ ಸ್ಥಳಕ್ಕೆ ಬುಧವಾರ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಭೇಟಿ ನೀಡಿ ಮಾಹಿತಿ ಪಡೆದರು

ಗುರುವಾರ, ಅಕ್ಟೋಬರ್ 12, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 283 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಮಹಿಷಾಸುರ ಯಾರು?

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
66,473 ▲	19,811 ▲	₹59,380 (ಬೆಂಗಳೂರು)	₹70,800 (ಬೆಂಗಳೂರು)	83.18 ▲

ಕೇಂದ್ರಕ್ಕೆ ಶಿಫಾರಸು ಮಾಡಲು ಈಶ್ವರ ಖಂಡ್ರೆ ಅಧ್ಯಕ್ಷತೆಯ ಸಂಪುಟ ಉಪ ಸಮಿತಿ ಒಪ್ಪಿಗೆ

ಮತ್ತೆ 6 ಪರಿಸರ ಸೂಕ್ಷ್ಮ ವಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕಪ್ಪತ್ತಗುಡ್ಡ, ಬುಕ್ಕಾಪಟ್ಟಣ, ಕಾಮಸಂದ್ರ, ನಾಗರಹೊಳೆ, ಕಾವೇರಿ ವಿಸ್ತರಿತ ವನ್ಯಜೀವಿ ಧಾಮ ಸೇರಿ ಆರು ಅರಣ್ಯ ಪ್ರದೇಶಗಳಲ್ಲಿ ಪರಿಸರ ಸೂಕ್ಷ್ಮ ವಲಯವನ್ನು ಘೋಷಿಸುವಂತೆ ಕೇಂದ್ರಕ್ಕೆ ಶಿಫಾರಸು ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ.

ಪರಿಸರ ಸೂಕ್ಷ್ಮ ವಲಯಗಳನ್ನು ನಿರ್ಣಯಿಸುವ ಕುರಿತು ಸಚಿವ ಸಂಪುಟಕ್ಕೆ ಶಿಫಾರಸು ಮಾಡಲು ಅರಣ್ಯ ಸಚಿವ ಈಶ್ವರ ಖಂಡ್ರೆ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಂಪುಟ ಉಪ ಸಮಿತಿ, ಈ ತೀರ್ಮಾನಕ್ಕೆ ತಾತ್ವಿಕ ಒಪ್ಪಿಗೆ ನೀಡಿದೆ.

ಬುಧವಾರ ಸಚಿವ ಸಂಪುಟ ಉಪ ಸಮಿತಿಯ ಸಭೆ ನಡೆಯಿತು. ಆರು ಅರಣ್ಯ ಪ್ರದೇಶಗಳಲ್ಲಿ ಪರಿಸರ ಸೂಕ್ಷ್ಮ ವಲಯ ಘೋಷಿಸುವ ಸಂಬಂಧ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವ ಬಗ್ಗೆ ಸಚಿವ ಸಂಪುಟ ಸಭೆಗೆ ಪ್ರಸ್ತಾವ ಸಲ್ಲಿಸಲು ಅನುಮೋದನೆ ನೀಡಲಾಯಿತು ಎಂದು ಖಂಡ್ರೆ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇಂದ್ರ ಸರ್ಕಾರ 2011ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳು ಮತ್ತು ಕೇಂದ್ರ ಅರಣ್ಯ, ಪರಿಸರ ಸಚಿವಾಲಯ ಮಾರ್ಗಸೂಚಿಗಳ ಅನ್ವಯ ಪರಿಸರ ಸೂಕ್ಷ್ಮವಲಯಗಳಲ್ಲಿ ಅಭಿವೃದ್ಧಿ ಚಟುವಟಿಕೆಗಳು, ನಿರ್ಬಂಧಿತ ಚಟುವಟಿಕೆಗಳು ಮತ್ತು ನಿಷೇಧಿತ ಚಟುವಟಿಕೆಗಳು ಎಂದು ವರ್ಗೀಕರಿಸಲಾಗಿದೆ. ಗೋದವರ್ಮನ್ ವಿರುದ್ಧ ಭಾರತ ಸರ್ಕಾರದ ರಿಟ್ ಅರ್ಜಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ನಿರ್ದೇಶನ ಅನುಸಾರ ಸಂರಕ್ಷಿತ ವಲಯಗಳಾದ ರಾಷ್ಟ್ರೀಯ ಉದ್ಯಾನವನ ಮತ್ತು ವನ್ಯಜೀವಿ ಧಾಮಗಳ ಸುತ್ತಮುತ್ತ ಕನಿಷ್ಠ 1 ಕಿ.ಮೀನಿಂದ ಗರಿಷ್ಠ 23.06 ಕಿ.ಮೀ ಪರಿಸರ ಸೂಕ್ಷ್ಮ ವಲಯ ಎಂದು ಘೋಷಣೆ ಮಾಡುವುದು ಅಗತ್ಯ ಎಂದು ಅಧಿಕಾರಿಗಳು ಸಭೆಗೆ ವಿವರ ನೀಡಿದರು.

ಈ ವಲಯಗಳಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳು, ವಸತಿ, ಶಾಲೆ, ಆಸ್ಪತ್ರೆ, ರಸ್ತೆ ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ಸಂರಕ್ಷಿತ ವಲಯದ ವ್ಯಾಪ್ತಿಯನ್ನು ಶಿಫಾರಸು ಮಾಡಲಾಗಿದೆ.

ವಲಯಗಳಾವವು?


ಕಾವೇರಿ ವನ್ಯಜೀವಿ ಧಾಮ


ಕಪ್ಪತ್ತಗುಡ್ಡ

- **ಕಪ್ಪತ್ತಗುಡ್ಡ** ಗದಗ ಜಿಲ್ಲೆಯ ಕಪ್ಪತ್ತಗುಡ್ಡ ವನ್ಯಜೀವಿಧಾಮದ ವಿಸ್ತೀರ್ಣ 244.15 ಚದರ ಕಿ.ಮೀ ನಷ್ಟಿದೆ. ಇದಕ್ಕೆ ಹೊಂದಿಕೊಂಡ ಪ್ರದೇಶ ಸೇರಿದಂತೆ ಒಟ್ಟು 322.695 ಚ.ಕಿ.ಮೀ ಪರಿಸರ ಸೂಕ್ಷ್ಮ ವಲಯವೆಂದು ಪ್ರಸ್ತಾಪಿಸಲಾಗಿದೆ. ಈ ಪೈಕಿ 23.804 ಚ.ಕಿ.ಮೀ ಅರಣ್ಯ ವಲಯ ಮತ್ತು 298.890 ಚ.ಕಿ.ಮೀ ಅರಣ್ಯೇತರ ವಲಯ ಸೇರಿದೆ.
- **ಚಿಂಕಾರ ವನ್ಯಜೀವಿ ಧಾಮ** ತುಮಕೂರು ಜಿಲ್ಲೆ ಬುಕ್ಕಾಪಟ್ಟಣದಲ್ಲಿರುವ ಚಿಂಕಾರ ವನ್ಯಜೀವಿ ಧಾಮ ಒಟ್ಟು 136.11 ಚದರ ಕಿ.ಮೀ ಇದೆ. ಇದಕ್ಕೆ ಹೊಂದಿಕೊಂಡ ಪ್ರದೇಶ ಸೇರಿದಂತೆ ಒಟ್ಟು ಪರಿಸರ ಸೂಕ್ಷ್ಮ ವಲಯ 157.0862 ಚ. ಕಿ.ಮೀ ಪ್ರಸ್ತಾಪಿಸಲಾಗಿದೆ. ಅರಣ್ಯ ವಲಯ 18.5662 ಚ.ಕಿ.ಮೀ ಇದ್ದು, ಅರಣ್ಯೇತರ ವಲಯ 138.52 ಚ. ಕಿ.ಮೀ.
- **ಕಾಮಸಂದ್ರ ವನ್ಯಜೀವಿ ಧಾಮ:** ಕೋಲಾರ ಜಿಲ್ಲೆಯ ಕಾಮಸಂದ್ರ ವನ್ಯಜೀವಿ ಧಾಮದ ಒಟ್ಟು ವಿಸ್ತೀರ್ಣ 78.62 ಚ.ಕೀ ಇದೆ. ಒಟ್ಟು ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿ 93.27 ಚ.ಕಿ.ಮೀ ಎಂದು ಪ್ರಸ್ತಾಪಿಸಲಾಗಿದೆ.
- **ರಾಜೀವಗಾಂಧಿ ರಾಷ್ಟ್ರೀಯ ಉದ್ಯಾನ** ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನವನದ (ನಾಗರಹೊಳೆ ಹುಲಿ ಸಂರಕ್ಷಿತ ವಲಯ) ಒಟ್ಟು ವಿಸ್ತೀರ್ಣ 643.39 ಚ.ಕಿ.ಮೀ ಆಗಿದೆ. ಇದರ ಪರಿಸರ ಸೂಕ್ಷ್ಮ ವಲಯ 573.97 ಪ್ರಸ್ತಾಪಿಸಲಾಗಿದೆ. ಇದರಲ್ಲಿ 302.36 ಚದರ ಕಿ.ಮೀ ಅರಣ್ಯ ಮತ್ತು 271.61 ಚದರ ಕಿ.ಮೀ ಅರಣ್ಯೇತರ ವಲಯವಿದೆ.
- **ಅಣಶಿ ರಾಷ್ಟ್ರೀಯ ಉದ್ಯಾನ** ಉತ್ತರ ಕನ್ನಡ ಜಿಲ್ಲೆಯ ಅಣಶಿ ರಾಷ್ಟ್ರೀಯ ಉದ್ಯಾನ ಮತ್ತು ದಾಂಡೇಲಿ ವನ್ಯಜೀವಿಧಾಮದಲ್ಲಿ 669.06 ಚ.ಕಿ.ಮೀ ಪರಿಸರ ಸೂಕ್ಷ್ಮ ವಲಯ ಪ್ರಸ್ತಾಪಿಸಲಾಗಿದೆ. 448.81 ಚ.ಕಿ.ಮೀ ಅರಣ್ಯ ಮತ್ತು 220.25 ಚದರ ಕಿ.ಮೀ ಅರಣ್ಯೇತರ ವಲಯವಾಗಿದೆ.
- **ಕಾವೇರಿ ವಿಸ್ತರಿತ ವನ್ಯಜೀವಿ ಧಾಮ** ಸಾತನೂರು ಬಳಿಯ ಕಾವೇರಿ ವಿಸ್ತರಿತ ವನ್ಯಜೀವಿ ಧಾಮದಲ್ಲಿ 53.39 ಚ.ಕಿ.ಮೀ ಅರಣ್ಯ ವಿಸ್ತೀರ್ಣವಿದೆ. ಇದಕ್ಕೆ ಹೊಂದಿಕೊಂಡ ಪ್ರದೇಶ ಸೇರಿದಂತೆ ಒಟ್ಟು 145.369 ಚ.ಕಿ.ಮೀಯನ್ನು ಪರಿಸರ ಸೂಕ್ಷ್ಮ ವಲಯ ಎಂದು ಪ್ರಸ್ತಾಪಿಸಲಾಗಿದೆ. ಈ ಪೈಕಿ 143.663 ಚ.ಕಿ.ಮೀ ಅರಣ್ಯ ಮತ್ತು 1.706 ಚ.ಕಿ.ಮೀ. ಅರಣ್ಯೇತರ ವಲಯವಿದೆ.



ಬಿಡುವಿನಲ್ಲಿ ಮಕ್ಕಳೊಂದಿಗೆ

ಸೇವಾ ಭದ್ರತೆಗೆ ಒತ್ತಾಯಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುತ್ತಿರುವ ಬಿಸಿಯೂಟ ಕಾರ್ಯಕರ್ತೆಯರು ಬುಧವಾರ ತಮ್ಮ ಮಕ್ಕಳೊಂದಿಗೆ ಕಾಲ ಕಳೆದರು ಪ್ರಜಾವಾಣಿ ಚಿತ್ರ/ ರಂಜು ಪಿ.

ಎಸ್‌ಇಪಿ ಆಯೋಗಕ್ಕೆ ಪ್ರೊ. ಥೋರಟ್ ಸಾರಥ್ಯ

ಪ್ರಜಾವಾಣಿ ವಾರ್ತೆ


ಸುಖದೇವ್ ಥೋರಟ್

ಬೆಂಗಳೂರು: ರಾಜ್ಯ ಶಿಕ್ಷಣ ನೀತಿಯ ಕರಡು ರೂಪಿಸಲು ಶಿಕ್ಷಣ ತಜ್ಞ ಹಾಗೂ ಯುಜಿಸಿ ಮಾಜಿ ಅಧ್ಯಕ್ಷ ಪ್ರೊ. ಸುಖ್‌ದೇವ್ ಥೋರಟ್ ಅಧ್ಯಕ್ಷತೆಯಲ್ಲಿ 15 ಸದಸ್ಯರನ್ನು ಒಳಗೊಂಡ 'ರಾಜ್ಯ ಶಿಕ್ಷಣ ನೀತಿ ಆಯೋಗ'ವನ್ನು ರಚಿಸಿ ರಾಜ್ಯ ಸರ್ಕಾರ ಬುಧವಾರ ಆದೇಶ ಹೊರಡಿಸಿದೆ.

2024ರ ಫೆ. 28ರೊಳಗೆ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಆದೇಶದಲ್ಲಿ ತಿಳಿಸಲಾಗಿದೆ.

ಆಯೋಗದಲ್ಲಿ ಕೇಂದ್ರ ಪ್ರೌಢ ಶಾಲಾ ಶಿಕ್ಷಣದ ಮಾಜಿ ಕಾರ್ಯದರ್ಶಿ, ನಿವೃತ್ತ ಐಎಎಸ್ ಅಧಿಕಾರಿ ಸಂಜಯ್ ಕೌಲ್, ಬೆಂಗಳೂರು ನಗರ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಪ್ರೊ.ಎಸ್. ಜಾಫೆಟ್, ಕುವೆಂಪು ವಿಶ್ವವಿದ್ಯಾಲಯದ ಮಾಜಿ ಕುಲಪತಿ ಪ್ರೊ.ಜೋಗನ್ ಶಂಕರ್,

> **ಪ್ರೊ.ಥೋರಟ್ ನೇತೃತ್ವದ ಆಯೋಗ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕತೆ, ವೈಚಾರಿಕತೆ ಬೆಳೆಸುವ ಮತ್ತು ಅವರ ಮನೋವಿಕಾಸಕ್ಕೆ ಅಗತ್ಯವಾದ ಶಿಕ್ಷಣ ನೀಡಲು ಸೂಕ್ತ ಶಿಫಾರಸುಗಳನ್ನು ನೀಡಲಿದೆ ಎಂಬ ಭರವಸೆಯಿದೆ**
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

9ನೇ ಪುಟ ನೋಡಿ

ಇಸ್ರೇಲ್ ದಾಳಿ: ಗಾಜಾ ಧ್ವಂಸ


ಗಾಜಾ ಪಟ್ಟಿ ಮೇಲೆ ಇಸ್ರೇಲ್ ನಡೆಸುತ್ತಿರುವ ಬಾಂಬ್ ದಾಳಿಯನ್ನು ವಿರೋಧಿಸಿ ರಮಲ್ಲಾ ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸುತ್ತಿದ್ದ ಪ್ಯಾಲೆಸ್ಟೀನಿಯನ್ನರು ಇಸ್ರೇಲ್ ಪಡೆಗಳತ್ತ ಕಲ್ಲುಗಳನ್ನು ಎಸೆದರು ಎಎಫ್‌ಪಿ ಚಿತ್ರ

ಜೆರುಸಲೇಂ/ಗಾಜಾ (ಎಪಿ/ಎಎಫ್‌ಪಿ): ಹಮಾಸ್ ಬಂಡುಕೋರರು ನಡೆಸಿದ ದಾಳಿಗೆ ಪ್ರತಿಯಾಗಿ ಇಸ್ರೇಲ್ ನಡೆಸುತ್ತಿರುವ ದಾಳಿಯು ಗಾಜಾ ಪ್ರದೇಶಗಳನ್ನು ಧ್ವಂಸಗೊಳಿಸಿದೆ. ಇದರ ಪರಿಣಾಮವಾಗಿ ಗಾಜಾ ಪಟ್ಟಿಯಲ್ಲಿ ವಾಸಿಸುತ್ತಿರುವ ಪ್ಯಾಲೆಸ್ಟೀನ್ ಜನರಿಗೆ ಸುರಕ್ಷಿತ ಸ್ಥಳವೆಂಬುದೇ ಇಲ್ಲದಂತಾಗಿದೆ.

ಅಲ್ಲಿನ ಆಸ್ಪತ್ರೆಗಳಿಗೆ ಅಗತ್ಯ ಪ್ರಮಾಣದಲ್ಲಿ ವೈದ್ಯಕೀಯ ಪರಿಕರಗಳು, ಔಷಧಗಳ ಪೂರೈಕೆ ಇಲ್ಲವಾಗಿದೆ. ಗಾಜಾ ಪಟ್ಟಿಯಲ್ಲಿನ ಏಕೈಕ ವಿದ್ಯುತ್ ಉತ್ಪಾದನಾ ಘಟಕಕ್ಕೆ ಇಂಧನ ಪೂರೈಕೆಯನ್ನು ನಿಲ್ಲಿಸಲಾಗಿದ್ದು, ಬುಧವಾರದಿಂದ ಅದು ಕಾರ್ಯಾಚರಣೆ ಸ್ಥಗಿತಗೊಳಿಸಿದೆ ಎಂದು ಗಾಜಾದ ವಿದ್ಯುತ್ ಪ್ರಾಧಿಕಾರ ತಿಳಿಸಿದೆ.

ಗಾಜಾ ಪಟ್ಟಿಯ ಮೇಲೆ ನಡೆದ ಇಸ್ರೇಲ್ ವಾಯುದಾಳಿಯು ಅಲ್ಲಿನ ಕಟ್ಟಡಗಳನ್ನು ಧ್ವಂಸಗೊಳಿಸಿದೆ. ಉರುಳಿಬಿದ್ದ ಕಟ್ಟಡಗಳ ಅಡಿಯಲ್ಲಿ ಸಿಲುಕಿರುವ ಮೃತದೇಹಗಳ ಲೆಕ್ಕ ಸಿಕ್ಕಿಲ್ಲ. ಹಮಾಸ್ ಬಂಡುಕೋರರು ಅಂದಾಜು 150 ಮಂದಿ ಒತ್ತೆಯಾಳುಗಳನ್ನು ಇರಿಸಿಕೊಂಡಿದ್ದರೂ, ಇಸ್ರೇಲ್ ವಾಯುದಾಳಿ ಮುಂದುವರಿದಿದೆ.

ಬಂಡುಕೋರರು ಇಸ್ರೇಲ್‌ನ ದಕ್ಷಿಣ ಭಾಗದ ಆಸ್ಕೆಲಾನ್ ಪಟ್ಟಣ ಸೇರಿದಂತೆ ವಿವಿಧೆಡೆ ಬುಧವಾರ ರಾಕೆಟ್ ದಾಳಿ ನಡೆಸಿದ್ದಾರೆ. ಈ ಯುದ್ಧದಲ್ಲಿ ಇಸ್ರೇಲ್ ಹಾಗೂ ಗಾಜಾ ಪಟ್ಟಿಯಲ್ಲಿ ಇದುವರೆಗೆ ಕನಿಷ್ಠ 3,900 ಮಂದಿ ಸಾವನ್ನಪ್ಪಿದ್ದಾರೆ.

ಗಾಜಾ ಪಟ್ಟಿಯ ಸುತ್ತ ದಿಗ್ಬಂಧನ ವಿಧಿಸಿ ಅಲ್ಲಿಗೆ ನೀರು, ಆಹಾರ, ಇಂಧನ ಮತ್ತು ಔಷಧಗಳ ಪೂರೈಕೆಯನ್ನು ಇಸ್ರೇಲ್ ಈಗಾಗಲೇ ಸ್ಥಗಿತಗೊಳಿಸಿದೆ. ಗಾಜಾ ಪಟ್ಟಿಯ ಜನರಿಗೆ ನೆರೆಯ ಈಜಿಪ್ಟ್ ಜೊತೆಗಿನ ಸಂಪರ್ಕಕ್ಕೆ ಇದ್ದ ಮಾರ್ಗವು ಮಂಗಳವಾರದ ವೈಮಾನಿಕ ದಾಳಿಯ ನಂತರ ಬಂದ್ ಆಗಿದೆ.

8ನೇ ಪುಟ ನೋಡಿ

ಕಾವೇರಿ: ರಾಜ್ಯಕ್ಕೆ ಮತ್ತೆ ಹಿನ್ನಡೆ

ತಮಿಳುನಾಡಿಗೆ ನಿತ್ಯ 3 ಸಾವಿರ ಕ್ಯೂಸೆಕ್ ನೀರು: ಶಿಫಾರಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಸರ್ಕಾರವು ತಮಿಳುನಾಡಿಗೆ ಅಕ್ಟೋಬರ್ 16ರಿಂದ 31ರ ವರೆಗೆ ಪ್ರತಿದಿನ 3 ಸಾವಿರ ಕ್ಯೂಸೆಕ್ ಕಾವೇರಿ ನೀರನ್ನು ಹರಿಸಬೇಕು ಎಂದು ಕಾವೇರಿ ನೀರು ನಿಯಂತ್ರಣ ಸಮಿತಿ ಶಿಫಾರಸು ಮಾಡಿದೆ. ಸಮಿತಿಯ ಶಿಫಾರಸಿನಿಂದ ರಾಜ್ಯಕ್ಕೆ ಮತ್ತೊಮ್ಮೆ ಹಿನ್ನಡೆಯಾಗಿದೆ.

ನವದೆಹಲಿಯಲ್ಲಿ ಬುಧವಾರ ನಡೆದ ಸಮಿತಿಯ ಸಭೆಯಲ್ಲಿ ಕರ್ನಾಟಕ ಹಾಗೂ ತಮಿಳುನಾಡಿನ ಜಲಸಂಪನ್ಮೂಲ ಇಲಾಖೆಗಳ ಹಿರಿಯ ಅಧಿಕಾರಿಗಳು ಪಾಲ್ಗೊಂಡರು. ತಮಿಳುನಾಡಿಗೆ ನೀರು ಬಿಡುಗಡೆ ಮಾಡಲು ಸಾಧ್ಯವಿಲ್ಲ ಎಂಬ ರಾಜ್ಯದ ವಾದವನ್ನು ಸಮಿತಿ ಈ ಸಲವೂ ಒಪ್ಪಲಿಲ್ಲ.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆ ಒಂದೆರಡು ದಿನಗಳಲ್ಲಿ ನಡೆಯುವ ನಿರೀಕ್ಷೆ ಇದೆ. ಅಕ್ಟೋಬರ್ 15ರ ವರೆಗೆ ಪ್ರತಿದಿನ 3 ಸಾವಿರ ಕ್ಯೂಸೆಕ್ ನೀರು ಹರಿಸುವಂತೆ ಪ್ರಾಧಿಕಾರ ಈ ಹಿಂದೆ ಆದೇಶ ಹೊರಡಿಸಿತ್ತು.


ಖಾಲಿಯಾಗಿರುವ ಕೆಆರ್‌ಎಸ್ ಜಲಾಶಯ

ಕಾವೇರಿ ಕಣಿವೆಯ ನಾಲ್ಕು ಜಲಾಶಯಗಳಲ್ಲಿ ಸದ್ಯ 66 ಟಿಎಂಸಿ ಅಡಿಗಳಷ್ಟು ನೀರಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 110 ಟಿಎಂಸಿ ಅಡಿಗಳಷ್ಟು ನೀರಿತ್ತು. ಈ ಜಲಾಶಯಗಳಿಗೆ ಸಂಚಿತ ಒಳಹರಿವಿನ ಕೊರತೆಯು ಶೇ 51ರಷ್ಟಿದೆ. ರಾಜ್ಯದಲ್ಲಿ ಮುಂಗಾರು ಮುಗಿದಿದ್ದು, ಹಿಂಗಾರು ಸಹ ಆಶಾದಾಯಕವಾಗಿಲ್ಲ. ಬೆಂಗಳೂರು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಮಳೆಯಾಗಿದ್ದರೂ ಜಲಾಶಯಗಳಿಗೆ ಒಳಹರಿವಿನಲ್ಲಿ ಗಣನೀಯವಾಗಿ ಹೆಚ್ಚಳ ಆಗಿಲ್ಲ. ಹೀಗಾಗಿ, ಈಗಿನ ಸನ್ನಿವೇಶದಲ್ಲಿ ತಮಿಳುನಾಡಿಗೆ ನೀರು ಬಿಡುಗಡೆ ಮಾಡಲು ಸಾಧ್ಯವಿಲ್ಲ ಎಂದು ಕರ್ನಾಟಕದ ಅಧಿಕಾರಿಗಳು ಪ್ರತಿಪಾದಿಸಿದರು.

ಈ ಮಾತಿಗೆ ತಮಿಳುನಾಡಿನ ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿದರು. 'ನೀರು ಬಿಡುಗಡೆ ಮಾಡಲು ಕರ್ನಾಟಕ ಸರ್ಕಾರ ಪ್ರತಿ ಸಭೆಯಲ್ಲೂ ತಗಾದೆ ಎತ್ತುತ್ತಿದೆ. ಕಾವೇರಿ ನ್ಯಾಯಮಂಡಳಿ ಆದೇಶದ ಪ್ರಕಾರ ಕರ್ನಾಟಕವು ಈವರೆಗೆ 120 ಟಿಎಂಸಿ ಅಡಿಗಳಷ್ಟು ನೀರು ಬಿಡುಗಡೆ ಮಾಡಬೇಕಿತ್ತು. ಆದರೆ, ಬಿಡುಗಡೆ ಮಾಡಿರುವುದು 52 ಟಿಎಂಸಿ ಅಡಿಗಳಷ್ಟು ಮಾತ್ರ.

ಮುಂದಿನ 15 ದಿನಗಳ ವರೆಗೆ ಕರ್ನಾಟಕವು ಪ್ರತಿದಿನ 16 ಸಾವಿರ ಕ್ಯೂಸೆಕ್ (20.75 ಟಿಎಂಸಿ ಅಡಿಗಳಷ್ಟು) ನೀರು ಬಿಡುಗಡೆ ಮಾಡಬೇಕು' ಎಂದು ಪಟ್ಟು ಹಿಡಿದರು. ಇದಕ್ಕೆ ರಾಜ್ಯದ ಅಧಿಕಾರಿಗಳು ಒಪ್ಪಲಿಲ್ಲ. 'ಪ್ರಾಧಿಕಾರ ಈ ಹಿಂದೆ ಆದೇಶ ಮಾಡಿದಷ್ಟು ನೀರನ್ನು ಬಿಡುಗಡೆ ಮಾಡಲಾಗಿದೆ. ಮತ್ತೆ ನೀರು ಬಿಡುಗಡೆ ಮಾಡಲು ಸಾಧ್ಯವಿಲ್ಲ. ಕುಡಿಯುವ ನೀರಿಗೂ ಸಮಸ್ಯೆ ತಲೆದೋರಲಿದೆ' ಎಂದು ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದರು. ಎರಡೂ ರಾಜ್ಯಗಳ ಅಧಿಕಾರಿಗಳ ವಾದ ವಿವಾದ ಆಲಿಸಿದ ಸಮಿತಿಯು, ಬಿಳಿಗುಂಡ್ಲುವಿನಲ್ಲಿ 3 ಸಾವಿರ ಕ್ಯೂಸೆಕ್ ನೀರಿನ ಹರಿವನ್ನು ಖಚಿತಪಡಿಸಲು ಶಿಫಾರಸು ಮಾಡಿತು.

'ಸಿಕ್ಸರ್ ಶರ್ಮಾ' ದಾಖಲೆಗಳ ಸಾಲು



ರೋಹಿತ್ ಶರ್ಮಾ

ವಿಶ್ವಕಪ್ ಕ್ರಿಕೆಟ್

556 ಅಂತರರಾಷ್ಟ್ರೀಯ ಕ್ರಿಕೆಟ್‌ನ ಮೂರು ಮಾದರಿಗಳಲ್ಲಿಯೂ ಸೇರಿ ರೋಹಿತ್ ಗಳಿಸಿದ ಸಿಕ್ಸರ್‌ಗಳ ವಿಶ್ವದಾಖಲೆ. ಈ ಹಾದಿಯಲ್ಲಿ ಅವರು ವಿಂಡೀಸ್ ಆಟಗಾರ ಕ್ರಿಸ್ ಗೇಲ್ (553) ಅವರನ್ನು ಹಿಂದಿಕ್ಕಿದರು.

7 ಏಕದಿನ ಕ್ರಿಕೆಟ್ ವಿಶ್ವಕಪ್‌ನಲ್ಲಿ ರೋಹಿತ್ ಗಳಿಸಿದ ಶತಕಗಳ ಸಂಖ್ಯೆ. ಸಚಿನ್ ತೆಂಡೂಲ್ಕರ್ (6) ಹಾಗೂ ಆಸ್ಟ್ರೇಲಿಯಾದ ರಿಕಿ ಪಾಂಟಿಂಗ್ (5) ಅವರ ದಾಖಲೆಯನ್ನು ಮೀರಿದರು.

- 131 ರನ್
- 84 ಎಸೆತ
- 16 ಬೌಂಡರಿ
- 5 ಸಿಕ್ಸರ್
- 155.95 ಸ್ಟ್ರೈಕ್‌ರೇಟ್

ಸ್ಕೋರ್
ಅಫ್ಗಾನಿಸ್ತಾನ 8ಕ್ಕೆ 272 (50 ಓವರ್‌ಗಳಲ್ಲಿ)
ಭಾರತ 2ಕ್ಕೆ 273 (35 ಓವರ್‌ಗಳಲ್ಲಿ)
ಫಲಿತಾಂಶ: ಭಾರತಕ್ಕೆ 8 ವಿಕೆಟ್ ಜಯ
(ಸ್ಥಳ: ದೆಹಲಿ)

ವರ್ಗಕ್ಕೆ ಬ್ಲ್ಯಾಕ್‌ಮೇಲ್: ಕಾಂಗ್ರೆಸ್ ಶಾಸಕರ ಪಿ.ಎ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಧಿಕಾರಿಗಳ ವರ್ಗಾವಣೆ ವಿಚಾರವಾಗಿ ಬೀಳಗಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಜೆ.ಟಿ.ಪಾಟೀಲ ಅವರ ಆಪ್ತ ಸಹಾಯಕ ಪ್ರಕಾಶ ಬೀಳಗಿ ಅವರು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ' ಎಂದು ಆರೋಪಿಸಿ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಆಪ್ತ ಕಾರ್ಯದರ್ಶಿ ಕೆ.ಎ.ಹಿದಾಯತ್ ಉಲ್ಲಾ ಅವರು ವಿಧಾನಸೌಧ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪೊಲೀಸರು ಎನ್‌ಸಿಆರ್ ದಾಖಲಿಸಿಕೊಂಡಿದ್ದಾರೆ.

'ಹಿದಾಯತ್ ಉಲ್ಲಾ ಅವರು ಪ್ರಕರಣ ಸಂಬಂಧ ದಾಖಲೆ ಹಾಗೂ ವಾಟ್ಸ್‌ಆ್ಯಪ್ ಸಂದೇಶ ನೀಡಿದ್ದಾರೆ. ಕಾನೂನು ತಜ್ಞರ ಸಲಹೆ ಪಡೆದು ಎಫ್‌ಐಆರ್ ದಾಖಲಿಸಿಕೊಳ್ಳಲಾಗುವುದು' ಎಂದು ಪೊಲೀಸರು ಹೇಳಿದರು.

5ನೇ ಪುಟ ನೋಡಿ

ಒಳ ಪುಟಗಳು

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬಿಬಿಎಂಪಿ ವಿರುದ್ಧ ಹೈಕೋರ್ಟ್ ಹಿಗ್ಗಾಮುಗ್ಗ ತರಾಟೆ

ಬೆಂಗಳೂರಿಗೆ ಪಾಲಿಕೆಯೇ ಶತ್ರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕ್ರಮ ಹೋರ್ಡಿಂಗ್ ಮತ್ತು ಜಾಹೀರಾತುಗಳಿಂದ ಬೃಹತ್ ಬೆಂಗಳೂರು ಮಹಾನಗರ (ಬಿಬಿಎಂಪಿ) ಪಾಲಿಕೆಗೆ ಸಾವಿರಾರು ಕೋಟಿ ರೂಪಾಯಿ ನಷ್ಟವಾಗುತ್ತಿದೆ. ಜಾಹೀರಾತುಗಳ ಮೂಲಕ ಪಡೆಯಬೇಕಾಗಿದ್ದ ನ್ಯಾಯಬದ್ಧ ತೆರಿಗೆಯನ್ನು ನಾಗರಿಕರ ಮೇಲೆ ವರ್ಗ ಮಾಡಲಾಗುತ್ತಿದೆ. ಮೊದಲೇ ವಿರೂಪಗೊಂಡಿರುವ ಸುಂದರ ಬೆಂಗಳೂರು, ಅಕ್ರಮ ಜಾಹೀರಾತುಗಳಿಂದಾಗಿ ಇನ್ನಷ್ಟು ಕುರೂಪಗೊಳ್ಳುತ್ತಿದೆ. ಪರಿಣಾಮ ಬೆಂಗಳೂರಿಗೆ ಬಿಬಿಎಂಪಿಯೇ ಮೊದಲ ಶತ್ರುವಾಗಿ ಪರಿಣಮಿಸಿದೆ' ಎಂದು ಹೈಕೋರ್ಟ್, ಬಿಬಿಎಂಪಿಯ ಕಾರ್ಯವೈಖರಿಯನ್ನು ಹಿಗ್ಗಾಮುಗ್ಗ ತರಾಟೆಗೆ ತೆಗೆದುಕೊಂಡಿತು.

'ಅನಧಿಕೃತ ಜಾಹೀರಾತು ಫಲಕಗಳ ಹಾವಳಿ ತಡೆಯಲು ಬಿಬಿಎಂಪಿಗೆ ನಿರ್ದೇಶಿಸಬೇಕು' ಎಂದು ಕೋರಿ ಸಾಮಾಜಿಕ ಕಾರ್ಯಕರ್ತ ಮಾಯಿಗೇಗೌಡ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.



ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ರವಿವರ್ಮ ಕುಮಾರ್, 'ನಗರದಾದ್ಯಂತ ಸಾಕಷ್ಟು ಅನಧಿಕೃತ ಜಾಹೀರಾತುಗಳಿವೆ. ಆದರೆ, ಈ ಬಗ್ಗೆ ಪಾಲಿಕೆ ತನ್ನ ಪ್ರಮಾಣಪತ್ರದಲ್ಲಿ ಎಳ್ಳಷ್ಟೂ ಅಂಶವನ್ನು ಪ್ರಸ್ತಾಪಿಸಿಲ್ಲ' ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಒಂದೆಡೆ ಜಾಹಿರಾತು ಫಲಕಗಳಿಂದ ತೆರಿಗೆ ಸಂಗ್ರಹಿಸಲು ವಿಫಲವಾಗಿದ್ದೀರಿ. ಮತ್ತೊಂದೆಡೆ ಬೆಂಗಳೂರಿನ ಅಭಿವೃದ್ಧಿಗೆ ಹಣವಿಲ್ಲವೆಂದು ಕೈ ಮೇಲೆತ್ತಿ ಅಸಹಾಯಕತೆ ವ್ಯಕ್ತಪಡಿಸುತ್ತೀರಿ. ನಿಮ್ಮ ಈ ವೈಫಲ್ಯದಿಂದ ಜನಸಾಮಾನ್ಯರ ಮೇಲೆ ತೆರಿಗೆಯ ಹೊರೆ ಹೆಚ್ಚುತ್ತಿದೆ. ನೀವೆಲ್ಲಾ ಸೇರಿ ನಗರದ ಸೌಂದರ್ಯ ಹಾಳು ಮಾಡಲು ಅವಕಾಶ ನೀಡಿದ್ದೀರಿ. ಸುಂದರ ಬೆಂಗಳೂರಿಗೆ ನೀವೇ ಮೊದಲ ಶತ್ರುಗಳು' ಎಂದು ಕಿಡಿಕಾರಿತು.

ಇದಕ್ಕೆ ಬಿಬಿಎಂಪಿ ಪರ ವಕೀಲರು, 'ಅನಧಿಕೃತ ಫ್ಲೆಕ್ಸ್, ಬ್ಯಾನರ್ ಹೋರ್ಡಿಂಗ್ ಸೇರಿದಂತೆ ಅಕ್ರಮ ಜಾಹೀರಾತುಗಳನ್ನು ತಡೆಯುವಲ್ಲಿ ನಿರ್ಲಕ್ಷ್ಯ ತೋರಿದ ಅಧಿಕಾರಿಗಳಿಗೆ ಈಗಾಗಲೇ ಷೋಕಾಸ್ ನೋಟಿಸ್ ನೀಡಲಾಗಿದೆ. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ನ್ಯಾಯಪೀಠಕ್ಕೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದರು.

ಆದರೆ, ಇದನ್ನು ಲೆಕ್ಕಿಸದ ನ್ಯಾಯಪೀಠ, 'ಕಳೆದ ಮೂರು ವರ್ಷಗಳಲ್ಲಿ ಎಷ್ಟು ಫ್ಲೆಕ್ಸ್, ಹೋರ್ಡಿಂಗ್‌ಗಳ ಅಳವಡಿಕೆಗೆ ಅನುಮತಿ ನೀಡಲಾಗಿದೆ? ನಗರದಾದ್ಯಂತ ಅನಧಿಕೃತ ಜಾಹೀರಾತು ಫಲಕಗಳು ಎಷ್ಟಿವೆ? ಅವುಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ? ಅವಧಿ ಮೀರಿದ ಜಾಹೀರಾತು ಫಲಕಗಳ ವಿರುದ್ಧ ಏನೆಲ್ಲಾ ಕ್ರಮ ಜರುಗಿಸಿದ್ದೀರಿ? ಈ ಬಗ್ಗೆ ನವೆಂಬರ್ 28ರೊಳಗೆ ಸಮೀಕ್ಷೆ ನಡೆಸಿ ವರದಿ ಸಲ್ಲಿಸಿ' ಎಂದು ಖಡಕ್ ನಿರ್ದೇಶನ ನೀಡಿತು. 'ತಪ್ಪಿತಸ್ಥ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸುವುದನ್ನು ಮುಂದುವರಿಸಬೇಕು' ಎಂದೂ ತಾಕೀತು ಮಾಡಿ ವಿಚಾರಣೆ ಮುಂದೂಡಿತು.

ಉಪಕಾರ್ಯದರ್ಶಿ ವಿರುದ್ಧ ವಿಚಾರಣೆ

ಬೆಂಗಳೂರು: 'ಸಾರ್ವಜನಿಕ ಸೇವೆಯಲ್ಲಿರುವ ವ್ಯಕ್ತಿಯ ಪ್ರಾಮಾಣಿಕತೆ ಕುರಿತು ಅನುಮಾನದ ನೆರಳು ಸುಳಿದಾಡಿದರೆ ಅದರಿಂದ ಇಡೀ ವ್ಯವಸ್ಥೆಗೆ ಕಳಂಕ ತಗಲುತ್ತದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸುವ ಮೂಲಕ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಉಪಕಾರ್ಯದರ್ಶಿ-3 ಶ್ರೀರೂಪಾ ವಿರುದ್ಧದ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯ ಪ್ರಕರಣದ ವಿಚಾರಣೆಗೆ ಹೈಕೋರ್ಟ್ ಸಮ್ಮತಿಸಿದೆ.

ತಮ್ಮ ವಿರುದ್ಧ ವಿಚಾರಣೆಗೆ ಅನುಮತಿ ನೀಡಿರುವ ಕ್ರಮವನ್ನು ಪ್ರಶ್ನಿಸಿ ಶ್ರೀರೂಪಾ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎನ್.ಎಸ್.ಸಂಜಯ್‌ಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಅರ್ಜಿದಾರರ ವಿರುದ್ಧ ಇನ್ನೂ ವಿಚಾರಣೆ ನಡೆಯಬೇಕಿದೆ. ಇದನ್ನು ಸರ್ಕಾರ ತೀರ್ಮಾನ ಮಾಡಬೇಕಾಗಿದ್ದು, ಈ ಹಂತದಲ್ಲಿ ಈ ಬಗ್ಗೆ ಯಾವುದೇ ತಾರ್ಕಿಕ ಅಂತ್ಯಕ್ಕೆ ಬರಲು ಸಾಧ್ಯವಿಲ್ಲ' ಎಂದು ಹೇಳಿದೆ.

ಬೇರೆ ಇಲಾಖೆ ಅಧಿಕಾರಿಗಳಿಗೆ ಹೆಚ್ಚುವರಿ ಹುದ್ದೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ಹುದ್ದೆ ಗಳ ಜವಾಬ್ದಾರಿಯನ್ನು ಬೇರೆ ಇಲಾಖೆಯ ಐವರು ಐಎಎಸ್ ಅಧಿಕಾರಿಗಳಿಗೆ ಹೆಚ್ಚುವರಿಯಾಗಿ ವಹಿಸಲಾಗಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಪ್ರಧಾನ ಕಾರ್ಯದರ್ಶಿ ಮೌನೀಶ್ ಮೌದ್ಗಿಲ್ ಅವರಿಗೆ ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಹುದ್ದೆಯನ್ನು ಹೆಚ್ಚುವರಿಯಾಗಿ ವಹಿಸಲಾಗಿದೆ.

ಸುವರ್ಣ ಆರೋಗ್ಯ ಸುರಕ್ಷ ಟ್ರಸ್ಟ್ ಕಾರ್ಯಕಾರಿ ನಿರ್ದೇಶಕರಾಗಿದ್ದ ವಿನೋತ್ ಪ್ರಿಯಾ ಅವರಿಗೆ ದಕ್ಷಿಣ ವಲಯ ಆಯುಕ್ತರ ಹುದ್ದೆ, ಅಟಲ್ ಜನಸ್ನೇಹಿ ಕೇಂದ್ರದ ನಿರ್ದೇಶಕ ಕರೀಗೌಡ ಅವರನ್ನು ಯಲಹಂಕ ವಲಯ ಆಯುಕ್ತ, ಬಿಎಂಟಿಸಿಯ ಐಟಿ ನಿರ್ದೇಶಕಿ ಆರ್. ಸ್ನೇಹಲ್ ಅವರಿಗೆ ಪೂರ್ವ ವಲಯ ಆಯುಕ್ತರ ಹುದ್ದೆ, ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ (ರೆರಾ) ಕಾರ್ಯದರ್ಶಿ ಇಬ್ರಾಹಿಂ ಮೈಗೂರು ಅವರಿಗೆ ಮಹದೇವಪುರ ವಲಯ ಆಯುಕ್ತರ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಬಿಬಿಎಂಪಿಯಲ್ಲಿ ಆಸ್ತಿಗಳ ವಿಭಾಗದ ವಿಶೇಷ ಆಯುಕ್ತರಾಗಿರುವ ಪ್ರೀತಿ ಗೆಹ್ಲೋತ್ ಅವರಿಗೆ ದಾಸರಹಳ್ಳಿ ವಲಯ ಆಯುಕ್ತರ ಹುದ್ದೆಯನ್ನೂ ಹೆಚ್ಚುವರಿಯಾಗಿ ವಹಿಸಿ ಸರ್ಕಾರ ಬುಧವಾರ ಆದೇಶ ಹೊರಡಿಸಿದೆ.

ರಾಜ್ಯದಲ್ಲಿ ಹಿರಿಯ ನಾಗರಿಕ ಸ್ನೇಹಿ ಯೋಜನೆ ಜಾರಿಗೆ ಸಿದ್ಧತೆ

75 ದಾಟಿದವರ ಮನೆಗೇ ಪಡಿತರ

● ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ವಿಶೇಷ

ಬೆಂಗಳೂರು: 'ಅನ್ನಭಾಗ್ಯ' ಯೋಜನೆಯಡಿ ವಿತರಿಸುವ ಪಡಿತರವನ್ನು 75 ವರ್ಷ ದಾಟಿದವರ ಮನೆ ಬಾಗಿಲಿಗೇ ತಲುಪಿಸಲು ಆಹಾರ ಇಲಾಖೆ ಸಿದ್ಧತೆ ನಡೆಸಿದೆ.

ಕೋರಿಕೆಯಷ್ಟು ಅಕ್ಕಿಯನ್ನು ಎಫ್‌ಸಿಐ ನಿಗದಿಪಡಿಸಿದ ದರದಲ್ಲಿ (ಪ್ರತಿ ಕೆ.ಜಿಗೆ ₹ 34) ಪೂರೈಸಲು ಛತ್ತೀಸಗಢ ಮತ್ತು ತೆಲಂಗಾಣ ರಾಜ್ಯ ಸರ್ಕಾರಗಳು ಒಪ್ಪಿಗೆ ನೀಡಿವೆ. ಇದೇ ತಿಂಗಳಿನಿಂದ ನಗದು ಬದಲು ಪೂರ್ಣ ಪ್ರಮಾಣದಲ್ಲಿ ಅಕ್ಕಿ ಪೂರೈಸಲು ನಿರ್ಧರಿಸಿರುವ ಇಲಾಖೆ, ಪಡಿತರ ವಿತರಣೆಯಲ್ಲಿ ಹಿರಿಯ ನಾಗರಿಕರಿಗೆ ಅನುಕೂಲ ಮಾಡಿಕೊಡಲು ಮತ್ತೊಂದು ನಿರ್ಧಾರ ತೆಗೆದುಕೊಂಡಿದೆ. ಅದಕ್ಕಾಗಿ ಹಿರಿಯ ನಾಗರಿಕಸ್ನೇಹಿ ನೀತಿ ಪರಿಚಯಿಸುತ್ತಿದೆ.

ಇದುವರೆಗೂ ಪಡಿತರ ಕಾರ್ಡ್ ಹೊಂದಿರುವ ಕುಟುಂಬದ ಯಾರಾದರೂ ಒಬ್ಬ ಸದಸ್ಯರು ತಮ್ಮ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿ ಅಥವಾ ಅನ್ನಭಾಗ್ಯ ಪಡಿತರ ವಿತರಣಾ ಕೇಂದ್ರಗಳಿಗೆ ತೆರಳಿ ಬಯೊಮೆಟ್ರಿಕ್ ನೀಡಿದ ನಂತರ ತಮ್ಮ ಕುಟುಂಬಕ್ಕೆ ನಿಗದಿಪಡಿಸಿದ ಅಕ್ಕಿ ಮತ್ತಿತರ ಪಡಿತರ ಪಡೆಯಬೇಕಿತ್ತು. ವಯಸ್ಸಾದವರು ಪಡಿತರ ಕೇಂದ್ರಗಳಿಗೆ ಹೋಗಲು ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದರು. ಇಂತಹ ಸಮಸ್ಯೆಗಳಿಗೆ ಕೊನೆ ಹಾಡಲು 'ಮನೆ ಬಾಗಿಲಿಗೆ ಪಡಿತರ' ಯೋಜನೆ ರೂಪಿಸಲಾಗಿದೆ.

ಒಂಟಿ ಕುಟುಂಬಕ್ಕೆ ಮೊದಲ ಪ್ರಾಶಸ್ತ್ಯ: ಮನೆ ಬಾಗಿಲಿಗೆ ಪಡಿತರ ವಿತರಿಸಬೇಕಾದರೆ ಅವರ ಕುಟುಂಬದಲ್ಲಿ (ಪಡಿತರ ಚೀಟಿಯಲ್ಲಿ ನಮೂದಿಸಿದಂತೆ) 75ರ ಒಳಗಿನ ಇತರೆ ಸದಸ್ಯರು ಇರಬಾರದು. ಇದ್ದರೆ, ಅವರು ವಿತರಣಾ ಕೇಂದ್ರಗಳಿಗೆ ಬಂದು ಪಡಿತರ ಪಡೆಯಬೇಕು ಎಂಬ ಷರತ್ತು ವಿಧಿಸಲಾಗಿದೆ.

ಒಂಟಿ ವೃದ್ಧರು, 75 ದಾಟಿದ ದಂಪತಿಗಳ ಪ್ರತ್ಯೇಕ ಪಟ್ಟಿಯನ್ನು ಆಹಾರ ಇಲಾಖೆ ಸಿದ್ಧಪಡಿಸಿದೆ. ಕುಟುಂಬ ಸದಸ್ಯರು ಬೇರೆ ಪ್ರದೇಶಗಳಿಗೆ ತೆರಳಿದ್ದರೆ, ಊರಲ್ಲೇ ಉಳಿದ ವೃದ್ಧರು ಮನೆ ಬಾಗಿಲಿಗೇ ಪಡಿತರ ನೀಡುವಂತೆ ಕೋರಿಕೆ ಸಲ್ಲಿಸಬಹುದು.ವಯಸ್ಸಿನ ಕಾರಣಕ್ಕೆ ನ್ಯಾಯಬೆಲೆ ಅಂಗಡಿಗೆ ಹೋಗಲು ಸಾಧ್ಯವಾಗದೆ, ಸರದಿಯಲ್ಲಿ ನಿಲ್ಲಲು ಆಗದೇ ಕೆಲ ತಿಂಗಳು ಪಡಿತರವನ್ನೇ ಪಡೆಯಲಿಲ್ಲ. ಸರ್ಕಾರದ ಈ ನಿರ್ಧಾರ ತುಂಬಾ ಉಪಕಾರಿಯಾಗಿದೆ' ಎನ್ನುತ್ತಾರೆ ಬೆಂಗಳೂರು ಎಂ.ಸಿ. ಲೇಔಟ್‌ನ 90 ವರ್ಷದ ನಾಗರಿಕ ರತ್ನಾಕರ ಶೆಣೈ.

ಉತ್ತರ ಕರ್ನಾಟಕದಲ್ಲೇ ಅತಿ ಹೆಚ್ಚು

75 ದಾಟಿದ ವೃದ್ಧರು, ದಂಪತಿಗಳ ಬಹಳಷ್ಟು ಪಡಿತರ ಕಾರ್ಡ್‌ಗಳಲ್ಲಿ ಇತರೆ ಕಿರಿಯ ಸದಸ್ಯರ ಹೆಸರು ನಮೂದಾಗಿದ್ದರೂ, ಅವರೆಲ್ಲ ಕೆಲಸ ಹುಡುಕಿಕೊಂಡು ವಲಸೆ ಹೋಗಿರುವ ಅತಿ ಹೆಚ್ಚು ಪ್ರಕರಣಗಳು ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿವೆ. ಬರ ಪರಿಸ್ಥಿತಿಯ ಈ ಸಮಯದಲ್ಲಿ ವಲಸೆ ಹೋಗುವವರ ಸಂಖ್ಯೆ ಹೆಚ್ಚಾಗುವ ಸಾಧ್ಯತೆಯೂ ಇದೆ. ಅಂತಹ ಕುಟುಂಬಗಳ ವೃದ್ಧರು ಕೋರಿಕೆ ಸಲ್ಲಿಸಿದರೆ ಅವರ ಮನೆಬಾಗಿಲಿಗೆ ಪಡಿತರ ನೀಡಲು ಕ್ರಮ ಕೈಗೊಳ್ಳಲಾಗುವುದು ಎನ್ನುತ್ತಾರೆ ಆಹಾರ ಇಲಾಖೆಯ ಅಧಿಕಾರಿಗಳು.

> ಮನೆಬಾಗಿಲಿಗೆ ಪಡಿತರ ನೀಡಲು ತಗಲುವ ವೆಚ್ಚವನ್ನು ಸರ್ಕಾರ ನಿಗದಿ ಮಾಡಿಲ್ಲ. ಆದೇಶ ಹೊರಡಿಸುವ ಮೊದಲು ವಿತರಕರ ಸಂಘದ ಜತೆ ಮಾತುಕತೆ ನಡೆಸಬೇಕು. ಇಲ್ಲದಿದ್ದರೆ ಯೋಜನೆ ಸಫಲವಾಗದು
>
> **ಟಿ.ಕೃಷ್ಣಪ್ಪ,** ಅಧ್ಯಕ್ಷರು, ನ್ಯಾಯಬೆಲೆ ಅಂಗಡಿಗಳ ಮಾಲೀಕರ ಸಂಘ

ಹಿರಿಯ ನಾಗರಿಕರ ಸಂಖ್ಯೆ ಎಷ್ಟು?

(ಲಕ್ಷಗಳಲ್ಲಿ)

11.95 — 75 ವರ್ಷ ದಾಟಿದವರು

4.01 ಮಹಿಳೆಯರು | 7.94 ಪುರುಷರು

ಅಂಕಿ ಅಂಶ

- **1.28** ಕೋಟಿ — ಪಡಿತರ ಚೀಟಿದಾರರು
- **4.42** ಕೋಟಿ — ಫಲಾನುಭವಿಗಳು
- **2.29** ಲಕ್ಷ ಟನ್ — ಪ್ರತಿ ತಿಂಗಳು ಬೇಕಾಗುವ ಅಕ್ಕಿ
- **₹841.06** ಕೋಟಿ — ಪ್ರತಿ ತಿಂಗಳ ಪಡಿತರ ವೆಚ್ಚ

ಸುದ್ದಿ 2 ನಿಮಿಷ

ಪದವಿ ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಕಡ್ಡಾಯ

ನವದೆಹಲಿ(ಪಿಟಿಐ): ಪದವಿ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಇಂಟರ್ನ್‌ಶಿಪ್ ಮಾಡಬೇಕು. ಇದಕ್ಕೆ ಕ್ರೆಡಿಟ್‌ಗಳನ್ನು ನೀಡಲಾಗುತ್ತದೆ ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಬಿಡುಗಡೆ ಮಾಡಿರುವ ಹೊಸ ಕರಡು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಅನುಗುಣವಾಗಿ ಸಿದ್ಧಪಡಿಸಲಾಗಿರುವ 'ಪದವಿ ವಿದ್ಯಾರ್ಥಿಗಳ ಇಂಟರ್ನ್‌ಶಿಪ್ ಮತ್ತು ಸಂಶೋಧನೆ ಕುರಿತ ಮಾರ್ಗಸೂಚಿಗಳು' ಕರಡನ್ನು ಮಂಗಳವಾರ ಬಿಡುಗಡೆ ಮಾಡಲಾಗಿದೆ.

ಪ್ರಾಯೋಗಿಕ ಕಲಿಕೆಗೆ ಹೆಚ್ಚು ಅವಕಾಶಗಳನ್ನು ಒದಗಿಸಬೇಕು. ಇದಕ್ಕಾಗಿ ಪದವಿ ಹಂತದ ಪಠ್ಯಕ್ರಮವು ಸಂಶೋಧನೆ ಹಾಗೂ ಇಂಟರ್ನ್‌ಶಿಪ್ ಒಳಗೊಂಡಿರಬೇಕು ಎಂಬುದಕ್ಕೆ ಒತ್ತು ನೀಡಿ, ಈ ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗಿದೆ ಎಂದು ಯುಜಿಸಿ ಹೇಳಿದೆ.

ಪದವಿಯ 4ನೇ ಸೆಮಿಸ್ಟರ್ ನಂತರ 60 ರಿಂದ 120 ಗಂಟೆಗಳಷ್ಟು ಇಂಟರ್ನ್‌ಶಿಪ್ ಕಡ್ಡಾಯ ಎಂಬುದು ಸೇರಿದಂತೆ ಹಲವಾರು ಅಂಶಗಳನ್ನು ಕರಡು ಮಾರ್ಗಸೂಚಿಗಳು ಒಳಗೊಂಡಿವೆ.

ಧಮ್ಮದೀಕ್ಷಾ ಮಹೋತ್ಸವ ಇದೇ 14ಕ್ಕೆ

ಬೆಂಗಳೂರು: ಬುದ್ಧಿಸ್ಟ್ ಸೊಸೈಟಿ ಆಫ್ ಇಂಡಿಯಾ, ಕರ್ನಾಟಕ ಬುದ್ಧ ಸಮಾಜ, ಸಮತಾ ಸೈನಿಕ ದಳದಿಂದ ಇದೇ 14ರಂದು 67ನೇ ವಾರ್ಷಿಕ ಧಮ್ಮದೀಕ್ಷಾ ಮಹೋತ್ಸವವನ್ನು ನಾಗಸೇನಾ ಬುದ್ಧ ವಿಹಾರದಲ್ಲಿ ಹಮ್ಮಿಕೊಳ್ಳಲಾಗಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬುದ್ಧಿಸ್ಟ್ ಸೊಸೈಟಿ ಆಫ್ ಇಂಡಿಯಾದ ಸಾಕೆ ಶ್ಯಾಮ್, 'ಬುದ್ಧ ಮತ್ತು ಅಂಬೇಡ್ಕರ ಅವರ ಪ್ರತಿಮೆಗಳನ್ನು ಹೊತ್ತ ದೀಕ್ಷಾ ರಥಯಾತ್ರೆ ಸ್ವಾತಂತ್ರ್ಯ ಉದ್ಯಾನದಿಂದ ಸದಾಶಿವನಗರದ ಬುದ್ಧ ವಿಹಾರದವರೆಗೆ ನಡೆಯಲಿದೆ. ಈ ಪಥಸಂಚಲನದಲ್ಲಿ 50ಕ್ಕೂ ಹೆಚ್ಚು ಬಿಕ್ಕುಗಳು, ಸಮತಾ ಸೈನಿಕ ದಳದ ಸೈನಿಕರು ಭಾಗವಹಿಸಲಿದ್ದಾರೆ' ಎಂದು ತಿಳಿಸಿದರು.

'ಬೌದ್ಧ ಧಮ್ಮ ಎದುರಿಸುತ್ತಿರುವ ಸವಾಲುಗಳ ಮತ್ತು ಅವುಗಳ ಪರಿಹಾರೋಪಾಯಗಳು ವಿಚಾರಸಂಕಿರಣ ನಡೆಯಲಿದೆ. ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ, ಲೇಖಕಿ ಬಿ.ಟಿ. ಲಲಿತಾ ನಾಯಕ್, ದೇವೇಂದ್ರ ಹೆಗ್ಗಡೆ, ಹ.ರಾ. ಮಹೇಶ್, ಬಿಕ್ಕು ವಿನಯರಕ್ಖಿತ, ಸಚಿವ ಸತೀಶ್ ಜಾರಕಿಹೊಳಿ, ಸಮತಾ ಸೈನಿಕ ದಳದ ಎಂ. ವೆಂಕಟಸ್ವಾಮಿ, ಸುಭಾಷ್ ಭರಣಿ ಪಾಲ್ಗೊಳ್ಳಲಿದಾರೆ' ಎಂದರು.



ಬ್ರಹ್ಮಾವರ ತಾಲ್ಲೂಕಿನ ಕೋಟ ಕಾರಂತ ಥೀಂ ಪಾರ್ಕ್‌ನಲ್ಲಿ ನಡೆದ ಸಮಾರಂಭದಲ್ಲಿ ಶಾಸ್ತ್ರೀಯ ಸಂಗೀತಗಾರ ವಿದ್ಯಾಭೂಷಣ ಅವರಿಗೆ ಕಾರಂತ ಹುಟ್ಟೂರ ಪ್ರಶಸ್ತಿ ನೀಡಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಗೌರವಿಸಿದರು

ಐಟಿ ಕಾರಿಡಾರ್: 38 ಮೆಟ್ರೊ ಫೀಡರ್ ಬಸ್‌ಗಳಿಗೆ ಚಾಲನೆ

'ದಟ್ಟಣೆ ನಿವಾರಣೆಗೆ ಅನುಕೂಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐಟಿ ಕಾರಿಡಾರ್‌ನಲ್ಲಿ ವಾಹನ ದಟ್ಟಣೆ ಕಡಿಮೆ ಮಾಡಿ, ಜನರಿಗೆ ಅನುಕೂಲ ಕಲ್ಪಿಸಲು ಮೆಟ್ರೊ ಫೀಡರ್ ಬಸ್‌ಗಳನ್ನು ಆರಂಭಿಸಲಾಗಿದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಮೆಟ್ರೊ ಫೀಡರ್‌ನ 38 ಬಿಎಂಟಿಸಿ ಬಸ್‌ಗಳಿಗೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

ಹವಾನಿಯಂತ್ರಿತ ಮತ್ತು ಹವಾ ನಿಯಂತ್ರಣ ರಹಿತ ಬಸ್ ಸೇವೆಯನ್ನು ಮೆಟ್ರೊ ಫೀಡರ್ ಮಾರ್ಗಗಳಲ್ಲಿ ಪರಿಚಯಿಸಲಾಗಿದೆ. ಮುಂದೆ ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದು ಎಂದು ಮಾಹಿತಿ ನೀಡಿದರು.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸತ್ಯವತಿ ಜಿ. ಅವರು ಮಾತನಾಡಿ, 'ಕಾರ್ಪೊರೇಟ್ ಉದ್ಯಮಿಗಳು ಬೆಂಗಳೂರನ್ನು ನಮ್ಮ ಬೆಂಗಳೂರು ಎಂದು ಪರಿಭಾವಿಸಿ ಸುಸಜ್ಜಿತ ಬಸ್ ನಿಲ್ದಾಣ, ತಂಗುದಾಣಗಳನ್ನು ನಿರ್ಮಿಸಿಕೊಡಬೇಕು. ಇದು ಬಿಎಂಟಿಸಿ, ಬಿಬಿಎಂಪಿಯವರ ಕೆಲಸ ಎಂದು ಸುಮ್ಮನಿರಬಾರದು' ಎಂದು ಮನವಿ ಮಾಡಿದರು.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾರ್ಗದಲ್ಲಿ 20 ಎಲೆಕ್ಟ್ರಿಕ್ ಬಸ್‌ಗಳು ಸಂಚರಿಸುತ್ತಿವೆ. ಈ ವರ್ಷ ಸದ್ಯವೇ ಬಿಎಂಟಿಸಿ ವ್ಯಾಪ್ತಿಯಲ್ಲಿ 1,000 ಎಲೆಕ್ಟ್ರಿಕ್ ಬಸ್‌ಗಳು ಸಂಚರಿಸಲಿವೆ. ಮುಂದೆ ಮತ್ತೆ 1,000 ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲಾಗುವುದು ಎಂದು ವಿವರಿಸಿದರು.

ಪ್ರತಿಜ್ಞೆ: 'ವಾರಕ್ಕೆ ಕನಿಷ್ಠ 2 ದಿನವಾದರೂ ಸ್ವಂತ ವಾಹನಗಳನ್ನು ಬಿಟ್ಟು ಬಿಎಂಟಿಸಿ ಬಸ್, ಮೆಟ್ರೊ ರೈಲು ಮುಂತಾದ ಸಾರ್ವಜನಿಕ ವಾಹನಗಳಲ್ಲಿ ಪ್ರಯಾಣಿಸುತ್ತೇವೆ' ಎಂದು 'ಸ್ವಂತ 2 ಸಾರಿಗೆ' ಅಭಿಯಾನದ ಅಂಗವಾಗಿ ಸಾರ್ವಜನಿಕರಿಗೆ ಪ್ರತಿಜ್ಞೆ ಬೋಧಿಸಲಾಯಿತು.

ಸಾರಿಗೆ ಸಚಿವರೊಂದಿಗೆ ರಾಜ್ಯ ಪರಿವರ್ತನಾ ಸಂಸ್ಥೆ ಉಪಾಧ್ಯಕ್ಷ ರಾಜೀವ್ ಗೌಡ, ಒಆರ್‌ಆರ್‌ಸಿಎ ಅಧ್ಯಕ್ಷ ಮನಸ್‌ದಾಸ್, 'ಬಿ–ಪ್ಯಾಕ್' ಸಂಸ್ಥೆಯ ಸಿಇಒ ರೇವತಿ ಅಶೋಕ್, ನಾಗರಿಕ ಕಾರ್ಯಕರ್ತ ಶ್ರೀನಿವಾಸ್ ಅಲವಿಲ್ಲಿ, ವಿಎಂವೇರ್ ಸಂಸ್ಥೆಯ ರಾಮ್‌ಕುಮಾರ್ ನಾರಾಯಣನ್, ಸಸ್ಟೈನೆಬಲ್ ಇಕೊ ಸಿಸ್ಟಂನ ಜಯನ್ ದೇಸಾಯಿ ಸಹಿತ ಅನೇಕರು ಕೆ.ಆರ್. ಪುರ ಮೆಟ್ರೊ ನಿಲ್ದಾಣದಿಂದ ಇಂಟೆಲ್ ಇಕೊಸ್ಪೇಸ್ ಕಚೇರಿವರೆಗೆ ಫೀಡರ್ ಬಸ್‌ನಲ್ಲಿ ಪ್ರಯಾಣಿಸಿದರು.



ಮೆಟ್ರೊ ಫೀಡರ್ 35 ಬಿಎಂಟಿಸಿ ಬಸ್‌ಗಳಿಗೆ ಬುಧವಾರ ಚಾಲನೆ ನೀಡುವ ಕಾರ್ಯಕ್ರಮದಲ್ಲಿ 'ಸ್ವಂತ 2 ಸಾರಿಗೆ' ಘೋಷಣೆಯ ಫಲಕವನ್ನು ಪ್ರದರ್ಶಿಸಿ 'ಕನಿಷ್ಠ ವಾರಕ್ಕೆ ಎರಡು ದಿನ ಸ್ವಂತ ವಾಹನ ಬಿಟ್ಟು ಸಾರ್ವಜನಿಕ ವಾಹನದಲ್ಲಿ ಪ್ರಯಾಣಿಸುತ್ತೇವೆ' ಎಂದು ಪ್ರತಿಜ್ಞೆ ಬೋಧಿಸಲಾಯಿತು.

ಫೀಡರ್ ಬಸ್‌ಗಳ ವಿವರ

ಕೆ.ಆರ್. ಪುರ ಮೆಟ್ರೊ ನಿಲ್ದಾಣದಿಂದ ಮಹದೇವಪುರ, ಮಾರತ್‌ಹಳ್ಳಿ ಸೇತುವೆ, ಕಾಡು ಬೀಸನಹಳ್ಳಿ, ಅಗರ ಮಾರ್ಗವಾಗಿ ಸೆಂಟ್ರಲ್ ಸಿಲ್ಕ್‌ಬೋರ್ಡ್‌ಗೆ 22 ಬಸ್‌ಗಳು, ಕೆ.ಆರ್. ಪುರ ಮೆಟ್ರೊ ನಿಲ್ದಾಣದಿಂದ ಮಹದೇವಪುರ, ಕುಂದಲಹಳ್ಳಿ ಗೇಟ್, ಗ್ರಾಫೈಟ್ ಇಂಡಿಯಾ, ಗರುಡಾಚಾರ್ ಪಾಳ್ಯ ಮಾರ್ಗವಾಗಿ ಮತ್ತೆ ಕೆ.ಆರ್. ಪುರ ಮೆಟ್ರೊ ನಿಲ್ದಾಣಕ್ಕೆ 8 ಬಸ್‌ಗಳು ಸಂಚರಿಸಲಿವೆ.

ಕಾಡುಗೋಡಿಯಿಂದ ಹೋಪ್ ಫಾರಂ, ಐಟಿಪಿಎಲ್, ಗ್ರಾಫೈಟ್ ಇಂಡಿಯಾ, ಗರುಡಾಚಾರ್ ಪಾಳ್ಯ ಮಾರ್ಗವಾಗಿ ಮಾರತ್‌ಹಳ್ಳಿಗೆ 4, ಕಾಡುಗೋಡಿಯಿಂದ ಹೋಪ್ ಫಾರಂ, ಸಿದ್ಧಾಪುರ, ವರ್ತೂರು ಕೋಡಿ, ಕುಂದಲಹಳ್ಳಿ ಗೇಟ್ ಮಾರ್ಗವಾಗಿ ಮಾರತ್‌ಹಳ್ಳಿಗೆ 4 ಫೀಡರ್ ಬಸ್‌ಗಳು ಚಲಿಸಲಿವೆ.

ಸುಧಾ, ಮಯೂರ ಓದಿರಿ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

12 ಸಾವಿರ ಉದ್ಯೋಗ ಸೃಷ್ಟಿ: ಸಿಇಒ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮುಂದಿನ ಎರಡು ವರ್ಷಗಳಲ್ಲಿ 12 ಸಾವಿರ ಉದ್ಯೋಗ ಸೃಷ್ಟಿಸಲಿದೆ ಎಂದು ವಿಮಾನ ನಿಲ್ದಾಣದ ವ್ಯವಸ್ಥಾಪಕ ನಿರ್ದೇಶಕ, ಸಿಇಒ ಹರಿ ಮರಾರ್ ಅಭಿಪ್ರಾಯಪಟ್ಟರು.

ನಗರದಲ್ಲಿ ಬುಧವಾರ ನಡೆದ ವಾಣಿಜ್ಯ ಸಮಾವೇಶದಲ್ಲಿ 'ಬೆಂಗಳೂರು ರೂಪಾಂತರ' ಕುರಿತ ಚರ್ಚೆಯಲ್ಲಿ ಮಾತನಾಡಿದರು.

ನಗರದ ಉದ್ಯಮ, ಕೈಗಾರಿಕೆ ಮತ್ತು ಸಾರಿಗೆ ಕ್ಷೇತ್ರ ನಿರೀಕ್ಷೆಗೂ ಮೀರಿ ಬೆಳೆಯುತ್ತಿದೆ. ವಿಮಾನ ನಿಲ್ದಾಣದ ಪ್ರಗತಿ ಇಡೀ ದೇಶಕ್ಕೆ ಮಾದರಿಯಾಗಿದೆ. ಎರಡನೇ ಟರ್ಮಿನಲ್ ಆರಂಭಕ್ಕೂ ಮುನ್ನ ನಿಲ್ದಾಣದಲ್ಲಿ 25 ಸಾವಿರ ಉದ್ಯೋಗಿಗಳು ಇದ್ದರು. ಈಗ 38 ಸಾವಿರಕ್ಕೆ ಏರಿಕೆ ಆಗಿದೆ. ಈ ಸಂಖ್ಯೆ ಇನ್ನೆರಡು ವರ್ಷದಲ್ಲಿ ಒಟ್ಟು 50 ಸಾವಿರ ತಲುಪಲಿದೆ ಎಂದರು. ₹500 ಕೋಟಿ ವೆಚ್ಚದಲ್ಲಿ ವಿಮಾನ ನಿಲ್ದಾಣ ಆವರಣದಲ್ಲಿ ಇಂಡಿಗೋ ಮತ್ತು ಏರ್ ಇಂಡಿಯಾ ಹಬ್ ನಿರ್ಮಾಣ ಕಾಮಗಾರಿ ನಡೆಯುತ್ತಿದೆ ಎಂದು ಮಾಹಿತಿ ನೀಡಿದರು.

ಕೃಷಿ ಮಾರುಕಟ್ಟೆ ಹಾಗೂ ಆಧುನಿಕ ತಂತ್ರಜ್ಞಾನ ಕುರಿತು ಮಾತನಾಡಿದ ಕೃಷಿ ಸಚಿವ ಚಲುವರಾಯಸ್ವಾಮಿ, ರಾಜ್ಯದ ಕೃಷಿಕರನ್ನು ಉದ್ಯಮಿಗಳಾಗಿ ಪರಿವರ್ತಿಸುವ ನಿಟ್ಟಿನಲ್ಲಿ ನೂತನ ಯೋಜನೆ ರೂಪಿಸಲಾಗುವುದು ಎಂದರು.

2024ರ ಅಂತ್ಯದ ವೇಳೆಗೆ ನಿಲ್ದಾಣದ ಪ್ರಯಾಣಿಕರ ಸಂಖ್ಯೆ 4 ಕೋಟಿ ತಲುಪುವ ನಿರೀಕ್ಷೆ ಇದ್ದು, ಬೆಂಗಳೂರಿಗೆ ಮತ್ತೊಂದು ವಿಮಾನ ನಿಲ್ದಾಣ ಅಗತ್ಯವಿದೆ ಎಂದರು.

ಸೆಂಟರ್ ಆಫ್ ಎಕ್ಸ್‌ಲೆನ್ಸ್ ಕೇಂದ್ರ ಸ್ಥಾಪನೆ

ಕೈಗಾರಿಕೆ ಹಾಗೂ ಉದ್ಯಮ ಸ್ಥಾಪನೆಗೆ ರಾಜ್ಯ ಸರ್ಕಾರ ಸಂಪೂರ್ಣ ಸಹಕಾರ ನೀಡಲಿದೆ. ಉದ್ಯಮ ಸ್ಥಾಪನೆಗೆ ಇರುವ ತೊಡಕು ನಿವಾರಿಸಿ ಮತ್ತಷ್ಟು ಉದ್ಯಮ ಸ್ನೇಹಿ ವಾತಾವರಣ ನಿರ್ಮಿಸಲಾಗುವುದು ಎಂದು ಐಟಿ ಮತ್ತು ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಆಟೊಮೊಬೈಲ್, ಬಯೋಟೆಕ್ನಾಲಜಿ ಸೇರಿದಂತೆ ಎಲ್ಲ ವಲಯಗಳ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಪೂರಕವಾಗಿ ಸೆಂಟರ್ ಆಫ್ ಎಕ್ಸ್‌ಲೆನ್ಸ್ ಕೇಂದ್ರ ಸ್ಥಾಪಿಸಲಾಗುವುದು. ಕೌಶಲ ಅಭಿವೃದ್ಧಿ ಮೂಲಕ ಭವಿಷ್ಯದ ಸವಾಲುಗಳಿಗೆ ಕರ್ನಾಟಕ ಸಿದ್ಧವಾಗಲಿದೆ ಎಂದರು.

ಸಂಕ್ಷಿಪ್ತ ಸುದ್ದಿ

ನೀರು ಪೂರೈಕೆ ವ್ಯತ್ಯಯ ಇಂದು

ಬೆಂಗಳೂರು: ಬೆಂಗಳೂರು ನೀರು ಸರಬ ರಾಜು ಮತ್ತು ಒಳಚರಂಡಿ ಮಂಡಳಿಯ 5 ಹಂತದ ಜಲರೇಚಕ ಯಂತ್ರಗಳಿಗೆ ಇದೇ 12ರಂದು ಮಧ್ಯಾಹ್ನ 3 ರಿಂದ 6ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ವಾಗಲಿದೆ. ಆದ್ದರಿಂದ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ನಂದಿ ಗಿರಿಧಾಮ ಸಮಯ ಬದಲು

ಚಿಕ್ಕಬಳ್ಳಾಪುರ: ನಂದಿಗಿರಿಧಾಮಕ್ಕೆ ಪ್ರವೇಶ ಸಮಯವನ್ನು ಬದಲಾವಣೆ ಮಾಡಲಾಗಿದೆ. ನ.30ರವರೆಗೆ ಬೆಳಿಗ್ಗೆ 5.30ರಿಂದ ಸಂಜೆ 6.30ರವರೆಗೆ ಪ್ರವೇಶಕ್ಕೆ ಅವಕಾಶ ಇರಲಿದೆ.

ವಿವಿಧ ಕೃತಿಗಳ ಅನಾವರಣಗೊಳಿಸಿದ ಸಚಿವ ಶಿವರಾಜ ತಂಗಡಗಿ

ಸಾಹಿತ್ಯ ಸಂಪುಟ ಇನ್ನಷ್ಟು ಪ್ರಕಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಸಂಪುಟಗಳನ್ನು ಪ್ರಕಟಿಸಿ ಬಿಡುಗಡೆಗೊಳಿಸಲು ₹ 32 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿತ್ತು. ಈ ಅನುದಾನದಲ್ಲಿ ಉಳಿದಿರುವ ₹12 ಲಕ್ಷಕ್ಕೆ ಮತ್ತಷ್ಟು ಹಣ ಸೇರಿಸಿ ಬೇರೆ ಬೇರೆ ಸಾಹಿತಿಗಳ ಸಮಗ್ರ ಸಾಹಿತ್ಯ ಸಂಪುಟ ಪ್ರಕಟಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ತಿಳಿಸಿದರು.

ನಗರದಲ್ಲಿ ಬುಧವಾರ ವಿವಿಧ ಸಾಹಿತಿಗಳ 23 ಸಮಗ್ರ ಸಾಹಿತ್ಯ ಸಂಪುಟಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಸಾಹಿತಿ ಚಂದ್ರಶೇಖರ ಕಂಬಾರ ಮಾತನಾಡಿ, 'ಗ್ರಂಥಾಲಯಗಳ ಜೊತೆಗೆ ಕಾಲೇಜುಗಳಿಗೂ ಪುಸ್ತಕ ವಿತರಿಸುತ್ತಿರುವುದು ಉತ್ತಮ ಬೆಳವಣಿಗೆ' ಎಂದ ಅವರು, 'ಯುವಪೀಳಿಗೆಗೆ ಓದಿನ ಹುಚ್ಚು ಹಿಡಿಸಬೇಕು' ಎಂದು ಸಲಹೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಕೆ. ಧರಣಿದೇವಿ ಮಾಲಗತ್ತಿ ಮಾತನಾಡಿ, 'ಸಿದ್ಧಾಂತಶಿಖಾಮಣಿ ಭಗವದ್ಗೀತಾ ಸಮನ್ವಯ ಕೃತಿಯು ಎರಡು ಮತಗಳ ನಡುವಿನ ಸಮನ್ವಯವನ್ನು ಸಾರುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ಧರ್ಮಗಳ ನಡುವೆ ಸಮನ್ವಯ ಆಗಬೇಕು' ಎಂದು ಆಶಿಸಿದರು.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ ಅಧ್ಯಕ್ಷತೆ ವಹಿಸಿ ಮಾತನಾಡಿ, 'ಪುಸ್ತಕ ಓದುವಾಗ ಸಿಗುವ ಆನಂದ, ಅನುಭವ ಡಿಜಿಟಲ್ ಮೂಲಕ ಓದಿದಾಗ ಸಿಗುವುದಿಲ್ಲ. ಹೊಸತಲೆಮಾರು ಡಿಜಿಟಲ್‌ಗೆ ಬೇಗ ಒಗ್ಗಿಕೊಂಡಿದೆ. ಹಳೇ ತಲೆಮಾರಿನ ನಾವು ಹೊಂದಿಕೊಳ್ಳಲಾರದೇ ತಬ್ಬಿಬ್ಬಾಗಿದ್ದೇವೆ' ಎಂದರು.

ಚಂದ್ರಶೇಖರ ಕಂಬಾರರ ಐದು ಸಂಪುಟಗಳು, ಗೌರೀಶ ಕಾಯ್ಕಿಣಿ ಅವರ ಮೂರು ಸಂಪುಟಗಳು, ಕೋ.ಚನ್ನಬಸಪ್ಪ ಅವರ ಆರು ಸಂಪುಟಗಳು, ವಿ.ಜಿ. ಭಟ್ಟ ಅವರ ಮೂರು ಸಂಪುಟಗಳು ಮತ್ತು ಅ ನ.ಕೃಷ್ಣರಾಯರ ಐದು ಸಂಪುಟಗಳು ಮತ್ತು ಶ್ರೀಶೈಲ ಪೀಠದ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರ 'ಸಿದ್ಧಾಂತಶಿಖಾಮಣಿ ಭಗವದ್ಗೀತಾ ಸಮನ್ವಯ' ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು.

ವಿವಿಧ ಸಂಪುಟಗಳ ಸಂಪಾದಕರಾದ ಶಾ.ಮಂ. ಕೃಷ್ಣರಾಯ, ಲಕ್ಷ್ಮಣ ಕೊಡಸೆ, ಸಾಹಿತಿ ಜಯಂತ ಕಾಯ್ಕಿಣಿ ಮಾತನಾಡಿದರು. ಅನಕೃ ಅವರ ಮಗ ಎ.ಕೆ. ಗೌತಮ್, ಕೋ.ಚೆ. ಅವರ ಮಗಳು ಕೆ.ಸಿ. ಮಂಜುಳಾ, ವಿ.ಜಿ. ಭಟ್ಟರ ಕುಟುಂಬದವರಾದ ರವೀಂದ್ರ ಭಟ್ಟ ಅವರನ್ನು ಗೌರವಿಸಲಾಯಿತು. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.



ಕನ್ನಡ ಪುಸ್ತಕ ಪ್ರಾಧಿಕಾರ ಆಯೋಜಿಸಿದ ವಿವಿಧ ಕೃತಿಗಳ ಬಿಡುಗಡೆ ಹಾಗೂ ಉಚಿತ ಪುಸ್ತಕ ವಿತರಣಾ ಸಮಾರಂಭದಲ್ಲಿ ಸಾಹಿತಿ ಚಂದ್ರಶೇಖರ ಕಂಬಾರ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಬುಧವಾರ ಪುಸ್ತಕಗಳನ್ನು ಲೋಕಾರ್ಪಣೆ ಮಾಡಿದರು. ಎ.ಕೆ. ಗೌತಮ್, ಎಚ್.ಎಲ್. ಪುಷ್ಪ ಕೆ. ಧರಣಿದೇವಿ ಮಾಲಗತ್ತಿ, ಜಯಂತ್ ಕಾಯ್ಕಿಣಿ, ಲಕ್ಷ್ಮಣ ಕೊಡಸೆ ಇದ್ದರು ಪ್ರಜಾವಾಣಿ ಚಿತ್ರ

ಸರ್ಕಾರಿ ಹಾಸ್ಟೆಲ್, ವಸತಿ ಶಾಲಾ ಹೊರಗುತ್ತಿಗೆ ನೌಕರರ ಅನಿರ್ದಿಷ್ಟಾವಧಿ ಪ್ರತಿಭಟನೆ

‘ಇಲಾಖೆಯಿಂದ ವೇತನ ಪಾವತಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರಗುತ್ತಿಗೆ ಪದ್ಧತಿ ಕೈಬಿಟ್ಟು, ನೇರವಾಗಿ ಇಲಾಖೆಯಿಂದಲೇ ವೇತನ ನೀಡಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ‘ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘ’ದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರದಿಂದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸೇರಿದಂತೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುವ ಗುತ್ತಿಗೆ ನೌಕರರು ಹಲವು ಬೇಡಿಕೆ ಗಳನ್ನು ಈಡೇರಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಅನಿರ್ದಿಷ್ಟಾವಧಿ ಮುಷ್ಕರದಲ್ಲಿ ಪಾಲ್ಗೊಂಡಿದ್ದ ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘದ ಸದಸ್ಯರು —ಪ್ರಜಾವಾಣಿ ಚಿತ್ರ

‘ಹಾಸ್ಟೆಲ್ ಮತ್ತು ವಸತಿ ಶಾಲೆ ಹೊರಗುತ್ತಿಗೆ ನೌಕರರಿಗೆ ಸೇವಾ ಭದ್ರತೆ ನೀಡಬೇಕು. ಸಮಾಜ ಕಲ್ಯಾಣ ಇಲಾಖೆಯಿಂದ ಸಿಬ್ಬಂದಿ ಕಡಿಮೆ ಮಾಡಿ ಹೊರಡಿಸಿರುವ ಆದೇಶವನ್ನು ಈ ಕೂಡಲೇ ಹಿಂಪಡೆಯಬೇಕು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮೆಟ್ರಿಕ್ ಪೂರ್ವ ಮತ್ತು ನಂತರದ ಬಾಲಕರ ವಸತಿ ನಿಲಯಗಳಲ್ಲಿ ರಾತ್ರಿ ಕಾವಲುಗಾರರನ್ನು ನೇಮಿಸಬೇಕು. ವಸತಿನಿಲಯ ಮತ್ತು ವಸತಿ ಶಾಲೆಯ ವಿದ್ಯಾರ್ಥಿಗಳ ಆಹಾರ ಭತ್ಯೆಯನ್ನು ದಿನಕ್ಕೆ ₹100 ರಂತೆ ತಿಂಗಳಿಗೆ ₹3 ಸಾವಿರದವರೆಗೂ ಹೆಚ್ಚಿಸಬೇಕು’ ಎಂದು ಪ್ರತಿಭಟನ ಕಾರರು ಇದೇ ವೇಳೆ ಸರ್ಕಾರವನ್ನು ಆಗ್ರಹಿಸಿದ್ದಾರೆ.

‘ಕ್ರೈಸ್ ಸಂಸ್ಥೆಯಲ್ಲಿ 2017ರ ನಂತರದ ಹೊಸ ಶಾಲೆಗಳಿಗೆ ಕನಿಷ್ಠ 11 ಜನ ಸಿಬ್ಬಂದಿ ನೇಮಿಸಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. 15 ವರ್ಷಗಳಿಂದ ಕೆಲಸ ಮಾಡುತ್ತಿರುವ ಹೊರಗುತ್ತಿಗೆ ಸಿಬ್ಬಂದಿಗೆ ಪಿ.ಎಫ್ ಹಣ ಖಾತೆಗೆ ಜಮೆಯಾಗಿಲ್ಲ. ಈ ಬಗ್ಗೆ ಸೂಕ್ತ ತನಿಖೆ ನಡೆಸಬೇಕು. ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿನಿಲಯ ಮತ್ತು ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದು, ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಬೇಕು’ ಎಂದು ಪ್ರತಿಭನಾಕಾರರು ಒತ್ತಾಯಿಸಿದ್ದಾರೆ.

ಡಿಕೆಶಿ ಕಾಲಿಗೆ ಬೀಳಲು ಮುಂದಾದ ಶಾಸಕ ಮುನಿರತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಕ್ಷೇತ್ರಕ್ಕೆ (ಆರ್.ಆರ್. ನಗರ) ಬಿಜೆಪಿ ಸರ್ಕಾರ ನೀಡಿದ್ದ ಅನುದಾನವನ್ನು ರದ್ದುಗೊಳಿಸದಂತೆ ಬಿಜೆಪಿ ಶಾಸಕ ಮುನಿರತ್ನ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಾಲಿಗೆರಗಲು ಮುಂದಾದ ಪ್ರಸಂಗ ಅರಮನೆ ಮೈದಾನದಲ್ಲಿ ಬುಧವಾರ ನಡೆಯಿತು.

ಮುನಿರತ್ನ ವರ್ತನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಅಂಥ ನಾಟಕ ಮಾಡುವ ಅವಶ್ಯವೇನಿತ್ತು ಕಾಲಿಗೆ ಬೀಳಿಸಿಕೊಳ್ಳಲು ನಾನೇನು ಮಠದ ಸ್ವಾಮೀಜಿಯೇ? ಭೇಟಿಗೆ ಅವಕಾಶ ಕೇಳಿದ್ದರೆ ಕೊಡುತ್ತಿದ್ದೆ’ ಎಂದರು.

ಮುನಿರತ್ನ ಪ್ರತಿಭಟನೆ: ಕ್ಷೇತ್ರಕ್ಕೆ ಮಂಜೂರಾಗಿದ್ದ ಅನುದಾನವನ್ನು ರದ್ದುಗೊಳಿಸಿದ ಕ್ರಮವನ್ನು ವಿರೋಧಿಸಿ ವಿಧಾನಸೌಧದ ಗಾಂಧೀಜಿ ಪ್ರತಿಮೆ ಎದುರು ಬುಧವಾರ ಬೆಳಿಗ್ಗೆ ಮುನಿರತ್ನ ತಮ್ಮ ಬೆಂಬಲಿಗರ ಜೊತೆ ಮೌನ ಪ್ರತಿಭಟನೆ ನಡೆಸಿದರು. ಆದರೆ, ಪ್ರತಿಭಟನೆಗೆ ಅನುಮತಿ ಇಲ್ಲದ ಕಾರಣ 25ಕ್ಕೂ ಹೆಚ್ಚು ಮಂದಿ ಪ್ರತಿಭಟನಾ ನಿರತರನ್ನು ಪೊಲೀಸರು ವಶಕ್ಕೆ ಪಡೆದರು. ಬಳಿಕ ಮುನಿರತ್ನ ಏಕಾಂಗಿಯಾಗಿ ಪ್ರತಿಭಟನೆ ಮುಂದುವರಿಸಿದರು. ಆಗ ಅಲ್ಲಿಗೆ ಬಂದ ಬಿ.ಎಸ್. ಯಡಿಯೂರಪ್ಪ, ‘ನಿಮ್ಮ ಬೆಂಬಲಕ್ಕೆ ನಾನಿದ್ದೇನೆ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಜೊತೆ ಮಾತನಾಡುತ್ತೇನೆ’ ಎಂದು ಭರವಸೆ ನೀಡಿದರು. ನಂತರ ಪ್ರತಿಭಟನೆ ಕೈಬಿಟ್ಟು ಶಿವಕುಮಾರ್ ಭೇಟಿ ಮಾಡಲು ಮುನಿರತ್ನ ತೆರಳಿದರು.

ಅರಮನೆ ಮೈದಾನದಲ್ಲಿ ನಡೆಯುತ್ತಿದ್ದ ಕಂಬಳ ಕರೆಪೂಜೆ (ಗುದ್ದಲಿಪೂಜೆ) ಕಾರ್ಯಕ್ರಮಕ್ಕೆ ಬಂದ ಮುನಿರತ್ನ, ವೇದಿಕೆಯಲ್ಲಿದ್ದ ಶಿವಕುಮಾರ್ ಅವರನ್ನು ಭೇಟಿ ಮಾಡಲು ಮುಂದಾಗುತ್ತಿದ್ದಂತೆ ಪೊಲೀಸರು ತಡೆದರು. ಈ ವೇಳೆ ಮುನಿರತ್ನ, ಹಕ್ಕುಚ್ಯುತಿ ಮಂಡಿಸುವುದಾಗಿ ಪೊಲೀಸರ ಮೇಲೆ ರೇಗಿದರು. ಇದನ್ನು ಗಮನಿಸಿದ ಶಿವಕುಮಾರ್, ‘ನಾಟಕ ಮಾಡಬೇಕು ಎಂದು ಇಲ್ಲಿಗೆ ಬಂದಿದ್ದಾರೆ. ನಾಟಕ ಮಾಡುವ, ಸಿನಿಮಾ ತೆಗೆಯುವ ನಿರ್ಮಾಪಕರಲ್ಲವೇ?’ ಎಂದು ವ್ಯಂಗ್ಯವಾಡಿದರು.

ಕಾರ್ಯಕ್ರಮ ಮುಗಿಸಿ ಶಿವಕುಮಾರ್ ಹೊರಡುತ್ತಿದ್ದಂತೆ ಮನವಿ ಸಲ್ಲಿಸಲು ಮುಂದಾದ ಮುನಿರತ್ನ, ಕಾಲಿಗೆ ನಮಸ್ಕರಿಸಲು ಮುಂದಾದರು. ಆಗ ಶಿವಕುಮಾರ್, ‘ಮನೆ ಬಳಿ ಬನ್ನಿ, ಚರ್ಚೆ ಮಾಡೋಣ’ ಎಂದರು. ಬಳಿಕ ಸದಾಶಿವ ನಗರದಲ್ಲಿರುವ ಶಿವಕುಮಾರ್ ಅವರ ನಿವಾಸಕ್ಕೆ ತೆರಳಿದ ಮುನಿರತ್ನ, ಸುಮಾರು ಒಂದು ಗಂಟೆ ಚರ್ಚೆ ನಡೆಸಿದರು.



ಶಿವಕುಮಾರ್ ಕಾಲಿಗೆ ಬೀಳಲು ಮುಂದಾದ ಮುನಿರತ್ನ

ಬಳಿಕ ಮಾತನಾಡಿದ ಶಿವಕುಮಾರ್, ‘ತಮ್ಮ ಕ್ಷೇತ್ರದ ಅನುದಾನ ವಿಚಾರವಾಗಿ ಚರ್ಚಿಸಿದ ಮುನಿರತ್ನ, ದ್ವೇಷದ ರಾಜಕಾರಣ ಎಂದರು. ಅದಕ್ಕೆ ನಾನು, ಬಿಜೆಪಿ ಸರ್ಕಾರದ ಅವಧಿಯಲ್ಲಿ ಕಾಂಗ್ರೆಸ್ ಶಾಸಕರ ಅನುದಾನಕ್ಕೆ ಏಕೆ ಕತ್ತರಿ ಹಾಕಿದ್ದರು? ಯಡಿಯೂರಪ್ಪ, ಬೊಮ್ಮಾಯಿ ಅವರನ್ನೇ ಕೇಳಿ ನೋಡಿ. ಕನಕಪುರಕ್ಕೆ ಬಂದಿದ್ದ ವೈದ್ಯಕೀಯ ಕಾಲೇಜನ್ನು ಹೇಗೆ ತೆಗೆದರೆಂದೂ ಕೇಳಿ. ಅದನ್ನು ಯಾವ ರಾಜಕಾರಣವೆಂದು ಕರೆಯುತ್ತಾರೆ’ ಎಂದೂ ಪ್ರಶ್ನಿಸಿದೆ. ಅದಕ್ಕೆ ಮುನಿರತ್ನ, ‘ನಾನು ಚಿಕ್ಕವನು, ಅದಕ್ಕೆಲ್ಲ ನನ್ನನ್ನು ಮುಂದೆ ಬಿಡಬೇಡಿ’ ಎಂದರು. ‘ಕಾಲಿಗೆ ಬೀಳುವುದೆಲ್ಲ ಇಟ್ಟುಕೊಳ್ಳಬೇಡಿ. ಸುಮ್ಮನೆ ಹೊರಡಿ ಎಂದು ಹೇಳಿ ಕಳುಹಿಸಿದೆ’ ಎಂದರು.

‘ಯಾವ ಕಾಮಗಾರಿ, ಯಾವುದು ಆದ್ಯತೆಯ ಮೇಲೆ ನಡೆಯಬೇಕು, ಯಾವ ಕೆಲಸ ಎಂದು ಪಟ್ಟಿ ಕೊಡುವಂತೆಯೂ ಹೇಳಿದ್ದೇನೆ’ ಎಂದರು.

₹ 850 ಕೋಟಿ ಅನುದಾನ: ಯುವಿಸಿಇ ಪ್ರಸ್ತಾವ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯವನ್ನು (ಯುವಿಸಿಇ) ಭಾರತೀಯ ತಂತ್ರಜ್ಞಾನ ಸಂಸ್ಥೆಯ (ಐಐಟಿ) ಮಾದರಿಯಲ್ಲಿ ಅಭಿವೃದ್ಧಿಪಡಿಸಲು ₹ 850 ಕೋಟಿ ಅನುದಾನ ಒದಗಿಸುವಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಯುವಿಸಿಇ ಆಡಳಿತ ಮಂಡಳಿ ಅಧ್ಯಕ್ಷ ಬಿ. ಮುತ್ತುರಾಮನ್ ತಿಳಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪಂಚವಾರ್ಷಿಕ ಯೋಜನೆಗಾಗಿ ಕೇಳಿರುವ ₹ 850 ಕೋಟಿಯಲ್ಲಿ ₹225 ಕೋಟಿ ವೇತನಕ್ಕೆ ವ್ಯಯವಾಗಲಿದೆ. ₹ 125 ಕೋಟಿ ವಿವಿ ನಿರ್ವಹಣೆಗೆ, ₹ 500 ಕೋಟಿ ಮೂಲಸೌಕರ್ಯ ಹಾಗೂ ಉಪಕರಣಗಳ ಖರೀದಿಗೆ ಬಳಕೆಯಾಗಲಿದೆ. ಐಐಟಿ ಮಾದರಿಯಲ್ಲಿ ಅಭಿವೃದ್ಧಿಗೊಳಿಸಲು ರಾಜ್ಯ ಸರ್ಕಾರ ಸಹಕಾರ ನೀಡುತ್ತಿದೆ. ಕಳೆದ ಬಜೆಟ್‌ನಲ್ಲಿ ₹ 25 ಕೋಟಿ ಅನುದಾನ ನೀಡಿದೆ. ಇದನ್ನು ಶೀಘ್ರದಲ್ಲೇ ವಿವಿಧ ಕಾಮಗಾರಿಗಳಿಗೆ ಬಳಕೆ ಮಾಡಲಾಗುವುದು’ ಎಂದು ಹೇಳಿದರು.

‘ಐಐಟಿ ಮಾದರಿಯಲ್ಲಿ ಯುವಿಸಿಇ ಅಭಿವೃದ್ಧಿಗಾಗಿ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ 50 ರಿಂದ 100 ಎಕರೆ ಜಾಗವನ್ನು ಕೇಳಲಾಗಿದೆ. ಜಾಗ ಮಂಜೂರಾಗಿ ಕಟ್ಟಡಗಳನ್ನು ನಿರ್ಮಿಸಿದ ಬಳಿಕ ಅಲ್ಲಿಗೆ ಯುವಿಸಿಇ ಸ್ಥಳಾಂತರಿಸಲಾಗುತ್ತದೆ. ಅಲ್ಲಿಯವರೆಗೂ ಕೆ.ಆರ್.ವೃತ್ತದಲ್ಲಿಯೇ ಮುಂದುವರಿಯಲಿದೆ’ ಎಂದು ತಿಳಿಸಿದರು.

ಕೆಇಎ ಮೂಲಕವೇ ಸೀಟು ಹಂಚಿಕೆ: ಯುವಿಸಿಇ ಪ್ರಾಂಶುಪಾಲ ಪ್ರೊ. ಎಚ್.ಎನ್.ರಮೇಶ್, ‘ಮುಂದಿನ ಐದು ವರ್ಷಗಳು ಯುವಿಸಿಇಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಮೂಲಕವೇ ಸೀಟು ಹಂಚಿಕೆಯಾಗಲಿದೆ. ಐಐಟಿ ಮಾದರಿಯಲ್ಲಿ ಅಭಿವೃದ್ಧಿಯಾದ ಬಳಿಕ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಜೆಇಇ ಪ್ರವೇಶ ಪರೀಕ್ಷೆಗೆ ಅವಕಾಶ ಕಲ್ಪಿಸಬೇಕಾಗುತ್ತದೆ. ಮೂಲಸೌಕರ್ಯ, ಸಿಬ್ಬಂದಿ, ಉಪಕರಣಗಳು ಪೂರ್ಣ ಪ್ರಮಾಣದಲ್ಲಿ ಲಭ್ಯವಾದ ಬಳಿಕ ಜೆಇಇ ಪ್ರವೇಶ ಕಲ್ಪಿಸಲಾಗುತ್ತದೆ’ ಎಂದು ಹೇಳಿದರು.

‘139 ಬೋಧಕ ಮತ್ತು 203 ಬೋಧಕೇತರ ಹುದ್ದೆ ಮಂಜೂರಾಗಿವೆ. ಆದರೆ, ಕ್ರಮವಾಗಿ 73 ಮತ್ತು 35 ಸಿಬ್ಬಂದಿಯಷ್ಟೇ ಕಾರ್ಯ ನಿರ್ವಹಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಸರ್ಕಾರದ ಅನುಮತಿ ಪಡೆದು ಹುದ್ದೆಗಳನ್ನು ಭರ್ತಿ ಮಾಡಲಾಗುವುದು’ ಎಂದು ತಿಳಿಸಿದರು.

ಸರ್ಕಾರಿ ಶಾಲೆ ಬಲವರ್ಧನೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳನ್ನು ಬಲಪಡಿಸಲು ತಜ್ಞರ ಸಮಿತಿಯನ್ನು ರಚಿಸಬೇಕು ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್‌ಒ) ಸರ್ಕಾರವನ್ನು ಆಗ್ರಹಿಸಿದೆ.

‘ದೇಶದಲ್ಲಿ ಜನಿಸುವ ಪ್ರತಿಯೊಬ್ಬ ಮಗುವಿಗೂ ಗುಣಮಟ್ಟದ ಶಿಕ್ಷಣ ಲಭಿಸಬೇಕು. ಹೈಕೋರ್ಟ್ ಎತ್ತಿರುವ ಪ್ರಶ್ನೆಗಳು ಒಂದು ನೆಲೆ ಕಾಣಬೇಕಾದರೆ ಈ ಕೂಡಲೇ ಪ್ರಸಕ್ತ ರಾಜ್ಯ ಸರ್ಕಾರ ತಜ್ಞರ ಸಮಿತಿಯನ್ನು ರಚಿಸಿ ಸರ್ಕಾರಿ ಶಾಲೆಗಳು ಹಾಗೂ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳನ್ನು ಬಲಪಡಿಸಲು ತುರ್ತು ಕ್ರಮ ಕೈಗೊಳ್ಳಬೇಕು ಎಂದು ಸಂಘಟನೆ ಆಗ್ರಹಿಸಿದೆ.

ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್, ಸರ್ಕಾರಿ ಶಾಲಾ ಶಿಕ್ಷಕರು, ಪೋಷಕರು ಹಾಗೂ ಶಿಕ್ಷಣ ತಜ್ಞರ ಅಭಿಪ್ರಾಯ ಪಡೆದು ಸರ್ಕಾರಿ ಶಾಲೆಗಳ ಗುಣಮಟ್ಟ ಹೆಚ್ಚಿಸಲು ಸರ್ಕಾರ ಮುಂದಾಗಬೇಕು’ ಎಂದು ಸರ್ಕಾರವನ್ನು ಒತ್ತಾಯಿಸಿದರು.

5ನೇ ಹಣಕಾಸು ಆಯೋಗ: ನಾರಾಯಣಸ್ವಾಮಿ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರಡಿ 5ನೇ ಹಣಕಾಸು ಆಯೋಗವನ್ನು ಸರ್ಕಾರ ರಚಿಸಿದ್ದು, ಇದರ ಅಧ್ಯಕ್ಷರನ್ನಾಗಿ ಮಾಜಿ ಸಂಸದ ಸಿ. ನಾರಾಯಣಸ್ವಾಮಿ ಅವರನ್ನು ನೇಮಿಸಲಾಗಿದೆ.

ಸದಸ್ಯರನ್ನಾಗಿ ಮೊಹಮದ್ ಸನಾವುಲ್ಲಾ ಮತ್ತು ಆರ್.ಎಸ್. ಪೋಂಡೆ ಅವರನ್ನು ನೇಮಿಸಲಾಗಿದೆ. ಈ ಆಯೋಗವು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಮತ್ತು ಇತರ ಸ್ಥಳೀಯ ಸಂಸ್ಥೆಗಳ ಹಣಕಾಸಿನ ಸ್ಥಿತಿಗತಿಯನ್ನು ಪರಾಮರ್ಶೆ ನಡೆಸಿ ಸರ್ಕಾರಕ್ಕೆ ಶಿಫಾರಸುಗಳನ್ನು ಮಾಡಲಿದೆ.

- **1931-33:** ತಿಪ್ಪಗೊಂಡನಹಳ್ಳಿ ಜಲಾಶಯ ನಿರ್ಮಾಣ
- **1933:** ಏಪ್ರಿಲ್‌ನಿಂದ 27 ಎಂಎಲ್‌ಡಿ (ಪ್ರತಿನಿತ್ಯ ದಶಲಕ್ಷ) ಲೀಟರ್ ನೀರು ಪೂರೈಕೆ
- **1954-58:** ಶೇಖರಣಾ ಸಾಮರ್ಥ್ಯ ವೃದ್ಧಿಸಿ 54 ಎಂಎಲ್‌ಡಿ ನೀರು ಸರಬರಾಜು
- **1974:** 135 ಎಂಎಲ್‌ಡಿ ನೀರು ನಗರಕ್ಕೆ ಸರಬರಾಜು
- **1998:** ಪೀಣ್ಯ, ದಾಸರಹಳ್ಳಿಯಲ್ಲಿ ಕೈಗಾರಿಕೆ ಪ್ರದೇಶ ಹಾಗೂ ನಗರ ಪ್ರದೇಶಗಳಿಂದ ತ್ಯಾಜ್ಯ ಹರಿದುಬರಲಾರಂಭಿಸಿತು.
- **1998:** ಜಲಾಗಾರದಲ್ಲಿ ನೀರು ಮಲಿನವಾಗಿದ್ದರಿಂದ ಮೊದಲ ಬಾರಿಗೆ ಕೆಂಪು ಹುಳುಗಳು ಕಂಡುಬಂದವು.
- **2001:** ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಕಾರ್ಖಾನೆಗಳಿಂದ ಅರ್ಕಾವತಿ ನದಿ ನೀರು ಮಲಿನವಾಗುತ್ತಿರುವ ವರದಿ
- **2003:** ಇಸ್ರೊ ಹಾಗೂ ತಜ್ಞರ ಸಲಹೆ ಮೇರೆಗೆ ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶ ರಕ್ಷಣೆಗೆ ಸರ್ಕಾರದ ಆದೇಶ. ನಂತರದ ದಿನಗಳಲ್ಲೂ ಅನಧಿಕೃತ ಬಡಾವಣೆ, ಕೈಗಾರಿಕೆಗಳು ನಿರ್ಮಾಣವಾಗಿ ಅರ್ಕಾವತಿ ನದಿ ಸೇತುವೆ ಇರುವ ಮಾಕಳಿ ಬಳಿ ಬೃಹತ್ ಚಟುವಟಿಕೆಗಳು ನಡೆಯುತ್ತಿದ್ದವು.
- **2007-08:** ಒಳಹರಿವಿನಲ್ಲಿ ನೀರಿಗಿಂತ ಮಾಲಿನ್ಯ ಪ್ರಮಾಣ ಹೆಚ್ಚಾಯಿತು. ₹22 ಕೋಟಿ ವೆಚ್ಚದಲ್ಲಿ ನದಿಯ ಕಾಲುವೆ ಪುನಶ್ಚೇತನ ಮಾಡಲಾಯಿತು.
- **2012:** ಜಲಾಶಯದಲ್ಲಿರುವ ನೀರಿನ ಗುಣಮಟ್ಟ ಕಳಪೆ ಎಂಬುದು ಸಾಬೀತಾಗಿ, ನಗರಕ್ಕೆ ನೀರು ಸರಬರಾಜನ್ನು ಆ ವರ್ಷದ ಡಿಸೆಂಬರ್‌ನಿಂದ ಸ್ಥಗಿತಗೊಳಿಸಲಾಯಿತು.

ತಿಪ್ಪಗೊಂಡನಹಳ್ಳಿ ಜಲಾಶಯ ನದಿಪಾತ್ರದ ಬಫರ್ ವಲಯಕ್ಕೆ ಕತ್ತರಿ • 2019ರ ಅಧಿಸೂಚನೆ ಅನುಷ್ಠಾನಕ್ಕೆ ವಿರೋಧ

ಬಫರ್ ವಲಯ ಇಳಿಕೆ: ಸದಾಶಯಕ್ಕೆ ಕುತ್ತು

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಕುಡಿಯುವ ನೀರು ಪೂರೈಕೆಗಾಗಿ ನಿರ್ಮಿಸಲಾಗಿರುವ ತಿಪ್ಪಗೊಂಡನಹಳ್ಳಿ ಜಲಾಶಯದ ನದಿ ಪಾತ್ರದ ಬಫರ್ ವಲಯವನ್ನು ಕಡಿಮೆಗೊಳಿಸುವುದರ ಹಿಂದೆ, ಅಕ್ರಮಗಳಿಗೆ 'ಸಕ್ರಮದ ಭಾಗ್ಯ' ನೀಡುವ ಸಂಶಯ ಇದೆ ಎಂಬ ಅಪಸ್ವರ ವ್ಯಕ್ತವಾಗಿದೆ.

ಜಲಾನಯನ ಹಾಗೂ ಜಲಾಶಯದ ರಕ್ಷಣೆಗಾಗಿಯೇ ನಿಗದಿಪಡಿಸಲಾಗಿದ್ದ ಬಫರ್ ವಲಯವನ್ನು ಕುಗ್ಗಿಸಿದರೆ ಮಾಲಿನ್ಯಕಾರಕ ಚಟುವಟಿಕೆ ನಡೆಸುತ್ತಿರುವವರಿಗೆ ಪರವಾನಗಿ ಕೊಟ್ಟಂತಾಗುತ್ತದೆ ಎಂಬ ವಾದವೂ ಮುನ್ನೆಲೆಗೆ ಬಂದಿದೆ.

ತಿಪ್ಪಗೊಂಡನಹಳ್ಳಿ ಜಲಾಶಯ ಮತ್ತು ಜಲಾನಯನ ಪ್ರದೇಶದ ಅರ್ಕಾವತಿ ಮತ್ತು ಕುಮುದ್ವತಿ ನದಿಗಳ ಪ್ರದೇಶದಲ್ಲಿ ಬಫರ್ ವಲಯವನ್ನು ಕಡಿಮೆ ಮಾಡಿರುವ 2019ರ ಆದೇಶವನ್ನು ಅನುಷ್ಠಾನ ಮಾಡಲು ಸರ್ಕಾರ ಮುಂದಾಗಿದೆ. ವಲಯ– 3 ಮತ್ತು ವಲಯ– 4ರ ಬಫರ್ ವಲಯವನ್ನು ಇಳಿಸಲು ಮುಂದಾಗಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ಬಫರ್ ವಲಯವನ್ನು 500 ಮೀಟರ್‌ಗೆ ಇಳಿಸುವುದರಿಂದ ನದಿ ದಡದಲ್ಲೇ ಈಗಾಗಲೇ ಅನಧಿಕೃತವಾಗಿ ನಿರ್ಮಾಣವಾಗಿರುವ ಕಾರ್ಖಾನೆ, ಬಡಾವಣೆ, ಶಾಲೆ– ಕಾಲೇಜುಗಳಿಗೆ ಅಧಿಕೃತವಾಗಿ ಮಾಲಿನ್ಯ ಹರಿಸುವಂತೆ ಪರವಾನಗಿ ನೀಡಿದಂತಾಗುತ್ತದೆ ಎಂಬ ಆಕ್ರೋಶ ಪರಿಸರ ಕಾರ್ಯಕರ್ತರಿಂದ ವ್ಯಕ್ತವಾಗಿದೆ.

ತುಮಕೂರು ರಸ್ತೆ ದಾಬಸ್‌ಪೇಟೆಯಿಂದ ಶಿವಗಂಗೆ, ಬೆಂಗಳೂರು ವಾಯವ್ಯದ ಕಡೆಗೆ ಹಾಗೂ ಉತ್ತರದಲ್ಲಿ ನಂದಿಬೆಟ್ಟದವರೆಗೆ ಸುಮಾರು 64 ಕಿ.ಮೀ ನದಿಪಾತ್ರವಿದೆ. ನಂದಿಬೆಟ್ಟದಿಂದ ಅರ್ಕಾವತಿ ಹರಿದರೆ, ಶಿವಗಂಗೆ ಬೆಟ್ಟದಿಂದ ಕುಮುದ್ವತಿ ನದಿ ಹರಿದು ತಿಪ್ಪಗೊಂಡನಹಳ್ಳಿ ಜಲಾಶಯ ತಲುಪುತ್ತದೆ. ಕುಮುದ್ವತಿ ನದಿ ಪಾತ್ರದಲ್ಲಿ ಮಾಲಿನ್ಯದ ಸಮಸ್ಯೆ ಅತಿಯಾಗಿಲ್ಲ. ಆದರೆ, ನಂದಿ ಬೆಟ್ಟದಿಂದ ಹರಿಯುವ ಅರ್ಕಾವತಿಯಲ್ಲಿ ಮಾಲಿನ್ಯವೇ ಅಧಿಕ.

ತಿಪ್ಪಗೊಂಡನಹಳ್ಳಿ ಜಲಾಶಯ ಹಾಗೂ ಜಲಾನಯನ ಪ್ರದೇಶವನ್ನು ಸಂರಕ್ಷಿಸಲು 2003ರ ನವೆಂಬರ್ 18ರಂದು ಸರ್ಕಾರ ಆದೇಶ ಹೊರಡಿಸಿತ್ತು. ನಾಲ್ಕು ವಲಯಗಳನ್ನಾಗಿ ವಿಂಗಡಿಸಿ ಬಫರ್ ವಲಯವನ್ನು ನಿಗದಿಪಡಿಸಲಾಗಿತ್ತು. ಈ ಆದೇಶವನ್ನು 2014ರ ಜುಲೈ 24ರಂದು ವಾಪಸ್ ಪಡೆದಿತ್ತು. 2019 ಜುಲೈ 20ರಂದು ಬಫರ್ ವಲಯ ಮರುನಿಗದಿ ಮಾಡಿ ಆದೇಶ ಹೊರಡಿಸಲಾಗಿತ್ತು.



ತಿಪ್ಪಗೊಂಡನಹಳ್ಳಿಯ ಚಾಮರಾಜಸಾಗರ ಜಲಾಶಯ

ಬದಲಾಗಿರುವುದು ಏನು?

2003ರ ಆದೇಶದ ಅನುಸಾರ ವಲಯ–3ರಲ್ಲಿ ಅರ್ಕಾವತಿ ನದಿ ದಡ (ಹೆಸರಘಟ್ಟ ಕೆರೆಯಿಂದ ತಿಪ್ಪಗೊಂಡನಹಳ್ಳಿ ಜಲಾಶಯ) ಹಾಗೂ ಕುಮುದ್ವತಿ ನದಿ ದಡದಿಂದ 1 ಕಿ.ಮೀವರೆಗಿನ ಪ್ರದೇಶದಲ್ಲಿ ಯಾವುದೇ ವ್ಯಕ್ತಿ ಕೃಷಿ ಹೊರತಾದ ಯಾವುದೇ ಚಟುವಟಿಕೆಗಳನ್ನು ಸಮ್ಮತಿ ಇಲ್ಲದೆ ನಡೆಸುವಂತಿಲ್ಲ. 2019ರಲ್ಲಿ ಹೊರಡಿಸಲಾದ ಪರಿಷ್ಕೃತ ಆದೇಶದಲ್ಲಿ ಈ ಅಂತರವನ್ನು 500 ಮೀಟರ್‌ಗೆ ಇಳಿಸಲಾಗಿದೆ.

2003ರಲ್ಲಿ ವಲಯ–4ರಲ್ಲಿ ಇದೇ ಪ್ರದೇಶದಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಸಿರು ಕೈಗಾರಿಕೆ ಎಂದು ವರ್ಗೀಕರಿಸಿರುವ ಕೈಗಾರಿಕೆಗಳಿಗೆ ಬಫರ್ ವಲಯವನ್ನು 1 ಕಿ.ಮೀನಿಂದ 2 ಕಿ.ಮೀವರೆಗೆ ಎಂದು ನಿಗದಿಪಡಿಸಲಾಗಿತ್ತು. ಒಂದು ಅಂತಸ್ತಿನ ಹೊಸ ಕಟ್ಟಡಗಳಿಗೆ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಕೊಳ್ಳುವ ಷರತ್ತಿನ ಮೇರೆಗೆ ಅನುಮತಿ ನೀಡಲು ಸೂಚಿಸಲಾಗಿತ್ತು. 2019ರ ಪರಿಷ್ಕೃತ ಆದೇಶದಲ್ಲಿ 1ರಿಂದ 2 ಕಿ.ಮೀವರೆಗೆ ಎಂದಿದ್ದ ಬಫರ್ ವಲಯವನ್ನು 500 ಮೀಟರ್‌ನಿಂದ 1 ಕಿ.ಮೀವರೆಗೆ ಎಂದು ಬದಲಾವಣೆ ಮಾಡಲಾಯಿತು. ಹೀಗೆ ಮಾಡುವ ಮೂಲಕ ಮೊದಲು ನಿಗದಿಯಾಗಿದ್ದ ಬಫರ್ ವಲಯವನ್ನು ಅರ್ಧಕ್ಕೆ ಕುಗ್ಗಿಸಲಾಯಿತು. ಕೈಗಾರಿಕೆಗಳು ಮಳೆ ನೀರು ಸಂಗ್ರಹ, ತ್ಯಾಜ್ಯ ನೀರು ಸಂಸ್ಕರಣೆ ವ್ಯವಸ್ಥೆ ಒಳಗೊಂಡಿರಬೇಕು, ವಸತಿ ಕಟ್ಟಡಗಳು ತ್ಯಾಜ್ಯ ಹೊರಹಾಕದಂತಿರಬೇಕು, ಮಳೆ ನೀರು ಸಂಗ್ರಹಿಸಬೇಕು, ನೀರನ್ನು ಮರುಬಳಕೆ ಮಾಡಬೇಕು ಎಂಬ ಷರತ್ತು ವಿಧಿಸಲಾಗಿದೆ. ಇದಲ್ಲದೆ, ಶೈಕ್ಷಣಿಕ, ವೈದ್ಯಕೀಯ ಸಂಸ್ಥೆಗಳು, ಆಸ್ಪತ್ರೆಗಳು, ಸರ್ಕಾರಿ ಹಾಸ್ಟೆಲ್‌ಗಳು, ಈ ಎಲ್ಲ ಸೌಲಭ್ಯ ಹೊಂದಿರಬೇಕು ಎಂದು 2019ರ ಆದೇಶದಲ್ಲಿ ಹೊಸದಾಗಿ ಸೇರಿಸಲಾಗಿದೆ.

ಅರ್ಕಾವತಿ ನದಿ ಪಾತ್ರದಲ್ಲಿ ಅದರಲ್ಲೂ ಹೆಸರಘಟ್ಟದಿಂದ ತಿಪ್ಪಗೊಂಡನಹಳ್ಳಿ ಜಲಾಶಯದವರೆಗಿನ ಪ್ರದೇಶದಲ್ಲಿ ಈಗಾಗಲೇ ಸಾಕಷ್ಟು ಅಕ್ರಮ ಕಟ್ಟಡಗಳು, ಕಾರ್ಖಾನೆಗಳು, ಶಾಲಾ–ಕಾಲೇಜುಗಳು ನಿರ್ಮಾಣವಾಗಿವೆ. ಇವುಗಳು ಈಗಾಗಲೇ ಮಾಲಿನ್ಯಕ್ಕೆ ಕಾರಣವಾಗಿದ್ದು, ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಒಳಚರಂಡಿ ನೀರಿನ ಜೊತೆಗೆ ಕಾರ್ಖಾನೆಗಳ ರಾಸಾಯನಿಕವೂ ಹರಿಯುತ್ತಿದೆ.

ಬಫರ್ ವಲಯದಲ್ಲಿರುವ ಈ ಎಲ್ಲ ಅಕ್ರಮ ನಿರ್ಮಾಣದಾರರಿಗೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಾಲ್ಕಾರು ವರ್ಷಗಳ ಹಿಂದೆ ನೋಟಿಸ್ ನೀಡಿತ್ತಾದರೂ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ತ್ಯಾಜ್ಯ ಸಂಸ್ಕರಣೆ, ಮಳೆ ನೀರು ಸಂಗ್ರಹ, ನೀರಿನ ಮರುಬಳಕೆ ವ್ಯವಸ್ಥೆ ಎನ್ನುವುದು ಆದೇಶದಲ್ಲಿ ಮಾತ್ರ ಉಳಿದಿದೆ ಎಂಬುದು ಪರಿಸರ ಕಾರ್ಯಕರ್ತೆ ನಿರ್ಮಲ ಅವರ ಅಭಿಪ್ರಾಯ.

ಇಷ್ಟೆಲ್ಲ ಮಾಲಿನ್ಯ ಹಾಗೂ ಒತ್ತುವರಿಯ ಸಮಸ್ಯೆ ಹೊಂದಿರುವ ನದಿ ಪಾತ್ರದ ಬಫರ್ ವಲಯವನ್ನೂ ಕಡಿಮೆ ಮಾಡುವುದು ರಾಜಕೀಯ ವ್ಯಕ್ತಿಗಳ ಕಟ್ಟಡಗಳನ್ನು ಅಧಿಕೃತಗೊಳಿಸುವ ಹುನ್ನಾರವೇ ಹೊರತು, ಮಾಲಿನ್ಯ ತಡೆಯುವ ಉದ್ದೇಶವಿಲ್ಲ ಎಂದು ಪರಿಸರ ಕಾರ್ಯಕರ್ತರು ಆರೋಪಿಸುತ್ತಾರೆ.

ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶ

- **1,453** ಚದರ ಕಿ.ಮೀ — ಒಟ್ಟಾರೆ ಜಲಾನಯನ ಪ್ರದೇಶ
- **461.80** ಚದರ ಕಿ.ಮೀ — ದೊಡ್ಡಬಳ್ಳಾಪುರ ತಾಲ್ಲೂಕು
- **396.91** ಚದರ ಕಿ.ಮೀ — ನೆಲಮಂಗಲ ತಾಲ್ಲೂಕು
- **355.41** ಚದರ ಕಿ.ಮೀ — ಬೆಂಗಳೂರು ಉತ್ತರ
- **132.32** ಚದರ ಕಿ.ಮೀ — ಮಾಗಡಿ ತಾಲ್ಲೂಕು
- **58.35** ಚದರ ಕಿ.ಮೀ — ದೇವನಹಳ್ಳಿ ತಾಲ್ಲೂಕು
- **40.26** ಚದರ ಕಿ.ಮೀ — ಬೆಂಗಳೂರು ದಕ್ಷಿಣ ತಾಲ್ಲೂಕು
- **8** ಚದರ ಕಿ.ಮೀ — ಚಿಕ್ಕಬಳ್ಳಾಪುರ ತಾಲ್ಲೂಕು

ಸುದ್ದಿ 2 ನಿಮಿಷ

'ಬಫರ್ ವಲಯ ಇಳಿಕೆಯಿಂದ ಜಲಾಶಯಕ್ಕೆ ಧಕ್ಕೆ'

ಬೆಂಗಳೂರು: ತಿಪ್ಪಗೊಂಡನಹಳ್ಳಿ ಜಲಾಶಯದ ಬಫರ್ ವಲಯ–3 ಮತ್ತು 4 ಅನ್ನು ಇಳಿಸುವುದರಿಂದ ಟಿ.ಜಿ.ಹಳ್ಳಿ ಜಲಾಶಯದ ಅಸ್ತಿತ್ವಕ್ಕೆ ಧಕ್ಕೆ ಬರಲಿದೆ ಎಂದು ಬಿಜೆಪಿ ಶಾಸಕ ಎಸ್.ಸುರೇಶ್ ಕುಮಾರ್ ಆತಂಕ ವ್ಯಕ್ತಪಡಿಸಿದ್ದಾರೆ.

ಟಿ.ಜಿ.ಹಳ್ಳಿ ಜಲಾಶಯದಿಂದ ಬೆಂಗಳೂರಿನ ಪಶ್ಚಿಮ ಭಾಗಗಳಿಗೆ ಸುಮಾರು ಒಂದು ಶತಮಾನದಿಂದ ಕುಡಿಯುವ ನೀರು ಒದಗಿಸುತ್ತಿದೆ. ಎತ್ತಿನಹೊಳೆ ಯೋಜನೆಯಿಂದ ಜಲಾಶಯಕ್ಕೆ ಸುಮಾರು 1.5 ಟಿಎಂಸಿ ಅಡಿ ನೀರು ತರಲಾಗುತ್ತದೆ. ಈ ಮಧ್ಯೆ, ಬಫರ್ ವಲಯವನ್ನು 500 ಮೀಟರ್‌ಗೆ ಇಳಿಸುವುದಾಗಿ ಡಿ.ಕೆ. ಶಿವಕುಮಾರ್ ಹೇಳಿಕೆ ಖಂಡನೀಯ ಎಂದಿದ್ದಾರೆ.

'ಈ ಹಿಂದೆ ಬಫರ್ ವಲಯದಲ್ಲಿ ಡಿಎಲ್‌ಎಫ್ ಸಂಸ್ಥೆ ಕಟ್ಟಲು ಉದ್ದೇಶಿಸಿದ್ದ ಡಿಎಲ್‌ಎಫ್ ವಸತಿ ಸಮುಚ್ಚಯದ ವಿರುದ್ಧ 1992 ರಲ್ಲಿ ನಾವು ಹೋರಾಟ ಮಾಡಿದ್ದೆವು. ನಂತರ ಕುಮುದ್ವತಿ ದಂಡೆಯ ಮೇಲೆ ನಿರ್ಮಾಣವಾಗುತ್ತಿದ್ದ ಖಾಸಗಿ ವೈದ್ಯಕೀಯ ಕಾಲೇಜು ಕಟ್ಟಡದ ವಿರುದ್ಧವೂ 1998–99 ರಲ್ಲಿ ಹೋರಾಟ ಮಾಡಿ ಅದನ್ನು ನಿಲ್ಲಿಸಲಾಗಿತ್ತು' ಎಂದು ಹೇಳಿದ್ದಾರೆ.

ಜಲಾಶಯದ ಸುತ್ತಮುತ್ತಲಿನ ಜಾಗವನ್ನು ಉಳಿಸಿಕೊಳ್ಳಲು ಇನ್ನೂ ಹೆಚ್ಚಿನ ಕ್ರಮದ ಅಗತ್ಯವಿದೆ. ಪರಿಸರ ವಿರೋಧಿ ಕ್ರಮದ ಯೋಚನೆಯನ್ನೂ ಮಾಡಬಾರದು. ಅವರು ತಮ್ಮ ಹೇಳಿಕೆಯನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದ್ದಾರೆ.

ಗಣೇಶೋತ್ಸವ: ಪ್ರಸಾದ ಲಡ್ಡು ₹ 5.25 ಲಕ್ಷಕ್ಕೆ ಹರಾಜು



ಪೀಣ್ಯ ದಾಸರಹಳ್ಳಿ: ಹೆಗ್ಗನಹಳ್ಳಿ ಭಾಗದಲ್ಲಿ ದಾಸರಹಳ್ಳಿ ಸಾಮೂಹಿಕ ಗಣೇಶೋತ್ಸವ ಸಮಿತಿಯಿಂದ ನಡೆದ ಗಣೇಶೋತ್ಸವದಲ್ಲಿ 18 ಅಡಿ ಎತ್ತರದ ಗಣೇಶನಿಗೆ ಪ್ರಸಾದವಾಗಿ ಮಾಡಲಾಗಿದ್ದ 15 ಕೆ.ಜಿ. ಲಡ್ಡುವನ್ನು ಬಿಜೆಪಿಯ ದಾಸರಹಳ್ಳಿ ಕ್ಷೇತ್ರ ಪ್ರಧಾನ ಕಾರ್ಯದರ್ಶಿ ಎಚ್. ಆರ್. ಪ್ರಕಾಶ್ ಅವರು ಹರಾಜಿನಲ್ಲಿ ₹5.25 ಲಕ್ಷಕ್ಕೆ ಖರೀದಿಸಿದರು.

ಪ್ರಸಾದದ ಲಡ್ಡು ಕಳೆದ ವರ್ಷ ₹ 4.25 ಲಕ್ಷಕ್ಕೆ ಹರಾಜು ಆಗಿತ್ತು. ಈ ಹಣವನ್ನು ಮುಂದಿನ ವರ್ಷದ ಸಾಮೂಹಿಕ ಗಣೇಶೋತ್ಸವಕ್ಕೆ ವಿನಿಯೋಗಿಸಲಾಗುವುದು ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ನೆಲಗದರನಹಳ್ಳಿ ನಿಸರ್ಗ ಶಾಲೆಯಿಂದ ಪೀಣ್ಯ 2ನೇ ಹಂತ, ಹೆಗ್ಗನಹಳ್ಳಿ ಕ್ರಾಸ್, ಸುಂಕದಕಟ್ಟೆವರೆಗೆ ಗಣೇಶನ ಮೆರವಣಿಗೆ ಸಾಗಿತು. ಮೆರವಣಿಗೆಯಲ್ಲಿ 25ಕ್ಕೂ ಅಧಿಕ ಗಣೇಶ ಮೂರ್ತಿಗಳು ಇದ್ದವು. ವೀರಗಾಸೆ, ಡೊಳ್ಳು ಕುಣಿತ, ಚಂಡೆ, ಗೊರವರ ಕುಣಿತ, ತಮಟೆ ವಾದ್ಯ, ಗೊಂಬೆ ಕುಣಿತ ಮುಂತಾದ ಕಲಾತಂಡಗಳು ಮೆರವಣಿಗೆಗೆ ಮೆರುಗು ನೀಡಿದವು. ಡಿಜೆ ಸದ್ದಿಗೆ ಯುವಕರು, ಮಹಿಳೆಯರು ಹೆಜ್ಜೆ ಹಾಕಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ. ಮರಿಸ್ವಾಮಿ, ದಾಸರಹಳ್ಳಿ ಮಂಡಲ ಅಧ್ಯಕ್ಷ ಸೋಮಶೇಖರ್, ಬಿಜೆಪಿ ಮುಖಂಡರಾದ ಎಚ್.ಎನ್. ಗಂಗಾಧರ್, ಸಪ್ತಗಿರಿ ಆನಂದ್, ವಿನೋದ್ ಗೌಡ, ಭರತ್ ಸೌಂದರ್ಯ, ನಿಸರ್ಗ ಕೆಂಪರಾಜು ಇದ್ದರು.

ಚಿತ್ರಾವಳಿ



ಪತ್ರಿಕೆ ವಿತರಕರಿಗೆ ಹಾಗೂ ಪತ್ರಿಕೆ ಹಾಕುವ ಹುಡುಗರಿಗೆ ಪ್ರಧಾನಮಂತ್ರಿ ಸ್ವನಿಧಿ ಯೋಜನೆಯ ಮಾಹಿತಿ ನೀಡಲು ಶಾಸಕ ಎಸ್.ಆರ್. ವಿಶ್ವನಾಥ್ ಬಿಬಿಎಂಪಿ ಜಂಟಿ ಆಯುಕ್ತರ ಜತೆ ಬುಧವಾರ ಮುಂಜಾನೆ ಯಲಹಂಕ ಪತ್ರಿಕಾ ವಿತರಕರ ಕೇಂದ್ರಕ್ಕೆ ಭೇಟಿ ನೀಡಿದರು. ಪತ್ರಿಕೆ ವಿತರಕರ ಸಂಘದ ಅಧ್ಯಕ್ಷ ಎಂ. ಸತೀಶ್ ಇದ್ದರು.



ಮೈಸೂರು ಉಸ್ತುವಾರಿ ಸಚಿವ ಎಚ್‌.ಸಿ.ಮಹದೇವಪ್ಪ ನೇತೃತ್ವದ ನಿಯೋಗ ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಹ್ವಾನ ಪತ್ರಿಕೆ ನೀಡಿ, ದಸರಾ ಮಹೋತ್ಸವಕ್ಕೆ ಆಹ್ವಾನಿಸಿತು. ಮೇಯರ್ ಶಿವಕುಮಾರ್, ಶಾಸಕರಾದ ರವಿಶಂಕರ್, ಎ.ಆರ್.ಕೃಷ್ಣಮೂರ್ತಿ, ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ, ಜಿ.ಪಂ. ಸಿಇಒ ಕೆ.ಎಂ.ಗಾಯಿತ್ರಿ, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಹೆಚ್ಚುವರಿ ಜಿಲ್ಲಾಧಿಕಾರಿ ಪಿ.ಶಿವರಾಜು ಇದ್ದರು.



ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕಿನ ಪರ್ಲಡ್ಕದ ಬಾಲವನದಲ್ಲಿ ಮಂಗಳವಾರ ನಡೆದ ಕೋಟ ಶಿವರಾಮ ಕಾರಂತರ ಜನ್ಮದಿನೋತ್ಸವದಲ್ಲಿ ವರ್ಣ ಚಿತ್ರಕಲಾವಿದ ಕೆ.ಚಂದ್ರನಾಥ ಆಚಾರ್ಯ ಅವರಿಗೆ ಕಾರಂತರ ಬಾಲವನ ಪ್ರಶಸ್ತಿ ನೀಡಲಾಯಿತು. ದಿ.ಕುರುಂಜಿ ವೆಂಕಟರಮಣ ಗೌಡ ಅವರ ಶಾಶ್ವತ ಕೊಡುಗೆಯಲ್ಲಿ ಕೊಡುವ ಈ ಪ್ರಶಸ್ತಿಯ ಮೊತ್ತ ₹ 25 ಸಾವಿರ.

'ಮಾಧ್ಯಮಗಳು ಸೌಹಾರ್ದ ಸೇತುವೆಯಾಗಲಿ'

'ಮೀಡಿಯಾ ಆಫ್ ದಿ ಮಿಲೇನಿಯಂ' ಕೃತಿ ಬಿಡುಗಡೆಯಲ್ಲಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಧ್ಯಮಗಳು ಸಮಾಜ-ಸರ್ಕಾರದ ನಡುವೆ ಪ್ರಗತಿ ಹಾಗೂ ಸೌಹಾರ್ದದ ಸೇತುವೆಯಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಬಿ.ಕೆ.ರವಿ ಅವರ ಸಂಪಾದಕತ್ವದ 'ಮೀಡಿಯಾ ಆಫ್ ದಿ ಮಿಲೇನಿಯಂ' ಕೃತಿಯನ್ನು ಬುಧವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಸಂವಿಧಾನದ ಮೌಲ್ಯಗಳನ್ನು ಕಾಪಾಡಲು ಪತ್ರಕರ್ತರು ಮುಂದಾಗಬೇಕು. ವೃತ್ತಿ ಧರ್ಮ ಕಾಪಾಡಿಕೊಂಡರೆ ಪತ್ರಿಕಾ ವೃತ್ತಿಗೆ ಘನತೆ ಬರುತ್ತದೆ. ಸಂವಿಧಾನ ಉಳಿದರೆ ಪತ್ರಿಕಾ ವೃತ್ತಿಯ ಸ್ವಾತಂತ್ರ್ಯವೂ ಉಳಿಯುತ್ತದೆ. ಮಾಧ್ಯಮ ಸಾಕ್ಷರತೆ ಕುರಿತ ರವಿ ಅವರ ಪುಸ್ತಕ ಮಾಧ್ಯಮ ಕ್ಷೇತ್ರದ ಅರಿವು ವಿಸ್ತರಿಸಲಿದೆ ಎಂದು ಹೇಳಿದರು.

ಭಾರತೀಯ ಮಾಧ್ಯಮ ಎದುರಿಸುತ್ತಿರುವ ಈಚಿನ ಸಮಸ್ಯೆಗಳಿಗೆ ಮಾಧ್ಯಮ ಸಾಕ್ಷರತೆ ಪರಿಹಾರ ಆಗಬಲ್ಲದು. ಹಾಗಾಗಿ, ಪದವಿಪೂರ್ವ ಹಂತದಿಂದಲೇ ಮಾಧ್ಯಮ ಸಾಕ್ಷರತೆಗೆ ಪೂರಕವಾದ ಪಠ್ಯಗಳನ್ನು ಅಳವಡಿಸಬೇಕು ಎಂದು ಬಿ.ಕೆ. ರವಿ ಅವರು ಮುಖ್ಯಮಂತ್ರಿಗೆ ಮನವಿ ಮಾಡಿದರು.

ಕರ್ನಾಟಕ ಮಾದರಿ ಅಭಿವೃದ್ಧಿ ಕುರಿತು ಪತ್ರಿಕೋದ್ಯಮ ವಿದ್ಯಾರ್ಥಿಗಳು ಸಿದ್ದಪಡಿಸಿದ್ದ ಕಿರುಚಿತ್ರವನ್ನು ಮುಖ್ಯಮಂತ್ರಿಯವರ ಎದುರು ಪ್ರದರ್ಶಿಸಲಾಯಿತು.



ಬೆಂಗಳೂರಿನಲ್ಲಿ ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಬಿ.ಕೆ.ರವಿ ಅವರ ಸಂಪಾದಕತ್ವದ 'ಮೀಡಿಯಾ ಆಫ್ ದಿ ಮಿಲೇನಿಯಂ' ಕೃತಿಯನ್ನು ಬಿಡುಗಡೆ ಮಾಡಿದರು.

ಸಚಿವರ ಹೆಸರಿನಲ್ಲಿ ನಕಲಿ ಲೆಟರ್‌ಹೆಡ್: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ.ಮಹದೇವಪ್ಪ ಅವರ ಹೆಸರಿನಲ್ಲಿ ನಕಲಿ ಲೆಟರ್‌ಹೆಡ್ ಸೃಷ್ಟಿಸಿ ದುರ್ಬಳಕೆ ಮಾಡಿಕೊಂಡಿದ್ದ ಆರೋಪಿಯನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಮಹಾದೇವ ಬಂಧಿತ ಆರೋಪಿ. ಸಚಿವರ ಕಚೇರಿಯ ಆಪ್ತ ಕಾರ್ಯದರ್ಶಿ ಸಿ.ಎಂ.ರಾಜೇಂದ್ರ ಅವರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ.

'ಆರೋಪಿ, ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ, ಭೋವಿ ಅಭಿವೃದ್ಧಿ ನಿಗಮಗಳ ವ್ಯವಸ್ಥಾಪಕರಿಗೆ ಸಚಿವರ ಶಿಫಾರಸು ಇರುವಂತೆ ಲೆಟರ್‌ಹೆಡ್ ಸೃಷ್ಟಿಸಿದ್ದ. ಸಚಿವರ ನಕಲಿ ಸಹಿ ಮಾಡಿದ್ದ. ಸಮುದಾಯದ 20 ಮಂದಿಗೆ ಸಾಲ ಸೌಲಭ್ಯ ನೀಡುವಂತೆಯೂ ಪತ್ರದಲ್ಲಿ ಉಲ್ಲೇಖಿಸಿ ನಿಗಮಗಳ ವ್ಯವಸ್ಥಾಪಕರಿಗೆ ಇದೇ ನಕಲಿ ಪತ್ರವನ್ನು ಸಲ್ಲಿಸಿದ್ದ. ಇದೇ ಲೆಟರ್‌ಹೆಡ್‌ನಲ್ಲಿ ಪತ್ರವನ್ನು ಸಚಿವರ ಕಚೇರಿಗೂ ತಲುಪಿಸಿದ್ದ. ಆ ಪತ್ರವನ್ನು ನೋಡಿ ಅನುಮಾನಗೊಂಡ ರಾಜೇಂದ್ರ ಅವರು ಪರಿಶೀಲನೆ ನಡೆಸಿದಾಗ ನಕಲಿ ಎಂಬುದು ಗೊತ್ತಾಗಿದೆ. ತಕ್ಷಣ ದೂರು ನೀಡಿದ್ದರು' ಎಂದು ಪೊಲೀಸರು ಹೇಳಿದರು.

ಹಳೇ ದ್ವೇಷ: ವ್ಯಕ್ತಿ ಕೊಲೆ

ಬೆಂಗಳೂರು: ರಾಮಮೂರ್ತಿನಗರದಲ್ಲಿ ಹಳೇ ದ್ವೇಷದಿಂದ ವ್ಯಕ್ತಿಯೊಬ್ಬರ ಮೇಲೆ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಬುಧವಾರ ಸಂಜೆ ಕೊಲೆ ಮಾಡಿ ಪರಾರಿಯಾಗಿದ್ದಾರೆ.

ಕಸ್ತೂರಿನಗರದ ನಿವಾಸಿ ಮದನ್ (32) ಕೊಲೆಯಾದ ವ್ಯಕ್ತಿ. ಇವರು ಚೆನ್ನೈನಲ್ಲಿ ಕೆಲಸ ಮಾಡುತ್ತಿದ್ದರು. ಕೆಲವು ದಿನಗಳ ಹಿಂದೆ ನಗರಕ್ಕೆ ವಾಪಸ್ ಬಂದಿದ್ದರು. ಬಾಣಸವಾಡಿ ಮುಖ್ಯ ರಸ್ತೆಯ ಮುಕುಟಮ್ಮ ದೇವಸ್ಥಾನದ ಬಳಿಗೆ ಬಂದ ನಾಲ್ವರು ದುಷ್ಕರ್ಮಿಗಳು ಈ ಕೃತ್ಯ ನಡೆಸಿದ್ದಾರೆ. 'ಕೊಲೆಯಾದ ವ್ಯಕ್ತಿ ಚೆನ್ನೈಗೆ ತೆರಳುವುದಕ್ಕೂ ಮೊದಲು ಬಾಣಸವಾಡಿಯ ಋತ್ವಿಕ್ ಗುಂಪಿನ ಜತೆಗೆ ಗಲಾಟೆ ನಡೆದಿತ್ತು. ಅದೇ ಗುಂಪು, ಮದನ್ ವಾಪಸ್ ನಗರಕ್ಕೆ ಬರುವುದನ್ನೇ ಕಾದಿತ್ತು. ಮದನ್ ಬಂದ ಮಾಹಿತಿ ತಿಳಿದು ಕೊಲೆಗೆ ಸಂಚು ರೂಪಿಸಿತ್ತು. ಕಟ್ಟಿಂಗ್ ಶಾಪ್‌ನಲ್ಲಿರುವಾಗ ದಾಳಿ ನಡೆಸಿ ಕೊಲೆ ಮಾಡಲಾಗಿದೆ. ಸಿಸಿ ಟಿವಿ ಕ್ಯಾಮೆರಾ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಬಿಬಿಎಂಪಿ ಮಾರ್ಷಲ್ ಹುದ್ದೆ: ನಕಲಿ ನೇಮಕ ಪತ್ರ ನೀಡಿದ್ದ ಆರೋಪಿ

ವಂಚನೆ ಪ್ರಕರಣ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಬಿಬಿಎಂಪಿಯಲ್ಲಿ ಮಾರ್ಷಲ್ ಹುದ್ದೆ ಕೊಡಿಸುವುದಾಗಿ ಆಮಿಷವೊಡ್ಡಿ, 200 ಯುವಕರಿಂದ ₹6 ಲಕ್ಷ ಹಣ ಪಡೆದು ವಂಚಿಸಿದ್ದ ಆರೋಪಿಯನ್ನು ಹಲಸೂರುಗೇಟ್ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಜೆ.ಪಿ. ನಗರದ ಹರ್ಷ ಬಂಧಿತ ಆರೋಪಿ. ಆರೋಪಿ ಸ್ನೇಹಿತೆಗಾಗಿ ಶೋಧ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು.

ಮಾರ್ಷಲ್ ಕೆಲಸ ಕೊಡಿಸುವುದಾಗಿ ನಂಬಿಸಿ ನಕಲಿ ನೇಮಕಾತಿ ಪತ್ರ ನೀಡಿ ನೂರಾರು ಉದ್ಯೋಗಾಂಕ್ಷಿಗಳಿಂದ ಹಣ ಪಡೆದಿದ್ದ. ವಂಚನೆಗೊಳಗಾದ ಸಂದೀಪ್ ಅವರು ದೂರು ನೀಡಿದ್ದರು. ಪೊಲೀಸರು ತನಿಖೆ ಕೈಗೊಂಡಿದ್ದರು.

'ಹೊಸಕೋಟೆಯ ಲಕ್ಕೊಂಡನಹಳ್ಳಿಯ ನಿವಾಸಿ ಹರ್ಷ, ಜೆ.ಪಿ. ನಗರದಲ್ಲಿ ನೆಲೆಸಿದ್ದ. ಎಸ್ಸೆಸ್ಸೆಲ್ಸಿವರೆಗೆ ಶಿಕ್ಷಣ ಪಡೆದಿದ್ದಾನೆ. ಕೋವಿಡ್ ವೇಳೆ ಬಿಬಿಎಂಪಿ ಕಚೇರಿ ವಾರ್‌ರೂಮ್‌ನಲ್ಲಿ ಡಾಟಾ ಎಂಟ್ರಿ ಆಪರೇಟರ್ ಆಗಿ ಕೆಲಸಕ್ಕೆ ಸೇರಿದ್ದ. ಗುರುತಿನ ಚೀಟಿ ಸಹ ಮಾಡಿಸಿಕೊಂಡಿದ್ದ. ಅದೇ ವೇಳೆಯಲ್ಲಿ ಮಾರ್ಷಲ್ ಹುದ್ದೆಗಳು ಖಾಲಿಯಿರುವ ಮಾಹಿತಿ ತಿಳಿದುಕೊಂಡಿದ್ದ'



ಹರ್ಷ

'ದೂರುದಾರರ ಸಂತೋಷ್ ಅವರನ್ನು ಮೊದಲು ಪರಿಚಯಿಸಿಕೊಂಡು, ₹3 ಸಾವಿರ ನೀಡಿದರೆ ಕೆಲಸ ಕೊಡಿಸುವ ಆಮಿಷವೊಡ್ಡಿದ್ದ. ಅದನ್ನು ನಂಬಿದ್ದ ದೂರುದಾರ ಹಣ ನೀಡಿದ್ದರು. ಹಣ ಪಡೆದಿದ್ದ ಹರ್ಷ, ಬೇರೆ ಯಾರಿಗಾದರೂ ಕೆಲಸ ಬೇಕಿದ್ದರೆ ತಿಳಿಸುವಂತೆಯೂ ಹೇಳಿದ್ದ'

'ದೂರುದಾರ, ಮಾರ್ಷಲ್ ಹುದ್ದೆ ಖಾಲಿಯಿರುವ ಬಗ್ಗೆ ಸ್ನೇಹಿತರಿಗೂ ವಿಷಯ ತಿಳಿಸಿದ್ದರು. ನಂತರ, 53 ಯುವಕರು ಆರೋಪಿಗೆ ಒಟ್ಟು ₹ 1.53ಲಕ್ಷ ಪಾವತಿಸಿದ್ದರು. ಗೂಗಲ್‌ನಲ್ಲಿ ನೇಮಕಾತಿ ಪತ್ರ ಡೌನ್‌ಲೋಡ್ ಮಾಡಿ ನಕಲಿ ಆದೇಶ ಪತ್ರ ನೀಡಿದ್ದ. ಯುವಕರು, ಕೆಲಸಕ್ಕೆ ಸೇರಲು ಬಿಬಿಎಂಪಿಗೆ ತೆರಳಿದಾಗ ಆದೇಶ ಪ್ರತಿ ನಕಲಿ ಎಂಬುದು ಗೊತ್ತಾಗಿತ್ತು' ಎಂದು ತನಿಖಾಧಿಕಾರಿಗಳು ಮಾಹಿತಿ ನೀಡಿದ್ದಾರೆ.

'ಆರೋಪಿಗೆ ಪ್ರೇಯಸಿ ಇದ್ದು, ವಂಚನೆ ಹಣವನ್ನು ಇಬ್ಬರು ಸೇರಿ ಖರ್ಚು ಮಾಡಿದ್ದರು. ಸ್ವಲ್ಪ ಹಣವನ್ನು ಪ್ರೇಯಸಿಗೂ ನೀಡಿರುವುದಾಗಿ ವಿಚಾರಣೆಯಲ್ಲಿ ತಿಳಿಸಿದ್ದಾನೆ. ನಕಲಿ ನೇಮಕಾತಿ ಪತ್ರಗಳು, ಫೋನ್ ಪೇ ಮಾಡಿದ ಸ್ಕ್ರೀನ್‌ಶಾಟ್ ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ಆನೆ ದಂತ ಮಾರಾಟ: 8 ಮಂದಿ ಸೆರೆ

ಬೆಂಗಳೂರು: ರಾಮನಗರ ಜಿಲ್ಲೆಯ ಕೋಡಿಹಳ್ಳಿ–ಹುಣಸಹಳ್ಳಿ ವ್ಯಾಪ್ತಿಯಲ್ಲಿ ಆನೆದಂತಗಳನ್ನು ಮಾರಾಟ ಮಾಡಲು ಯತ್ನಿಸಿದ್ದ 8 ಮಂದಿಯನ್ನು ಬೆಂಗಳೂರು ಅರಣ್ಯ ಸಂಚಾರ ದಳದ ತಂಡವು ಬಂಧಿಸಿದೆ.

ಕನಕಪುರ ರಸ್ತೆಯ ಮರಿದೇವರದೊಡ್ಡಿ ಕ್ರಾಸ್‌ನಲ್ಲಿ ವಾಹನ ತಪಾಸಣೆ ವೇಳೆ ಆನೆದಂತಗಳು ಸಿಕ್ಕಿವೆ. 9 ಆನೆ ದಂತಗಳು ಹಾಗೂ ಕಾರು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ತಮಿಳುನಾಡಿನ ಮೆಟ್ಟೂರಿನ ಐಯ್ಯನ್‌ಕುಟ್ಟಿ ಕುಜಂತಾಯ್, ಬೆಂಗಳೂರು ಉತ್ತರ ತಾಲ್ಲೂಕಿನ ಸಹಕಾರ ನಗರದ ಯು.ರತ್ನ, ತಮಿಳುನಾಡಿನ ಎಂ.ರವಿ, ಕೃಷ್ಣಮೂರ್ತಿ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಎಜಿಎಸ್ ಲೇಔಟ್‌ನ ನಾರಾಯಣಸ್ವಾಮಿ, ಕೊಡಿಗೆಹಳ್ಳಿಯ ಎ.ದಿನೇಶ್, ಜಿಎಂ ಟೆಂಪಲ್ ಹೌಸ್‌ನ ಎಂ.ಮನೋಹರ್, ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಕುಪ್ಪಂನ ಎಂ.ವೆಂಕಟೇಶ್ ಬಂಧಿತರು. ಆರೋಪಿಗಳ ವಿರುದ್ಧ ವನ್ಯಜೀವಿ (ಸಂರಕ್ಷಣಾ) ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಡಿಸಿಎಫ್ ಭಾಸ್ಕರ್, ಅರಣ್ಯ ಇಲಾಖೆ ಅಧಿಕಾರಿಗಳಾದ ಚಿದಾನಂದ, ಅಮೃತ್, ಸಿದ್ದರಾಜು, ಅಶ್ವಿನ್, ನವೀನ್, ಮಹೇಶ್ ಹಾಗೂ ನೇತ್ರಾವತಿ ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದೆ.

'ಅಶೋಕ ಅಂಬೇಡ್ಕರ್ ಧಮ್ಮಯಾತ್ರೆ'ಯಲ್ಲಿ ಮಾವಳ್ಳಿ ಶಂಕರ್ ಹೇಳಿಕೆ

'ಸುಳ್ಳಿನಿಂದ ಮಂದಿರ ಕಟ್ಟಿದರೆ ಪ್ರಯೋಜನ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಳ್ಳು ಹೇಳಿ ಎಷ್ಟು ಮಂದಿರ ನಿರ್ಮಿಸಿದರೂ ಪ್ರಯೋಜನ ಇಲ್ಲ' ಎಂದು ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಅಧ್ಯಕ್ಷ ಮಾವಳ್ಳಿ ಶಂಕರ್ ಹೇಳಿದರು.

ನಗರದಲ್ಲಿ ಬುದ್ಧಿಸ್ಟ್ ಫ್ರೆಟರ್ನಿಟಿ ಕೌನ್ಸಿಲ್ ಮಂಗಳವಾರ ಆಯೋಜಿಸಿದ್ದ ಅಶೋಕ-ಅಂಬೇಡ್ಕರ್ ಧಮ್ಮ-ಯಾತ್ರೆ–2023ರಲ್ಲಿ ಅವರು ಮಾತನಾಡಿದರು.

'ದೇಶದ ಯಾವ ಮೂಲೆಯಲ್ಲಿ ಉತ್ಖನನ ಮಾಡಿದರೂ ಬುದ್ಧನ ಚಿಂತನೆಗಳೇ ಸಿಗುತ್ತವೆ. ಸುಳ್ಳಿನ ಪ್ರತಿಪಾದನೆ ಹೆಚ್ಚು ದಿನಗಳ ಕಾಲ ನಡೆಯುವುದಿಲ್ಲ. ಸಮಾಜ ಈಗ ಎಚ್ಚರವಾಗಿದೆ' ಎಂದು ಹೇಳಿದರು.

ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಮಾತನಾಡಿ, 'ಧಮ್ಮಯಾತ್ರೆಯು ನಾಗಪುರದವರೆಗೂ ತೆರಳಲಿದ್ದು ಇದು ಮಹತ್ವದ ಯಾತ್ರೆಯಾಗಿದೆ' ಎಂದು ಹೇಳಿದರು.

'ಬೌದ್ಧಧರ್ಮವನ್ನು ಯಾರೂ ಪ್ರಚಾರ ಮಾಡಲಿಲ್ಲ. ಆ ಧರ್ಮವೇ ಸೆಳೆದುಕೊಂಡಿತು. ಬ್ರಾಹ್ಮಣಶಾಹಿ ವ್ಯವಸ್ಥೆ ಬೌದ್ಧಧರ್ಮವನ್ನು ಮೋಸದಿಂದ ಓಡಿಸಿತು. ಅದೇ ವ್ಯವಸ್ಥೆ, ಶೂದ್ರರು ಸೇವಕರು ಎಂಬ ಭಾವನೆ ಮೂಡಿಸಿತ್ತು. ಇತ್ತೀಚಿನ ದಿನಗಳಲ್ಲಿ ಶೂದ್ರರು ಎಚ್ಚೆತ್ತುಕೊಂಡಿದ್ದಾರೆ' ಎಂದು ಹೇಳಿದರು.

'ದಲಿತರಾಗಿಯೇ ಉಳಿದರೆ ಕೀಳರಿಮೆ ಮೂಡಲಿದ್ದು, ಧಮ್ಮಾಂತರ ಹೊಂದಿದರೆ ಆ ಕೀಳರಿಮೆ ದೂರವಾಗಲಿದೆ ಎಂದು ಅಂಬೇಡ್ಕರ್ ಪ್ರತಿಪಾದಿಸಿದ್ದರು. ಧಮ್ಮಾಂತರವಾದರೆ ಧೈರ್ಯ ಬರಲಿದೆ ಎಂದು ಹೇಳಿದ್ದರು' ಎಂದರು.

'ರಾಜಕೀಯ ಕ್ರಾಂತಿಯಾದರೂ ಹಿಂದುಳಿದ ವರ್ಗಕ್ಕೆ ಸೌಲಭ್ಯ ಸಿಕ್ಕಿಲ್ಲ. ರಾಜಕೀಯವಾಗಿ ಮೀಸಲಾತಿ ಸಿಕ್ಕಿದ್ದರೂ ಪರಿಶಿಷ್ಟ ಸಮುದಾಯಗಳ ಜನಪ್ರತಿನಿಧಿಗಳ ಶಕ್ತಿ ಕುಗ್ಗಿಸಿಯೇ ಸದನಕ್ಕೆ ಕಳುಹಿಸಲಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಬಿಎಫ್‌ಸಿ ಸಂಸ್ಥಾಪಕ ಭಾರತಿ ಪ್ರಭು ಮಾತನಾಡಿ, 'ಅಂಬೇಡ್ಕರ್ ಕಲ್ಪಿಸಿದ ಮೀಸಲಾತಿ ಸೌಲಭ್ಯ ಪಡೆದು ಸಾಕಷ್ಟು ಮಂದಿ ಉನ್ನತ ಸ್ಥಾನಕ್ಕೇರಿದ್ದಾರೆ. ಆದರೆ, ಅವರ್‍ಯಾರೂ ಸಮಾಜಕ್ಕೆ ವಾಪಸ್ ಕೊಡುಗೆ ನೀಡುತ್ತಿಲ್ಲ' ಎಂದು ಹೇಳಿದರು.

ಕವಿ ಗೊಲ್ಲಹಳ್ಳಿ ಶಿವಪ್ರಸಾದ್ ಮಾತನಾಡಿ, 'ಇಂದಿನ ಸ್ಥಿತಿಯಲ್ಲಿ ಬುದ್ಧನ ತತ್ವಗಳು ಸಮಾಜಕ್ಕೆ ಅಗತ್ಯವಾಗಿ ಬೇಕಿದೆ. ಆಡಳಿತ ನಡೆಸುವವರು ಸ್ವಾರ್ಥಕ್ಕಾಗಿ ಕ್ರೌರ್ಯ, ಹಿಂಸೆ, ದಬ್ಬಾಳಿಕೆ ಬಿತ್ತಲು ಹೊರಟಿದ್ದಾರೆ. ದ್ವೇಷದ ಸಂಸ್ಕೃತಿ ಮೂಡಿಸುತ್ತಿದ್ದಾರೆ' ಎಂದು ಆತಂಕ ವ್ಯಕ್ತಪಡಿಸಿದರು.



ನಗರದಲ್ಲಿ ಮಂಗಳವಾರ ಬುದ್ಧಿಸ್ಟ್ ಫ್ರೆಟರ್ನಿಟಿ ಕೌನ್ಸಿಲ್ ಆಯೋಜಿಸಿದ್ದ ಅಶೋಕ ಅಂಬೇಡ್ಕರ್ ಧಮ್ಮಯಾತ್ರೆ ಸಮಾರಂಭದಲ್ಲಿ (ಎಡದಿಂದ) ಕವಿಗಳಾದ ಗೊಲ್ಲಹಳ್ಳಿ ಶಿವಪ್ರಸಾದ್, ಮೂಡ್ನಾಕೂಡು ಚಿನ್ನಸ್ವಾಮಿ, ವೆಂಕಮ್ಮ ಮತ್ತು ಹನಸೋಗೆ ಸೋಮಶೇಖರ್ ಅವರಿಗೆ ಧಮ್ಮ ಗೌರವ ನೀಡಿ ಸನ್ಮಾನಿಸಲಾಯಿತು. ಧರ್ಮೇಂದ್ರ, ರಾಜಶೇಖರ್, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಅಧ್ಯಕ್ಷ ಮಾವಳ್ಳಿ ಶಂಕರ್, ಬಿ.ಎಫ್‌.ಸಿ ಸಂಸ್ಥಾಪಕ ಭಾರತಿ ಪ್ರಭು, ವಿಜ್ಞಾನಿ ಶೇಖರ್, ವಿಮಲ್‌ರಾಜ್, ವಕೀಲೆ ಮೃದುಲಾ ವನಂಗಮುಡಿ ಇದ್ದರು —ಪ್ರಜಾವಾಣಿ ಚಿತ್ರ

ಫೋಟೊ ದುರ್ಬಳಕೆಗೆ ಆ್ಯಪ್ ಸೃಷ್ಟಿ: ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೇಯಸಿಯ ಖಾಸಗಿ ಫೋಟೊಗಳನ್ನು ಅಪ್‌ಲೋಡ್ ಮಾಡಲು 'ಆ್ಯಪ್' ಸೃಷ್ಟಿಸಿದ್ದ ಆರೋಪಿಯನ್ನು ಆಗ್ನೇಯ ವಿಭಾಗದ ಸೈಬರ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ತಮಿಳುನಾಡಿನ ಸಂಜಯ್ ಕುಮಾರ್(26) ಬಂಧಿತ ಆರೋಪಿ.

ಆರೋಪಿಯಿಂದ ಪೆನ್‌ಡ್ರೈವ್, ಲ್ಯಾಪ್‌ಟಾಪ್, ಎರಡು ಮೊಬೈಲ್ ಜಪ್ತಿ ಮಾಡಿಕೊಳ್ಳಲಾಗಿದೆ. ಈ ಕೃತ್ಯದಲ್ಲಿ ಇನ್ನೂ 12 ಮಂದಿ ಭಾಗಿಯಾಗಿರುವ ಶಂಕೆಯಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಆರೋಪಿ ಹಾಗೂ ತಮಿಳುನಾಡಿನ ಯುವತಿ ಬಾಲ್ಯ ಸ್ನೇಹಿತರು. ಇಬ್ಬರು ನಗರದ ಕಾಲೇಜೊಂದರಲ್ಲಿ ಒಂದೇ ಕೋರ್ಸ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಸಹಜೀವನ ನಡೆಸುತ್ತಿದ್ದರು. ಮನೆಯವರಿಗೂ ಈ ವಿಷಯ ತಿಳಿದಿತ್ತು. ಮದುವೆ ಸಿದ್ಧತೆ ಮಾಡಿಕೊಂಡಿದ್ದರು. ಪ್ರೇಯಸಿ ಜೊತೆಗೆ ಕಳೆದಿದ್ದ ಖಾಸಗಿ ಕ್ಷಣಗಳ ದೃಶ್ಯವನ್ನು ಆರೋಪಿ ತನ್ನ ಮೊಬೈಲ್‌ನಲ್ಲಿ ಸೆರೆ ಹಿಡಿದು ಇಟ್ಟುಕೊಂಡಿದ್ದ' ಎಂದು ಹೇಳಿದರು.

'ಆರೋಪಿಯು ಪ್ರೇಯಸಿಯಲ್ಲದೇ ಯುವತಿಯರ ಅರೆನಗ್ನ ಫೋಟೊ ಸೃಷ್ಟಿಸಲೆಂದು ತಾನೇ 'ಬಿಟಿಟಿ' ಹೆಸರಿನ ಆ್ಯಪ್ ಸಿದ್ಧಪಡಿಸಿದ್ದ. ಅದರಲ್ಲಿ ಪ್ರೇಯಸಿ, ಇತರೆ ಯುವತಿಯರ ಅಶ್ಲೀಲ ಫೋಟೊಗಳನ್ನು ಸೃಷ್ಟಿಸುತ್ತಿದ್ದ. ನಂತರ ಸಾಮಾಜಿಕ ಮಾಧ್ಯಮದಲ್ಲಿ ಹಾಕುತ್ತಿದ್ದ. ಎರಡು ವರ್ಷಗಳ ಹಿಂದೆ ಇನ್‌ಸ್ಟಾಗ್ರಾಂನ ಕೆಲವು ಖಾತೆಗಳಲ್ಲಿ ತನ್ನ ಅರೆನಗ್ನ ಫೋಟೊಗಳನ್ನು ಕಂಡು ಯುವತಿಯರು ಫೋಟೊ ಡಿಲೀಟ್ ಮಾಡಿಸಿದ್ದರು. ಅದಾದ ಮೇಲೆ ಪ್ರೇಯಸಿ ಫೋಟೊವನ್ನು ಹಾಕಿದ್ದ' ಎಂದೂ ಹೇಳಿದರು.

'ಪ್ರೇಯಸಿ ಜತೆಗೆ ಆರೋಪಿಯೇ ಪೊಲೀಸ್ ಠಾಣೆಗೆ ಬಂದು ದೂರು ನೀಡಿದ್ದ. ದೂರು ಆಧರಿಸಿ ಸೈಬರ್ ಠಾಣೆ ಪೊಲೀಸರು ತನಿಖೆ ಆರಂಭಿಸಿದ್ದರು. ಇನ್‌ಸ್ಟಾಗ್ರಾಂ ಖಾತೆ ಪರಿಶೀಲನೆ ನಡೆಸಿದಾಗ ಆರೋಪಿ ಫೋನ್ ನಂಬರ್ ಪತ್ತೆಯಾಗಿತ್ತು. ತಾಂತ್ರಿಕವಾಗಿ ಪರಿಶೀಲನೆ ನಡೆಸಿದಾಗ ಆರೋಪಿ ಸಂಜಯ್, ಫೋಟೊ ಅಪ್‌ಲೋಡ್ ಮಾಡುತ್ತಿರುವುದು ಪತ್ತೆಯಾಗಿದೆ' ಎಂದು ಪೊಲೀಸರು ಹೇಳಿದರು.

ಬಸ್ ಶೆಲ್ಟರ್ ಕಳವಾಗಿಲ್ಲ ಅಧಿಕಾರಿಗಳಿಂದಲೇ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕನ್ನಿಂಗ್‌ಹ್ಯಾಮ್ ರಸ್ತೆಯ ಬಸ್ ಶೆಲ್ಟರ್ (ತಂಗುದಾಣ) ಕಳ್ಳತನ ಪ್ರಕರಣ ಭೇದಿಸಿರುವ ಹೈಗ್ರೌಂಡ್ಸ್ ಠಾಣೆ ಪೊಲೀಸರು, ಬಿಬಿಎಂಪಿ ಅಧಿಕಾರಿಗಳೇ ಶೆಲ್ಟರ್ ತೆರವು ಮಾಡಿದ್ದರೆಂಬ ಸಂಗತಿ ಪತ್ತೆ ಮಾಡಿದ್ದಾರೆ.

‘ಕನ್ನಿಂಗ್‌ಹ್ಯಾಮ್ ರಸ್ತೆಯ ಕಾಫಿ ಡೇ ಎದುರು ₹ 10 ಲಕ್ಷ ವೆಚ್ಚದಲ್ಲಿ ನಿರ್ಮಿಸಿದ್ದ ಬಸ್ ಶೆಲ್ಟರ್ ಕಳ್ಳತನ ಆಗಿದೆ’ ಎಂದು ಆರೋಪಿಸಿ ಸೈನ್‌ಪೋಸ್ಟ್ ಇಂಡಿಯಾ ಕಂಪನಿಯ ಉಪಾಧ್ಯಕ್ಷ ಎನ್. ರವಿ ರೆಡ್ಡಿ ದೂರು ನೀಡಿದ್ದರು. ಬಸ್ ತಂಗುದಾಣಗಳಿಗೆ ಶೆಲ್ಟರ್ ಅಳವಡಿಸುವ ಗುತ್ತಿಗೆಯನ್ನು ಸೈನ್‌ಪೋಸ್ಟ್ ಇಂಡಿಯಾ ಕಂಪನಿ ಪಡೆದಿದೆ.

ಕನ್ನಿಂಗ್‌ಹ್ಯಾಮ್ ರಸ್ತೆಯ ಶೆಲ್ಟರ್ ಕಳ್ಳತನದ ಬಗ್ಗೆ ತನಿಖೆ ಕೈಗೊಂಡು, ಬಿಬಿಎಂಪಿ ಶಿವಾಜಿನಗರ ವಲಯದ ಕಾರ್ಯಪಾಲಕ ಎಂಜಿನಿಯರ್ ಅವರನ್ನು ವಿಚಾರಣೆಗೆ ಒಳಪಡಿಸಲಾಗಿತ್ತು. ತಾವೇ ಶೆಲ್ಟರ್ ತೆರವು ಮಾಡಿದ್ದಾಗಿ ಹೇಳಿಕೆ ನೀಡಿದ್ದಾರೆ’ ಎಂದು ಕಮಿಷನರ್ ಬಿ. ದಯಾನಂದ್ ಅವರು ತಿಳಿಸಿದರು.

ಶೆಲ್ಟರ್ ಕುಸಿದು ಬೀಳಬಹುದೆಂದು ತೆರವು: ‘ಬಿಬಿಎಂಪಿ ಅಧಿಕಾರಿಗಳು ಆಗಸ್ಟ್ 22ರಂದು ವಾರ್ಡ್ ಪರಿಶೀಲನೆಗೆ ಹೋಗಿದ್ದಾಗ, ಈ ಶೆಲ್ಟರ್ ಗಮನಿಸಿದ್ದರು. ಅಸಮರ್ಪಕ ರೀತಿಯಲ್ಲಿ ನಿರ್ಮಿಸಲಾಗಿದ್ದ ಶೆಲ್ಟರ್, ಕುಸಿದು ಬೀಳುವ ಹಂತದಲ್ಲಿತ್ತು. ಏನಾದರೂ ಅನಾಹುತವಾದರೆ, ಪ್ರಯಾಣಿಕರ ಜೀವಕ್ಕೆ ಕುತ್ತು ಬರಬಹುದೆಂದು ಯೋಚಿಸಿದರು. ನಂತರ ಸೈನ್‌ಪೋಸ್ಟ್ ಕಂಪನಿ ಪ್ರತಿನಿಧಿಯನ್ನು ಸಂಪರ್ಕಿಸಿದ್ದ ಬಿಬಿಎಂಪಿ ಅಧಿಕಾರಿಗಳು, ಶೆಲ್ಟರ್ ನಿರ್ಮಾಣಕ್ಕೆ ಪಡೆದಿರುವ ಕಾರ್ಯಾದೇಶ ಒದಗಿಸುವಂತೆ ಕೇಳುವ ಜೊತೆಗೆ, ಸಮರ್ಪಕವಾಗಿ ಬಸ್ ಶೆಲ್ಟರ್ ನಿರ್ಮಿಸುವಂತೆ ಸೂಚಿಸಿದ್ದರು. ಆದರೆ, ಪ್ರತಿನಿಧಿ ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಹೀಗಾಗಿ, ಬಿಬಿಎಂಪಿ ಅಧಿಕಾರಿಗಳು ಸಾರ್ವಜನಿಕರ ಹಿತದೃಷ್ಟಿಯಿಂದ ಆಗಸ್ಟ್ 25ರಂದು ಶೆಲ್ಟರ್ ತೆರವುಗೊಳಿಸಿದ್ದರು. ಎಲ್ಲ ಸಾಮಗ್ರಿಗಳನ್ನು ಕಚೇರಿಗೆ ಸಾಗಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ಬಿಬಿಎಂಪಿ ಅಧಿಕಾರಿಗಳು ಸೂಚನೆ ನೀಡಿದ್ದನ್ನು ಮುಚ್ಚಿಟ್ಟಿದ್ದ ದೂರುದಾರ, ಠಾಣೆಗೆ ದೂರು ನೀಡಿದ್ದರು. ತನಿಖೆಯಲ್ಲಿ ಬಿಬಿಎಂಪಿ ಅಧಿಕಾರಿಗಳ ಕ್ರಮ ಕಾನೂನುಬದ್ಧ ಎಂಬುದು ಗೊತ್ತಾಗಿದೆ. ದೂರುದಾರರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು’ ಎಂದು ಪೊಲೀಸರು ತಿಳಿಸಿದರು.

ಮೈಸೂರು ರೇಸ್

ಸಿರೇನಿಯಸ್ ಗೆಲ್ಲುವ ನಿರೀಕ್ಷೆ

ಚೀಫ್ ಮಿನಿಸ್ಟರ್ಸ್ ಟ್ರೋಫಿ ಗುರುವಾರದ ಮೈಸೂರು ರೇಸ್‌ಗಳ ಪ್ರದಾನ ಆಕರ್ಷಣೆಯಾಗಿದ್ದು, ಸಿರೇನಿಯಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡೀಮ್ಡ್ ಟು ಫ್ಲೈರ್ 4, ನ್ಯಾಚುರಲ್ ಫ್ಲೈ 5, ರಷಿಯನ್ ರೊಮಾನ್ಸ್ 7
2ನೇ ರೇಸ್: ಸ್ವಿಸ್ ಟೈಗ್ರೆಸ್ 3, ಡಿ ಗೋಲ್ಡನ್ ಕಪ್ 1, ಹಿಯರ್ ಐ ಕಮ್ 7
3ನೇ ರೇಸ್: ಕಂಟ್ರೆಸ್ ಮೇಜರ್ 7, ಮೆನಿ ಮೂನ್ಸ್ 5, ಸ್ಟ್ರಾಂಟೊ 2
4ನೇ ರೇಸ್: ಸ್ಟಾರ್ಮಿ ಓಷನ್ 8, ಗಿಲ್ಡೆಡ್ ಬಟರ್ಫ್ಲೈ, ಕುಶಾಖ್ 6
5ನೇ ರೇಸ್: ಸಿರೇನಿಯಸ್ 5, ಲಾಸ್ಟ್ ವಿಶ್ 1, ಕ್ಲೆವರ್ ಹ್ಯಾನ್ಸ್ 8
6ನೇ ರೇಸ್: ಆಕರ್ 7, ಬುಲ್ ಬುಲ್ ರಾಣಿ 5, ಓಸಿರಿಸ್ 3
7ನೇ ರೇಸ್: ಓ ಮಂಚಲಿ 10, ಬ್ರೇಕ್ ಅವೇ 3, ಮಿಸ್ಟಿಕ್ ಡಿವೈನ್ 8


ಉತ್ತಮ ಬೆಟ್: ಸ್ಟಾರ್ಮಿ ಓಷನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

ಜೆ.ಸಿ.ರಸ್ತೆಯಲ್ಲಿ ನಿತ್ಯವೂ ವಾಹನ ದಟ್ಟಣೆ • ಸುಗಮ ಸಂಚಾರಕ್ಕೆ ಹಲವು ಅಡ್ಡಿ • ಅಪಘಾತದ ಭೀತಿ

ಮೂರೇ ಜಂಕ್ಷನ್‌ಗೆ ಸವಾರರು ‘ಉಸ್ಸಪ್ಪಾ’!

• ವರುಣ ಹೆಗಡೆ



ಜೆ.ಸಿ. ರಸ್ತೆಯಲ್ಲಿ ಬುಧವಾರ ಉಂಟಾದ ಸಂಚಾರ ದಟ್ಟಣೆಯಿಂದ ವಾಹನ ಸವಾರರು ಪರದಾಟ ನಡೆಸಿದರು —ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.



ಸಂಚಾರ ತ್ರಾಸ ಜನರ ಪ್ರಯಾಸ

ಬೆಂಗಳೂರು: ನಾಲ್ಕು ಕಡೆಗಳಿಂದ ಶರವೇಗದಲ್ಲಿ ಬಂದು ಗಕ್ಕನೆ ನಿಲ್ಲುವ ವಾಹನಗಳು, ನಡುರಸ್ತೆಗೆ ಬಂದು ಕಾರುಗಳನ್ನು ಅಡ್ಡ ಹಾಕುವ ವಾಹನ ಬಿಡಿ ಭಾಗ ಮಾರಾಟದ ವ್ಯಾಪಾರಿಗಳು, ಪಾದಚಾರಿ ಮಾರ್ಗದ ಮೇಲೆ ಹಾದು ಹೋಗುವ ದ್ವಿಚಕ್ರವಾಹನಗಳು...

ಇದು ನಗರದ ಹೃದಯ ಭಾಗದಲ್ಲಿರುವ ಜೆ.ಸಿ. ರಸ್ತೆಯ ಚಿತ್ರಣ. ಮಿನರ್ವ ವೃತ್ತದಿಂದ ಪ್ರಾರಂಭವಾಗುವ ಈ ರಸ್ತೆ, ಮೈಸೂರು ರಸ್ತೆಯನ್ನು ಸೇರಿಕೊಳ್ಳಲಿದೆ. 1.4 ಕಿ.ಮೀ. ಉದ್ದದ ಈ ರಸ್ತೆಯಲ್ಲಿ ದಿನದ ಬಹುತೇಕ ಅವಧಿ ವಾಹನ ದಟ್ಟಣೆ ಇರುತ್ತದೆ. ರಸ್ತೆಯುದ್ದಕ್ಕೂ ವಾಹನಗಳ ಬಿಡಿ ಭಾಗ ಹಾಗೂ ಗೃಹೋಪಯೋಗಿ ವಸ್ತುಗಳ ಮಳಿಗೆ, ಆಸ್ಪತ್ರೆ, ರಂಗಮಂದಿರ, ಬ್ಯಾಂಕ್‌ಗಳ ಶಾಖೆ ಹಾಗೂ ವಿವಿಧ ವಾಣಿಜ್ಯ ಮಳಿಗೆಗಳಿವೆ. ಇದರಿಂದಾಗಿ ವರ್ಷದಿಂದ ವರ್ಷಕ್ಕೆ ಈ ರಸ್ತೆಯಲ್ಲಿ ದಟ್ಟಣೆ ಹೆಚ್ಚುತ್ತಲೇ ಇದ್ದು, ಇಲ್ಲಿ ಸಂಚರಿಸುವ ವಾಹನ ಸವಾರರು ಪ್ರತಿನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ.

ಈ ರಸ್ತೆಯಲ್ಲಿ 10 ನಿಮಿಷಗಳ ಪ್ರಯಾಣಕ್ಕೆ ಅರ್ಧ ಗಂಟೆ ಹಿಡಿಯುತ್ತದೆ. ಮೈಸೂರು ರಸ್ತೆಯಲ್ಲಿನ ಬಿ.ಎನ್. ಗರುಡಾಚಾರ್ ವೃತ್ತದಲ್ಲಿ ಸಂಚಾರ ದಟ್ಟಣೆಯಾದರೆ ಪುರಭವನದ ಬಳಿಯೂ ದಟ್ಟಣೆ ಹೆಚ್ಚಲಿದೆ. ಇದರಿಂದಾಗಿ ಶಾಲೆ–ಕಾಲೇಜು, ಕಚೇರಿಗೆ ತೆರಳುವವರು ನಿಗದಿತ ಅವಧಿಗೆ ತಲುಪುವುದು ಕಷ್ಟಸಾಧ್ಯವಾಗಿದೆ. ಬೆಳಿಗ್ಗೆ 10 ಗಂಟೆಯ ಬಳಿಕ ಈ ದಟ್ಟಣೆ ಜೆ.ಸಿ. ರಸ್ತೆಯಲ್ಲಿ ಶಿವಾಜಿ ಜಂಕ್ಷನ್ ದಾಟಿ, ಭಾರತ್ ಜಂಕ್ಷನ್‌ವರೆಗೂ ವಿಸ್ತರಿಸಿಕೊಳ್ಳಲಿದೆ.

ಚಾಮರಾಜಪೇಟೆ, ಬಸವನಗುಡಿ ಕಡೆಯಿಂದ ಬರುವವರು ಲಾಲ್‌ಬಾಗ್ ಫೋರ್ಟ್ ರಸ್ತೆ ಮೂಲಕ ಬಂದು, ಜೆ.ಸಿ. ರಸ್ತೆ ತಲುಪುತ್ತಾರೆ. ಅದೇ ರೀತಿ, ಜೆ.ಪಿ. ನಗರ, ಜಯನಗರ, ವಿವಿ ಪುರ ಭಾಗದಿಂದ ಬರುವವರು ಡಯಾಗನಲ್ ರಸ್ತೆ ಹಾಗೂ ಆರ್.ವಿ ರಸ್ತೆ ಮೂಲಕ ಬಂದು, ಜೆ.ಸಿ. ರಸ್ತೆ ಸೇರುತ್ತಾರೆ. ಎಚ್‌.ಸಿ. ಜವರಾಯ ವೃತ್ತದ ಕಡೆಯಿಂದ ಬರುವವರು ಲಾಲ್‌ಬಾಗ್ ಫೋರ್ಟ್ ರಸ್ತೆ ಮೂಲಕ ಜೆ.ಸಿ. ರಸ್ತೆ ತಲುಪುತ್ತಾರೆ. ಇದರಿಂದಾಗಿ ನಾಲ್ಕು ರಸ್ತೆಗಳಲ್ಲಿ ಬರುವ ವಾಹನಗಳು ಒಂದೇ ರಸ್ತೆಯನ್ನು ಸೇರಿ, ದಟ್ಟಣೆ ಹೆಚ್ಚಾಗುತ್ತಿದೆ.

ಮಿನರ್ವ ವೃತ್ತದಿಂದ ಭಾರತ್ ಜಂಕ್ಷನ್‌ವರೆಗೆ ಎಡಭಾಗದಲ್ಲಿರುವ ವಾಹನಗಳ ಬಿಡಿ ಭಾಗದ ಮಳಿಗೆಗಳಲ್ಲಿ, ಕಾರುಗಳಿಗೆ ಎಲ್ಲಾ ರೀತಿಯ ಬಿಡಿ ಭಾಗಗಳನ್ನು ಅಳವಡಿಸಲಾಗುತ್ತದೆ. ಇದಕ್ಕಾಗಿ ಮಳಿಗೆಗಳ ಮಾಲೀಕರು ಗ್ರಾಹಕರನ್ನು ಕರೆತರಲು ತಮ್ಮ ಪ್ರತಿನಿಧಿಗಳನ್ನು ರಸ್ತೆಯುದ್ದಕ್ಕೂ ನಿಲ್ಲಿಸಿರುತ್ತಾರೆ. ಅವರು ದೂರದಲ್ಲಿ ಕಾರುಗಳು ಕಾಣುತ್ತಿರುವಾಗಲೇ ನಡುರಸ್ತೆಗಿಳಿದು, ತಮ್ಮ ಮಳಿಗೆಯತ್ತ ಗ್ರಾಹಕರನ್ನು ಕರೆತರಲು ಪ್ರಯತ್ನಿಸುತ್ತಾರೆ. ಇದರಿಂದ ವಾಹನ ದಟ್ಟಣೆ ಹೆಚ್ಚುವ ಜತೆಗೆ ಅಪಘಾತದ ಅಪಾಯವೂ ಉಂಟಾಗುತ್ತಿದೆ.

‘ಜೆ.ಸಿ. ರಸ್ತೆ ಸಂಚಾರ ದಟ್ಟಣೆ ನಿವಾರಣೆಗೆ ಪರಿಹಾರವೇ ಇಲ್ಲವಾಗಿದೆ. ಬೆಳಿಗ್ಗೆ 10 ಗಂಟೆವರೆಗೆ ಶಾಲಾ–ಕಾಲೇಜು ಹಾಗೂ ಕಚೇರಿಗೆ ತೆರಳುವವರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಸಹಜವಾಗಿ ದಟ್ಟಣೆ ಇರುತ್ತದೆ. ನಂತರ ವಾಹನಗಳ ಬಿಡಿಭಾಗ ಹಾಗೂ ಗೃಹೋಪಯೋಗಿ ವಸ್ತುಗಳ ಮಾರಾಟ ಮಳಿಗೆಗಳು ಆರಂಭವಾಗುತ್ತವೆ. ಈ ಮಳಿಗೆಗಳಿಗೆ ತೆರಳುವವರು ಏಕಾಏಕಿ ಎಡಕ್ಕೆ ತಿರುವು ಪಡೆಯಲು ಮುಂದಾಗುತ್ತಾರೆ. ಈ ವೇಳೆ ಹಿಂಬದಿಯ ವಾಹನ ಡಿಕ್ಕಿಯಾಗಿ ಹಲವರು ತಲೆ ಹಾಗೂ ಕೈಕಾಲಿಗೆ ಗಾಯ ಮಾಡಿಕೊಂಡ ಉದಾಹರಣೆಗಳೂ ಇವೆ’ ಎಂದು ಬಸವನಗುಡಿ ನಿವಾಸಿ ಚಂದ್ರಶೇಖರ್ ತಿಳಿಸಿದರು.

ಮೇಲ್ಸೇತುವೆಯೇ ಪರಿಹಾರ

ಜೆ.ಸಿ. ರಸ್ತೆಯಲ್ಲಿ ಸಂಚಾರ ದಟ್ಟಣೆ ನಿವಾರಣೆಯಾಗಲು ಮಿನರ್ವ ವೃತ್ತದಿಂದ ಹಡ್ಸನ್ ವೃತ್ತದವರೆಗೆ ಮೇಲ್ಸೇತುವೆ ನಿರ್ಮಿಸಬೇಕು. ಮೇಲ್ಸೇತುವೆ ನಿರ್ಮಾಣವಾದರೆ ಅರ್ಧಗಂಟೆ ಬದಲು, ಕೇವಲ 5 ನಿಮಿಷಗಳಲ್ಲಿ ಸಾಗಬಹುದಾಗಿದೆ. ಈ ಬಗ್ಗೆ ಬಿಬಿಎಂಪಿ ಕ್ರಮಕೈಗೊಳ್ಳಬೇಕು ಎನ್ನುವುದು ವಾಹನ ಸವಾರರು ಹಾಗೂ ಸಂಚಾರ ಪೊಲೀಸರ ಆಗ್ರಹವಾಗಿದೆ.

‘ಜೆ.ಸಿ. ರಸ್ತೆಯಲ್ಲಿ ಮೇಲ್ಸೇತುವೆ ನಿರ್ಮಾಣಕ್ಕೆ ಕಾರ್ಯಯೋಜನೆ ರೂಪಿಸಲಾಗಿತ್ತು. ಆದರೆ, ಈಗ ಇಡೀ ನಗರಕ್ಕೆ ಸಂಬಂಧಿಸಿದಂತೆ ಸಮಗ್ರ ಸಂಚಾರ ಯೋಜನೆ ರೂಪಿಸಲಾಗುತ್ತಿದೆ. ಆದ್ದರಿಂದ ಮೇಲ್ಸೇತುವೆ ಯೋಜನೆಗೆ ತಡೆ ಹಿಡಿಯಲಾಗಿದೆ’ ಎಂದು ಬಿಬಿಎಂಪಿ ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ತಿಳಿಸಿದರು.



ಪಾದಚಾರಿ ಮಾರ್ಗದಲ್ಲಿ ಚಾಲನೆ

ಜೆ.ಸಿ. ರಸ್ತೆಯಲ್ಲಿ ದಟ್ಟಣೆಯಿಂದ ತಪ್ಪಿಸಿಕೊಳ್ಳಲು ಅನೇಕರು ಪಾದಚಾರಿ ಮಾರ್ಗದ ಮೇಲೆ ಬೈಕ್ ಹಾಗೂ ಸ್ಕೂಟರ್‌ಗಳನ್ನು ಚಲಾಯಿಸಿಕೊಂಡು ಹೋಗುತ್ತಾರೆ. ಇದರಿಂದ ಪಾದಚಾರಿಗಳಿಗೆ ತೊಂದರೆಯಾಗುತ್ತಿದ್ದು, ಭಯದಲ್ಲಿ ಹೆಜ್ಜೆ ಹಾಕಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಕೆಲ ಗೂಡ್ಸ್ ವಾಹನಗಳು, ಕಾರುಗಳನ್ನು ರಸ್ತೆಯ ಅಕ್ಕಪಕ್ಕದಲ್ಲಿಯೇ ನಿಲ್ಲಿಸಲಾಗುತ್ತಿದೆ. ಕೆಲ ಮಳಿಗೆಗಳ ಮಾಲೀಕರು ಪಾದಚಾರಿ ಮಾರ್ಗದಲ್ಲಿಯೇ ವಸ್ತುಗಳನ್ನಿಟ್ಟು ಮಾರಾಟ ಮಾಡುತ್ತಿದ್ದಾರೆ. ಇದರಿಂದಾಗಿ ಪಾದಚಾರಿಗಳು ರಸ್ತೆಯಲ್ಲಿ ಸಾಗಬೇಕಾಗಿದೆ.

ದಟ್ಟಣೆ: ನಿಮ್ಮ ಸಂಕಷ್ಟ ಹೇಳಿ

ನಗರದ ರಸ್ತೆಗಳಲ್ಲಿನ ಸಂಚಾರ ದಟ್ಟಣೆಗೆ ಸಂಬಂಧಿಸಿದಂತೆ ‘ಸಂಚಾರ ತ್ರಾಸ, ಜನರ ಪ್ರಯಾಸ’ ಸರಣಿ ವರದಿಯನ್ನು ‘ಪ್ರಜಾವಾಣಿ’ ಪ್ರಕಟಿಸುತ್ತಿದೆ. ದಟ್ಟಣೆಯಿಂದಾಗಿರುವ ಸಮಸ್ಯೆ, ಪ್ರಯಾಸವನ್ನು 50 ಪದಗಳಲ್ಲಿ ಬರೆದು ಕಳುಹಿಸಿ. ಜೊತೆಗೆ ನಿಮ್ಮ ಭಾವಚಿತ್ರ, ವಿಳಾಸ ಇರಲಿ.

ವಾಟ್ಸ್‌ಆ್ಯಪ್: **96060 38256**



ಜೆ.ಸಿ. ರಸ್ತೆ ವಿಸ್ತಾರವಾಗಿದ್ದರೂ ವಾಹನಗಳ ಸಂಚಾರ ಹೆಚ್ಚಾಗಿರುವ ಕಾರಣ ದಟ್ಟಣೆ ಉಂಟಾಗುತ್ತಿದೆ. ಸಂಚಾರ ಪೊಲೀಸರು ದಟ್ಟಣೆ ಆಗದಂತೆ ಕ್ರಮ ವಹಿಸಬೇಕು
ಜ್ಯೋತಿ, ಜೆ.ಪಿ. ನಗರ ನಿವಾಸಿ



ಹಲವು ವರ್ಷಗಳಿಂದ ಇದೇ ರಸ್ತೆಯಲ್ಲಿ ಸಂಚರಿಸುತ್ತಿದ್ದೇನೆ. ಸಂಚಾರ ದಟ್ಟಣೆ ಮಾತ್ರ ಸ್ವಲ್ಪವೂ ನಿವಾರಣೆಯಾಗಿಲ್ಲ. ಈ ರಸ್ತೆಯಲ್ಲಿ ಅಪಘಾತದ ಭಯದಲ್ಲಿ ಸಾಗಬೇಕಾಗಿದೆ
ವಿಷಕಂಠೇಗೌಡ, ಕತ್ರಿಗುಪ್ಪೆ ನಿವಾಸಿ



ದಟ್ಟಣೆ ನಿವಾರಣೆಗೆ ಮೇಲ್ಸೇತುವೆ ನಿರ್ಮಿಸಬೇಕು. ದಟ್ಟಣೆ ಅವಧಿಯಲ್ಲಿ ಗೂಡ್ಸ್ ವಾಹನಗಳಿಗೆ ನಿರ್ಬಂಧ ವಿಧಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು
ಲಲಿತಾ ಶ್ರೀಧರ್, ಜೆ.ಪಿ.ನಗರ ನಿವಾಸಿ



ಜಂಕ್ಷನ್‌ಗಳಲ್ಲಿ ದಟ್ಟಣೆ ನಿಯಂತ್ರಣಕ್ಕೆ ಸಂಚಾರ ಪೊಲೀಸರು ಕ್ರಮವಹಿಸಲಿ. ಅಡ್ಡಾದಿಡ್ಡಿ ವಾಹನ ಚಾಲನೆ, ರಸ್ತೆ ಪಕ್ಕದಲ್ಲಿ ವಾಹನ ನಿಲ್ಲಿಸುವವರ ಮೇಲೆ ಕ್ರಮ ಕೈಗೊಳ್ಳಬೇಕು
ಚನ್ನಬಸಪ್ಪ, ಶ್ರೀನಗರ ನಿವಾಸಿ



ಮಳೆ ಬಂದರೆ ಸಂಚಾರ ಕಷ್ಟವಾಗಲಿದೆ. ಸಂಚಾರ ಪೊಲೀಸರು ತಿಂಗಳಾಂತ್ಯಕ್ಕೆ ಮಾತ್ರ ಜಾಗೃತರಾಗದೆ, ಎಲ್ಲಾ ದಿನಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸಬೇಕು
ರಿಶೋನಾ ದೇವ್, ಆರ್‌.ಆರ್‌. ನಗರ ನಿವಾಸಿ



ಜೆ.ಸಿ. ರಸ್ತೆಯಲ್ಲಿ ಇರುವ ಮ್ಯಾನ್‌ಹೋಲ್‌ಗಳು ಆಗಾಗ ಬಾಯ್ತೆರೆದು, ಕೊಳಚೆ ನೀರು ರಸ್ತೆ ತುಂಬಾ ಆವರಿಸಿಕೊಳ್ಳುತ್ತಿದೆ. ಇದರಿಂದಲೂ ದಟ್ಟಣೆ ಉಂಟಾಗುತ್ತಿದೆ
ಅಮಿತ್, ಬಸವನಗುಡಿ ನಿವಾಸಿ

‘ಬೆಂಗಳೂರು ಕಂಬಳ ನಮ್ಮ ಕಂಬಳ’ದ ಕರೆ ಪೂಜೆ

ಕಂಬಳಕ್ಕೆ ಸಹಾಯಧನ ಅಬಾಧಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ ಭಾಗದಲ್ಲಿ ನಡೆಯುವ ಪ್ರಮುಖ 20 ಕಂಬಳಗಳಿಗೆ ನೀಡುತ್ತಿರುವ ತಲಾ ₹ 5 ಲಕ್ಷ ಅನುದಾನವನ್ನು ಮುಂದುವರಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ನ.25 ಮತ್ತು 26ರಂದು ನಡೆಯಲಿರುವ ‘ಬೆಂಗಳೂರು ಕಂಬಳ ನಮ್ಮ ಕಂಬಳ’ಕ್ಕೆ ಪೂರ್ವಭಾವಿಯಾಗಿ ಕರೆ ಪೂಜೆ (ಕರೆ ಎಂದರೆ ಕೋಣಗಳನ್ನು ಓಡಿಸುವ ನೀರಿರುವ ಅಂಗಣ) ನೆರವೇರಿಸಿ ಮಾತನಾಡಿದರು.

ಕಂಬಳಕ್ಕೆ ಸಹಾಯಧನ ಬಿಡುಗಡೆ ಮಾಡುವ ವಿಚಾರವನ್ನು ಮುಖ್ಯಮಂತ್ರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರೊಂದಿಗೆ ಚರ್ಚಿಸಲಾಗುವುದು. ಬೆಂಗಳೂರು ಕಂಬಳಕ್ಕೂ ಪ್ರೋತ್ಸಾಹ ನೀಡಲಾಗುವುದು ಎಂದು ಭರವಸೆ ನೀಡಿದರು.

ಉಳಿಪೆಟ್ಟು ಬೀಳದೆ ಯಾವುದೇ ಶಿಲೆ ಪ್ರತಿಮೆ ಆಗುವುದಿಲ್ಲ. ಭೂಮಿ ಉಳದೆ ಯಾವುದೇ ಬೆಳೆ ಬೆಳೆಯಲು ಆಗುವುದಿಲ್ಲ. ಅದರಂತೆ ಕಂಬಳದ ನೆಪದಲ್ಲಿ ಅರಮನೆ ಮೈದಾನದಲ್ಲಿ ಒಂದಷ್ಟು ಅಭಿವೃದ್ಧಿ ಕೆಲಸಗಳಾಗಬೇಕು ಎಂದರು.

ಶಿಕ್ಷಣ, ಹೋಟೆಲ್ ಉದ್ಯಮ, ಪ್ರವಾಸೋದ್ಯಮ, ಬ್ಯಾಂಕಿಂಗ್ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಕರಾವಳಿಯ ಜನರು ಹೆಸರು ಮಾಡಿದವರು. ಅಲ್ಲಿನ ಜನಪದ ಕ್ರೀಡೆಯನ್ನು ಬೆಂಗಳೂರಿನ ಜನರಿಗೂ ಪರಿಚಯಿಸಲು ಹೊರಟಿದ್ದಾರೆ. ಕಂಬಳದ ಹೆಸರಿನಲ್ಲಿ ಶಾಸಕ ಅಶೋಕ್ ರೈ ನೇತೃತ್ವದಲ್ಲಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಜನರು ಒಂದಾಗಿರುವುದು ಸಂತೋಷದ ವಿಚಾರ ಎಂದು ಮೆಚ್ಚುಗೆವ್ಯಕ್ತಪಡಿಸಿದರು.



ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಕಂಬಳದ ‘ಕರೆ ಪೂಜೆ’ ಮತ್ತು ಕಂಬಳದ ಲಾಂಛನ ಅನಾವರಣ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಂಸದ ಡಿ.ವಿ. ಸದಾನಂದ ಗೌಡ, ಶಾಸಕ ಅಶ್ವತ್ಥನಾರಾಯಣ ಭಾಗವಹಿಸಿದ್ದರು

ಕಂಬಳ ಆಯೋಜನಾ ಸಮಿತಿ ಗೌರವಾಧ್ಯಕ್ಷ ಕೆ. ಪ್ರಕಾಶ್ ಶೆಟ್ಟಿ, ಅಧ್ಯಕ್ಷ ಅಶೋಕ್ ರೈ, ಸಂಸದ ಡಿ.ವಿ.ಸದಾನಂದ ಗೌಡ, ಶಾಸಕರಾದ ಸಿ.ಎನ್. ಅಶ್ವಥ್ ನಾರಾಯಣ, ಎನ್.ಎ. ಹ್ಯಾರಿಸ್, ಸಂಗೀತ ನಿರ್ದೇಶಕ ಗುರುಕಿರಣ್ ಇದ್ದರು.

‘ಸಹಾನುಭೂತಿಗೆ ಆರೋಪಿಯ ಜಾತಿ ನಮೂದು ಸಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಆರೋಪಿ ಬಗ್ಗೆ ಸಹಾನುಭೂತಿ ತೋರಿಸುವುದಕ್ಕಾಗಿ ಆತನ ಜಾತಿಯನ್ನು ಪರಿಗಣಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಆರು ವರ್ಷದ ಬಾಲಕಿ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣದ ವಿಚಾರಣೆ ವೇಳೆ, ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ ಹಾಗೂ ಪಂಕಜ್ ಮಿತ್ತಲ್ ಅವರಿದ್ದ ನ್ಯಾಯಪೀಠ ಈ ಮಾತು ಹೇಳಿದೆ. ‘ದಾವೆಯಲ್ಲಿ ಆರೋಪಿಯ ಜಾತಿಯನ್ನು ನಮೂದಿಸಲೇಬಾರದು’ ಎಂದೂ ಪೀಠ ಹೇಳಿದೆ.

‘ವಿಚಾರಣಾ ನ್ಯಾಯಾಲಯಗಳು ಹಾಗೂ ಹೈಕೋರ್ಟ್‌ಗಳು ಪ್ರಕರಣಕ್ಕೆ ಸಂಬಂಧಿಸಿದ ತಮ್ಮ ಆದೇಶಗಳಲ್ಲಿ ಆರೋಪಿಯ ಜಾತಿಯನ್ನು ಏಕೆ ನಮೂದಿಸಿವೆ ಎಂಬುದೇ ನಮಗೆ ಅರ್ಥವಾಗಲಿಲ್ಲ. ವಾದಿ ಅಥವಾ ಪ್ರತಿವಾದಿಯ ಜಾತಿ ಇಲ್ಲವೇ ಧರ್ಮವನ್ನು ತೀರ್ಪಿನಲ್ಲಿ ನಮೂದಿಸಬಾರದು’ ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣದ ಅಪರಾಧಿ ಗೌತಮ್ ಎಂಬಾತನಿಗೆ ನೀಡಿದ್ದ ಜೀವಾವಧಿ ಶಿಕ್ಷೆಯನ್ನು 12 ವರ್ಷ ಕಾಲ ಜೈಲು ಶಿಕ್ಷೆಗೆ ಇಳಿಸಿ ರಾಜಸ್ಥಾನ ಹೈಕೋರ್ಟ್ ತೀರ್ಪು ನೀಡಿತ್ತು. ಇದನ್ನು ಪ್ರಶ್ನಿಸಿ ರಾಜಸ್ಥಾನ ಸರ್ಕಾರ ಮೇಲ್ಮನವಿ ಸಲ್ಲಿಸಿತ್ತು.

ವಿಚಾರಣೆ ನಂತರ, ಅಪರಾಧಿಯ ಜೈಲುಶಿಕ್ಷೆಯನ್ನು 14 ವರ್ಷಕ್ಕೆ ಹೆಚ್ಚಿಸಿ, ನ್ಯಾಯಪೀಠ ತೀರ್ಪು ನೀಡಿತು.

‘ವಿಜ್ಞಾನದತ್ತ ವಿದ್ಯಾರ್ಥಿಗಳ ಒಲವು’

ಇಸ್ರೊ ಅಧ್ಯಕ್ಷ ಸೋಮನಾಥ್‌ಗೆ ‘ವೀರಭದ್ರೇಶ್ವರ ಪ್ರಶಸ್ತಿ’ ಪ್ರದಾನ

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ಎಸ್‌.ಸೋಮನಾಥ್ ಅವರಿಗೆ ‘ವೀರಭದ್ರೇಶ್ವರ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ವೀರಶೈವ ಲಿಂಗಾಯತ ಸಂಘಟನಾ ವೇದಿಕೆಯ ರಾಷ್ಟ್ರೀಯ ಅಧ್ಯಕ್ಷ ಪ್ರದೀಪ ಕಂಕಣವಾಡಿ, ಬಸವರಾಜ ಬೊಮ್ಮಾಯಿ, ಸಿದ್ಧಗಂಗಾ ಮಠದ ಮಠಾಧೀಶ ಸಿದ್ಧಲಿಂಗ ಸ್ವಾಮೀಜಿ, ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ, ಸಿ. ಸೋಮಶೇಖರ್, ಗೌರಿಗದ್ದೆ ಆಶ್ರಮದ ವಿನಯ್ ಗುರೂಜಿ ಹಾಗೂ ಲಕ್ಷ್ಮೀ ಹೆಬ್ಬಾಳ್ಕರ್ ಇದ್ದಾರೆ —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಭಾರತೀಯ ಬಾಹ್ಯಾಕಾಶ ಸಂಸ್ಥೆಯ (ಇಸ್ರೊ) ಚಂದ್ರಯಾನ–3 ಯೋಜನೆಯ ಯಶಸ್ವಿನಿಂದಾಗಿ ವಿಜ್ಞಾನದ ಬಗ್ಗೆ ವಿದ್ಯಾರ್ಥಿಗಳಲ್ಲಿ ಆಸಕ್ತಿ ಹೆಚ್ಚಾಗಿದ್ದು, ಈ ವಿಭಾಗದ ಕಡೆಗೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಆಕರ್ಷಿತರಾಗುತ್ತಿದ್ದಾರೆ’ ಎಂದು ಶಾಸಕ ಬಸವರಾಜ ಬೊಮ್ಮಾಯಿ ತಿಳಿಸಿದರು.

ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ವೀರಭದ್ರೇಶ್ವರ ಜಯಂತ್ಯುತ್ಸವ ಉದ್ಘಾಟಿಸಿ, ಅವರು ಮಾತನಾಡಿದರು. ಈ ವೇಳೆ ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಅವರಿಗೆ ‘ವೀರಭದ್ರೇಶ್ವರ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

‘ವಿದ್ಯಾರ್ಥಿಗಳು ವಿಜ್ಞಾನದ ಕಡೆ ಆಸಕ್ತಿ ತೋರುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿಜ್ಞಾನಿಗಳು ಹೊರಹೊಮ್ಮುವ ಸಾಧ್ಯತೆಯಿದೆ. ವಿಜ್ಞಾನ ಕ್ಷೇತ್ರ ಅತ್ಯಂತ ವೇಗವಾಗಿ ಬೆಳವಣಿಗೆ ಹೊಂದುತ್ತಿದೆ. ವಿಜ್ಞಾನದ ಬಲದಿಂದ ಮನುಷ್ಯನ ಹುಟ್ಟು ಮತ್ತು ಸಾವು ನಿರ್ಧರಿಸುವ ಕಾಲ ಬಂದರೂ ಅಚ್ಚರಿಪಡಬೇಕಾಗಿಲ್ಲ. ವಿಜ್ಞಾನ ಮತ್ತು ಅಧ್ಯಾತ್ಮ ಎರಡೂ ಮುಖ್ಯ. ಅಧ್ಯಾತ್ಮ ಆತ್ಮವಿಶ್ವಾಸ ಹುಟ್ಟಿಸಿದರೆ, ವಿಜ್ಞಾನ ವೈಜ್ಞಾನಿಕ ಬದುಕನ್ನು ಕಲಿಸುತ್ತದೆ. ವಿಜ್ಞಾನ ಇಲ್ಲದಿದ್ದರೆ ಯಾವುದೇ ಆಧುನಿಕ ವಸ್ತುಗಳು ಇರುತ್ತಿರಲಿಲ್ಲ’ ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ‘ವೀರಶೈವ ಲಿಂಗಾಯತರು ಎಲ್ಲರೊಂದಿಗೆ ಸೌಹಾರ್ದ ಸಂಬಂಧ ಹೊಂದಿದ್ದಾರೆ. ನಾವೂ ಬೆಳೆಯೋಣ ಇತರ ಸಮಾಜದವರನ್ನು ಬೆಳೆಸೋಣ ಎನ್ನುವುದು ನಮ್ಮ ಸಮಾಜದವರ ನೀತಿ. ಈ ಸಮಾಜವನ್ನು ಇತರ ಹಿಂದುಳಿದ ವರ್ಗಕ್ಕೆ ಸೇರ್ಪಡೆ ಮಾಡಬೇಕೆಂಬ ಬೇಡಿಕೆಗೆ ಸ್ಪಂದಿಸಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕಿದೆ. ವೀರಭದ್ರೇಶ್ವರನ ಆಶೀರ್ವಾದ ಇದ್ದರೆ ಸಮಾಜದ ಬೇಡಿಕೆ ಶೀಘ್ರವೇ ಈಡೇರಲಿದೆ’ ಎಂದು ತಿಳಿಸಿದರು.

ನಗರದಲ್ಲಿ ಇಂದು

ವಿಶ್ವ ದೃಷ್ಟಿ ದಿನ ‘ಸೈಟ್ ಫಸ್ಟ್ ವಾಕಥಾನ್’: ಅತಿಥಿಗಳು: ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಈಶ್ವರ್ ಖಂಡ್ರೆ, ಅಧ್ಯಕ್ಷತೆ: ಆರ್. ರಾಮ್ ರಾಜ್ ಅರಸ್, ಆಯೋಜನೆ: ಲಯನ್ಸ್ ಅಂತರರಾಷ್ಟ್ರೀಯ ಕ್ಲಬ್, ಸ್ಥಳ: ಕೇಂದ್ರ ಗ್ರಂಥಾಲಯ, ಕಬ್ಬನ್ ಉದ್ಯಾನ, ಬೆಳಿಗ್ಗೆ 9

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಘಟಿಕೋತ್ಸವ: ಅತಿಥಿಗಳು: ನಳಿನಿ ಜಾರ್ಜ್, ಟಿ.ಆರ್. ಪರಶುರಾಮನ್, ಎಂ.ಆರ್. ಆನಂದರಾಮ್, ಜಿ. ರಾಮಚಂದ್ರ, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಎಂ.ಎಸ್. ರಾಮಯ್ಯನಗರ, ಬೆಳಿಗ್ಗೆ 9.45

ವಾರ್ಷಿಕ ಅಂತರ–ಕಾಲೇಜು ಆರ್ಕಿಟೆಕ್ಚರ್ ಫೆಸ್ಟ್: ಅತಿಥಿಗಳು: ಪೀಟರ್ ಸ್ಟೆಚ್‌ಬರಿ, ಮೌನೀಶ್ ಸಿರಿಪುರಪು, ಅಧ್ಯಕ್ಷತೆ: ಅವಿರಾಮ್ ಶರ್ಮಾ, ಆಯೋಜನೆ ಮತ್ತು ಸ್ಥಳ: ಬಿಎಂಎಸ್ ಕಾಲೇಜ್ ಆರ್ಕಿಟೆಕ್ಚರ್, ಬಸವನಗುಡಿ, ಬೆಳಿಗ್ಗೆ 10.30

ರಾಜ್ಯಮಟ್ಟದ ಮುಜರಾಯಿ ಅರ್ಚಕರ ವಿಚಾರ ಸಂಕಿರಣ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಅತಿಥಿಗಳು: ರಾಜೇಂದ್ರಕುಮಾರ್ ಕಠಾರಿಯಾ, ಎಚ್. ಬಸವರಾಜೇಂದ್ರ, ಕೆ.ಎನ್. ದಯಾನಂದ್, ಅಧ್ಯಕ್ಷತೆ: ಶ್ರೀವತ್ಸ, ಆಯೋಜನೆ: ಕರ್ನಾಟಕ ರಾಜ್ಯ ಮುಜರಾಯಿ ದೇವಾಲಯಗಳ ಅರ್ಚಕರ ಮತ್ತು ನೌಕರರ ಸಂಘ, ಸ್ಥಳ: ರಾಯ ರಾಯ ಕೊಲ್ಲಂ, ವೆಂಕಟರಾಯ ಕಲ್ಯಾಣ ಮಂಟಪ, ಚಾಮರಾಜಪೇಟೆ, ಬೆಳಿಗ್ಗೆ 11



ದಾಸಗಾನ ವೈಭವ: ಗಾಯನ: ಸುಶ್ರಾವ್ಯ ಆಚಾರ್ಯ, ಪಿಟೀಲು: ಎಸ್. ಶಶಿಧರ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಸಂಜೆ 7

ಪೌರಕಾರ್ಮಿಕರ ದಿನಾಚರಣೆ: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಜಿ. ಪರಮೇಶ್ವರ, ಅತಿಥಿಗಳು: ಕೆ.ಎಚ್. ಮುನಿಯಪ್ಪ, ಎಚ್‌.ಸಿ. ಮಹದೇವಪ್ಪ, ರಾಮಲಿಂಗಾರೆಡ್ಡಿ, ಕೆ.ಜೆ. ಜಾರ್ಜ್, ಜಮೀರ್ ಅಹಮ್ಮದ್ ಖಾನ್, ಆಯೋಜನೆ: ಕರ್ನಾಟಕ ರಾಜ್ಯ ಮಹಾನಗರಪಾಲಿಕೆ, ನಗರಸಭೆ, ಪುರಸಭೆಗಳ ಪೌರಕಾರ್ಮಿಕರ ಮಹಾಸಂಘ, ಸ್ಥಳ: ಟೌನ್ ಹಾಲ್, ಬೆಳಿಗ್ಗೆ 11

ದತ್ತಿ ಪ್ರಶಸ್ತಿ ಪ್ರದಾನ: ಪ್ರಶಸ್ತಿ ಪ್ರದಾನ: ಸಿ. ನಾರಾಯಣ ಸ್ವಾಮಿ, ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪುರಸ್ಕೃತರು: ಕೆ.ಎಸ್. ಸೋಮಶೇಖರ್, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

ಸಂಗೀತ ಕಾರ್ಯಕ್ರಮ: ಗಾಯನ: ಅಭಿಷೇಕ್ ರಘುರಾಮ್, ಮೃದಂಗ: ತಿರುವರೂರ್ ಭಕ್ತವತ್ಸಲಂ, ಪಿಟೀಲು: ಎಚ್.ಎನ್. ಭಾಸ್ಕರ್, ಖಂಜೀರಾ: ಗುರುಪ್ರಸನ್ನ, ಆಯೋಜನೆ: ಸ್ಪಿಕ್ ಮೆಕೆ, ಸ್ಥಳ: ಸತೀಶ್ ಧವನ್ ಸಭಾಂಗಣ, ಐಐಎಸ್‌ಸಿ, ಸಂಜೆ 6

‘ನನ್ನ ಹುಟ್ಟೂರಿನ ಕಥೆ ಮತ್ತು ನನ್ನ ಬಾಲ್ಯದ ದಿನಗಳು’ ಕುರಿತು ಉಪನ್ಯಾಸ: ಮಿರ್ಜಾ ಇಸ್ಮಾಯಿಲ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಪ್ರವಚನ ವಾಹಿನಿ: ‘ಪಿತೃ ಕಲ್ಪ’ ಕುರಿತು ಉಪನ್ಯಾಸ: ಕೃಷ್ಣರಾಜಭಟ್ ಕುಟ್ವಾಡಿ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

‘ಪಾರಿಜಾತ’ ನಾಟಕ ಪ್ರದರ್ಶನ: ರಚನೆ: ಕೆ.ವೈ. ನಾರಾಯಣಸ್ವಾಮಿ, ನಿರ್ದೇಶನ: ಬಿ. ಜಯಶ್ರೀ, ಸಂಗೀತ: ಪ್ರವೀಣ್ ಡಿ. ರಾವ್, ಸುಶೀಲ್ ಶರ್ಮಾ, ರಂಗ ಸಜ್ಜಿಕೆ: ಶಶಿಧರ್ ಅಡಪ, ಅರುಣ್ ಸಾಗರ್, ಬೆಳಕು ವಿನ್ಯಾಸ: ಅರುಣ್ ಡಿ.ಟಿ., ಆಯೋಜನೆ: ಸ್ಪಂದನಾ, ಸ್ಥಳ: ರಂಗಶಂಕರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ನೇರಳೆ ಮಾರ್ಗದಲ್ಲಿ ಪ್ರಯಾಣಿಸಿದ ಸಂಸದ ಮೋಹನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸದ ಪಿ.ಸಿ. ಮೋಹನ್ ಅವರು ಬುಧವಾರ ಮೆಟ್ರೊ ನೇರಳೆ ಮಾರ್ಗದಲ್ಲಿ ವೈಟ್‌ಫೀಲ್ಡ್‌ನಿಂದ (ಕಾಡುಗೋಡಿ) ಕಬ್ಬನ್‌ಪಾರ್ಕ್‌ವರೆಗೆ ಪ್ರಯಾಣಿಸಿ ಪರಿಶೀಲಿಸಿದರು.

ಕಾಡುಗೋಡಿಯಿಂದ ಚಲ್ಲಘಟ್ಟಕ್ಕೆ 43 ಕಿ.ಮೀ. ದೂರವಿದೆ. ಬಸ್‌ನಲ್ಲಿ ಪ್ರಯಾಣಿಸಲು ಕನಿಷ್ಠ 2 ತಾಸು ಬೇಕಾಗುತ್ತದೆ. ಮೆಟ್ರೊದಲ್ಲಿ ಕೇವಲ ₹ 60 ವೆಚ್ಚದಲ್ಲಿ 1 ಗಂಟೆ 20 ನಿಮಿಷದಲ್ಲಿ ತಲುಪಬಹುದು. ಇದರಿಂದ ವಾಹನ ದಟ್ಟಣೆ ಕಡಿಮೆಯಾಗಲಿದೆ ಎಂದು ಅವರು ತಿಳಿಸಿದರು.

ವಿಐಪಿ ಸಮಾರಂಭಗಳನ್ನು ಬದಿಗೆ ಸರಿಸಿ ತಕ್ಷಣ ಮೆಟ್ರೊ ವಿಸ್ತರಿತ ಮಾರ್ಗದಲ್ಲಿ ರೈಲು ಸೇವೆ ಆರಂಭಿಸಲು ಸೂಚನೆ ನೀಡುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕ ಹಿತಾಸಕ್ತಿಯ ಬದ್ಧತೆಯನ್ನು ಎತ್ತಿ ಹಿಡಿದಿದ್ದಾರೆ ಎಂದು ಶ್ಲಾಘಿಸಿದರು.

ಮಣಿಪಾಲ್ ಆಸ್ಪತ್ರೆಯಿಂದ ಹೃದಯ ರಕ್ಷಕ ಅಭಿಯಾನ

ಸಂಚಾರ ಪೊಲೀಸರಿಗೆ ಸಿಪಿಆರ್ ತರಬೇತಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ನಾಗರಿಕರಲ್ಲಿ ಹೃದಯದ ಬಗ್ಗೆ ಜಾಗೃತಿ ಮೂಡಿಸಲು ಪೊಲೀಸರ ಒತ್ತು
- ಸಿಪಿಆರ್ ವಿಧಾನದಿಂದ ಹೃದಯದ ಪುನರುಜ್ಜೀವನ ಸಾಧ್ಯ
- ತುರ್ತು ಸಂದರ್ಭದಲ್ಲಿ ರೋಗಿಗಳಿಗೆ ಕ್ಯೂಆರ್ ಕೋಡ್ ಸಹಕಾರಿ

ಬೆಂಗಳೂರು: ಮಣಿಪಾಲ್ ಆಸ್ಪತ್ರೆಗಳ ಸಮೂಹವು ‘ಹೃದಯದ ರಕ್ಷಕ 2.0’ ಅಭಿಯಾನವನ್ನು ಹಮ್ಮಿಕೊಂಡಿದ್ದು, ಈ ಅಭಿಯಾನದಡಿ ನಗರದ ಆಯ್ದ 40 ಸಂಚಾರ ಪೊಲೀಸರಿಗೆ ಹೃದಯ ಮತ್ತು ಶ್ವಾಸಕೋಶ ಕಾಯಿಲೆಗೆ ಸಂಬಂಧಿಸಿದ ತರಬೇತಿ (ಸಿಪಿಆರ್) ನೀಡಲಾಯಿತು.

ಈ ತರಬೇತಿಗೆ ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್.ಅನುಚೇತ್ ಚಾಲನೆ ನೀಡಿ ಮಾತನಾಡಿದರು.

‘ಹೃದಯದ ಬಗ್ಗೆ ಜಾಗೃತಿ ಮೂಡಿಸಲು ಸಂಚಾರ ದ್ವೀಪಗಳಲ್ಲಿ ಹೃದಯದ ಆಕಾರ ಮೂಡಿಸಲಾಗುತ್ತಿದೆ. ಸಂಚಾರ ಸಿಗ್ನಲ್‌ಗಳಲ್ಲಿ ಜನರು ತಾಳ್ಮೆಯಿಂದ ಕಾಯಬೇಕು. ಹೃದಯಾಘಾತಕ್ಕೆ ಒಳಗಾದವರಿಗೆ ಸಿಪಿಆರ್ ವಿಧಾನದಿಂದ ಹೃದಯವನ್ನು ಪುನರುಜ್ಜೀವನಗೊಳಿಸಿ, ವ್ಯಕ್ತಿಯ ಜೀವ ಉಳಿಸಬಹುದಾಗಿದೆ. ಇದನ್ನು ಯಾವ ರೀತಿ ಬಳಸಬಹುದು ಎಂಬುದು ಬಹುತೇಕರಿಗೆ ತಿಳಿದಿಲ್ಲ. ತುರ್ತು ಸಂದರ್ಭದಲ್ಲಿ ತ್ವರಿತವಾಗಿ ರೋಗಿಗಳನ್ನು ಆಸ್ಪತ್ರೆಗೆ ಸ್ಥಳಾಂತರಿಸಲು ಮಣಿಪಾಲ್ ಆಸ್ಪತ್ರೆಗಳ ಸಮೂಹ ಅಭಿವೃದ್ಧಿಪಡಿಸಿರುವ ಕ್ಯೂಆರ್ ಕೋಡ್ ಸಹಕಾರಿಯಾಗಲಿದೆ. ಅದನ್ನು ಎಲ್ಲ ಸಂಚಾರ ಸಿಗ್ನಲ್‌ಗಳಿಗೆ ವಿಸ್ತರಿಸಬೇಕು’ ಎಂದು ಹೇಳಿದರು.

ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಯ ಹೃದ್ರೋಗ ವಿಭಾಗದ ಮುಖ್ಯಸ್ಥ ಡಾ.ರಂಜನ್ ಶೆಟ್ಟಿ, ‘ತುರ್ತು ಸಹಾಯ (ಎಸ್‌ಒಎಸ್) ಕ್ಯೂಆರ್ ಕೋಡ್ ವ್ಯವಸ್ಥೆಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಹೃದಯದ ಸಮಸ್ಯೆ ಕಾಣಿಸಿಕೊಂಡಾಗ ಪ್ರಾಥಮಿಕ ಅಥವಾ ತುರ್ತು ಚಿಕಿತ್ಸೆಗೆ ಕ್ಯೂಆರ್‌ಕೋಡ್ ಸ್ಕ್ಯಾನ್ ಮಾಡಿ, ವೈದ್ಯಕೀಯ ಸೇವೆ ಪಡೆದುಕೊಳ್ಳಬಹುದು. ವ್ಯಕ್ತಿ ಸ್ಕ್ಯಾನ್ ಮಾಡುತ್ತಿದ್ದಂತೆಯೇ ತುರ್ತು ಸಂಖ್ಯೆಗೆ ಸಂಪರ್ಕ ಕಲ್ಪಿಸಿ, ಆಂಬುಲೆನ್ಸ್ ಸೇವೆಗೆ ನಿರ್ದೇಶಿಸಲಾಗುತ್ತದೆ. ಇನ್ನಷ್ಟು ಸಂಚಾರ ಪೊಲೀಸರಿಗೆ ಸಿಪಿಆರ್ ತರಬೇತಿ ನೀಡಲಾಗುತ್ತದೆ. ಈ ಮೂಲಕ ನಗರವನ್ನು ‘ಹಾರ್ಟ್ ಸ್ಮಾರ್ಟ್ ಸಿಟಿ’ಯನ್ನಾಗಿ ಪರಿವರ್ತಿಸಲಾಗುತ್ತದೆ’ ಎಂದು ತಿಳಿಸಿದರು.



ಎಂ.ಎನ್‌.ಅನುಚೇತ್ ಅವರು ಎಸ್‌ಒಎಸ್ ಕ್ಯೂಆರ್‌ಕೋಡ್ ಸ್ಕ್ಯಾನ್ ಮಾಡಿದರು. ಡಾ.ರಂಜನ್ ಶೆಟ್ಟಿ ಇದ್ದಾರೆ

ಅಂಚೆಯ ನಂಟು ನಿರಂತರ

ಭಾರತಿ.ಎ,ಕೊಪ್ಪ



ಸುಮಾರು 90ರ ದಶಕದವರೆಗೂ ಪ್ರತಿ ಸಣ್ಣ ಸಣ್ಣ ಹಳ್ಳಿಯಲ್ಲಿಯೂ ಸಾರ್ವಜನಿಕ ಸ್ಥಳಗಳಲ್ಲಿ ಕಾಣುತ್ತಿದ್ದ ಕೆಂಪು ಬಣ್ಣದ ಡಬ್ಬ ಇಂದು ಬೆರಳೆಣಿಕೆಯಷ್ಟು ಮಾತ್ರ ಕಾಣಸಿಗುತ್ತಿದೆ.ಹೌದು,ಅಂಚೆ ಮೂಲಕ ಪತ್ರ ಎಂಬ ಜನಸಾಮಾನ್ಯರ ಮಿತ್ರ ಇಂದು ಪತ್ರ ವ್ಯವಹಾರ ಮರೆಯಾಗಿ ಸಾಮಾಜಿಕ ಜಾಲತಾಣದ ಅಬ್ಬರದಲ್ಲಿ ಕಾಣದಂತಾಗಿದೆ. ಆದರೂ ಅಂಚೆ ಕಚೇರಿ ಒದಗಿಸುವ ಹಲವಾರು ಸೌಲಭ್ಯಗಳು ಸದಾ ಜನಸ್ನೇಹಿಯಾಗಿವೆ. ಪ್ರತಿ ವರ್ಷ ಅಕ್ಟೋಬರ್ 9 ನ್ನು ವಿಶ್ವ ಅಂಚೆ ದಿನ ಎಂಬುದಾಗಿ ಆಚರಿಸುವ ಮೂಲಕ ಅಂಚೆಯ ಅನನ್ಯ ಸೇವೆಯನ್ನು ಗೌರವಿಸಲಾಗುತ್ತದೆ.

ಪತ್ರ ಬರಹ ಕಲೆ: ಕಿರಿಯ ಪ್ರಾಥಮಿಕ ಶಾಲಾ ಹಂತದಲ್ಲಿಯೇ ಮಕ್ಕಳಿಗೆ ಪತ್ರ ಬರವಣಿಗೆಯ ವಿಧಾನವನ್ನು ಕಲಿಸಿಕೊಡಲಾಗುತ್ತದೆ.ಆದರೆ ಕೇವಲ ಪರೀಕ್ಷಾ ದೃಷ್ಟಿಯಿಂದ ಇದನ್ನು ಕಲಿಯುವ ಮಕ್ಕಳು ಕ್ರಮೇಣ ಪತ್ರ ಬರವಣಿಗೆಯ ಅಭ್ಯಾಸವನ್ನು ಕೈಬಿಡುತ್ತಾರೆ. ಪದವಿ ಶಿಕ್ಷಣ ಪಡೆದರೂ ವ್ಯಾವಹಾರಿಕ ಪತ್ರ ಬರೆಯಲು ಕಷ್ಟ ಪಡುವ ಬಹಳಷ್ಟು ಯುವ ಜನತೆ ನಮ್ಮ ನಡುವೆ ಇದ್ದಾರೆ. ಹಾಗಾಗಿ ಪತ್ರ ಬರಹ ಕೇವಲ ಪರೀಕ್ಷಾ ಅಂಕಗಳಿಗೆ ಸೀಮಿತವಾಗಿ ಕಲಿಯದೆ ಅದನ್ನು ರೂಢಿಗತ ಮಾಡಿಕೊಂಡಾಗ ಸಾರ್ವಜನಿಕ ಜೀವನಕ್ಕೆ ಕಾಲಿಟ್ಟಾಗ ವ್ಯಾವಹಾರಿಕ ಕೆಲಸಗಳಿಗೆ ಅನುಕೂಲವಾಗುತ್ತದೆ. ಜಗತ್ತಿನ ಅನೇಕ ಮಹಾನ್ ಸಾಧಕರು ಬರೆದ ಪತ್ರಗಳು ಇಂದಿಗೂ ಬರಹಗಾರರಿಗೆ ಪ್ರೇರಕ ಶಕ್ತಿಯಾಗಿವೆ. ಕುವೆಂಪುರವರು ಮಗ ತೇಜಸ್ವಿಯವರಿಗೆ ಬರೆದ ಪತ್ರ,ನೆಹರೂ ಅವರು ಜೈಲಿನಲ್ಲಿದ್ದಾಗ ಮಗಳು ಇಂದಿರಾ ಗಾಂಧಿಯವರಿಗೆ ಬರೆದ ಪತ್ರ, ಅಬ್ರಹಾಂ ಲಿಂಕನ್ ತನ್ನ ಮಗನನ್ನು ಶಾಲೆಗೆ ಸೇರಿಸುವಾಗ ಶಿಕ್ಷಕರಿಗೆ ಮಾಡಿಕೊಂಡ ಕಳಕಳಿಯ ವಿನಂತಿ ಪತ್ರ ಇತ್ಯಾದಿ ಪತ್ರಗಳು ಇಲ್ಲಿ ಉಲ್ಲೇಖನೀಯ. ವೈಯಕ್ತಿಕ ಪತ್ರ ಮತ್ತು ವ್ಯಾವಹಾರಿಕ ಪತ್ರಗಳನ್ನು ಬರೆಯುವಾಗ ನಿರ್ದಿಷ್ಟ ಒಕ್ಕಣೆ ಕ್ರಮವನ್ನು ಅನುಸರಿಸಿ ಬರೆಯಬೇಕಿದೆ.ಅಂಚೆಯ ಪತ್ರ ಬರಹದಲ್ಲಿ ಒಕ್ಕಣೆ, ವಿಳಾಸ,ಪಿನ್ ಕೋಡ್ ಇವುಗಳ ಬಳಕೆ ಬಹಳ ಮುಖ್ಯವಾದುದು.

ವಿಶ್ವ ಅಂಚೆ ದಿನ: ಪ್ರತಿ ವರ್ಷ ವಿಶ್ವ ಅಂಚೆ ದಿನಾಚರಣೆ ನಡೆಯುತ್ತದೆ. ಜನರ ದೈನಂದಿನ ಜೀವನದಲ್ಲಿ ಅಕ್ಷರಗಳೊಂದಿಗೆ ಕ್ರಾಂತಿಕಾರಿ ಸಂವಹನ ವಿಧಾನದ ರಚನೆಯನ್ನು ಗುರುತಿಸಲು ಈ ದಿನ ವಿಶೇಷವಾಗಿ ಆಚರಿಸಲಾಗುತ್ತದೆ. 1874ರಲ್ಲಿ ಸ್ವಿಟ್ಜರ್ಲೆಂಡ್‌ನ ಬರ್ನ್ ನಲ್ಲಿ ಯೂನಿವರ್ಸಲ್ ಪೋಸ್ಟಲ್ ಯೂನಿಯನ್ (ಯುಪಿಯು) ಸ್ಥಾಪನೆಯ ನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ.1969ರ ಅಕ್ಟೋಬರ್ 9 ರಂದು ವಿಶ್ವ ಅಂಚೆ ಒಕ್ಕೂಟವು ಜಪಾನ್ ನ ಟೋಕಿಯೋದಲ್ಲಿ ಈ ದಿನಾಚರಣೆಯನ್ನು ಆಚರಿಸುವಂತೆ ಘೋಷಿಸಿತು.



ಮಕ್ಕಳಿಗಾಗಿ PM ಕೇರ್ಸ್ ಯೋಜನೆ: COVID-19 ಸಾಂಕ್ರಾಮಿಕ ರೋಗದಿಂದಾಗಿ ಪೋಷಕರನ್ನು ಕಳೆದುಕೊಂಡಿರುವ ಅಥವಾ ಉಳಿದಿರುವ ಪೋಷಕರು ಅಥವಾ ಕಾನೂನು ಪಾಲಕರು ಅಥವಾ ದತ್ತು ಪಡೆದ ಪೋಷಕರನ್ನು ಕಳೆದುಕೊಂಡಿರುವ ಮಕ್ಕಳನ್ನು ಬೆಂಬಲಿಸಲು ಮಕ್ಕಳಿಗಾಗಿ PM ಕೇರ್ಸ್ ಯೋಜನೆಯನ್ನು 2021 ರಲ್ಲಿ ಆರಂಭಿಸಲಾಯಿತು. ಈ ಯೋಜನೆಯ ಉದ್ದೇಶವು ಮಕ್ಕಳ ಸಮಗ್ರ ಆರೈಕೆ ಮತ್ತು ರಕ್ಷಣೆಯನ್ನು ಸುಸ್ಥಿರ ರೀತಿಯಲ್ಲಿ ಖಚಿತಪಡಿಸುವುದು ಮತ್ತು ಆರೋಗ್ಯ ವಿಮೆಯ ಮೂಲಕ ಅವರ ಯೋಗಕ್ಷೇಮವನ್ನು ಸಕ್ರಿಯಗೊಳಿಸುವುದು, ಶಿಕ್ಷಣದ ಮೂಲಕ ಅವರನ್ನು ಸಬಲೀಕರಣಗೊಳಿಸುವುದು ಮತ್ತು 23 ವರ್ಷ ವಯಸ್ಸಿನವರೆಗೆ ಆರ್ಥಿಕ ಬೆಂಬಲದೊಂದಿಗೆ ಸ್ವಾವಲಂಬಿ ಅಸ್ತಿತ್ವಕ್ಕೆ ಅವರನ್ನು ಸಜ್ಜುಗೊಳಿಸುವುದಾಗಿದೆ. ಇಲ್ಲಿ ಮಗುವಿನ ಹೆಸರಿನಲ್ಲಿ ಖಾತೆಯನ್ನು ತೆರೆಯಲಾಗುತ್ತದೆ ಮತ್ತು PM CARES ನಿಧಿಯಿಂದ ಮುಂಗಡ ಮೊತ್ತದ ಪಾವತಿಯನ್ನು ಮಾಡಲಾಗುತ್ತದೆ. ಠೇವಣಿ ಮೊತ್ತವು ₹ 10 ಲಕ್ಷಗಳು ಮತ್ತು ಫಲಾನುಭವಿಯು 18 ವರ್ಷ ವಯಸ್ಸಿನವರೆಗೆ ಪ್ರತಿ ತಿಂಗಳು ₹ 4000 ಮಾಸಿಕ ಸ್ಟೈಫಂಡ್ ಅನ್ನು ಪಡೆಯುತ್ತಾರೆ. ಅದರ ನಂತರ, ಅವರು 23 ವರ್ಷ ವಯಸ್ಸಿನವರೆಗೆ ₹ 10 ಲಕ್ಷಗಳ ಮಾಸಿಕ ಆದಾಯ ಖಾತೆಯ ಯೋಜನೆಯ ಪ್ರಕಾರ ಬಡ್ಡಿಯನ್ನು ಗಳಿಸಬಹುದು.

ಸುಕನ್ಯಾ ಸಮೃದ್ಧಿ ಯೋಜನೆ: ಹೆಸರೇ ಸೂಚಿಸುವಂತೆ ಇದು ಹೆಣ್ಣು ಮಕ್ಕಳಿಗಾಗಿಯೇ ಇರುವ ಯೋಜನೆ.10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಣ್ಣು ಮಕ್ಕಳಿಗೆ ಈ ಖಾತೆಯನ್ನು ತೆರೆಯಬಹುದು. ಯೋಜನೆಯನ್ನು ಪೋಷಕರು ಇಬ್ಬರು ಪುತ್ರಿಯರಿಗೆ ಮಾತ್ರ ತೆರೆಯಬಹುದು. ವಾರ್ಷಿಕ ಕನಿಷ್ಠ ₹ 250 ಪಾವತಿಸುವ ಮೂಲಕ ಖಾತೆಯನ್ನು ಚಾಲ್ತಿಯಲ್ಲಿಡಬಹುದು.ಈ ಯೋಜನೆ ಪ್ರಾರಂಭವಾದ ದಿನಾಂಕದಿಂದ 21 ವರ್ಷಗಳವರೆಗೆ ಕಾರ್ಯ ನಿರ್ವಹಿಸುತ್ತದೆ. ಖಾತೆಯ ಬಾಕಿ ಮೊತ್ತದ 50 ಪ್ರತಿಶತದವರೆಗೆ ಭಾಗಶಃ ಹಿಂಪಡೆಯುವಿಕೆಯನ್ನು ಹೆಣ್ಣು ಮಗುವಿನ ಶಿಕ್ಷಣದ ವೆಚ್ಚಕ್ಕೆ 18 ವರ್ಷ ಪೂರೈಸಿದ ನಂತರ ಪಡೆದುಕೊಳ್ಳಬಹುದಾಗಿದೆ. ಒಂದು ಮಗುವಿಗೆ ಕೇವಲ ಒಂದೇ ಖಾತೆ ತೆರೆಯಲು ಅವಕಾಶವಿದೆ. ಖಾತೆ ತೆರೆದ ನಂತರ ಗರಿಷ್ಠ ₹ 1,50,000 ಗಳನ್ನು ಖಾತೆಗೆ ತುಂಬಬಹುದು . ₹ 250 ಕ್ಕಿಂತ ಕಡಿಮೆ ಹಣವನ್ನು ತುಂಬಿದರೆ ಅಥವಾ ಆ ವರ್ಷ ಖಾತೆಗೆ ಹಣವೇ ತುಂಬದಿದ್ದ ಪಕ್ಷದಲ್ಲಿ ₹ 50 ದಂಡವನ್ನಾಗಿ ಪಾವತಿಸಬೇಕು.ಹೆಣ್ಣು ಮಗು ಹತ್ತು ವರ್ಷ ಪೂರೈಸಿದ ನಂತರ ಆಕೆಯೇ ಆ ಖಾತೆಯನ್ನು ನಿಭಾಯಿಸಬಹುದು.

ಅಂಚೆ ಬಂದರೆ ಬಾಂಧವ್ಯಗಳು ಬಲಗೊಳ್ಳುತ್ತಿದ್ದವು. ಈಗ ಅಂಚೆ ಕಚೇರಿ ಸ್ವಾವಲಂಬನೆಯ ಕೇಂದ್ರವಾಗಿದೆ.

ಅಂಚೆ ಕಚೇರಿಯಲ್ಲಿ ಇತರ ಉಳಿತಾಯ ಯೋಜನೆಗಳು: ಅಂಚೆ ಕಚೇರಿ ಮೂಲಕ ಹಲವಾರು ಉಳಿತಾಯ ಯೋಜನೆಗಳನ್ನು ನಿರ್ವಹಿಸಬಹುದು. ಪೋಸ್ಟ್ ಆಫೀಸ್ ಉಳಿತಾಯ ಖಾತೆ , ರಾಷ್ಟ್ರೀಯ ಉಳಿತಾಯ ಮರುಕಳಿಸುವ ಠೇವಣಿ ಖಾತೆ (RD), ರಾಷ್ಟ್ರೀಯ ಉಳಿತಾಯ ಸಮಯ ಠೇವಣಿ ಖಾತೆ, ರಾಷ್ಟ್ರೀಯ ಉಳಿತಾಯ ಮಾಸಿಕ ಆದಾಯ ಖಾತೆ, ರಾಷ್ಟ್ರೀಯ ಉಳಿತಾಯ ಪ್ರಮಾಣಪತ್ರಗಳು ಇತ್ಯಾದಿ.

ಅಂಚೆ ಚೀಟಿ ಸಂಗ್ರಹದ ಹವ್ಯಾಸ: ಅಂಚೆಚೀಟಿಗಳು ವೈವಿಧ್ಯಮಯವಾಗಿರುವುದರಿಂದ ಅಂಚೆ ಚೀಟಿ ಸಂಗ್ರಹ ಒಂದು ಉತ್ತಮ ಹವ್ಯಾಸವಾಗಿದೆ. ವಿದೇಶಿ ಅಂಚೆ ಚೀಟಿಗಳನ್ನೂ ಸಂಗ್ರಹಿಸಬಹುದು. ಆಸಕ್ತರು ಅಂಚೆ ಇಲಾಖೆಯಲ್ಲಿ ನಿಗದಿತ ಶುಲ್ಕ ಪಾವತಿಸಿ ನೋಂದಣಿ ಮಾಡಿಸಿದರೆ,ಇಲಾಖೆ ಹೊಸ ಅಂಚೆ ಚೀಟಿ ಬಿಡುಗಡೆ ಮಾಡಿದಾಗ ನೋಂದಣಿ ಮಾಡಿಕೊಂಡವರಿಗೆ ಕಳುಹಿಸಿಕೊಡುತ್ತದೆ.

ಪುರಾಣ ಮತ್ತು ರಾಜಮಹಾರಾಜರ ಕಾಲದಲ್ಲಿ ಪಾರಿವಾಳದ ಮೂಲಕ ಸುದ್ದಿಯನ್ನು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ತಲುಪಿಸುವ ಕಾಲಘಟ್ಟದಿಂದ ಇಂದಿನ ವಿದ್ಯುನ್ಮಾನ ಆಧಾರಿತ ವಿವಿಧ ಸೇವೆಯವರೆಗೂ ಅಂಚೆ ವ್ಯವಸ್ಥೆ ತನ್ನದೇ ಆದ ಛಾಪು ಮೂಡಿಸಿದೆ. ಮಕ್ಕಳು ಕೇವಲ ಪುಸ್ತಕದ ಓದಿಗೆ ತಮ್ಮ ಕಲಿಕಾ ಅವಧಿಯನ್ನು ಸೀಮಿತಗೊಳಿಸಿಕೊಳ್ಳದೆ,ಹತ್ತಿರದ ಅಂಚೆ ಕಚೇರಿಗೆ ಭೇಟಿ ನೀಡಿ ಅಲ್ಲಿನ ವಿವಿಧ ಸೇವೆಗಳ ತಿಳಿದುಕೊಳ್ಳುವುದು ಅಗತ್ಯವಾಗಿದೆ. ❖

ಕೊಮಗಟ ಮಾರು ದುರಂತ

ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಸರಕಾರದ ಅಧಿಕಾರಿಗಳ ಕೈವಾಡವಿದೆ ಎಂದು ಇತ್ತೀಚೆಗೆ ಕೆನಡಾ ಆರೋಪಿಸಿದ ಬಳಿಕ ಭಾರತ- ಕೆನಡಾ ರಾಜತಾಂತ್ರಿಕ ಸಂಬಂಧಗಳು ಬಿಕ್ಕಟ್ಟಿನಲ್ಲಿವೆ. ಸ್ವಾತಂತ್ರ್ಯ ಪೂರ್ವ ದಿನಗಳಲ್ಲಿ ಭಾರತ-ಕೆನಡಾ ದೇಶಗಳ ಮಧ್ಯೆ ಮಹಾಸಾಗರದ ಮೇಲೆಯೇ ತಿಂಗಳುಗಟ್ಟಲೆ ನಡೆದ ಒಂದು ಬಿಕ್ಕಟ್ಟಿನ ಕಥನ ಕೊಮಗಟ ಮಾರು ಕುರಿತು ವಿವರಿಸಲಾಗಿದೆ.

ಯು.ಟಿ.ಆಯಿಶ ಫರ್ಝಾನ

ಕೊಮಗಟ ಮಾರು ಘಟನೆಯು ಭಾರತ ಮತ್ತು ಕೆನಡಾದ ಸಂಬಂಧಗಳ ಇತಿಹಾಸಗಳಲ್ಲಿ ಒಂದು ಮಹತ್ವದ ಘಟನೆಯಾಗಿದ್ದು, 20ನೇ ಶತಮಾನದ ಆರಂಭದಲ್ಲಿ ಜನಾಂಗೀಯ ತಾರತಮ್ಯ, ವಲಸೆ ನೀತಿಗಳು ಮತ್ತು ನಾಗರಿಕ ಹಕ್ಕುಗಳ ಹೋರಾಟದ ಕರಾಳ ಕತೆಯನ್ನು ವಿವರಿಸುತ್ತದೆ. ಜಪಾನಿನ ಕೊಮಗಟ ಮಾರು ಎಂಬ ಹೆಸರಿನ ನೌಕೆಯ 1914ರಲ್ಲಿ ಕೆನಡಾಕ್ಕೆ ಕೈಗೊಂಡ ದುರಂತ ಪ್ರಯಾಣದ ಕತೆಯನ್ನು ವಿವರಿಸುತ್ತದೆ.

ಹಿನ್ನೆಲೆ: ಕೊಮಗಟ ಮಾರು ಎಂಬ ಚಾರ್ಟರ್ಡ್ ಹಡಗು, ಏಪ್ರಿಲ್ 4, 1914ರಲ್ಲಿ ಹಾಂಗ್ ಕಾಂಗ್‌ನಿಂದ ಕೆನಡಾದೆಡೆಗೆ 376 ಪ್ರಯಾಣಿಕರನ್ನು ಹೊತ್ತೊಯ್ದಿತ್ತು. ಅವರೆಲ್ಲರೂ ಭಾರತದ ಪಂಜಾಬ್ ನಿವಾಸಿಗಳಾಗಿದ್ದರು. (ಆ ಗುಂಪಿನಲ್ಲಿ ಕೆಲವು ಮಂದಿ ಹಿಂದೂ ಮತ್ತು ಮುಸ್ಲಿಮರಿದ್ದರು, ಉಳಿದಂತೆ ಬಹುತೇಕ ಸಿಖ್ಖರಾಗಿದ್ದರು.) ಆ ಸಮಯದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಭಾಗವಾಗಿದ್ದ ಕೆನಡಾದಲ್ಲಿ ಉತ್ತಮ ಉದ್ಯೋಗಾವಕಾಶಗಳು ಲಭಿಸಬಹುದು ಎಂಬ ಆಶೆಯಿಂದ ಕೆನಡಾಗೆ ಹೊರಟಿದ್ದರು.

ಕೆನಡಾಕ್ಕೆ ಆಗಮನ : ಈ ಹಡಗು ಮೇ 23, 1914 ರಂದು ಬ್ರಿಟಿಷ್ ಕೊಲಂಬಿಯಾದ ಭಾಗವಾಗಿದ್ದ ವ್ಯಾಂಕೋವರ್‌ಗೆ ಬಂತು. ಆದರೆ, ಕೆನಡಾದ ಅಧಿಕಾರಿಗಳು ಪ್ರಯಾಣಿಕರಿಗೆ ಕೆಳಗಿಳಿಯಲು ಬಿಡಲಿಲ್ಲ.

ಕೆನಡಾದ ವಲಸೆ ನೀತಿಗಳು: ಕೆನಡಾವು ಕಠಿಣ ವಲಸೆ ಕಾನೂನು ಹೊಂದಿತ್ತು. ವಲಸಿಗರು ತಮ್ಮ ಮೂಲ ದೇಶದಿಂದ ನೇರವಾಗಿ ಕೆನಡಾಕ್ಕೆ ಪ್ರಯಾಣಿಸಬೇಕು ಎಂಬ ಕಾನೂನು ಚಾಲ್ತಿಯಲ್ಲಿತ್ತು. ಬ್ರಿಟಿಷ್ ಭಾರತದ ಪ್ರಜೆಗಳು ಹಾಂಗ್‌ಕಾಂಗ್‌ನಿಂದ ಬಂದಿರುವುದೇ ಅವರ ತಕರಾರಾಗಿತ್ತು. ಭಾರತದ ಜನರು ನೇರವಾಗಿ ಬರಬೇಕು ಎನ್ನುವುದು ಅವರ ವಾದವಾಗಿತ್ತು. ವಿಶೇಷವಾಗಿ ಭಾರತ ಮತ್ತು ಇತರ ಏಷ್ಯಾದ ದೇಶಗಳಿಂದ ವಲಸೆ ತಡೆಯುವ ಉದ್ದೇಶದಿಂದ ಈ ನಿಯಂತ್ರಣ ಜಾರಿಗೊಳಿಸಲಾಗಿತ್ತು.

ಪ್ರವೇಶ ನಿರಾಕರಣೆ: ಪ್ರಯಾಣಕ್ಕೆ ಅಗತ್ಯವಿದ್ದ ಎಲ್ಲಾ ದಾಖಲೆಗಳಿದ್ದರೂ ಕೊಮಗಟ ಮಾರು ಪ್ರಯಾಣಿಕರಿಗೆ ಅಲ್ಲಿನ ಅಧಿಕಾರಿಗಳು ಇಳಿಯಲು ಅವಕಾಶ ನೀಡಲಿಲ್ಲ. ಜನಾಂಗೀಯವಾದಿ ಚಿಂತನೆ ಮತ್ತು ಏಷ್ಯನ್ ವಿರೋಧಿ ವಲಸೆ ಕಾನೂನುಗಳನ್ನು ಜಾರಿಗೊಳಿಸುವಲ್ಲಿ ಉತ್ಸುಕರಾಗಿದ್ದ ಅಧಿಕಾರಿಗಳಿಗೆ ಯಾವುದೇ ದಯೆ ಇರಲಿಲ್ಲ. ಹಡಗನ್ನು ಎರಡು ತಿಂಗಳು ಬಂದರಿನಲ್ಲಿಯೇ ಲಂಗರು ಹಾಕಿ ಪ್ರಯಾಣಿಕರು ಹಡಗಿನಲ್ಲಿಯೇ ಜೀವಿಸುವಂತಾಯಿತು. ಪ್ರಯಾಣಿಕರು ತೀವ್ರ ಹಸಿವು ಮತ್ತು ಮೂಲಸೌಕರ್ಯಗಳಿಲ್ಲದೇ ಬಳಲಿದರು.

ಕಾನೂನು ಹೋರಾಟ: ಪ್ರಯಾಣಿಕರು ವಕೀಲರನ್ನು ನೇಮಿಸಿ ಕೆನಡಾದ ನ್ಯಾಯಾಲಯಗಳಲ್ಲಿ ಪ್ರವೇಶ ನಿರಾಕರಣೆಯ ವಿರುದ್ಧ ಹಲವು ರೀತಿಯಲ್ಲಿ ಹೋರಾಟ ಕೈಗೊಂಡರು. ಅವರ ಎಲ್ಲ ಪ್ರಯತ್ನಗಳು ವಿಫಲವಾದವು. ಕೆನಡಾದ ಬಂದರು ಪ್ರದೇಶದಲ್ಲಿಯೇ ಎರಡು ತಿಂಗಳು ಕಳೆದ ಬಳಿಕ ಜುಲೈ 23, 1914ರಂದು ಆ ಪ್ರಯಾಣಿಕರು ಕೆನಡಾದಿಂದ ಹೊರಟು ಜಪಾನ್‌ಗೆ ಬಂದರು. ಅಲ್ಲಿಯೂ ಕೆಲ ತಿಂಗಳಿದ್ದು ನಂತರ ಆ ಹಡಗು ಭಾರತಕ್ಕೆ ಮರಳಿತು.

ದುರಂತ: ಆ ನೌಕೆಯು ಮತ್ತೆ ಜಪಾನಿನಲ್ಲಿಯೂ ಕೆಲತಿಂಗಳು ಉಳಿಯಬೇಕಾಯಿತು. ಸಂಕಟ ತಾಳದೇ ಕೆಲವು ಪ್ರಯಾಣಿಕರು ಜಪಾನ್‌ನಲ್ಲಿ ಇಳಿದರು. ಆದರೆ ಹಡಗಿನಲ್ಲಿಯೇ ಮತ್ತೆ ತಿಂಗಳುಗಳ ಕಾಲ ಉಳಿದ 321 ಪ್ರಯಾಣಿಕರು 29 ಸೆಪ್ಟೆಂಬರ್ 1914ರಂದು ಕೋಲ್ಕತ್ತದ ಬಳಿಯ ಬಡ್ಜ್ ಬಡ್ಜ್ ಭಾರತೀಯ ಬಂದರನ್ನು ತಲುಪಿದರು. ದುರದೃಷ್ಟವಶಾತ್ ಬ್ರಿಟಿಷ್ ಅಧಿಕಾರಿಗಳು ಆ ಪ್ರಯಾಣಿಕರು ಜಪಾನಿನ ತೀರದಲ್ಲಿ ತಂಗಿದ್ದರಿಂದ, ಜಪಾನ್‌ನಲ್ಲಿ ನೆಲೆಸಿದ್ದ ಗದರ್ ಪಾರ್ಟಿಯ ಕ್ರಾಂತಿಕಾರಿ ಸಂಘಟನೆ ನಾಯಕರ ಜತೆ ನಂಟು ಬೆಳೆಸಿರಬಹುದು ಎಂಬ ಶಂಕೆಯಿಂದ ತೀವ್ರ ವಿಚಾರಣೆಗೆ ಒಳಪಡಿಸಿದರು. ಬಾಬಾ ಗುರುದೀತ್ ಸಿಂಗ್ ಎಂಬ ನಾಯಕನನ್ನು ಬಂಧಿಸಲು ಪ್ರಯತ್ನಿಸಿದರು. ಇದನ್ನು ವಿರೋಧಿಸಿ ಗಲಭೆ ನಡೆಯಿತು. ಪರಿಣಾಮ ಸುಮಾರು 20 ಪ್ರಯಾಣಿಕರು ಹತ್ಯೆಗೊಳಗಾದರು. ಅನೇಕರು ಜೈಲು ಪಾಲಾದರು. ಹೊಸ ಬದುಕಿನ ಕನಸಿನಲ್ಲಿದ್ದ ಪ್ರಯಾಣಿಕರು ನಿರ್ದಯ ಕಾನೂನುಗಳ ಕಾರಣ ಸಾವನ್ನಪ್ಪಿದರು.



ನಂತರದ ಬೆಳವಣಿಗೆಗಳು: ಕೊಮಗಟ ಮಾರು ಘಟನೆಯು ಕೆನಡಾದ ಇತಿಹಾಸದಲ್ಲಿ ಒಂದು ಕರಾಳ ಅಧ್ಯಾಯವಾಗಿ ಉಳಿದಿದೆ. ವರ್ಣಭೇದ ನೀತಿ, ತಾರತಮ್ಯದ ವಲಸೆ ನೀತಿಗಳು ಮತ್ತು ನಾಗರಿಕ ಹಕ್ಕುಗಳ ಹೋರಾಟವನ್ನು ಎತ್ತಿ ತೋರಿಸುತ್ತದೆ. ಇದು ವಲಸಿಗರು, ವಿಶೇಷವಾಗಿ ದಕ್ಷಿಣ ಏಷ್ಯಾ ಮೂಲದವರು ಪಾಶ್ಚಿಮಾತ್ಯ ದೇಶವೊಂದರಲ್ಲಿ ಎದುರಿಸಿದ ಸವಾಲುಗಳು ಮತ್ತು ಸಮಾನತೆ ಮತ್ತು ನ್ಯಾಯಕ್ಕಾಗಿ ಅವರ ಹೋರಾಟದ ಕತೆಯ ಸ್ಮರಣೆಯಾಗಿದೆ. ಕೊಮಗಟ ಮಾರು ಶತಮಾನೋತ್ಸವ ಸಮೀಪಿಸುತ್ತಿದ್ದಂತೆ ಅಧಿಕೃತವಾಗಿ ಈ ಬಗ್ಗೆ ಕ್ಷಮೆಯಾಚಿಸಬೇಕೆಂದು ಕೆನಡಾದ ಸಿಖ್ ಸಮುದಾಯದಲ್ಲಿ ಬೇಡಿಕೆ ಇಟ್ಟಿತು.

ಕ್ಷಮೆ ಯಾಚಿಸಿದ ಕೆನಡಾ: ಮೇ 2008ರಲ್ಲಿ, ಬ್ರಿಟಿಷ್ ಕೊಲಂಬಿಯಾ ಸರ್ಕಾರವು ಕೊಮಗಟಮಾರು ಪ್ರಯಾಣಿಕರನ್ನು ಕೆಟ್ಟದಾಗಿ ನಡೆಸಿಕೊಂಡಿದ್ದಕ್ಕಾಗಿ ಔಪಚಾರಿಕವಾಗಿ ಕ್ಷಮೆಯಾಚಿಸಿತು. ಬಳಿಕ ಆಗಸ್ಟ್ 2008ರಲ್ಲಿ, ಬ್ರಿಟಿಷ್ ಕೊಲಂಬಿಯಾದ ಸರ್ರೆಯಲ್ಲಿನ ಉದ್ಯಾನವನದಲ್ಲಿ ಸಿಖ್ಖರು ಆಯೋಜಿಸಿದ ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿ ಸ್ಟೀಫನ್ ಹಾರ್ಪರ್ ಕ್ಷಮೆಯಾಚಿಸಿದರು. ಆದರೆ ಕಾರ್ಯಕ್ರಮದಲ್ಲಿ ಹಾಜರಿದ್ದ ಅನೇಕ ಸಿಖ್ಖರು ಈ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿ ಒಟ್ಟಾವಾದ ಹೌಸ್ ಆಫ್ ಕಾಮನ್ಸ್‌ನಲ್ಲಿ ಕ್ಷಮಾಪಣೆ ಕೇಳಬೇಕೆಂದು ಬಯಸಿದ್ದರು. ಇತರ ಅಲ್ಪಸಂಖ್ಯಾತ ಗುಂಪುಗಳ ವಿರುದ್ಧ ಐತಿಹಾಸಿಕ ಅನ್ಯಾಯಗಳಿಗಾಗಿ ಕೆನಡಾದ ಸರ್ಕಾರ ಕ್ಷಮೆಯಾಚಿಸಿದ್ದನ್ನು ನೆನಪಿಸಿ (ಭಾರತೀಯ ವಸತಿ ಶಾಲೆಗಳ ಮಾಜಿ ವಿದ್ಯಾರ್ಥಿಗಳ ವಿಷಯದಲ್ಲಿ ಸರ್ಕಾರ ಕ್ಷಮೆಯಾಚನೆ ಮಾಡಿದಂತೆ) ಕ್ಷಮಾಪಣೆ ಕೇಳಲಿ ಎನ್ನುವುದು ಅವರ ಆಗ್ರಹವಾಗಿತ್ತು. ಸಿಖ್ ಸಮುದಾಯದ ಆಗ್ರಹದಂತೆ 18 ಮೇ 2016ರಂದು, ಪ್ರಧಾನ ಮಂತ್ರಿ ಜಸ್ಟಿನ್ ಟ್ರುಡೊ ಅವರು ಹೌಸ್ ಆಫ್ ಕಾಮನ್ಸ್ ಮುಂದೆ ಈ ಘಟನೆಯ ಕ್ಷಮೆಯಾಚಿಸಿದರು. 'ಇಂದು ನಾನು ಹೇಳುವ ಯಾವ ಪದಗಳು ಕೂಡಾ ಕೊಮಗಟಮಾರು ಪ್ರಯಾಣಿಕರು ಅನುಭವಿಸಿದ ನೋವು, ಅವಮಾನದ ನೆನಪು ಅಳಿಸಲು ಅಸಾಧ್ಯ ಎಂದು ತಿಳಿದಿದ್ದರೂ ಪ್ರಾಮಾಣಿಕವಾಗಿ ಕ್ಷಮೆಯಾಚಿಸುವೆ' ಎಂದರು.

ಸ್ಮಾರಕ: 2012ರಲ್ಲಿ ವ್ಯಾಂಕೋವರ್‌ನ ಕೋಲ್ ಹಾರ್ಬರ್‌ನಲ್ಲಿರುವ ಕೊಮಗಟ ಮಾರು ಪ್ರಯಾಣಿಕರ ಗೌರವಾರ್ಥವಾಗಿ ಸ್ಮಾರಕವನ್ನು ಕೂಡಾ ನಿರ್ಮಿಸಲಾಗಿದೆ. ಮೇ 2021ರಲ್ಲಿ, ವ್ಯಾಂಕೋವರ್ ನಗರವು ಕೊಮಗಟ ಮಾರು ಘಟನೆಗೆ ವಿಷಾದವನ್ನು ವ್ಯಕ್ತಪಡಿಸಿತು. ಹೆಚ್ಚುವರಿಯಾಗಿ ಅಲ್ಲಿನ ಸಿಟಿ ಕೌನ್ಸಿಲ್ ಮೇ 23 ಅನ್ನು ಕೊಮಾಗಟ ಮಾರು ದಿನದ ಅಧಿಕೃತ ಸ್ಮರಣಾರ್ಥ ದಿನವೆಂದು ಘೋಷಿಸಿತು. ಅದೇ ವರ್ಷದ ಸೆಪ್ಟೆಂಬರ್‌ನಲ್ಲಿ, ನ್ಯೂ ವೆಸ್ಟ್‌ಮಿನಿಸ್ಟರ್ ನಗರವು ಕೂಡಾ ಔಪಚಾರಿಕವಾಗಿ ಕ್ಷಮಾಪಣೆಯನ್ನು ಕೇಳಿತು.

ದೇಶದಲ್ಲಿ ನಡೆದಿರಬಹುದಾದ ಐತಿಹಾಸಿಕ ಅನ್ಯಾಯಗಳ ಅರಿವು ಮೂಡಿಸಲು ಈ ಘಟನೆಯನ್ನು ಕೆನಡಾದಲ್ಲಿ ಒಂದು ಪ್ರಾಯಶ್ಚಿತದ ಘಟನೆಯಾಗಿ ಸ್ಮರಿಸಲಾಗುತ್ತಿದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ENGLISH

Second Language ENGLISH
There's a Girl by the Tracks!

3. Some details of Roma's brother are given paragraph 14. Read and fill in the columns appropriately.

Name	Job	Place	Vehicle

Ans:- (.........Contd)

Name	Job	Place	Vehicle
Dinesh Talreja	*Marketing*	*Retail outlet, Ulhasnagar*	*Motor cycle*

Share your responses

1)``Oh, I couldn't thank him," Baleshwar thought. Who do you think he couldn't?

Answer: Mr Baleshwar meant the Gujarati speaking middle aged driver of tempo truck who helped all he could, had gone away quietly.

2) Why did Baleshwar revisit the spot where Roma had fallen?

Answer: Mr Baleshwar revisited the spot where Ms Roma had fallen, to look for her belongings as her brother Dinesh Talreja had told him that her cell phone and hand bag are missing.

3) Baleshwar got some assurance from a railway employee. What was that?

Answer: Railway employee assured Mr. Baleshwar that some of the belongings of Ms Roma have been found.

4) Roma said. "I think it's astonishing". What was astonishing?

Answer: It is astonishing that a stranger would jump off a train running in an opposite direction on parallel tracks and risk his life to save Ms Roma lying by side of tracks unconscious and bleeding after fall from her train.

Think about the Text

1. **Some incidents relating to Roma Talreja are given below. Put them in the right order.**
   a. Roma lost her foothold
   b. The train hurtled ahead.
   c. Roma was thrown out of the coach.
   d. Roma was jammed between two women.
   e. Roma panicked

Answer: d, b, a, e, c.

2. **Baleshwar jumped into action to save the girl. His actions in doing so are given in a jumbled manner. Set them in the right sequence, as in the text.**
   a. Baleshwar crossed the track.
   b. He carried the girl.
   c. He saw the girl bleeding.
   d. He requested motorists to help him
   e. he prayed silently

Answer: c, e, b, a, d.

3. **Write briefly about the personal details such as qualification and Profession of Roma Talreja and Baleshwar Mishra after discussion with your classmates.**

Answer: Roma Talreja is a B Com graduate from Pune, had been working in a call centre in Mumbai since last two years. She loved her job of talking and connecting to customers and making new customers there. She used to have long phone chat with her fiancé Vijay.

Baleshwar Mishra is an unemployed high school dropout, who had recently come to Mumbai in search of a job. He lived with his two older brothers. His job hunt has proved fruitless and he had resigned to this fact that he was running out of options. He spent his day with a friend, had lunch and watched a movie.

4) "Take the girl to Airoli," suggested the cop. But Baleshwar disagreed. Why did he do so?

Answer: Baleshwar disagreed with the suggestion of the cop as Airoli was at least 10 km away and Baleshwar knew of a nearby small hospital just 10 minutes away.

5) Some incidents mentioned in paragraph 12 are given in jumbled order below. Arrange them sequentially.
   a. The on- duty physician advised Baleshwar to take Roma to a nearby hospital.
   b. Baleshwar and Roma Telreja arrived at small hospital.
   c. The nurses in the hospital helped Baleshwar to take the young women in.
   d. The hospital lacked the facility and personnel to treat Roma.

Answer: b, c, d, a.

6) Was Baleshwar right in asking Roma her name while she lay in critical condidtion? Justify your answer.

Answer: Baleshwar asked Roma her name only when she gained little conscience. He is correct to ask as he needed to inform her family for coming and taking care of her further treatment.

7) "Baleshwar had a good memory." Do you agree with this?

Answer: I agree that Baleshwar had a good memory. This was amply proved when he disagreed with the suggestion the cop's to take Roma to Airoli hospital which was at least 10 km away. But Baleshwar who had come to Mumbai for a job hunt, remembered a small hospital nearby.

8) The doctor at the Divine Multi- Speciality hospital admitted Roma without any formalities. What made him do so?

Answer: Dr Anil Agarwal, Medical Director seeing the extent of injuries, admitted Roma to ICU without any paper work. In accident injuries time is very vital. Hence preference is given for treatment and not for paper work.

9) If Baleshwar had not come forward to help Roma, what would have happened to her?

Answer: It is difficult to imagine what would have happened if Baleshwar had not come forward to help Roma. Her fall from train had resulted in bleeding head injury and she lost consciousness immediately after fall. She could have bled to death.

10) How did the truck driver help Baleshwar?

Answer: Baleshwar carried Roma from tracks to road in his hands and tried to stop innumerable vehicles passing on the road but none stopped to help. That's when a tempo truck stooped and its Gujarati speaking middle aged driver offered help to carry her to hospital.

II PUC BIOLOGY


REPRODUCTION

Reproduction in flowering plants

39. In the diagram given, show the path of a pollen tube from the pollen on the stigma into the embryo sac. Name the components of egg apparatus.




Ans:- **(a)**



(b) Components of Embryo Sac.
Oospore or egg and two synergids.


Human Reproduction

1. In the given T.S of human ovary, identify –
(i) Corpus luteum, (ii) Secondary oocyte (iii) Antrum, (iv) Primary follicle (v) Primary oocyte



Ans:- (i) Corpus luteum – d,
(ii) Secondary oocyte – c, (iii) Antrum – b,
(iv) Primary follicle – e,
(v) Primary oocyte – a

2. a) Write the correct sequence of the diagrams A,B, C.
b) Label (1) in A and write down its function.
c) Label (2) in B and write down its function.
d) Label (3) in C and write down its function.
e) What is place of fertilization in female reproductive tract?
f) At which stage implantation takes place?



Ans:- (a) The correct sequence is A, C, B
(b) (1) – acrosome. Possesses sperm lysins
(i) Hyaluronidase – for dissolution of cementing substance amongst corona cells.
(ii) Corona penetrating enzyme – for passage of sperms through corona
(iii) Acrosin or Zona Lysin – for passage through zona pellucida.
(c) (2) Tail of sperm – swimming of sperm
(d) (3) Middle piece of sperm – Mitochondria provides energy (e) Ampulla – isthmus junction
(f) Blastocyst stage.

3. Mention some of the differences between Cleavage and Mitosis.

Ans:- Differences between Cleavage & Mitosis

Cleavage	*Mitosis*
1. Interphase is short.	Is comparatively long
2. Newly formed cleavage cells or blastomeres do not grow in size.	Daughter cells formed after normal mitosis grow in size.
3. There is a progressive decrease in cell size.	Cell size is maintained. It becomes equal to that of parent cell.
4. DNA replication is normal but other cell constitutions are not much synthesized.	Both DNA replication and synthesis of protoplasmic constituents are accomplished.
5. There is increase in oxygen consumption.	There is no change in oxygen consumption.
6. Nucleocytoplasmic ratio increases.	Nucleocytoplasmic ratio is maintained.
7. Cleavage is special type of mitosis that occurs during early segmentation of zygote.	Normal mitosis that occurs during division of somatic cells of the body.
8. It is comparatively Rapid.	It is comparatively slow.
9. There is synchronization of divisions.	Synchronization of divisions is rare.

4. Mention some of the differences between Morula and Blastocyst.

Ans:- Differences between Morula & Blastocyst

(Contd……..)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಆರ್‌ಎಸ್‌ಎಸ್, ಎಬಿವಿಪಿ ಅಡ್ಡೆಯಾದ ಕೇಂದ್ರೀಯ ವಿವಿ: ಆರೋಪ

ಕುಲಪತಿ ವಿರುದ್ಧ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಜಿಲ್ಲೆಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ (ಸಿಯುಕೆ) ಆರ್‌ಎಸ್‌ಎಸ್ ಹಾಗೂ ಎಬಿವಿಪಿ ಚಟುವಟಿಕೆಗಳ ಅಡ್ಡೆಯಾಗಿದೆ. ಇದಕ್ಕೆ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಹಾಗೂ ಹಿಂದಿನ ಕುಲಸಚಿವ ಪ್ರೊ. ಬಸವರಾಜ ಪಿ.ಡೋಣೂರ ಅವರ ಸಹಕಾರವೂ ಇದೆ’ ಎಂದು ಆರೋಪಿಸಿ ‘ಕೋಮುವಾದ ಅಳಿಸಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಉಳಿಸಿ ಆಂದೋಲನ ಚಾಲನಾ ಸಮಿತಿ’ ನೇತೃತ್ವದಲ್ಲಿ ಬುಧವಾರ ವಿವಿಧ ದಲಿತ, ಪ್ರಗತಿಪರ ಸಂಘಟನೆಗಳು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದವು.

ವಿಶ್ವವಿದ್ಯಾಲಯದ ಮುಂಭಾಗದಲ್ಲೇ ಪ್ರತಿಭಟನಾ ಸಭೆ ನಡೆದಿದ್ದರಿಂದ ಕಲಬುರಗಿಯಿಂದ ಮಹಾರಾಷ್ಟ್ರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಸುಮಾರು ಮೂರು ಗಂಟೆ ಬಂದ್ ಆಗಿತ್ತು.

ವಿಶ್ವವಿದ್ಯಾಲಯ ಸಮೀಪದ ಕಡಗಂಚಿ ಗ್ರಾಮದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಯಿಂದ ವಿಶ್ವವಿದ್ಯಾಲಯ ಪ್ರವೇಶ ದ್ವಾರದವರೆಗೆ 4 ಕಿ.ಮೀ ಪ್ರತಿಭಟನಾ ಜಾಥಾ ನಡೆಯಿತು. 10ಕ್ಕೂ ಹೆಚ್ಚು ದಲಿತ, ಪ್ರಗತಿಪರ, ಎಡ ಮತ್ತು ಪ್ರಜಾಸತ್ತಾತ್ಮಕ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಒಗ್ಗೂಡಿ ಜಾಥಾ ನಡೆಸಿ, ಕುಲಪತಿ ಹಾಗೂ ಹಿಂದಿನ ಕುಲಸಚಿವರ ನಿಲುವಿನ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಆರ್‌ಎಸ್‌ಎಸ್ ಶಾಖಾ ಮತ್ತು ಧಾರ್ಮಿಕ ಆಚರಣೆಗಳನ್ನು ಕ್ಯಾಂಪಸ್‌ನಲ್ಲಿ ನಡೆಸಿ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಕಿರುಕುಳ ಕೊಡಲಾಗುತ್ತಿದೆ. ಇದನ್ನು ಪ್ರಶ್ನಿಸುವ ವಿದ್ಯಾರ್ಥಿಗಳ ಮೇಲೆ ಹುಸಿ ಆರೋಪ ಮಾಡಿ, ಪ್ರಕರಣಗಳನ್ನು ದಾಖಲಿಸಲಾಗಿದೆ. ಕೂಡಲೇ ಅವುಗಳನ್ನು ಹಿಂಪಡೆಯಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

‘ನೇಮಕಾತಿಯಲ್ಲಿ ಮೀಸಲಾತಿ ನಿಯಮ ಉಲ್ಲಂಘಿಸಲಾಗುತ್ತಿದೆ. ಈಚೆಗೆ ನಡೆದ ಸಹಾಯಕ ಮತ್ತು ಸಹ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಕರ್ನಾಟಕದ ಅರ್ಹ ಅಭ್ಯರ್ಥಿಗಳನ್ನು ಕಡೆಗಣಿಸಿ, ಆಂಧ್ರಪ್ರದೇಶ, ತೆಲಂಗಾಣ ರಾಜ್ಯಗಳ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಕ್ಯಾಂಪಸ್‌ನಲ್ಲಿ ನಡೆದ ಎಲ್ಲ ಘಟನೆಗಳ ಬಗ್ಗೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳಿಂದ ನ್ಯಾಯಾಂಗ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು.


‘ಆರ್‌ಎಸ್‌ಎಸ್, ಎಬಿವಿಪಿ ಹಿನ್ನೆಲೆಯ ವ್ಯಕ್ತಿಗಳನ್ನು ಆಗಾಗ ವಿಶ್ವವಿದ್ಯಾಲಯಕ್ಕೆ ಆಹ್ವಾನಿಸಿ ಸಭೆಗಳನ್ನು ಏರ್ಪಡಿಸಿ, ಕೋಮುವಾದವನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರಲ್ಲಿ ಅಭದ್ರತೆಯ ವಾತಾವರಣ ಮೂಡುತ್ತಿದೆ. ಕುಂಕುಮ ಹಚ್ಚಿಕೊಳ್ಳುವಂತೆ, ಬಳೆ ಹಾಕಿಕೊಳ್ಳುವಂತೆ ವಿದ್ಯಾರ್ಥಿನಿಯರಿಗೆ ಕಿರುಕುಳ ಕೊಡಲಾಗುತ್ತಿದೆ. ‘ಕಾಶ್ಮೀರಿ ಫೈಲ್’ ಸಿನಿಮಾ ನೋಡುವಂತೆ ಒತ್ತಡ ಹೇರಲಾಗುತ್ತಿದೆ’ ಎಂದು ಆರೋಪಿಸಿದರು.



‘ಕೋಮುವಾದ ಅಳಿಸಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಉಳಿಸಿ’ ಆಂದೋಲನದ ಅಂಗವಾಗಿ ಬುಧವಾರ ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಕಡಗಂಚಿ ಬಳಿ ವಿಶ್ವವಿದ್ಯಾಲಯದ ಎದುರು ವಿವಿಧ ಪ್ರಗತಿಪರ ಸಂಘಟನೆಗಳ ಸದಸ್ಯರು ಬೃಹತ್ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ನಾರಾಯಣ ರೈಗೆ ‘ರಂಗ ಗೌರವ ಪುರಸ್ಕಾರ’

ಪ್ರಜಾವಾಣಿ ವಾರ್ತೆ



ನಾರಾಯಣ ರೈ

ಮೈಸೂರು: ಪ್ರಸಕ್ತ ಸಾಲಿನ ‘ರಂಗ ಗೌರವ ಪುರಸ್ಕಾರ’ಕ್ಕೆ ರಂಗಕರ್ಮಿ ಎ.ನಾರಾಯಣ ರೈ ಅವರು ಆಯ್ಕೆಯಾಗಿದ್ದಾರೆ. ರಂಗಾಯಣದ ‘ನವರಾತ್ರಿ ರಂಗೋತ್ಸವ’ ಉದ್ಘಾಟನ ದಿನವಾದ ಅ.15ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ಎಸ್. ತಂಗಡಗಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಭೂತಕೋಲ, ಯಕ್ಷಗಾನ, ಬಯಲಾಟದ ಜೊತೆ ರಂಗಭೂಮಿಗೆ ಸಲ್ಲಿಸಿದ ನಾರಾಯಣ ರೈ ಅವರ ಕೊಡುಗೆ ಆಧರಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ಪ್ರಶಸ್ತಿಯು ₹ 10 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ ಎಂದು ರಂಗಾಯಣದ ಮಾಧ್ಯಮ ಪ್ರಕಟಣೆಯಲ್ಲಿ ವಿವರಿಸಲಾಗಿದೆ.

ಕಾಸರಗೋಡಿನ ಎಣ್ಮಕಜೆ ಗ್ರಾಮದವರಾದ ನಾರಾಯಣ ರೈ ಅವರು ಹುಣಸೂರಿನ ತಂಬಾಕು ಸಂಶೋಧನಾ ಮಂಡಲಿಯಲ್ಲಿ ನೌಕರರಾಗಿದ್ದುಕೊಂಡೇ ರಂಗಭೂಮಿಯನ್ನು ಕಟ್ಟಿದರು.

ನಾರಾಯಣ ರೈ ಅವರು ಪೌರಾಣಿಕ, ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸುತ್ತಾ ಬಂದವರು. ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ 8 ಎಕರೆ ಜಮೀನನ್ನು ಖರೀದಿಸಲು ನೆರವಾದರು ಎಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬೀದಿ ಕಸ ಗುಡಿಸಿದ ಡಿ.ಸಿ

ಪ್ರಜಾವಾಣಿ ವಾರ್ತೆ

ಕಾರವಾರ: ‘ಜನತಾ ದರ್ಶನ’ದ ಪ್ರಯುಕ್ತ ಮಂಗಳವಾರ ಶಿರಸಿ ತಾಲ್ಲೂಕಿನ ಬನವಾಸಿಯಲ್ಲಿ ತಂಗಿದ್ದ ಉತ್ತರ ಕನ್ನಡ ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ್ ಬುಧವಾರ ನಸುಕಿನಲ್ಲಿ ಬನವಾಸಿಯ ಮುಖ್ಯ ಬೀದಿಯಲ್ಲಿ ಸ್ವಚ್ಛತಾ ಶ್ರಮದಾನ ನಡೆಸಿದರು.

ಬನವಾಸಿಯ ಪರಿಶಿಷ್ಟ ಕಾಲೊನಿಗಳಲ್ಲಿ ಓಡಾಡಿದ ಅವರು ಜನರೊಂದಿಗೆ ಸರ್ಕಾರದ ಸೌಲಭ್ಯಗಳ ಕುರಿತು ಚರ್ಚಿಸಿದರು. ‘ಸರ್ಕಾರದ ಸೌಲಭ್ಯಗಳು ಅರ್ಹರಿಗೆ ತಲುಪುವಂತೆ ಕ್ರಮ ಕೈಗೊಳ್ಳಬೇಕು’ ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರ ರಾತ್ರಿ ಅವರು ಸ್ಥಳೀಯ ಅಂಬೇಡ್ಕರ್ ವಸತಿ ಶಾಲೆಯಲ್ಲಿ ವಾಸ್ತವ್ಯ ಮಾಡಿದ್ದರು. ವಿದ್ಯಾರ್ಥಿಗಳ ಕುಂದು ಕೊರತೆ ಆಲಿಸಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಪ್ರಕಾಶ್ ರಜಪೂತ್, ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.



ಉತ್ತರ ಕನ್ನಡ ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ್ ಅವರು ಶಿರಸಿ ತಾಲ್ಲೂಕಿನ ಬನವಾಸಿಯ ಮುಖ್ಯಬೀದಿಯಲ್ಲಿ ಬುಧವಾರ ನಸುಕಿನಲ್ಲಿ ಕಸ ಗುಡಿಸಿದರು

ಬಿಲ್ ಬಾಕಿ: ಆತ್ಮಹತ್ಯೆ ಯತ್ನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಲೋಕೋಪಯೋಗಿ (ಪಿಡಬ್ಲ್ಯುಡಿ) ಇಲಾಖೆಯಲ್ಲಿ ಮಾಡಿದ ಕಾಮಗಾರಿಗಳ ಬಿಲ್ ಬಾಕಿ ಉಳಿದ ಕಾರಣಕ್ಕೆ ಗುತ್ತಿಗೆದಾರ ನಾಗೇಶ್ ಭಾಂಗಿ ಬುಧವಾರ ಇಲಾಖೆಯ ಕಚೇರಿ ಆವರಣದಲ್ಲಿ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದರು.

ಇಲ್ಲಿನ ಕೋಟೆ ಆವರಣದಲ್ಲಿನ ಇಲಾಖೆಯ ಕಚೇರಿ ಆವರಣಕ್ಕೆ ಬಂದ ನಾಗೇಶ್, ಕಾರ್ಯಪಾಲಕ ಎಂಜಿನಿಯರ್ ಎಸ್.ಎಸ್. ಸೊಬರದ ಎದುರು ವಿಷ ಕುಡಿದರು. ಸುತ್ತಲಿದ್ದ ಕೆಲವರು ತಕ್ಷಣವೇ ಕೈಯಿಂದ ವಿಷದ ಬಾಟಲಿ ಕಿತ್ತುಕೊಂಡು, ಅವರನ್ನು ಆಸ್ಪತ್ರೆಗೆ ಕರೆದೊಯ್ದರು.

‘ಬೆಳಗಾವಿ ತಾಲ್ಲೂಕಿನ ಹಲಗಾ ಗ್ರಾಮದಿಂದ ಬೈಲಹೊಂಗಲ ತಾಲ್ಲೂಕಿನ ತಿಗಡಿಯವರೆಗೆ ₹6.50 ಲಕ್ಷ ವೆಚ್ಚದಲ್ಲಿ ರಸ್ತೆ ದುರಸ್ತಿ ಕಾಮಗಾರಿ ಮಾಡಿಸಿದ್ದಾರೆ. ವರ್ಷವಾದರೂ ಬಿಲ್ ನೀಡಿಲ್ಲ. ಇಲಾಖೆ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳಾದ ರಮೇಶ ಹೆಗಡೆ ಹಾಗೂ ಬಸವರಾಜ ಹಲಗಿ ಬಿಲ್ ಕೊಡದೇ ಕಿರುಕುಳ ನೀಡುತ್ತಿದ್ದಾರೆ’ ಎಂದು ನಾಗೇಶ್ ಆರೋಪಿಸಿದ್ದಾರೆ.

‘ನಾಗೇಶ್ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ನಾಗೇಶ್ ವಿರುದ್ಧ ಆತ್ಮಹತ್ಯೆ ಯತ್ನ ಪ್ರಕರಣ ದಾಖಲಿಸಲಾಗುವುದು. ಅವರು ದೂರು ನೀಡಿದರೆ, ಇಲಾಖೆ ಅಧಿಕಾರಿಗಳ ವಿರುದ್ಧವೂ ಪ್ರಕರಣ ದಾಖಲಿಸಲಾಗುವುದು’ ಎಂದು ಮಾರ್ಕೆಟ್ ಠಾಣೆ ಎಸಿಪಿ ನಾರಾಯಣ ಭರಮನಿ ‘ಪ್ರಜಾವಾಣಿ’ಗೆ ತಿಳಿಸಿದರು.

ಹಳಿ ತಪ್ಪಿದ ಆರು ಬೋಗಿ: 4 ಸಾವು

ಬಕ್ಸರ್ (ಬಿಹಾರ): ದೆಹಲಿ-ಕಾಮಾಕ್ಯ ನಾರ್ತ್ ಈಸ್ಟ್ ಎಕ್ಸ್‌ಪ್ರೆಸ್ ರೈಲಿನ ಆರು ಬೋಗಿಗಳು, ಬಕ್ಸರ್ ಜಿಲ್ಲೆಯ ರಘುನಾಥಪುರ ರೈಲು ನಿಲ್ದಾಣ ಬಳಿ ಬುಧವಾರ ಹಳಿ ತಪ್ಪಿದ್ದು, ಅವಘಡದಲ್ಲಿ [illegible] ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ರಾತ್ರಿ 9.35ರ ವೇಳೆಗೆ ಘಟನೆ ಸಂಭವಿಸಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ಎನ್‌ಡಿಟಿವಿ ವರದಿ ಮಾಡಿದೆ. ಸ್ಥಳಕ್ಕೆ ಆಂಬುಲೆನ್ಸ್ ಧಾವಿಸಿದ್ದು, ಪರಿಹಾರ ಕಾರ್ಯ ನಡೆದಿದೆ. ಸ್ಥಳದಿಂದ ಪ್ರಯಾಣಿಕರನ್ನು ಕರೆದೊಯ್ಯುವ ಸಲುವಾಗಿ ಪಟ್ನಾದಿಂದ ‘ಸ್ಕ್ರ್ಯಾಚ್ ರೇಕ್’ ತರಿಸಲಾಗಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಬಸವೇಶ್ವರರ ಭಾವಚಿತ್ರ ಅಲ್ಲಲ್ಲಿ ಸುಟ್ಟು ವಿಕೃತಿ

ಪ್ರಜಾವಾಣಿ ವಾರ್ತೆ

ವಾಡಿ (ಕಲಬುರಗಿ ಜಿಲ್ಲೆ): ಚಿತ್ತಾಪುರ ತಾಲ್ಲೂಕಿನ ವಾಡಿ ಸಮೀಪದ ಹಲಕರ್ಟಿ ಗ್ರಾಮದ ಕಟ್ಟೆಯ ಮುಂದೆ ಬಸವ ಜಯಂತಿಯಂದು ಅಳವಡಿಸಿದ್ದ ಫ್ಲೆಕ್ಸ್‌ನಲ್ಲಿದ್ದ ಬಸವೇಶ್ವರರ ಚಿತ್ರವನ್ನು ಮಂಗಳವಾರ ರಾತ್ರಿ ಅಲ್ಲಲ್ಲಿ ಸುಟ್ಟು ಕಿಡಿಗೇಡಿಗಳು ವಿಕೃತಿ ನಡೆಸಿದ್ದಾರೆ.

ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ವೀರಶೈವ- ಲಿಂಗಾಯತ ಸಮಾಜದವರು ಗ್ರಾಮದ ಬಳಿಯ ಕಲಬುರಗಿ-ಯಾದಗಿರಿ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ಸಂಚಾರವನ್ನು ಬುಧವಾರ ತಡೆದು ಪ್ರತಿಭಟನೆ ನಡೆಸಿದರು.

ಅಖಿಲ ಭಾರತ ವೀರಶೈವ-ಲಿಂಗಾಯತ ಟ್ರಸ್ಟ್ ವತಿಯಿಂದ ಬಸವೇಶ್ವರರ ಭಾವಚಿತ್ರವುಳ್ಳ ದೊಡ್ಡ ಫ್ಲೆಕ್ಸ್ ಕಟ್ಟಲಾಗಿತ್ತು. ರಾತ್ರಿ ವೇಳೆ ಕಿಡಿಗೇಡಿಗಳು ಪೋಟೊದ ಹಲವೆಡೆ ಸುಟ್ಟಿದ್ದಾರೆ. ಇದನ್ನು ಗಮನಿಸಿದ ಸ್ಥಳೀಯರು ಪ್ರತಿಭಟನೆ ನಡೆಸಿ, ಆರೋಪಿಗಳ ಪತ್ತೆಗೆ ಆಗ್ರಹಿಸಿದರು.



ವರ್ಗಕ್ಕೆ ಬ್ಲ್ಯಾಕ್‌ಮೇಲ್: ಕಾಂಗ್ರೆಸ್ ಶಾಸಕರ ಪಿ.ಎ ವಿರುದ್ಧ ದೂರು

ಒಂದನೇ ಪುಟದಿಂದ...

‘ಸಚಿವರ ನಿರ್ದೇಶನದ ಮೇರೆಗೆ ಕೆಲಸ ನಿರ್ವಹಣೆ ಮಾಡುತ್ತಿದ್ದೇನೆ. [illegible] ಸಚಿವಾಲಯದ ಹಂತದಲ್ಲಿ ಸರಿಯಾಗಿ ಪ್ರಸ್ತಾವಗಳನ್ನು ಪರಿಶೀಲಿಸಲು ಬಿಡದೆ ಅನುಮತಿ ನೀಡುವಂತೆ ಒತ್ತಾಯಿಸುತ್ತಿದ್ದಾರೆ’ ಎಂದು ದೂರಿನಲ್ಲಿ ಹಿದಾಯತ್ ಉಲ್ಲಾ ಅವರು ಉಲ್ಲೇಖಿಸಿದ್ದಾರೆ.

‘ಕೆಲವು ಅಧಿಕಾರಿಗಳನ್ನು ಸೂಚಿಸಿದ ಜಾಗಕ್ಕೆ ವರ್ಗಾವಣೆ ಮಾಡುವಂತೆ ಬೆದರಿಸುತ್ತಿದ್ದಾರೆ. ವರ್ಗಾವಣೆ ದಂಧೆಯಲ್ಲಿ ಪ್ರಕಾಶ್ ಭಾಗಿಯಾಗಿರುವ ಅನುಮಾನ ಇದೆ’ ಎಂದು ದೂರಿದ್ದಾರೆ.

[illegible] ಒಡ್ಡಿದ್ದಾರೆ. ಕಚೇರಿಯಲ್ಲಿ ನಾನಿಲ್ಲದ ವೇಳೆಯಲ್ಲಿ ಬಂದು, ಸಿಬ್ಬಂದಿ ಎದುರು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಅಲ್ಲದೇ, ಮಾಧ್ಯಮಗಳಲ್ಲಿ ಅಪಪ್ರಚಾರ ನಡೆಸುವುದಾಗಿಯೂ ಬೆದರಿಸಿದ್ದಾರೆ’ ಎಂದು ದೂರಿನಲ್ಲಿ ಹೇಳಿದ್ದಾರೆ.



ಸುಭಾಷಿತ

ನಮಗೆ ಗಾಳಿ ಹಾಗೂ ಸಸ್ಯಗಳಿಗೆ ಬೆಳಕು ಹೇಗೋ ಹಾಗೇ ಮೌನವೂ ನಮಗೆ ಅತ್ಯವಶ್ಯಕ. ನಮ್ಮ ಮನಸ್ಸು ಪದಗಳು ಮತ್ತು ಚಿಂತನೆಗಳಿಂದ ತುಂಬಿಹೋಗಿದ್ದರೆ, ನಮ್ಮತನಕ್ಕೆ ಅಲ್ಲಿ ಜಾಗವೇ ಇರುವುದಿಲ್ಲ.

-ನಾಟ್ ಹಾನ್

ಉದ್ಯೋಗ ಸೃಷ್ಟಿ ಇಲ್ಲದ ಬೆಳವಣಿಗೆ ಕಾರ್ಯತಂತ್ರಗಳ ಪುನರವಲೋಕನ ಬೇಕು

ಅಗತ್ಯ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಸುವಲ್ಲಿ ವಿಫಲವಾಗಿರುವುದು ಭಾರತದ ಅರ್ಥವ್ಯವಸ್ಥೆಯ ದೌರ್ಬಲ್ಯಗಳ ಪೈಕಿ ಒಂದು. ಈ ದೌರ್ಬಲ್ಯವು ಈಗಲೂ ಮುಂದುವರಿದಿದೆ ಎಂಬುದನ್ನು ಅಂಕಿ-ಅಂಶಗಳು ಹೇಳುತ್ತಿವೆ. ದೇಶದ ಜನಸಂಖ್ಯೆ ಮತ್ತು ದುಡಿಯುವ ವಯಸ್ಸಿನ ಜನರ ಸಂಖ್ಯೆಯು ಹೆಚ್ಚಾಗುತ್ತ ಸಾಗಿದ್ದರೂ, ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ಪ್ರಮಾಣಕ್ಕೆ ಅನುಗುಣವಾಗಿ ದೇಶದಲ್ಲಿ ಉದ್ಯೋಗ ಸೃಷ್ಟಿ ಆಗಿಲ್ಲ. ಇದರ ಪರಿಣಾಮವಾಗಿ ದೇಶದ ಜಿಡಿಪಿ ಬೆಳವಣಿಗೆಯ ಫಲವು ಬಹುಪಾಲು ಮಂದಿಗೆ ದೊರೆಯದಂತೆ ಆಗಿದೆ. ಬೇರೆ ಬೇರೆ ಅಂಕಿ-ಅಂಶಗಳನ್ನು ಆಧರಿಸಿ ಈ ಸಮಸ್ಯೆಯ ವಿಭಿನ್ನ ಮುಖಗಳ ಅಧ್ಯಯನದ ಯತ್ನಗಳು ನಡೆದಿವೆ. ಇದರಲ್ಲಿ ಅರ್ಥಶಾಸ್ತ್ರ ಮಾತ್ರವೇ ಅಲ್ಲದೆ ಬೇರೆ ಬೇರೆ ಜ್ಞಾನಶಾಖೆಗಳ ತಜ್ಞರೂ ತೊಡಗಿಸಿಕೊಂಡಿದ್ದಾರೆ. ಈಚಿನ ವರ್ಷಗಳಲ್ಲಿ ಉದ್ಯೋಗ ಮಾರುಕಟ್ಟೆಯಲ್ಲಿ ಗಮನಾರ್ಹ ಬದಲಾವಣೆಗಳು ಆಗಿವೆ. ಇದನ್ನು ಅರ್ಥ ಮಾಡಿಕೊಳ್ಳಬೇಕಿರುವುದು ಮುಖ್ಯ. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ನಡೆಸಿರುವ ಅಧ್ಯಯನವೊಂದು ವಿಭಿನ್ನ ಮೂಲಗಳಿಂದ ಪಡೆದ ಮಾಹಿತಿ ಆಧರಿಸಿ ಇದನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ನಡೆಸಿದೆ. ಕಾರ್ಮಿಕರ ಸಮೀಕ್ಷೆ, ಕೈಗಾರಿಕೆಗಳ ವಾರ್ಷಿಕ ಸಮೀಕ್ಷೆ, ಆರ್ಥಿಕ ಗಣತಿ, ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಸೇರಿದಂತೆ ಸರ್ಕಾರದ ಹಲವು ಸಮೀಕ್ಷೆಗಳ ವರದಿಗಳಲ್ಲಿನ ಮಾಹಿತಿಯನ್ನು ಅದು ಬಳಸಿಕೊಂಡಿದೆ.



ದೇಶದ ಆರ್ಥಿಕ ಬೆಳವಣಿಗೆಗೆ ಸಂಬಂಧಿಸಿದ ಕಾರ್ಯತಂತ್ರಗಳ ಪುನರ್ ಪರಿಶೀಲನೆ ಅಗತ್ಯ ಎಂಬುದನ್ನು ಅಧ್ಯಯನ ಹೇಳುತ್ತಿದೆ

ಯುವ ಪದವೀಧರರ ನಿರುದ್ಯೋಗ ಪ್ರಮಾಣವು ಪ್ರವೇಶ ಹಂತದಲ್ಲಿ ಶೇಕಡ 42ರಷ್ಟು ಇದೆ ಎಂದು ವಿಶ್ವವಿದ್ಯಾಲಯದ ಅಧ್ಯಯನವು ಹೇಳಿದೆ. ತುಸು ಜಾಸ್ತಿ ವಯಸ್ಸಾದವರು ಹಾಗೂ ಕಡಿಮೆ ಶಿಕ್ಷಣ ಪಡೆದವರ ಸ್ಥಿತಿ ಉತ್ತಮವಾಗಿದೆ. ಇದರ ಅರ್ಥ ಏನೆಂದರೆ, ಯುವ ಪದವೀಧರರ ಬಳಿ ಸರಿಯಾದ ಹಾಗೂ ಅಗತ್ಯವಾದ ಕೌಶಲಗಳು ಇಲ್ಲ ಅಥವಾ ಸುಶಿಕ್ಷಿತರಿಗೆ ಅಗತ್ಯ ಪ್ರಮಾಣದಲ್ಲಿ ಉದ್ಯೋಗ ಅವಕಾಶಗಳು ಸೃಷ್ಟಿಯಾಗುತ್ತಿಲ್ಲ. ಇವೆರಡೂ ಮಾತುಗಳಲ್ಲಿ ಸತ್ಯ ಇರಬಹುದು. ಆದರೆ ಈ ಪರಿಸ್ಥಿತಿಯು ದೇಶದ ಅರ್ಥ ವ್ಯವಸ್ಥೆಯ ಮೇಲೆ ಹಾಗೂ ದೇಶದ ಶಿಕ್ಷಣ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ. ಉದ್ಯೋಗಗಳ ಸ್ವರೂಪವು ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳಿಂದ, ಕೃಷಿಯೇತರ ಚಟುವಟಿಕೆಗಳತ್ತ ಬದಲಾವಣೆ ಕಾಣುತ್ತಿದೆ. ಆದರೆ ಕೃಷಿ ಕ್ಷೇತ್ರದಿಂದ ಇತರ ಕ್ಷೇತ್ರಗಳಿಗೆ ಉದ್ಯೋಗ ಅರಸಿ ಬರುವವರಿಗೆ ಸಿಗುತ್ತಿರುವುದು ಕಡಿಮೆ ವೇತನ ನೀಡುವ ಕೆಲಸಗಳು ಮಾತ್ರ. ಪುರುಷರು ಕಟ್ಟಡ ನಿರ್ಮಾಣ ಕ್ಷೇತ್ರದ ಕಡೆ ಮುಖ ಮಾಡುತ್ತಿದ್ದಾರೆ. ಮಹಿಳೆಯರು ಉತ್ಪಾದನಾ ಕ್ಷೇತ್ರದಲ್ಲಿ ಕೆಲಸ ಕಂಡುಕೊಳ್ಳುತ್ತಿದ್ದಾರೆ. ದೇಶದ ಗ್ರಾಮೀಣ ಪ್ರದೇಶಗಳಲ್ಲಿ 2000ನೇ ಇಸವಿಯಲ್ಲಿ ದುಡಿಮೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಪ್ರಮಾಣವು ಶೇಕಡ 40ಕ್ಕಿಂತ ಹೆಚ್ಚು ಇದ್ದುದು, ಈಗ ಶೇಕಡ 28ರ ಮಟ್ಟಕ್ಕೆ ಕುಸಿದಿದೆ. ಮಹಿಳಾ ಕಾರ್ಮಿಕರ ಪಾಲ್ಗೊಳ್ಳುವಿಕೆಯ ಪ್ರಮಾಣ ಹಾಗೂ ಒಟ್ಟಾರೆಯಾಗಿ ಕಾರ್ಮಿಕರ ಪಾಲ್ಗೊಳ್ಳುವಿಕೆಯ ಪ್ರಮಾಣ ಕಡಿಮೆ ಇರುವುದು ದೇಶದ ಅರ್ಥವ್ಯವಸ್ಥೆಯ ಪ್ರಮುಖ ದೌರ್ಬಲ್ಯಗಳಲ್ಲಿ ಒಂದು.

ಕೆಲವು ವರ್ಷಗಳ ಅವಧಿಯಲ್ಲಿ ಕಾರ್ಮಿಕರ ಸ್ಥಿತಿಗತಿಯಲ್ಲಿ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಸುಧಾರಣೆಗಳು ಕಂಡುಬಂದಿರುವುದು ಈ ಅಧ್ಯಯನದ ಪ್ರಮುಖ ಅಂಶಗಳಲ್ಲಿ ಒಂದು. ಕೂಲಿಕಾರ್ಮಿಕರ ಗಂಡುಮಕ್ಕಳು ನೌಕರಿಗೆ ಭದ್ರತೆ ಇಲ್ಲದ ಕಡೆಗಳಲ್ಲಿ ಕೆಲಸ ಮಾಡುವುದು 2004ರಲ್ಲಿ ಶೇ 80ರಷ್ಟು ಇತ್ತು. ಈ ಪ್ರಮಾಣವು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳನ್ನು ಹೊರತುಪಡಿಸಿದ ಸಮುದಾಯಗಳಲ್ಲಿ 2018ರಲ್ಲಿ ಶೇ 53ಕ್ಕೆ ಇಳಿಕೆಯಾಗಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿದ ಕಾರ್ಮಿಕರಲ್ಲಿಯೂ ಈ ಪ್ರಮಾಣದಲ್ಲಿ ಸುಧಾರಣೆ ಕಂಡುಬಂದಿದೆ. ಆದರೆ ಸುಧಾರಣೆಯ ಪ್ರಮಾಣ ಕಡಿಮೆ ಇದೆ. ಜಿಡಿಪಿ ಬೆಳವಣಿಗೆಯು ದೇಶದಲ್ಲಿ ಉದ್ಯೋಗ ಸೃಷ್ಟಿಗೆ ಅಗತ್ಯ ಪ್ರಮಾಣದಲ್ಲಿ ನೆರವಾಗಿಲ್ಲ ಎಂಬ ಮಾತಿಗೆ ಈ ಅಧ್ಯಯನವು ಪೂರಕ ವಿವರಗಳನ್ನು ಒದಗಿಸಿದೆ. ಇದು, ದೇಶದ ಆರ್ಥಿಕ ಬೆಳವಣಿಗೆಗೆ ಸಂಬಂಧಿಸಿದ ಕಾರ್ಯತಂತ್ರಗಳ ಪುನರ್ ಪರಿಶೀಲನೆ ಅಗತ್ಯ ಎಂಬುದನ್ನು ಹೇಳುತ್ತಿದೆ. ಮುಂದಿನ ವರ್ಷಗಳಲ್ಲಿ ದೇಶದ ಜನಸಂಖ್ಯೆಯು ಹೆಚ್ಚಾಗಲಿರುವ ಕಾರಣ ಇದು ಇನ್ನಷ್ಟು ಮಹತ್ವದ್ದಾಗುತ್ತದೆ.

ದಿನದ ಟ್ವೀಟ್

ಈ ಸಂಕಟ ಕೇಳುವವರಿಲ್ಲವೇ?

ಒಂದುವೇಳೆ ತಾವು ಹತ್ಯೆಗೊಳಗಾದರೆ ತಮ್ಮ ದೇಹ ಉಡುಪಿನಿಂದ ಆವೃತವಾಗಿರಲಿ ಎಂಬ ಕಾರಣಕ್ಕೆ, ಗಾಜಾದಲ್ಲಿನ ಮಹಿಳೆಯರು ತಮ್ಮ ಮನೆಗಳಲ್ಲೇ ಸಂಪೂರ್ಣವಾಗಿ ಹಿಜಾಬ್ ಧರಿಸಿಕೊಳ್ಳುತ್ತಿದ್ದಾರೆ. ತಮ್ಮವರನ್ನು ಹುಡುಕುವ ಆಘಾತಕಾರಿ ಸ್ಥಿತಿ ತಮಗೆ ಬಾರದಿರಲಿ, ಸತ್ತರೆ ಎಲ್ಲರೂ ಸಾಯಬೇಕು ಎಂದು ನಿರ್ಧರಿಸಿಕೊಂಡು ಕುಟುಂಬಗಳು ಒಂದೇ ಸ್ಥಳದಲ್ಲಿ ಆಶ್ರಯ ಪಡೆಯುತ್ತಿವೆ. ಇಂತಹ ಸ್ಥಿತಿಯನ್ನು ಕೇಳಿದರೂ ಸಾಕು ಹೇಳಲಾರದಷ್ಟು ಸಂಕಟ ಆಗುತ್ತದೆ.



ರುವೈದ ಅಬ್ದೆಲ್‌ಅಜೀಜ್, ಪತ್ರಕರ್ತೆ, ನ್ಯೂಯಾರ್ಕ್

ಕಿಡಿನುಡಿ

ಗಣಿತಕ್ಕೆ ಸಂಬಂಧಿಸಿದ ಒಂದು ಪ್ರಶ್ನೆ: 2010ರ 'ಪ್ರಚೋದನಕಾರಿ ಭಾಷಣ'ಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಅರುಂಧತಿ ರಾಯ್ ಅವರ ವಿಚಾರಣೆಗೆ ದೆಹಲಿ ಲೆಫ್ಟಿನೆಂಟ್ ಗವರ್ನರ್ 2023ರಲ್ಲಿ ಅನುಮತಿ ನೀಡುವುದಾದರೆ, 2023ರಲ್ಲಿ ಮಾಡುವ ಪ್ರಚೋದನಕಾರಿ ಭಾಷಣಗಳ ವಿಚಾರಣೆಗೆ ಅನುಮತಿ ನೀಡಲು ಎಷ್ಟು ಸಮಯ ಬೇಕಾಗಬಹುದು ಎಂಬುದನ್ನು ಲೆಕ್ಕ ಹಾಕಿ.



ಉರ್ವೀಶ್ ಕೊಠಾರಿ, ಲೇಖಕ

25 ವರ್ಷಗಳ ಹಿಂದೆ — ಸೋಮವಾರ, 12-10-1998

• ದಳ ಶಾಸಕಾಂಗ ಪಕ್ಷದ ಸಭೆಗೆ ಪಟೇಲ್ ನಕಾರ

ಬೆಂಗಳೂರು, ಅ. 11– ಭಿನ್ನಮತೀಯ ಶಾಸಕರು ನೀಡಿರುವ ಗಡುವಿನಂತೆ ಜನತಾದಳ ಶಾಸಕಾಂಗ ಪಕ್ಷದ ಸಭೆ ಕರೆಯಲು ನಿರಾಕರಿಸಿದ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ಈ ತಿಂಗಳ 29ರಂದೇ ವಿಧಾನಮಂಡಲದ ಅಧಿವೇಶನ ಕರೆಯಲು ತೀರ್ಮಾನಿಸಿದ್ದಾರೆ.

ಅಲ್ಲಿಯೇ ಪಕ್ಷದ ಆಂತರಿಕ ವಿಚಾರ ಚರ್ಚಿಸಬಹುದೆಂಬ ನಿಲುವು ಅವರದು.

ಭಿನ್ನರ ಪಟ್ಟು: ದೆಹಲಿ ರಾಜ್ಯದ ಬಿಜೆಪಿ ಮುಖ್ಯಮಂತ್ರಿಯ ನಾಟಕೀಯ ಬದಲಾವಣೆಯಿಂದ ಪುಳಕಿತಗೊಂಡಿರುವ ರಾಜ್ಯದ ಆಡಳಿತ ಪಕ್ಷದ ಭಿನ್ನಮತೀಯ ಶಾಸಕರು, ಇದೇ ತಿಂಗಳ 20ರೊಳಗೆ ಜನತಾದಳದ ಶಾಸಕಾಂಗ ಪಕ್ಷದ ಸಭೆ ಕರೆಯಬೇಕೆಂಬ ಬೇಡಿಕೆಯನ್ನು ಸಡಿಲಗೊಳಿಸಿದ್ದರೂ, ನಾಯಕತ್ವ ಬದಲಾವಣೆಗೆ ಪಟ್ಟು ಹಿಡಿಯುವ ಸಂಭವವಿದೆ.

• ನಗರದಲ್ಲಿ ವಾರ್ಷಿಕ ಸರಾಸರಿ ದಾಟಿದ ಮಳೆ

ಬೆಂಗಳೂರು, ಅ. 11– ವರ್ಷ ಕೊನೆಗೊಳ್ಳಲು ಎರಡು ತಿಂಗಳು ಉಳಿದಿರುವಂತೆ ನಗರದಲ್ಲಿ ಬಿದ್ದಿರುವ ಮಳೆ ಪ್ರತಿ ವರ್ಷದ ಸರಾಸರಿಯನ್ನು ಮೀರಿದೆ.

ಪ್ರತಿ ವರ್ಷ ಬೆಂಗಳೂರು ನಗರ ಜಿಲ್ಲೆಯಲ್ಲಿ ಸರಾಸರಿ 89 ಸೆಂ.ಮೀ ಮಳೆಯಾಗುತ್ತಿತ್ತು. ಈ ಬಾರಿ ಈಗಾಗಲೇ ಸರಾಸರಿ ಮೊತ್ತವನ್ನು ಮೀರಿದ್ದು, ಒಟ್ಟು 115 ಸೆಂ.ಮೀ ಮಳೆಯಾಗಿದೆ. ಬೆಂಗಳೂರಿನಲ್ಲಿ ಈ ತಿಂಗಳಲ್ಲಿ ಒಟ್ಟು 24 ಸೆಂ.ಮೀ ಮಳೆ ದಾಖಲಾಗಿದೆ.

50 ವರ್ಷಗಳ ಹಿಂದೆ — ಶುಕ್ರವಾರ, 12-10-1973

• ಅತಿ ಜರೂರು ವಿಷಯಕ್ಕೆ ಮಾತ್ರ ಸುಗ್ರೀವಾಜ್ಞೆ

ಬೆಂಗಳೂರು, ಅ.11– ಸುಗ್ರೀವಾಜ್ಞೆ ಹೊರಡಿಸುವ ಅಧಿಕಾರವನ್ನು ಸಂವಿಧಾನವು ಕಾರ್ಯಾಂಗಕ್ಕೆ ನೀಡಿದ್ದರೂ ಅದನ್ನು ಅತಿ ಜರೂರಾಗಿ ಆಗಬೇಕಾದ ವಿಚಾರಗಳಿಗೆ ಮಾತ್ರ ಬಳಸಬೇಕೆಂದು ಇಂದು ವಿಧಾನ ಪರಿಷತ್‌ನಲ್ಲಿ ಸಭಾಪತಿ ಎಸ್.ಡಿ.ಗಾಂವ್‌ಕರ್ ಅವರು ಸರ್ಕಾರಕ್ಕೆ ಆದೇಶ ನೀಡಿದರು.

ನಾಲ್ಕು ವಾರಗಳಲ್ಲಿ ನಾಲ್ಕು ಸುಗ್ರೀವಾಜ್ಞೆಗಳನ್ನು ಹೊರಡಿಸಿ ಪ್ರಜಾಪ್ರಭುತ್ವವನ್ನು ಸರ್ಕಾರ ಕಡೆಗಣಿಸಿದೆಯೆಂದು ಆಕ್ಷೇಪಿಸಿ, ಸರ್ಕಾರಿ ಸೇವೆಗಳಿಗೆ ಸಂಬಂಧಿಸಿದ ವಿಧೇಯಕದ ಮಂಡನೆಯ ಬಗ್ಗೆ ವಿರೋಧ ಪಕ್ಷದ ನಾಯಕ ರಾಮಕೃಷ್ಣ ಹೆಗಡೆ ಅವರು ಕಳುಹಿಸಿದ್ದ ಹಕ್ಕಿನ ಲೋಪ ಸೂಚನೆಯನ್ನು ಸಭಾಪತಿ ತಳ್ಳಿ ಹಾಕಿದರು.

• ಸರ್ಕಾರಿ ಬಸ್ ಪ್ರಯಾಣ ದುಬಾರಿ

ಬೆಂಗಳೂರು, ಅ.11– ಈ ತಿಂಗಳ 15ರಿಂದ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿನ ಸರ್ಕಾರಿ ಬಸ್‌ಗಳಲ್ಲಿ ಪ್ರಯಾಣ ದರ ಶೇ 10ರಷ್ಟು ಹೆಚ್ಚಲಿದೆ.

ಸದ್ಯಕ್ಕೆ ಪ್ರತಿ ಸೀಟಿಗೆ ಇರುವ 25 ಪೈಸೆ ರಿಸರ್ವೇಷನ್ ದರವನ್ನು 50 ಪೈಸೆಗೆ ಹೆಚ್ಚಿಸಲು ಅದು ನಿರ್ಧರಿಸಿದೆ.

ಪರಿಷ್ಕೃತ ದರಗಳು ಲಕ್ಷುರಿ ಬಸ್ ಪ್ರಯಾಣಕ್ಕೆ ಅನ್ವಯಿಸುವುದಿಲ್ಲ. ವಿದ್ಯಾರ್ಥಿಗಳಿಗೆ, ಪತ್ರಕರ್ತರಿಗೆ ನೀಡಲಾಗಿರುವ ರಿಯಾಯಿತಿ ಬಸ್ ಸೌಲಭ್ಯ ಪ್ರಯಾಣದ ದರಗಳು ಮುಂದುವರಿಯುವುವು.

ಸರ್ಕಾರಕ್ಕೆ ಧಾರಾಳ ದೇಣಿಗೆ ಕೊಟ್ಟು ವಿಜ್ಞಾನವನ್ನೂ ಮೂಲೆಗೊತ್ತಬಹುದು

ಊರುಕೇರಿಗೆ ಕಲ್ನಾರಿನ ಹೆಮ್ಮಾರಿ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಸಿಡಿಮದ್ದಿನ ಶೋಧದಿಂದಾಗಿ 'ಲಕ್ಷಾಂತರ ಜನರ ದಾರುಣ ಸಾವಿಗೆ ಕಾರಣನಾದ ಆಲ್‌ಫ್ರೆಡ್ ನೊಬೆಲ್ ನಿಧನ' ಎಂದು 1888ರಂದು ಫ್ರೆಂಚ್ ಪತ್ರಿಕೆಯೊಂದು ವರದಿ ಮಾಡಿತು. ಆದರೆ ಸತ್ತ ವ್ಯಕ್ತಿ ಆಲ್‌ಫ್ರೆಡ್ ಆಗಿರಲಿಲ್ಲ. ಆತನ ಅಣ್ಣ ಲೂಡ್ವಿಗ್ ನೊಬೆಲ್ ಅಂದು ಗತಿಸಿದ್ದ. ತನಗೆ 'ಸಾವಿನ ವ್ಯಾಪಾರಿ' ಎಂಬ ಕಳಂಕ ಬಂತೆಂದು ಆಲ್‌ಫ್ರೆಡ್ ವ್ಯಥಿಸಿ, ಅಂದೇ ತನ್ನೆಲ್ಲ ಸಂಪತ್ತನ್ನೂ ಮನುಕುಲದ ಒಳಿತಿಗೆ ಮೀಸಲಿಡಲು ನಿರ್ಧರಿಸಿ 'ನೊಬೆಲ್ ಪ್ರಶಸ್ತಿ'ಗಳನ್ನು ಹುಟ್ಟುಹಾಕಿದ.

ಈ ಘಟನೆಯನ್ನೇ ತುಸು ಹಿಂದುಮುಂದಾಗಿ ನೆನಪಿಸುವಂಥ ಇನ್ನೊಂದು ಸಂಗತಿ ಇಲ್ಲಿದೆ: ಸ್ವಿಟ್ಜರ್ಲೆಂಡಿನ ಶತಕೋಟ್ಯಧೀಶ ಉದ್ಯಮಿ ಸ್ಟೀಫನ್ ಶ್ಮಿಧೇನಿ ಎಂಬಾತನಿಗೆ ಇತ್ತೀಚೆಗೆ (7 ಜೂನ್) ಇಟಲಿಯ ನ್ಯಾಯಾಲಯ 12 ವರ್ಷಗಳ ಜೈಲುಶಿಕ್ಷೆ ವಿಧಿಸಿತು. ಆತ ಹಿಂದೆ ಅಲ್ಲಿ 40 ವರ್ಷ ಕಲ್ನಾರಿನ (ಆಸ್‌ಬೆಸ್ಟಾಸ್) ಉದ್ಯಮವನ್ನು ನಡೆಸಿದ್ದ. ಜನರನ್ನು ಸಾವಿನ ಮನೆಗೆ ದೂಡಬಲ್ಲ ಉದ್ಯಮ ಅದು. ಅದರ ಲಾಭದಲ್ಲಿ ಶ್ಮಿಧೇನಿ ಕುಟುಂಬ ಲೋಕಕಲ್ಯಾಣಕ್ಕೆಂದು ಭಾರೀ ಹಣವನ್ನೂ ಪ್ರಶಸ್ತಿಗಳನ್ನೂ ವಿತರಿಸುತ್ತಿತ್ತು (ಅಂಥ ಪ್ರಶಸ್ತಿಯನ್ನು ಪಡೆದವರಲ್ಲಿ ಕನ್ನಡದ ಹೆಮ್ಮೆಯ ಸಾಫ್ಟ್‌ವೇರ್ ಉದ್ಯಮಿಯೊಬ್ಬರ ಹೆಸರೂ ಇದೆ). ಅದನ್ನೆಲ್ಲ ಕಡೆಗಣಿಸಿ, ಇಟಲಿಯ 392 ಜನರ ಸಾವಿಗೆ ಕಾರಣನೆಂದು ಈತನಿಗೆ ಶಿಕ್ಷೆ ಘೋಷಿಸಲಾಯಿತು.

ಕಲ್ನಾರಿಗೆ ಕರಾಳ ಇತಿಹಾಸ ಇದೆ. ಕೆರೆಸಿದಷ್ಟೂ ನಾರುನಾರು ಎಳೆಗಳನ್ನು ಬಿಡುವ ಬಂಡೆಯಂಥ ಅದುರನ್ನು ಭೂಮಿಯಿಂದ ತೆಗೆದು ಅದರ ದಾರದಿಂದ ದೊರಗು ಬಟ್ಟೆಯನ್ನು ತಯಾರಿಸಿದರೆ ಅದನ್ನು ತೊಟ್ಟು ಬೆಂಕಿಯ ನಡುವೆ ಕೂಡ ಹೋಗಬಹುದು. ಅಂಥ ನಾರನ್ನು ಜಲ್ಲಿ, ಸುಣ್ಣ, ಸಿಮೆಂಟ್ ಸೇರಿಸಿ ಚಾವಣಿಗೆ ಹೊದೆಸಬಹುದು. ಶಾಖನಿರೋಧಕ ಪೈಪ್‌ಗಳನ್ನೂ ತಯಾರಿಸಬಹುದು. ಹಡಗುಗಳ ನಿರ್ಮಾಣಕ್ಕಂತೂ ಅತ್ಯುತ್ತಮ ಕಚ್ಚಾವಸ್ತು ಆಗಿತ್ತದು.

ಆದರೆ ಅದಕ್ಕೊಂದು ದುರ್ಗುಣ ಇದೆ. ಅಗೆಯುವಾಗ, ಕುಟ್ಟುವಾಗ, ಕತ್ತರಿಸುವಾಗ ಏಳುವ ದೂಳಿನಲ್ಲಿ ಕಣ್ಣಿಗೆ ಕಾಣದಷ್ಟು ಸೂಕ್ಷ್ಮ ಸೂಜಿಯಂಥ ಕಣಗಳು ಹೊಮ್ಮುತ್ತವೆ. ಅವು ನಮ್ಮ ಶ್ವಾಸಕೋಶದ ಆಳಕ್ಕೆ, ತೀರ ಆಳಕ್ಕೆ ಹೋಗಿ ಕೂತಾಗ ಅಲ್ಲಿ ಹುಣ್ಣುಗಳಾಗುತ್ತವೆ. ಕೀವಾಗಿ ಅಲ್ಲೇ ಕ್ಯಾನ್ಸರ್ ರೋಗಕ್ಕೆ ಕಾರಣವಾಗುತ್ತದೆ. ಅದಕ್ಕೆ 'ಶ್ವಾಸಕೋಶದ ಮೆಸೊಥೀಲಿಯೊಮಾ' ಎಂತಲೇ ಹೆಸರಿದೆ. ಈ ಕಾಯಿಲೆಗೆ ಔಷಧಿ, ಚಿಕಿತ್ಸೆ ಇಲ್ಲ (ಇದೆ ಎಂದು ಹೇಳಿ ಆಸ್ಪತ್ರೆಗಳಲ್ಲಿ ತಿಂಗಳುಗಟ್ಟಲೆ ಮಲಗಿಸಿ ತರಾವರಿ ಚಿಕಿತ್ಸೆ ಮಾಡುವುದು ಬೇರೆ ಮಾತು). ಸಮಸ್ಯೆ ಏನೆಂದರೆ ಇಂಥ ಕಣಗಳನ್ನು ಸೇವಿಸುತ್ತಿದ್ದರೆ 10-15 ವರ್ಷಗಳ ನಂತರವೇ ಕಾಯಿಲೆ ಆರಂಭವಾಗುತ್ತದೆ. ಅಹ್ಮದಾಬಾದ್‌ನಲ್ಲಿ ನಡುವಯಸ್ಕ ರಾಜೇಶ್ ವ್ಯಾಸ್ (41) ಎಂಬಾತ ನರಳಿ ನರಳಿ ತೀರಿಕೊಂಡ. ಏಕೆಂದರೆ ಅವನ ಅಪ್ಪ ಆಸ್‌ಬೆಸ್ಟಾಸ್ ಶೀಟ್ ತಯಾರಿಸುವ ಕಾರ್ಖಾನೆಯಲ್ಲಿ ದುಡಿಯುತ್ತಿದ್ದ. ಕಲ್ನಾರಿನ ದೂಳು ಮೆತ್ತಿದ ಬಟ್ಟೆಯಲ್ಲೇ ಮನೆಗೂ ಬರುತ್ತಿದ್ದ.

ಈ ಬಗೆಯ ಕ್ಯಾನ್ಸರ್ ಕಲ್ನಾರಿನ ಕಣಗಳಿಂದ ಮಾತ್ರವೇ ಬರುತ್ತದೆಂದು ವೈದ್ಯತಜ್ಞರು ಖಾತರಿ ಪತ್ತೆಹಚ್ಚಿ ಎಚ್ಚರಿಕೆ ನೀಡತೊಡಗಿದ ಮೇಲೆ ಐರೋಪ್ಯ ದೇಶಗಳಲ್ಲಿ ಇದಕ್ಕೆ ನಿಷೇಧ ಹಾಕಲಾಯಿತು (ಈಗ ಭಾರತವೇ ಜಗತ್ತಿನ ಅತಿ ದೊಡ್ಡ ಬಳಕೆದಾರ- ಅದರ ಕತೆ ಮುಂದೆ ಬರುತ್ತದೆ). 1990ರ ನಂತರ 70ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಹಳೇ ಕಟ್ಟಡಗಳಲ್ಲಿದ್ದ ಕಲ್ನಾರಿನ ಪೈಪ್‌ಗಳನ್ನು ಚಾವಣಿಗಳನ್ನು, ಒಲೆಗಳನ್ನು ಹುಷಾರಾಗಿ (ನಖಶಿಖಾಂತ ರಕ್ಷಾಕವಚ ತೊಟ್ಟು) ಕಳಚಿ ಹೂಳಲಾಯಿತು. ಪ್ಯಾರಿಸ್‌ನ ಸೋರ್ಬೋನ್ ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗದಲ್ಲಿ ಕಲ್ನಾರಿನ ಹಾವಳಿಯಿಂದಾಗಿಯೇ 12 ಜನರು ಸತ್ತು 130ಕ್ಕೂ ಹೆಚ್ಚು ಜನರು ವ್ಯಾಧಿಗ್ರಸ್ತರಾಗಿದ್ದರಿಂದ 1997ರಲ್ಲಿ ಇಡೀ ಕಟ್ಟಡದ ಬಹುಭಾಗವನ್ನು ಕಿತ್ತು ಮತ್ತೆ ನಿರ್ಮಿಸಲಾಯಿತು. ಅದೇ ನಗರದ ಇತರ ವಿಶ್ವವಿದ್ಯಾಲಯಗಳಲ್ಲೂ ಸಾವಿರಾರು ಜನರ ಬಲಿಯಾಗಿದ್ದು, ಅಂಥ ಕಟ್ಟಡಗಳನ್ನು ಕೆಡವಬೇಕೆಂದು ಪ್ಯಾರಿಸ್‌ನಲ್ಲಿ 2013ರಲ್ಲಿ ಯುವಜನರ 'ಮರಣ ಸತ್ಯಾಗ್ರಹ' ನಡೆದ ಮೇಲೆ ಕೆಲವು ಕಟ್ಟಡಗಳ ಭಾಗಗಳನ್ನು ಕಳಚಿ ಹೂಳಲಾಯಿತು.

ಈ ಕತೆ ಮುಗಿಯದಷ್ಟಿದೆ. ಕೆನಡಾದ ರಾಜಧಾನಿ ಒಟ್ಟಾವಾದಲ್ಲಿ ಸಂಸತ್ ಭವನದಲ್ಲಿದ್ದ ಕಲ್ನಾರಿನ ಭಾಗಗಳನ್ನೆಲ್ಲ ತೆಗೆದು ಹೂಳಲಾಯಿತು. ಮುಂದೆ ಎಲ್ಲೂ ಬಳಸಬಾರದೆಂದೂ ಆದರೆ ಬೇರೆ ದೇಶಗಳಿಗೆ ಮಾರಬಹುದೆಂದೂ ಹೊಸ ನೀತಿಯನ್ನು ಹೊಸ ಸಂಸತ್ತಿನಲ್ಲಿ ಅಂಗೀಕರಿಸಲಾಯಿತು. ಫ್ರೆಂಚರು 1961ರಲ್ಲಿ ನಿರ್ಮಿಸಿದ್ದ 'ಕ್ಲೆಮೆಂಸು' ಹೆಸರಿನ ಯುದ್ಧ ಹಡಗನ್ನು ಕಳಚಿ ಗುಜರಿಗೆ ಹಾಕಲೆಂದು ಗುಜರಾತ್‌ನ ಅಲಂಗ್ ಬಂದರಿಗೆ 2006ರಲ್ಲಿ ತಳ್ಳುವ ಯತ್ನ ನಡೆಯಿತು. ಅದರಲ್ಲಿ ಸುಮಾರು 700 ಟನ್ ಕಲ್ನಾರಿನ ಹಲಗೆ, ಗೋಡೆಗಳಿದ್ದವು. 'ಹಡಗುಗಳ ಕಸಾಯಿಖಾನೆ' ಎಂದೇ ಕುಖ್ಯಾತಿ ಪಡೆದು, ಶ್ರಮಿಕರ ಸಾಲುಸಾಲು ಸಾವಿಗೆ ಕಾರಣವಾಗುತ್ತಿರುವ ಕೊಳಕು ಅಲಂಗ್ ಬಂದರಿನ ಬಗ್ಗೆ ಕೆನಡಾದ ರಾಷ್ಟ್ರೀಯ ಚಲನಚಿತ್ರ ಮಂಡಳಿ ನಿರ್ಮಿಸಿದ 'ಶಿಪ್‌ಬ್ರೇಕರ್ಸ್' ಹೆಸರಿನ ಪ್ರಶಸ್ತಿ ವಿಜೇತ ಸಾಕ್ಷ್ಯಚಿತ್ರ ಯೂಟ್ಯೂಬ್‌ನಲ್ಲಿ ನೋಡಬಹುದು. 'ಕ್ಲೆಮೆಂಸು' ಹಡಗನ್ನು ಅಲ್ಲಿ ಒಡೆಯಕೂಡದೆಂದು ಪರಿಸರವಾದಿಗಳು ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆ ತಂದ ಮೇಲೆ ಹಡಗನ್ನು ವಾಪಸ್ ಕಳಿಸಲಾಯಿತು.



ಭಾರತದಲ್ಲಿ ಕಲ್ನಾರಿನ ಗಣಿಗಾರಿಕೆಯನ್ನು ನಿಷೇಧಿಸಲಾಗಿದೆ. ಆದರೆ ನಮ್ಮ ದೇಶವೇ ಅತಿ ದೊಡ್ಡ ಪ್ರಮಾಣದಲ್ಲಿ ರಷ್ಯಾ, ಬ್ರೆಜಿಲ್, ಹಂಗೇರಿ, ಪೋಲೆಂಡ್ ಮತ್ತು ದಕ್ಷಿಣ ಆಫ್ರಿಕಾಗಳಿಂದ (ಪ್ರತಿವರ್ಷ ಮೂರೂವರೆ ಲಕ್ಷ ಟನ್‌ಗಳಷ್ಟು) ಕಲ್ನಾರನ್ನು ತರಿಸಿ, ಶೀಟ್‌ಗಳನ್ನು ತಯಾರಿಸಿ ಬಡವರಿಗೆ ಮನೆಗಳನ್ನು ಕಟ್ಟಿಸುತ್ತಿದೆ. ಶೀಟ್ ತಯಾರಿಸುವ ಉದ್ಯಮಿಗಳು ಅದೆಷ್ಟು ಶಕ್ತಿಶಾಲಿ ಎಂಬುದು ಅವರ ಒಕ್ಕೂಟದ (ಫೈಬರ್ ಸಿಮೆಂಟ್ ಉತ್ಪಾದಕರ ಸಂಘಟನೆಯ fcpma.in) ಜಾಲತಾಣದಲ್ಲಿ ಗೊತ್ತಾಗುತ್ತದೆ. ಅದರಲ್ಲಿ 'ಕಲ್ನಾರಿನಿಂದ ಕ್ಯಾನ್ಸರ್ ಬರುತ್ತದೆಂಬುದು ಮಿಥ್ಯೆ'ಯೆಂದೂ ಅದನ್ನು ವಿರೋಧಿಸುವವರೆಲ್ಲ ವಿದೇಶಿ ಏಜೆಂಟರೆಂದೂ ಬಣ್ಣಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿಯವರ ಚಿತ್ರದ ಎದುರು ಪರಿಸರ ಸಚಿವರು, ನಗರಾಭಿವೃದ್ಧಿ ಮತ್ತು ಬಡತನ ನಿರ್ಮೂಲನ ಸಚಿವರುಗಳಿಂದ ಸನ್ಮಾನ ಮಾಡಿಸಿಕೊಂಡ ಉದ್ಯಮಿಗಳ ಚಿತ್ರಗಳನ್ನು ಅಲ್ಲಿ ನೋಡಬಹುದು. ತಮ್ಮ ಉದ್ಯಮದಲ್ಲಿ 50 ಕಂಪನಿಗಳಿಂದ ಎಂಟು ಸಾವಿರ ಕೋಟಿ ರೂಪಾಯಿ ಬಂಡವಾಳ ಹೂಡಿಕೆ ಆಗಿದೆಯೆಂದೂ ಮೂರು ಲಕ್ಷ ಜನರಿಗೆ ಉದ್ಯೋಗ ಲಭಿಸಿದೆ ಎಂದೂ ವರ್ಣಿಸಲಾಗಿದೆ.

ಬರೀ ಮೂರು ಲಕ್ಷ ಜನರಾ? ಕಲ್ನಾರಿನ ಸಿಮೆಂಟ್ ಶೀಟ್‌ಗಳನ್ನು ಕತ್ತರಿಸಿ ಸೂರಿಗೆ ಹೊದೆಸುವ ಕಾರ್ಮಿಕರು ಊರೂರಲ್ಲಿ ಸಿಗುತ್ತಾರೆ. ಅವರು ಮುಖವಾಡ ಕೂಡ ಹಾಕಿರುವುದಿಲ್ಲ. ಅಂಥ ಕೆಲಸಗಾರರ 40 ವರ್ಷಗಳ ಆರೋಗ್ಯ ದಾಖಲೆಗಳನ್ನು ಇಟ್ಟಿರಬೇಕೆಂದು ಸುಪ್ರೀಂ ಕೋರ್ಟ್ ಹಿಂದೆಯೇ ಹೇಳಿದೆ. ದಾಖಲೆ ಇಟ್ಟವರಾರು? 'ನಗರಕ್ಕೆ ಬರುವ ಶ್ರಮಿಕರಲ್ಲಿ ಶೇ 79ರಷ್ಟು ಮಂದಿ ಶೀಟ್ ಮನೆಗಳಲ್ಲೇ ವಾಸಿಸುತ್ತಾರೆ. ಅಂಥವರ ಸಂಖ್ಯೆ 20 ಕೋಟಿಯಷ್ಟಿದೆ' ಎನ್ನುತ್ತಾರೆ, ಕಲ್ನಾರಿನ ಬಳಕೆಯನ್ನು ನಿಷೇಧಿಸಬೇಕೆನ್ನುವವರ ಸಂಘಟನೆಯ ವಕ್ತಾರ ಗೋಪಾಲಕೃಷ್ಣ.

'ಕಲ್ನಾರಿನ ವಿಷಯದಲ್ಲಿ ಸುರಕ್ಷಿತ ಬಳಕೆ ಎಂಬುದೇ ಇಲ್ಲ' ಎಂದು ವಿಶ್ವ ಸ್ವಾಸ್ಥ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಹಿಂದೆಯೇ ಘೋಷಿಸಿದೆ. ಅಂದಾಜು 20 ಟನ್ ಕಲ್ನಾರಿನಿಂದ ಒಂದು ಸಾವು ಸಂಭವಿಸುತ್ತದೆಂದೂ ಹೇಳಲಾಗಿದೆ. ಸ್ವಾರಸ್ಯ ಏನೆಂದರೆ ಭಾರತೀಯ ರೈಲ್ವೆ ಇಲಾಖೆ ಏಳು ಸಾವಿರಕ್ಕೂ ಹೆಚ್ಚು ರೈಲು ನಿಲ್ದಾಣಗಳನ್ನು 'ಕಲ್ನಾರುಮುಕ್ತ' ಮಾಡಿದೆ. ರಷ್ಯಾದಿಂದ 'ಐಎನ್‌ಎಸ್ ವಿಕ್ರಮಾದಿತ್ಯ' ಯುದ್ಧ ಹಡಗನ್ನು ಖರೀದಿಸುವ ಮುನ್ನ ಅದನ್ನು ಕಲ್ನಾರುಮುಕ್ತ ಮಾಡಬೇಕೆಂದು ನೌಕಾಪಡೆ ನಿಬಂಧನೆ ಹಾಕಿತ್ತು. ಈಗಂತೂ ಕಲ್ನಾರಿಗೆ ಬದಲೀ ಸಾಮಗ್ರಿಗಳು ಬೇಕಷ್ಟಿವೆ. ಆದರೂ ಇದರ ಬಳಕೆ ಯಾಕೊ? ಅಂದಹಾಗೆ, ಅತಿ ದೊಡ್ಡ ಪ್ರಮಾಣದಲ್ಲಿ ಕಲ್ನಾರಿನ ಶೀಟ್‌ಗಳನ್ನು ಉತ್ಪಾದಿಸುವ 'ಎವರೆಸ್ಟ್' ಕಂಪನಿಯ ಹೆಚ್ಚುಗಾರಿಕೆ ಏನು ಗೊತ್ತೆ? ತಂಬಾಕು ಸೇವಿಸುವವರ ಕ್ಯಾನ್ಸರ್ ಚಿಕಿತ್ಸೆಗೆ ಅದು ದೇಣಿಗೆ ನೀಡುತ್ತಿದೆ!

ಧಾರಾಳ ದೇಣಿಗೆ ಕೊಟ್ಟರೆ ನಮ್ಮ ದೇಶದಲ್ಲಿ ಯಾರನ್ನೂ ಓಲೈಸಬಹುದು. ಯಾರನ್ನೂ ಮಸಣಕ್ಕಟ್ಟಬಹುದು. ಇಟಲಿಯ ಆದರ್ಶ ಯಾರಿಗೆ ಬೇಕು?

ಚುರುಮುರಿ



ಮಾತೇ ಮಾತು!

• ಗುರು ಪಿ.ಎಸ್.

'ದೊಡ್ ಬಾಸ್ ಬಂದ್ರು, ದೊಡ್ ಬಾಸ್ ಬಂದ್ರು...' ಎಮ್ಮೆಲ್ಲೆ ಮುದ್ದಣ್ಣನ ಹಿಂಬಾಲಕರು ಜನರನ್ನು ತಳ್ಳುತ್ತಾ, ತಮ್ಮ ನಾಯಕನಿಗೆ ದಾರಿ ಮಾಡಿಕೊಡುತ್ತಾ ಒಳಬಂದರು.

ಇದನ್ನೆಲ್ಲ ನೋಡುತ್ತಿದ್ದ ಮಾಜಿ ಎಮ್ಮೆಲ್ಲೆ ಸಿಟ್ಟಿನಲ್ಲೇ ಹೇಳಿದರು, 'ನಿಲ್ಲಿಸ್ರೋ ಸಾಕು, ನಿಮ್ಮ ಎಮ್ಮೆಲ್ಲೆ ಏನು ಮಹಾ ಸಾಧನೆ ಮಾಡಿದಾರೆ ಅಂತ ಹೀಗೆ ಹೊತ್ತು ಮೆರೆಸ್ತಿದ್ದೀರಿ?'

'ಅವರೀಗ ಟ್ರೆಂಡಿಂಗ್ ಸ್ಟಾರ್ ಸರ್' ಸಮರ್ಥಿಸಿಕೊಂಡರು ಎಮ್ಮೆಲ್ಲೆ ಹಿಂಬಾಲಕರು.

'ರಿಯಾಲಿಟಿ ಷೋದಲ್ಲೆಲ್ಲ ಕಾಣಿಸಿಕೊಳ್ತಾರೆ. ಕ್ಷೇತ್ರದ ಮರ್ಯಾದೆ ಹಾಳು ಮಾಡ್ತಿದ್ದಾರೆ. ಜನಪ್ರತಿನಿಧಿ ಹೀಗೆಲ್ಲ ಮಾಡಬಹುದೇನ್ರೀ...'

'ರಿಯಾಲಿಟಿ ಷೋ ನಡೆಸೋರನ್ನೇ ಕರೆದುಕೊಂಡು ಬಂದು ನೀವು ಎಲೆಕ್ಷನ್ ಪ್ರಚಾರ ಮಾಡಿಸಬಹುದು, ನಮ್ಮ ಸಾಹೇಬ್ರು ಅವರ ಷೋದಲ್ಲಿ ಪಾಲ್ಗೊಳ್ಳ ಬಾರದಾ?' ಎಂದು ಪ್ರಶ್ನಿಸಿದ ಫಾಲೋವರ್ಸ್, 'ಎಂಟರ್‌ಟೇನ್‌ಮೆಂಟ್ ಫೀಲ್ಡ್‌ನಲ್ಲಿ ರೋರೆಲ್ಲ ಪಾಲಿಟಿಕ್ಸ್‌ಗೆ ಬರಬಹುದು ಅಂದ್ರೆ, ಪೊಲಿಟಿಷಿಯನ್ ಆಗಿರೋ ನಮ್ ಬಾಸ್ ಎಂಟರ್‌ಟೇನ್ ಮಾಡಿದ್ರೆ ಏನು ಸಮಸ್ಯೆ?'

'ಮನರಂಜನೆ ಕೊಡೋದಕ್ಕೇನ್ರೀ ಜನ ನಿಮ್ಮನ್ನು ಆರಿಸಿರೋದು?'

'ನಮ್ ಬಾಸ್ ಮೋಟಿವೇಷನಲ್ ಸ್ಪೀಕರ್ ಸರ್. ಅವರ ಮಾತು ಕೇಳಿ ಕೇಳಿ ನಮ್ಮ ರಾಜ್ಯದ ಯುವಕ-ಯುವತಿಯರೆಲ್ಲ ಫುಲ್ ಇನ್‌ಸ್ಪೈರ್ ಆಗಿ ಅವರ ಹಾದಿಯಲ್ಲೇ ನಡೆದಿದ್ದಾರೆ'.

'ಅಂದ್ರೆ, ರಾಜ್ಯದ ಯುವಕ-ಯುವತಿಯರೆಲ್ಲ ಎಮ್ಮೆಲ್ಲೆ ಆಗಿದ್ದಾರಾ?'

'ಇಲ್ಲ, ಮೋಟಿವೇಷನಲ್ ಸ್ಪೀಕರ್ ಆಗ್ತಿದ್ದಾರೆ'.

'ಮಾತಿನಿಂದ ಹೊಟ್ಟೆ ತುಂಬುತ್ತೇನ್ರೀ?' ಮಾಜಿ ಶಾಸಕರ ಪಿತ್ತ ನೆತ್ತಿಗೇರಿತು.

'ಮನ್ ಕಿ ಬಾತ್ ಕೇಳಿ ಕೇಳಿಯೇ ನಮ್ ಬಾಸ್ ಈಗ ಮೋಟಿವೇಷನಲ್ ಸ್ಪೀಕರ್ ಆಗಿರೋದು, ರಿಯಾಲಿಟಿ ಷೋ ಮನೆಯೊಳಗೆ ಹೋಗಿರೋದು' ಎಂದು ನಕ್ಕರು ಹಿಂಬಾಲಕರು.

'ಯಾರದೇ ಮಾತಿಗೆ ಮರುಳಾಗಬಾರದು ಅಂತ ಈಗ ಅರಿವಾಗ್ತಿದೆ' ಪಕ್ಕದಲ್ಲೇ ಇದ್ದ ಹಿರಿಯರೊಬ್ಬರು ಗೊಣಗಿದರು.

ಸಂಗತ

ಶಾಲಾ ಸಮಯ, ಟ್ರಾಫಿಕ್‌ಮಯ!

ಸಂಚಾರ ದಟ್ಟಣೆ ಸಮಸ್ಯೆ ಬಗೆಹರಿಸಲು ಶಾಲಾ ಸಮಯ ಬದಲಾವಣೆ ಮಾಡುವುದು ಬೇಡ; ಆದರೆ ಈ ದಿಸೆಯಲ್ಲಿ ಮಾಡಬೇಕಾದುದು ಏನು?

• ಡಾ. ಕೆ.ಎಸ್.ಚೈತ್ರಾ

ಹೈಕೋರ್ಟ್ ನಿರ್ದೇಶನದ ಮೇರೆಗೆ ಬೆಂಗಳೂರಿನಲ್ಲಿ ಟ್ರಾಫಿಕ್ ದಟ್ಟಣೆ ತಗ್ಗಿಸುವ ದೃಷ್ಟಿಯಿಂದ, ಶಾಲಾ ಸಮಯದಲ್ಲಿ ಬದಲಾವಣೆ ಮಾಡುವುದರ ಕುರಿತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಇತ್ತೀಚೆಗೆ ಸಭೆ ಆಯೋಜಿಸಿತ್ತು. ಪೋಷಕರ ಸಂಘಟನೆಗಳು ಹಾಗೂ ಖಾಸಗಿ ಶಾಲೆಗಳ ಒಕ್ಕೂಟಗಳ ಅಭಿಪ್ರಾಯದ ಮೇರೆಗೆ ಯಥಾಸ್ಥಿತಿ ಮುಂದುವರಿಸುವ ತೀರ್ಮಾನಕ್ಕೆ ಬರಲಾಗಿದೆ. ಇದೇ ಸಮಯದಲ್ಲಿ, ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಮೂಲಸೌಕರ್ಯ ಕಲ್ಪಿಸಲು ಸರ್ಕಾರ ಮುತುವರ್ಜಿ ವಹಿಸದೆ, ನಿರ್ಲಕ್ಷ್ಯ ಧೋರಣೆ ತಳೆದಿರುವುದರಿಂದ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಹೆಚ್ಚುತ್ತಿದೆ ಎಂದು ಸರ್ಕಾರದ ನಡೆ ಬಗ್ಗೆ ಹೈಕೋರ್ಟ್ ಆಕ್ಷೇಪ ವ್ಯಕ್ತಪಡಿಸಿದೆ.

ಸರ್ಕಾರಿ ಶಾಲೆಗಳಲ್ಲಿ ಬೋಧನೆಯ ಗುಣಮಟ್ಟ ಉತ್ತಮವಾಗಿದ್ದರೂ ಮೂಲಸೌಕರ್ಯಗಳು ಇಲ್ಲ. ಜತೆಗೆ ಪೋಷಕರಿಗೂ ಖಾಸಗಿ ಶಾಲೆಗಳ ಆಕರ್ಷಣೆ ಹೆಚ್ಚು. ಹೀಗಾಗಿ, ಒಂದೇ ಬಡಾವಣೆಯಲ್ಲಿ, ಚಿಕ್ಕ ರಸ್ತೆಗಳ ಪಕ್ಕದ ಸಣ್ಣ ಕಟ್ಟಡಗಳಲ್ಲಿ ಬಹಳಷ್ಟು ಖಾಸಗಿ ಶಾಲೆಗಳು ತಲೆಯೆತ್ತಿವೆ. ಶಾಲೆ ಎಷ್ಟೇ ಸಣ್ಣದಿದ್ದರೂ ಮಕ್ಕಳು ಮಾತ್ರ ತುಂಬಿ ತುಳುಕುತ್ತಿದ್ದಾರೆ. ಇದರಿಂದಾಗಿ ನಿರ್ದಿಷ್ಟ ಜಾಗಗಳಲ್ಲಿ ಮಕ್ಕಳನ್ನು ಶಾಲೆ ಆರಂಭವಾಗುವ ಸಮಯಕ್ಕೆ ಬಿಡಲು ಮತ್ತು ಶಾಲೆ ಮುಗಿದ ನಂತರ ಕರೆದೊಯ್ಯಲು ಸಿಕ್ಕಸಿಕ್ಕಲ್ಲಿ ವಾಹನಗಳನ್ನು ನಿಲ್ಲಿಸುವುದು ಸಾಮಾನ್ಯವಾಗಿದೆ. ಕೆಲವು ಪ್ರತಿಷ್ಠಿತ ಶಾಲೆಗಳಲ್ಲಿ ಖಾಸಗಿ ವಾಹನಗಳನ್ನು ಒಳಗೆ ಸೇರಿಸುವುದಿಲ್ಲ. ಹೀಗಾಗಿ, ಶಾಲೆಯ ಮುಖ್ಯದ್ವಾರದ ಹತ್ತಿರ ರಸ್ತೆಯ ಮೇಲೆ ಮಕ್ಕಳನ್ನು ಇಳಿಸಿ, ಹತ್ತಿಸುವುದು ಅನಿವಾರ್ಯ.

ಪ್ರತಿನಿತ್ಯ ನೂರಾರು ವಾಹನಗಳನ್ನು ಈ ರೀತಿ ನಿಲ್ಲಿಸಿದಾಗ ಟ್ರಾಫಿಕ್ ಜಾಮ್ ಉಂಟಾಗುವುದು ಸಹಜವೇ. ಇದಲ್ಲದೆ ಮಕ್ಕಳನ್ನು ಬಿಟ್ಟ ನಂತರ ಅನೇಕ ಚಾಲಕರು ತಮ್ಮ ವಾಹನಗಳನ್ನು ಶಾಲೆಯ ಪಕ್ಕದಲ್ಲಿಯೇ ನಿಲ್ಲಿಸುತ್ತಿದ್ದಾರೆ. ಸಂಜೆ ಅಲ್ಲಿಂದಲೇ ಮತ್ತೆ ಮರಳಿ ಹೋಗುತ್ತಿದ್ದಾರೆ. ಹೀಗೆ ದಿನವಿಡೀ ವಾಹನಗಳು ನಿಂತಲ್ಲಿಯೇ ನಿಂತಿರುತ್ತವೆ. ಇದಲ್ಲದೆ ಕೆಲವು ಪೋಷಕರು ಸ್ವಂತ ವಾಹನಗಳಲ್ಲಿ ಮಕ್ಕಳನ್ನು ಶಾಲೆಗೆ ಬಿಡುತ್ತಾರೆ. ಇದರಿಂದ ಶಾಲೆಗಳ ಸುತ್ತಮುತ್ತ ಓಡಾಡುವ ವಾಹನಗಳ ಸಂಖ್ಯೆ ಬಹಳ ಹೆಚ್ಚು. ಶಾಲಾ ಮಕ್ಕಳ ಸುರಕ್ಷತೆಗಾಗಿ ವಾಹನಗಳನ್ನು ನಿಧಾನವಾಗಿ ಚಲಾಯಿಸುವುದು ಅಗತ್ಯ. ಹೀಗಾಗಿ, ಹೆಚ್ಚಿದ ವಾಹನ ಸಂಚಾರ, ತಗ್ಗಿದ ವೇಗದ ಮಿತಿಯಿಂದ ಸಂಚಾರ ದಟ್ಟಣೆ ಸಹಜವೇ.

ಪರಿಹಾರ ಕಂಡುಕೊಳ್ಳುವ ದೃಷ್ಟಿಯಿಂದ ಶಾಲಾ ಸಮಯ ಬದಲಾವಣೆಗೆ ಸರ್ಕಾರ ಚಿಂತನೆ ನಡೆಸಿ ಸಭೆ ಕರೆದಿತ್ತು. ಆದರೆ ಪೋಷಕರು ಮತ್ತು ಶಾಲಾ ಮಂಡಳಿಗಳ ಪ್ರಕಾರ, ಶಾಲಾ ಸಮಯವು ಟ್ರಾಫಿಕ್ ಸಮಸ್ಯೆಗೆ ಕಾರಣ ಎನ್ನುವುದು ಆಧಾರ ರಹಿತವಾದದ್ದು. ಬೆಳಿಗ್ಗೆ ಮತ್ತು ಮಧ್ಯಾಹ್ನ ಹೆಚ್ಚೆಂದರೆ ಅರ್ಧ ಗಂಟೆ ನಗರದ ನಿರ್ದಿಷ್ಟ ಸ್ಥಳಗಳಲ್ಲಿ ಮಾತ್ರ ಈ ಸಂಚಾರ ದಟ್ಟಣೆ ಇರುತ್ತದೆ. ಅದಕ್ಕಾಗಿ ಶಾಲೆಗಳನ್ನು ಅರ್ಧ ತಾಸು ಬೇಗ ಆರಂಭಿಸಿದರೆ ಮಕ್ಕಳಿಗೆ ಅನನುಕೂಲವೇ ಹೆಚ್ಚು.

ಪ್ರಾಥಮಿಕ ಶಾಲೆಯ ಮಕ್ಕಳಿಗೆ ಎಂಟರಿಂದ ಒಂಬತ್ತು ತಾಸಿನ ಕಾಲ ನಿದ್ದೆ ಅವಶ್ಯಕ. ಈಗಾಗಲೇ ಬೆಳಿಗ್ಗೆ ಬೇಗನೆದ್ದು ತಯಾರಾಗುವ ಮಕ್ಕಳಿಗೆ ಇನ್ನು ನಿದ್ದೆಯಲ್ಲಿ ಮತ್ತಷ್ಟು ಕೊರತೆ ಕಾಣಿಸಿಕೊಳ್ಳುತ್ತದೆ. ಮಹಾನಗರಗಳಲ್ಲಿ ಶೇಕಡ 25ರಷ್ಟು ಶಾಲಾ ಮಕ್ಕಳಿಗೆ ನಿದ್ದೆಯ ಕೊರತೆ ಇದೆ ಎನ್ನುವುದನ್ನು ಸಂಶೋಧನೆಗಳು ದೃಢಪಡಿಸಿವೆ. ಇದು ದೈಹಿಕ ಮತ್ತು ಮಾನಸಿಕ ಆರೋಗ್ಯದ ಜೊತೆಗೆ ಕಲಿಕೆಯಲ್ಲಿಯೂ ಗಂಭೀರವಾದ ಪರಿಣಾಮವನ್ನು ಬೀರುತ್ತದೆ. ಹಾಗೆಯೇ ಮಕ್ಕಳಿಗೆ ಬೆಳಗಿನ ತಿಂಡಿ ಎನ್ನುವುದು ದಿನನಿತ್ಯದ ಆಹಾರದ ಅತ್ಯಂತ ಪ್ರಮುಖ ಭಾಗ. ಈಗಾಗಲೇ ತೂಕಡಿಸುತ್ತಾ ಏನೋ ಒಂದಷ್ಟು ಗಬಗಬ ತಿನ್ನುವ ಮಕ್ಕಳಿಗೆ ಶಾಲೆ ಮತ್ತಷ್ಟು ಬೇಗ ಶುರುವಾದರೆ ಅದರಿಂದಲೂ ವಂಚಿತರಾಗುವ ಸಾಧ್ಯತೆ ಇದೆ.



ಮಕ್ಕಳಿಗಷ್ಟೇ ಅಲ್ಲ ಪೋಷಕರಿಗೂ ಇದರಿಂದ ತೊಂದರೆಯೇ ಹೆಚ್ಚು. ಬೆಳಿಗ್ಗೆ ಇನ್ನಷ್ಟು ಬೇಗನೇ ಎದ್ದು ಮಕ್ಕಳಿಗೆ ತಿಂಡಿ-ಊಟ ಸಿದ್ಧಪಡಿಸುವ ಜವಾಬ್ದಾರಿ ಪೋಷಕರದ್ದು. ಶಾಲೆ ಬೇಗ ಶುರುವಾದಷ್ಟೂ ಇನ್ನಷ್ಟು ಬೇಗ ಏಳುವ ಅನಿವಾರ್ಯ ಉಂಟಾಗುತ್ತದೆ. ಹಾಗೆಯೇ ಪೋಷಕರ ಕಚೇರಿಯ ಸಮಯ ಬದಲಾಗದೇ ಇರುವುದರಿಂದ ಮಕ್ಕಳನ್ನು ಬೇಗ ಬಿಡುವ, ಹಾಗೆಯೇ ಬೇಗ ಮನೆಗೆ ಕರೆತರುವ ಸಮಸ್ಯೆಯೂ ಎದುರಾಗುತ್ತದೆ ಎಂದು ವಿರೋಧಿಸಿದ್ದಾರೆ.

ಶಾಲಾ ಸಮಯ ಬದಲಾವಣೆ ಬೇಡ; ಆದರೆ ಬೇಕಾದದ್ದೇನು? ಶಾಲೆಗಳು ಹೆಚ್ಚಿರುವಂತಹ ಜಾಗ ಮತ್ತು ಶಾಲಾ ಬಸ್ ಸಂಚರಿಸುವ ಮಾರ್ಗ- ಸ್ಥಳಗಳನ್ನು ಗುರುತು ಮಾಡಿ ಸ್ಥಳೀಯವಾಗಿ ಅಲ್ಲಿ ಹೆಚ್ಚುವರಿ ಟ್ರಾಫಿಕ್ ಪೊಲೀಸರನ್ನು ನೇಮಿಸಬೇಕು. ಖಾಸಗಿ ವಾಹನದ ಬದಲು ಹೆಚ್ಚು ಮಕ್ಕಳು ಒಟ್ಟಿಗೆ ಸಂಚರಿಸುವ ಶಾಲಾ ವಾಹನ ಅಥವಾ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಳಸುವ ನಿಯಮ ಜಾರಿಯಾಗಬೇಕು. ಖಾಸಗಿ ಶಾಲೆಗಳು ಬಸ್ ವ್ಯವಸ್ಥೆಯನ್ನು ಕಡಿಮೆ ಬೆಲೆಯಲ್ಲಿ ಒದಗಿಸಬೇಕು. ವಾಹನಗಳಿಗೆ ನಿರ್ದಿಷ್ಟ ಪಾರ್ಕಿಂಗ್ ಜಾಗ ಮಾಡಿ, ಮಕ್ಕಳನ್ನು ಇಳಿಸುವ ಮತ್ತು ಹತ್ತಿಸುವ ಜಾಗಗಳನ್ನು ಗುರುತಿಸಬೇಕು. ಅನಧಿಕೃತವಾಗಿ ಪಾರ್ಕಿಂಗ್ ಮಾಡಿದವರಿಗೆ ದಂಡ ವಿಧಿಸಬೇಕು.

ಒಟ್ಟಿನಲ್ಲಿ, ಶಾಲೆಗಳನ್ನು ನಡೆಸುವಾಗ ಮಕ್ಕಳ ಶಿಕ್ಷಣ, ಸುರಕ್ಷತೆ ಜತೆ ಸಾರ್ವಜನಿಕರಿಗೆ ಆಗುವ ಸಮಸ್ಯೆಗಳನ್ನೂ ಗಮನದಲ್ಲಿಡುವುದು ಮುಖ್ಯ.

ವಾಚಕರ ವಾಣಿ

ಸಂಸ್ಕರಿತ ತ್ಯಾಜ್ಯ ನೀರು: ಬೆಂಗಳೂರಿಗೂ ಹರಿಯಲಿ

ಕೋಲಾರದ ಕೆರೆಗಳಿಗೆ ಹರಿಸುತ್ತಿರುವ ಕೆ.ಸಿ. ವ್ಯಾಲಿ ನೀರಿನ ಗುಣಮಟ್ಟ ಉತ್ತಮವಾಗಿಲ್ಲ ಎಂಬ ಅಭಿಪ್ರಾಯ ಕೇಳಿಬರುತ್ತಿರುವಾಗ, ಬೆಂಗಳೂರು ಗ್ರಾಮಾಂತರ ಪ್ರದೇಶದ ಕೆರೆಗಳಿಗೆ ಇದೇ ನೀರನ್ನು ಹರಿಸಬೇಕೆಂಬ ಸರ್ಕಾರದ ಆಲೋಚನೆ ಒಪ್ಪುವಂಥದ್ದಲ್ಲ. ತ್ಯಾಜ್ಯ ನೀರನ್ನು ಸಂಸ್ಕರಿಸಿ ಗ್ರಾಮೀಣ ಕೆರೆಗಳಿಗೆ ಹರಿಸುವುದಕ್ಕಿಂತ ಬೆಂಗಳೂರು ನಗರದ ಕೆರೆಗಳಿಗೂ ಹರಿಸಿದರೆ ನಗರದ ಕೆರೆಗಳು ಉಳಿಯುತ್ತವೆ ಹಾಗೂ ಅಂತರ್ಜಲ ಕೂಡ ಹೆಚ್ಚುತ್ತದೆ. ತಮಿಳುನಾಡಿನ ರೈತರ ಜಮೀನಿಗೂ ಇದೇ ನೀರನ್ನು ಹರಿಸಿದರೆ ಕಾವೇರಿ ನೀರಿನ ಸಮಸ್ಯೆ ಕೂಡ ಸ್ವಲ್ಪಮಟ್ಟಿಗೆ ಬಗೆಹರಿಯಬಹುದು. ಗ್ರಾಮೀಣ ಕೆರೆಗಳ ಹೂಳು ತೆಗೆಸುವುದು, ಕೆರೆಗಳಿಗೆ ಮಳೆನೀರು ಹರಿದು ಬರುತ್ತಿದ್ದ ಮಾರ್ಗಗಳು ಒತ್ತುವರಿಯಾಗಿದ್ದರೆ ತೆರವುಗೊಳಿಸಿ ನೀರಿನ ಒಳಹರಿವನ್ನು ಹೆಚ್ಚು ಮಾಡಿದರೆ ಸಾಕು, ಬೆಂಗಳೂರು ನಗರದಿಂದ ತ್ಯಾಜ್ಯ ನೀರನ್ನು ಹಳ್ಳಿಗಳಿಗೆ ತರುವ ಅವಶ್ಯಕತೆ ಬರುವುದಿಲ್ಲ.

ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

ಚಿಲ್ಲರೆ ಸಮಸ್ಯೆಗೆ ಇಲ್ಲವೇ ಪರಿಹಾರ?

'ಶಕ್ತಿ' ಯೋಜನೆ ನಿರೀಕ್ಷೆ ಮೀರಿ ಯಶಸ್ಸು ಕಾಣುತ್ತಿದೆ ಎಂದು ವರದಿಗಳು ಹೇಳುತ್ತವೆ. ಆದರೆ ಇಲ್ಲಿ ಸದ್ಯದ ಸಮಸ್ಯೆ ಎಂದರೆ ಚಿಲ್ಲರೆಯದು. ಮೊದಲೇ ಚಿಲ್ಲರೆ ಸಮಸ್ಯೆಯಿಂದ ನಿರ್ವಾಹಕ–ಪ್ರಯಾಣಿಕರ ನಡುವೆ ಜಗಳ ಸರ್ವೇಸಾಮಾನ್ಯವಾಗಿತ್ತು. ಈಗಂತೂ ಹಣವನ್ನು ಬರೀ ಪುರುಷರಿಂದ ಪಡೆಯುವುದರಿಂದ, ಚಿಲ್ಲರೆಯನ್ನು ಸರಿಯಾಗಿ ಹೊಂದಿಸಲಾಗದೆ ಬಹಳ ಅನನುಕೂಲ ಆಗುತ್ತಿದೆ. ಡಿಜಿಟಲ್ ಪಾವತಿ ವ್ಯವಸ್ಥೆಗೆ ಅವಕಾಶ ಕಲ್ಪಿಸಿದರೆ ಪ್ರಯಾಣ ಸುಖಕರವಾಗಿರುತ್ತದೆ.

ಪಿ.ನಮ್ರತಾ, ಗೆಜ್ಜಗಳ್ಳಿ, ಮೈಸೂರು

ಹಸಿರು ಬರಗಾಲ: ಗ್ರಹಿಸಬೇಕಿದೆ ವಸ್ತುಸ್ಥಿತಿ

ಬರ ಅಧ್ಯಯನಕ್ಕೆಂದು ರಾಜ್ಯಕ್ಕೆ ಬಂದಿದ್ದ ಕೇಂದ್ರದ ತಂಡಕ್ಕೆ ಕರ್ನಾಟಕವು 'ಹಸಿರು ಬರಗಾಲ' ಎದುರಿಸುತ್ತಿದೆ ಎಂದು ಮನವರಿಕೆ ಮಾಡಿಕೊಡಲು ಯತ್ನಿಸಲಾಗಿದೆ. ಮಳೆ ತಡವಾಗಿ ಶುರುವಾಗಿ, ನಿಂತು, ಮತ್ತೆ ಬಂದು ಒಟ್ಟಾರೆ ಕಡಿಮೆ ಪ್ರಮಾಣದಲ್ಲಿ ಆಗಿರುವೆಡೆಗಳಲ್ಲಿ ಇಟ್ಟ ಬೆಳೆ ಚೇತರಿಸಿಕೊಂಡಿದೆಯೇ, ಬದುಕಿಕೊಳ್ಳಬಹುದೇ ಎಂಬುದನ್ನು ಅಂದಾಜಿಸುವುದೇ ಕಷ್ಟ. ಹವಾಮಾನಕ್ಕೆ ಸಂಬಂಧಿಸಿದ್ದು, ಜಲ ಸಂಗ್ರಹಕ್ಕೆ ಸಂಬಂಧಿಸಿದ್ದು ಹಾಗೂ ಕೃಷಿಗೆ ಅನ್ವಯಿಸುವ ವಿಧಗಳ ಜತೆ ಸಮಾಜೋ ಆರ್ಥಿಕ ಬರವೂ ಇದೆ.

ಈಗ ಕೇಂದ್ರ ಸರ್ಕಾರವು ರಾಜ್ಯದ ಮನವಿಪತ್ರ ಆಧರಿಸಿ ಮೊತ್ತ ಬಿಡುಗಡೆ ಮಾಡುತ್ತದೆ. ಅದನ್ನು ಇಂಥಿಂಥ ತಾಲ್ಲೂಕಿಗೆ ಇಷ್ಟು ಎಂದು ಹಂಚುವ ಕೆಲಸ ಇಲ್ಲಿನ ಸರ್ಕಾರದ್ದು (ಬರಪೀಡಿತ ಎಂಬ ಘೋಷಣೆ ತಾಲ್ಲೂಕುವಾರು ತಾನೆ!). ತಂಡಗಳು ಕೆಲವು ಸ್ಥಳಗಳಿಗೆ ಮಾತ್ರ ಭೇಟಿ ಕೊಡಲು ಸಾಧ್ಯ. ಸರಿಯಾಗಿ ದಾಖಲು ಮಾಡದ ಹಳ್ಳಿಗಳೂ ಇರುತ್ತವೆ. ಪರಿಹಾರ ವಿತರಣೆ ಆಗುವಾಗ ನಿಜವಾಗಿ ನೊಂದವರಿಗೆ ನೆರವು ದೊರೆಯುವಂತೆ ನೋಡಿಕೊಳ್ಳುವುದು ಜನಪ್ರತಿನಿಧಿಗಳ ನೈತಿಕ ಕರ್ತವ್ಯ. ಕೆಲವು ನಿದರ್ಶನಗಳನ್ನು ಎತ್ತಿ ತೋರಿಸಿರುವ ಮಾಧ್ಯಮಗಳು, ಅವಷ್ಟೇ ಅಲ್ಲದೆ ಬೇರೆ ಪ್ರಕರಣಗಳಲ್ಲೂ ಏನಾಗಿದೆ ಎಂಬುದರತ್ತ ಗಮನ ಕೊಡಬೇಕು. ದಸರಾ, ದೀಪಾವಳಿ, ರಾಜ್ಯೋತ್ಸವಕ್ಕಿಂತ ಮುಂದಿನ ಹಲವು ವಾರ ಇದೇ ಪ್ರಥಮ ಪ್ರಾಶಸ್ತ್ಯದ ಕೆಲಸ ಆಗಬೇಕು. ರಾಜಕೀಯ ಪಕ್ಷಗಳು ಸಂಘಟನೆ, ಚುನಾವಣಾ ತಯಾರಿ ಮುಂದೂಡಿದರೂ ನಷ್ಟವಿಲ್ಲ. 'ಆತ್ಮಹತ್ಯೆ ಗ್ಯಾರಂಟಿ'ಯಂತಹ ಹೇಳಿಕೆ (ಜಿ.ಟಿ.ದೇವೇಗೌಡ, ಪ್ರ.ವಾ., ಅ. 9) ಖಂಡನೀಯ. ಇಷ್ಟು ಎಕರೆಯಲ್ಲಿ ಇಷ್ಟು ಆಹಾರಧಾನ್ಯ ಉತ್ಪಾದನೆ ನಷ್ಟ ಎಂಬ ಅಂದಾಜನ್ನು ಪಕ್ಕಕ್ಕಿರಿಸಿ ಜಿಲ್ಲಾಧಿಕಾರಿಗಳು ವಸ್ತುಸ್ಥಿತಿಯ ಅಂತಿಮ ರೂಪವನ್ನು ಗ್ರಹಿಸಬೇಕಾಗಿದೆ. ಒಟ್ಟಿನಲ್ಲಿ 'ಎವ್ರಿಬಡಿ ಲವ್ಸ್ ಎ ಗುಡ್ ಡ್ರೌಟ್' ಎಂಬಂತೆ ಆಗಬಾರದು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಸನಾತನಧರ್ಮ: ದಾರಿ ತಪ್ಪಿಸುವುದು ಸಲ್ಲ

'ಬುದ್ಧ ಉಪದೇಶಿಸಿದ್ದೂ ಸನಾತನಧರ್ಮವನ್ನೇ' ಎಂಬ ಎಸ್.ಸೂರ್ಯಪ್ರಕಾಶ ಪಂಡಿತ್ ಅವರ ಲೇಖನದ (ಪ್ರ.ವಾ., ಅ. 11) ಶೀರ್ಷಿಕೆ ದಿಗ್ಭ್ರಮೆಗೊಳಿಸುವಂತಿದೆ ಮತ್ತು ಕುಚೋದ್ಯದಿಂದಲೂ ಕೂಡಿದೆ. ಬುದ್ಧ 'ಸನಾತನ' ಎಂಬ ಪದ ಬಳಸಿರುವುದು ಧಮ್ಮಪದದ ಒಂದು ಗಾಥೆಯಲ್ಲಿ (1:5). ವೈರವನ್ನು ವೈರದಿಂದ ಗೆಲ್ಲಲಾಗುವುದಿಲ್ಲ, ವೈರವನ್ನು ಅವೈರದಿಂದ ಮಾತ್ರ ಗೆಲ್ಲಬಹುದು– ಇದು ಸನಾತನ ಧಮ್ಮ (ಕಾಲಾತೀತ ಸತ್ಯ). ಇದನ್ನು ಬಳಸಿಕೊಂಡು ಶ್ರೇಣೀಕೃತ ಜಾತಿಪದ್ಧತಿಯ ಇಡೀ ಬ್ರಾಹ್ಮಣ ಧರ್ಮವನ್ನು ಒಂದು ಗಾಥೆಗೆ ತಗುಲಿಹಾಕಿ ಬಚಾವಾಗುವ ಪ್ರಯತ್ನ ಲೇಖನದಲ್ಲಿದೆ. ಈ ಗಾಥೆಯ ಇಂಗ್ಲಿಷ್ ಅನುವಾದದಲ್ಲಿ ಕೆಲವರು ಏಸ ಧಮ್ಮೊ ಸನಾತನೊ ಎಂಬುದನ್ನು this is a timeless truth, this is a truth eternal ಎಂದು ಮಾಡಿರುವುದು ಸರಿಯಾಗಿದೆ. ಏಕೆಂದರೆ, ಗಾಥೆಯಲ್ಲಿ ಬರುವ ಸಾಂದರ್ಭಿಕ ಅರ್ಥ 'ಕಾಲಾತೀತ ಸತ್ಯ' ಎಂಬುದಾಗಿದೆ. ಸನಾತನ ಪದ ಬಳಕೆಯೊಂದರಿಂದಲೇ ಬುದ್ಧ ಜಾತಿ ತಾರತಮ್ಯವನ್ನು ಬೆಂಬಲಿಸಿದ್ದಾನೆ ಎನ್ನುವುದು ಅಧಿಕಪ್ರಸಂಗವಾಗುತ್ತದೆ. ಮೇಲಾಗಿ ಬುದ್ಧ 'ಯಾವುದೂ ಶಾಶ್ವತವಲ್ಲ, ಎಲ್ಲವೂ ಬದಲಾಗುತ್ತವೆ' ಎಂದು ಹೇಳಿದ್ದಾನೆ. ಇದು ಅವನು ಹೇಳಿದ ಮೂರು ಮೂಲತತ್ವಗಳಲ್ಲಿ ಒಂದು. ಅವುಗಳೆಂದರೆ ಅನಿಶ್ಚಿತತೆ, ದುಃಖ ಮತ್ತು ಅನಾತ್ಮ. ಹಾಗೆಯೇ, ಆರ್ಯಸತ್ಯವೆಂದರೆ ಶ್ರೇಷ್ಠ ಸತ್ಯ ಎಂದರ್ಥ. ಅದನ್ನು ಜನಾಂಗೀಯ ಪದವಾಗಿ ಬುದ್ಧ ಬಳಸಿಲ್ಲ. ಇನ್ನು, ಬೌದ್ಧಧರ್ಮದ ಮೂರನೆಯ ತತ್ವ ಅನಾತ್ಮ. ಸಂಯೋಜಕವಲ್ಲದ ಯಾವ ವಸ್ತುವಿಗೂ ಅಸ್ತಿತ್ವವಿಲ್ಲ ಎಂದು ವೈಜ್ಞಾನಿಕವಾಗಿ ದೃಢಪಡಿಸಿದ ಬುದ್ಧ ಆತ್ಮದ ಇರುವನ್ನು ಒಪ್ಪಲಿಲ್ಲ. ಸನಾತನ ಎಂದರೆ ಪ್ರಾರಂಭವಿಲ್ಲದ್ದು, ಶಾಶ್ವತವಾದದ್ದು ಎಂದು ಅವರೇ ಹೇಳಿದ್ದಾರೆ. ಈ ಅರ್ಥದಲ್ಲಿ ಬೌದ್ಧಧರ್ಮ ಸನಾತನ ಅಲ್ಲ. ಅದಕ್ಕೆ ಪ್ರಾರಂಭವಿದೆ. ಬುದ್ಧನೆಂಬ ಒಬ್ಬ ಗುರು ಇದ್ದಾನೆ ಮತ್ತು ಅವನ ಬೋಧನೆ ಇದೆ.

ಬುದ್ಧ ವೇದಪ್ರಾಮಣ್ಯವನ್ನು, ವರ್ಣಾಶ್ರಮವನ್ನು, ಹುಟ್ಟಿನಿಂದ ಬರುವ ಜಾತಿ ಶ್ರೇಷ್ಠತೆಯನ್ನು ಸ್ಪಷ್ಟವಾಗಿ ನಿರಾಕರಿಸುವ ಅನೇಕ ಸುತ್ತಗಳಿವೆ. ಯಜ್ಞಶಾಲೆಗಳ ಮುಂದೆ ಶಿಷ್ಯರೊಡನೆ ಧರಣಿ ಕುಳಿತು ಗೋವಧೆಯನ್ನು ನಿಲ್ಲಿಸಿದವನು ಬುದ್ಧ. ಇವತ್ತಿನ ಹಿಂದೂ ಧರ್ಮ ಬೌದ್ಧ ತತ್ವಗಳ ಅಳವಡಿಕೆಯಿಂದಲೇ ಮೆದುವಾಗಿದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಹಿಂದೂ ಧರ್ಮದ ಪುನರುತ್ಥಾನಕಾರರಾದ ಶಂಕರಾಚಾರ್ಯರು ಪ್ರಚ್ಛನ್ನ ಬೌದ್ಧ ಎನಿಸಿಕೊಂಡಿದ್ದರು ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಹೀಗೆ ಹಿಂದೂ ಧರ್ಮವು ಸಂಕಷ್ಟಕ್ಕೆ ಸಿಲುಕಿದಾಗಲೆಲ್ಲಾ ಬೌದ್ಧವನ್ನು ಆಶ್ರಯಿಸುವುದು ಕಾಲಾಂತರದಿಂದ ನಡೆದುಕೊಂಡು ಬಂದಿದೆ. ಆದರೆ ಮೂಲ ಸತ್ಯಗಳನ್ನು ತಿರುಚಿ ದಾರಿತಪ್ಪಿಸುವ ಕೆಲಸ ಎಂದಿಗೂ ತರವಲ್ಲ.

ಮೂಡ್ನಾಕೂಡು ಚಿನ್ನಸ್ವಾಮಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ರಾಜ್ಯದ ಮೈಸೂರು ಭಾಗದಲ್ಲಿ ಮಹಿಷ ದಸರಾ ಹಲವು ವರ್ಷಗಳಿಂದ ನಡೆದುಕೊಂಡು ಬಂದಿದೆ. ಈ ಬಾರಿಯೂ ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಮಹಿಷ ದಸರಾ ಆಚರಣೆಗೆ ಸಿದ್ಧತೆ ನಡೆದಿದೆ. ಆದರೆ, ಈ ಬಾರಿ ಅದಕ್ಕೆ ವಿರೋಧ ವ್ಯಕ್ತವಾಗಿದೆ. ಮಹಿಷ ದಲಿತ/ತುಳಿತಕ್ಕೆ ಒಳಗಾದವನು. ಹೀಗಾಗಿ ಆತನ ದಸರಾ ಆಚರಿಸುತ್ತೇವೆ ಎಂಬುವವರು ಒಂದೆಡೆಯಾದರೆ, ಮಹಿಷ ದಸರಾಕ್ಕೆ ಅವಕಾಶ ನೀಡುವುದಿಲ್ಲ ಎನ್ನುವವರು ಇನ್ನೊಂದೆಡೆ. ಇದರ ಮಧ್ಯೆ, ಮಹಿಷ ನಿಜಕ್ಕೂ ಯಾವ ಸಮುದಾಯದ ಪ್ರತಿನಿಧಿ? ಚಾಮುಂಡಿ ಯಾರು ಎಂಬ ಚರ್ಚೆ ಮುನ್ನೆಲೆಗೆ ಬಂದಿದೆ

ಮಹಿಷಾಸುರ ಯಾರು?

• ಪ್ರತಿಭಾ ನಂದಕುಮಾರ್

ಈಚೆಗೆ ಮಹಿಷಾಸುರನ ಬಗ್ಗೆ ಎದ್ದಿರುವ ವಾದ ವಿವಾದಗಳು ಒಂದು ದೃಷ್ಟಿಯಿಂದ ಬಹುಜನ ಸಮಾಜವು ತನ್ನ ಸಂಸ್ಕೃತಿಯನ್ನು ಮರುಪಡೆದುಕೊಳ್ಳುವ (ರಿಕ್ಲೇಮಿಂಗ್ ಕಲ್ಚರ್) ದೃಷ್ಟಿಯಿಂದ ನಡೆದಿರುವ ಹೋರಾಟ. ಇನ್ನೊಂದು ದೃಷ್ಟಿಯಿಂದ ಐದು ಸಾವಿರ ವರ್ಷಗಳ ಕಾಲ ಜಾಗತಿಕ ನೆಲೆಯಲ್ಲಿ ಜಾರಿಯಲ್ಲಿರುವ ಸಾಂಸ್ಕೃತಿಕ- ಧಾರ್ಮಿಕ ನೆಲೆಯ ಸಂಸ್ಕೃತಿ ಪಠ್ಯಗಳನ್ನು ಮರುಪರಿಶೀಲನೆಗೊಳಪಡಿಸುವ ಅಗತ್ಯದ ಕಡೆಗೆ ಬೆರಳು ಮಾಡುತ್ತಿದೆ. ಜಾಗತಿಕ ಎನ್ನುವುದರ ಪ್ರಸ್ತುತತೆ ಏನೆಂದರೆ ಕೋಣ-ದೇವಿ-ಬಲಿ-ಧಾರ್ಮಿಕ ಆಚರಣೆ ಜಗತ್ತಿನ ಹಲವಾರು ಸಂಸ್ಕೃತಿಗಳಲ್ಲಿ ಇದೆ.

ಸಮಾಜದಲ್ಲಿ ಆಗುತ್ತಿರುವ ಸ್ಥಿತ್ಯಂತರಗಳಿಂದಾಗಿ, ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ಆಚರಣೆಗಳು ಪ್ರಶ್ನೆಗೊಳಗಾಗುತ್ತಿವೆ. ನಂಬಿಕೆಗಳಲ್ಲಿ ಬದಲಾವಣೆಗಳು ಅತ್ಯಂತ ಸಹಜ. ಆದರೆ ಹೊಸ ವಾದ ಮಂಡಿಸುವಾಗ ಅದರಲ್ಲಿ ಹುರುಳಿಲ್ಲದಿದ್ದರೆ ಅದರ ನಿರಾಕರಣೆಯೂ ಸಹಜ. ಪ್ರಸ್ತುತ ಮಹಿಷಾಸುರ ಮತ್ತು ಅವನನ್ನು ಕೊಂದ ದೇವಿಯ ಬಗ್ಗೆ ಚಿತ್ರವಿಚಿತ್ರ ವಾದಗಳು ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ಕೆಲವು ಸಂಗತಿಗಳನ್ನು ಗಮನಿಸೋಣ.

ಅಸುರನನ್ನು ಕೊಂದ ದುರ್ಗೆಯೇ ನಮ್ಮ ದೇವತೆ ಎಂದು ನಂಬಿ ಪೂಜಿಸಲು ಸಕಲರಿಗೂ ಸರ್ವ ಸ್ವಾತಂತ್ರ್ಯವಿದೆ. ಹಾಗೆಯೇ ಮಹಿಷಾಸುರನೇ ನಮ್ಮ ದೇವರು, ಅವನನ್ನೇ ಪೂಜಿಸುತ್ತೇವೆ ಎಂದವರಿಗೂ ಹಾಗೇ ಮಾಡಲು ಸರ್ವ ಸ್ವಾತಂತ್ರ್ಯವಿದೆ. ನವರಾತ್ರಿ ಉತ್ಸವ ಬೇಡ ಎನ್ನಲೂ ಮಹಿಷದಸರಾ ಬೇಡ ಎನ್ನಲೂ ಇಬ್ಬರಿಗೂ ಸ್ವಾತಂತ್ರ್ಯವಿಲ್ಲ. ಯಾಕೆಂದರೆ ಎರಡೂ ಗುಂಪುಗಳಿಗೆ ತಮ್ಮ ಮನಸೋ ಆಚರಣೆಯ ಸ್ವಾತಂತ್ರ್ಯವನ್ನು ಸಂವಿಧಾನ ಕೊಟ್ಟಿದೆ.

ಆದರೆ ಇಲ್ಲಿ ಘರ್ಷಣೆಗೆ ಹಲವಾರು ಕಾರಣಗಳಿವೆ. ಮುಖ್ಯವಾಗಿ ಮಹಿಷಾಸುರ ಮತ್ತು ದುರ್ಗೆ ಎರಡಕ್ಕೂ ಮೂಲ ಒಂದೇ: ದೇವಿ ಮಹಾತ್ಮೆ. ಅದನ್ನು ಬಿಟ್ಟು ಬೇರೆ ಪಠ್ಯಗಳಿಲ್ಲ. ಅದೊಂದೇ ಕಥೆಯ ಬೇರೆಬೇರೆ ಅವತರಣಿಕೆಗಳು ಇವೆ. ಅವೆಲ್ಲವೂ ಪುರಾಣಗಳೇ. ಮಹಿಷಾಸುರನ ಅತ್ಯಂತ ಪುರಾತನ ಉಲ್ಲೇಖ ಪುರಾಣದಲ್ಲಿದೆ ಹೊರತು ಚರಿತ್ರೆಯಲ್ಲಿಲ್ಲ. ಪುರಾಣವನ್ನು ನೇರವಾಗಿ ಇತಿಹಾಸದ ದಾಖಲೆ ಎನ್ನಲು ಸಾಧ್ಯವಿಲ್ಲ. ಹಾಗಾಗಿ ಮಹಿಷಾಸುರ ಪೌರಾಣಿಕ ವ್ಯಕ್ತಿಯೇ ಹೊರತು ಚಾರಿತ್ರಿಕ ವ್ಯಕ್ತಿ ಅಲ್ಲ. ಒಂದು ವೇಳೆ ಮಹಿಷಾಸುರ ಚಾರಿತ್ರಿಕ ವ್ಯಕ್ತಿ ಎಂದು ಒಪ್ಪಿಕೊಂಡರೆ ದೇವಿಯ ಅಸ್ತಿತ್ವವನ್ನೂ ಚಾರಿತ್ರಿಕ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಅದನ್ನು ಸಾಬೀತು ಮಾಡುವ ಭರದಲ್ಲಿ ದುರ್ಗೆಯ ಬಗ್ಗೆ ಅಸಂಬದ್ಧವಾಗಿ ಬಾಯಿಗೆ ಬಂದಂತೆ ಹೇಳುತ್ತಾ (ಚಾಮುಂಡಿ ಆರ್ಯ ಮಹಿಳೆ, ವೇಶ್ಯೆ, ಮೋಸದಿಂದ ಮಹಿಷಾಸುರನನ್ನು ಕೊಂದವಳು ಇತ್ಯಾದಿ) ಉದ್ದೇಶಪೂರ್ವಕ ಗೊಂದಲ ಎಬ್ಬಿಸುವ ಪ್ರಯತ್ನ ಪ್ರಶ್ನಾರ್ಹ. ದಮನಿತರದು ಮೌಖಿಕ ಇತಿಹಾಸವಾದ್ದರಿಂದ ದಾಖಲೆಯಾಗಿಲ್ಲ ಸರಿ. ಅದನ್ನು ಭಾಗಶಃ ಒಪ್ಪಿ ಉಳಿದದ್ದನ್ನು ನಿರಾಕರಿಸಲು ಹೊರಟರೆ ಯಾರ ಸತ್ಯ ಯಾವುದು ಎನ್ನುವ ಗೊಂದಲ ಆಗುತ್ತದೆ.

ಉತ್ತರದವರು ಚಂಡಿ, ಚಾಮುಂಡಾ ಎನ್ನುತ್ತಾರೆ. ಅವಳು ಘೋರ ರೂಪಿ. ಅವಳ ಮೂರ್ತಿಕಲ್ಪನೆ ದುರ್ಗೆಗೆ ಸಂಪೂರ್ಣ ವ್ಯತಿರಿಕ್ತ. ದೇವಿ ಮಹಾತ್ಮೆಯಲ್ಲಿ ಚಂಡಿಯ ವರ್ಣನೆಯನ್ನು ವಿವರವಾಗಿ ಗಮನಿಸಿದರೆ ಅದು ಮಹಾಭಾರತದಲ್ಲಿ ಶಲ್ಯ, ಕರ್ಣನನ್ನು ಹೀಯಾಳಿಸಲು ನಿಮ್ಮ ಆದಿವಾಸಿ ಹೆಣ್ಣುಗಳು ಎಷ್ಟು ಅಸಹ್ಯ ಎಂದು ವರ್ಣಿಸಿದ್ದು ನೆನಪಾಗುತ್ತದೆ. ಅವರ ಆಕಾರ ಗುಣ ಎಲ್ಲವನ್ನೂ ಅವನು ಬಹಳ ಕೇವಲವಾಗಿ ಧಿಕ್ಕರಿಸುತ್ತಾನೆ. ಹಾಗಾಗಿ ವಾಸ್ತವವಾಗಿ ಮಹಿಷಾಸುರನನ್ನು ಮರುವ್ಯಾಖ್ಯಾನಿಸುವ ಬಹುಜನರು, ಬೇಡರ ದೇವತೆ ಚಾಮುಂಡಿಯನ್ನು ಬೇಡರವಳೋ ಅಥವಾ ಆರ್ಯಳೋ ಎನ್ನುವುದನ್ನು ಮೊದಲು ನಿರ್ಣಯ ಮಾಡಬೇಕಾಗುತ್ತದೆ.

ಅವಳು ಪಾನಾಲಸಾಮತ್ತಲು, ರಕ್ತವರ್ಣೆ, ರಕ್ತಾಕ್ಷಿ, ಬಡಕಲು ಪ್ರೇತದಂತಹ ದೇಹದವಳು. ಜೋತ ಮೊಲೆ ಉಳ್ಳವಳು. ಸತ್ತ ನರಿಯನ್ನೇ ಸೊಂಟಕ್ಕೆ ಕಟ್ಟಿಕೊಂಡಿದ್ದಾಳೆ. ಅವಳ ಸುತ್ತ ರಕ್ತಕ್ಕಾಗಿ ಬಾಯಿ ಬಿಡುವ ಪ್ರೇತಗಣಗಳಿವೆ. ಅವಳೇ ರಕ್ತಬೀಜನನ್ನು ನುಂಗಲು ನಾಲಿಗೆಯನ್ನು ನೆಲದಷ್ಟಕ್ಕೂ ಹಾಸಿ ಅವನ ರಕ್ತ ಕುಡಿದವಳು. ಬಲಿ ಕೇಳುವ ಶಕ್ತಿ ದೇವತೆ. ಅವಳೇ ಮಾರಮ್ಮ. ಮಾರಮ್ಮನ ವರ್ಣಸಂಕರದ ಕಥೆಯೇ ಚಾಮುಂಡೇಶ್ವರಿ ಎನ್ನುವ ಹೆಸರಿನಲ್ಲಿ ಮಹಿಷಾಸುರಮರ್ಧಿನಿ ಬೆಟ್ಟದ ಮೇಲೆ ನೆಲೆಸಿದರೆ, ತಪ್ಪಲಿನ ಉತ್ತನಹಳ್ಳಿಯಲ್ಲಿ ಮಾರಮ್ಮನಾಗಿ ಮತ್ತೆ ಸಂಸ್ಕೃತೀಕರಣಗೊಂಡು ಜ್ವಾಲಾಮುಖಿಯಾಗಿದ್ದಾಳೆ ಎಂಬ ಪರಿಕಲ್ಪನೆ ಇದೆ.

ಮುಖ್ಯವಾಗಿ ಸಂತಾಲರು ಮಹಿಷಾಸುರ ನಮ್ಮ ದೊರೆ ಎಂದು ನಂಬಿದ್ದಾರೆ. ಜಾರ್ಖಂಡ್, ಪಶ್ಚಿಮ ಬಂಗಾಳ, ಒಡಿಶಾ, ಬಿಹಾರ ಮತ್ತು ನೇಪಾಳದಲ್ಲಿ ಬಹುಸಂಖ್ಯೆಯಲ್ಲಿ ವಾಸವಾಗಿರುವ ಸಂತಾಲರಿಗೆ ಮಹಿಷಾಸುರ ರಾಜ. ಅತ್ತ ಮಹಿಷಾಸುರನು ಬ್ರಹ್ಮರ್ಷಿ ಕಶ್ಯಪನ ಮೊಮ್ಮಗ, ಕಶ್ಯಪನ ಮಗ ಬ್ರಹ್ಮನಿಂದ ವರ ಪಡೆದ ರಂಭಾಸುರ ಮಹಿಷಾಸುರನ ತಂದೆ ಎನ್ನುವ ಕಥೆ ಪರಿಗಣಿಸಿದರೆ ಕಶ್ಯಪನಿಂದಲೇ ಕಾಶ್ಮೀರ ಎನ್ನುವ ಹೆಸರು ಬಂದಿತು. ಹಾಗಾಗಿ ಕಾಶ್ಮೀರದಲ್ಲೂ ಮಹಿಷಾಸುರಮರ್ಧಿನಿಯ ಕತೆ ಇದೆ.

ಐದನೇ ಶತಮಾನದ ಬೌದ್ಧ ತತ್ವಜ್ಞಾನಿ ಬುದ್ಧಘೋಷ ನೀಡಿರುವ ವಿವರಣೆಯಂತೆ ಅಸುರರ ಹೆಸರು ಬಂದಿದ್ದು ಶಕ್ರ ಎನ್ನುವ ಸುರನ ಕೈಯಲ್ಲಿ ಸೋತಾಗ. ಅಸುರರು ಕುಡಿದು ಉನ್ಮತ್ತರಾಗಿ ಕೆಟ್ಟದಾಗಿ ನಡೆದುಕೊಂಡಾಗ ಅವರನ್ನು ಸುಮೇರು ಪರ್ವತದಿಂದ ಹೊರಗೆ ತಳ್ಳಲಾಯಿತು. ಅಂದಿನಿಂದ ಅವರು ಸುರಾಪಾನ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದರು. ಬೌದ್ಧ ಸಾಹಿತ್ಯದಲ್ಲಿ ಅವರನ್ನು ಪೂರ್ವದೇವರೆಂದು (ಪಾಳಿಯಲ್ಲಿ ಪುಬ್ಬದೇವ) ಕರೆಯಲಾಗಿದೆ. ಬೌದ್ಧ ಪುರಾಣದಲ್ಲಿ ಹೇಳಿರುವ ಸುಮೇರು ಪರ್ವತದ ತಪ್ಪಲಿನಲ್ಲಿ ವಾಸವಾಗಿದ್ದ ಅಸುರರಲ್ಲಿ ಮಹಿಷಾಸುರನೂ ಒಬ್ಬ. ಮಹಾಯಾನ ಪಠ್ಯಗಳ ಪ್ರಕಾರ ಅಸುರರು ಸುಮೇರು ಪರ್ವತದ ಉತ್ತರಭಾಗದಲ್ಲಿ ಸಮುದ್ರದ ಕೆಳಗೆ 84,000 ಯೋಜನೆ ವಿಸ್ತಾರದಲ್ಲಿ ವಾಸಿಸುತ್ತಾರೆ. ಅಂದರೆ ಯಾವುದೇ ಬೌದ್ಧ ಪಠ್ಯಗಳಲ್ಲಿ ಅಸುರರು ದಕ್ಷಿಣ ಭಾರತದಲ್ಲಿ ಇದ್ದರು ಎಂದಾಗಲೀ, ಮಹಿಷಾಸುರ ಮಾಹಿಷ್ಮತಿಯನ್ನು ಆಳುತ್ತಿದ್ದ ಬೌದ್ಧ ದೊರೆ ಎನ್ನುವುದಕ್ಕಾಗಲೀ ಯಾವುದೇ ಸಾಕ್ಷಿ ಸಿಗುವುದಿಲ್ಲ. ರಾಜಸ್ಥಾನದಲ್ಲಿ ಮಣ್ಣು ಅಚ್ಚಕೆಂಪಾಗಿರಲು ಕಾರಣ ಮಹಿಷಾಸುರನ ರಕ್ತದಿಂದ ಎನ್ನುತ್ತಾರೆ. ಇನ್ನು ಉಳಿದ ಕಡೆಗಳ ಕಥೆಗಳನ್ನು ಬಿಡಿ. ಇವರೆಲ್ಲರೂ ತಮ್ಮ ಮಹಿಷಾಸುರನನ್ನು ಮೈಸೂರಿಗೇ ಸೀಮಿತಗೊಳಿಸಲು ಒಪ್ಪುತ್ತಾರೆಯೇ? ಹಾಗೆ ಮಾಡಿದರೆ ದೇಶದಾದ್ಯಂತ ಸಂಸ್ಕೃತಿ ಕದನಕ್ಕೆ ಕಾರಣವಾಗಿ ಬಿಡಬಹುದು.

ಇಷ್ಟಲ್ಲದೆ ಬಲಿಯ ಕೋಣ (the sacrificial bull) ಎನ್ನುವ ಪರಿಕಲ್ಪನೆ ಆರ್ಯ, ದ್ರಾವಿಡ, ಗ್ರೀಕ್, ಸುಮೇರಿಯನ್, ಜೋರಾಷ್ಟ್ರಿಯನ್, ಬೌದ್ಧ, ಆಫ್ರಿಕನ್, ಚೀನಿ, ಜಪಾನ್, ಇಂಡೋನೇಷ್ಯನ್, ಬರ್ಮನ್, ಕಾಂಬೋಡಿಯನ್ ಇತ್ಯಾದಿ ಇನ್ನೂ ಅನೇಕ ಸಂಸ್ಕೃತಿಗಳಲ್ಲಿ ಹಾಸುಹೊಕ್ಕಾಗಿದೆ. ಅಂದರೆ ಈಗ ಅವುಗಳ ನಡುವೆ ಸಂಬಂಧ ಕಲ್ಪಿಸುವ ಅಥವಾ ವ್ಯತ್ಯಾಸ ಗುರುತಿಸುವ ಕೆಲಸ ಬಹಳ ಕಷ್ಟ. ಶಕ್ತಿಶಾಲೀ ಹೆಣ್ಣೊಬ್ಬಳು ಕೋಣವನ್ನು ಕೊಂದ ಪರಿಕಲ್ಪನೆ ಇವೆಲ್ಲವುಗಳಲ್ಲಿ ಸಾಮಾನ್ಯವಾಗಿದೆ ಮತ್ತು ಅವಷ್ಟೂ ಸಂಸ್ಕೃತಿಗಳು ಮಹಿಷನನ್ನು ತಮ್ಮವನು ಎಂದು ಹೇಳುತ್ತವೆ. ಮಹಿಷಾಸುರನ ಮೂಲ ನೆಲೆ ಯಾವುದು?

ಆದರೆ ಮೌಖಿಕ ಚರಿತ್ರೆಯನ್ನೇ ನಂಬಿ ಬಂದ ದಲಿತ ಬಹುಜನ ಸಮಾಜ ಮಹಿಷಾಸುರನನ್ನು - ಹಲವು ಗೊಂದಲಗಳ ನಡುವೆಯೂ - ತಮ್ಮ 'ರಿಕ್ಲೇಮಿಂಗ್ ಕಲ್ಚರ್' ಹೋರಾಟಕ್ಕೆ ಒಂದು ಐಕಾನ್ ಆಗಿ ಮಾಡಿಕೊಂಡರೆ, ಮಹಿಷ ದಸರಾ ಆಚರಿಸಬೇಕೆಂದು ಬಯಸಿದರೆ ಅದಕ್ಕೆ ಭಯ ಬಿದ್ದು ಅದನ್ನು ವಿರೋಧಿಸುವುದು, ಮಾಡಲು ಬಿಡುವುದಿಲ್ಲವೆಂದು ಧರಣಿ ಕೂರುವುದು, ಗಲಾಟೆ ಮಾಡುವುದು ಇತ್ಯಾದಿಗಳ ಅಗತ್ಯವಿಲ್ಲ. ಐದು ಸಾವಿರ ವರ್ಷಗಳಲ್ಲಿ ಆಗದೇ ಇರುವ ಹಾನಿ ಈಗೇನೂ ಆಗುವುದಿಲ್ಲ.

ಚಿನುವಾ ಅಚೆಬೆ ಹೇಳಿದಂತೆ 'ಸಿಂಹಗಳು ತಮ್ಮದೇ ಆದ ಇತಿಹಾಸಕಾರರನ್ನು ಹೊಂದುವವರೆಗೆ, ಬೇಟೆಯ ಇತಿಹಾಸವು ಯಾವಾಗಲೂ ಬೇಟೆಗಾರನನ್ನು ವೈಭವೀಕರಿಸುತ್ತದೆ'. ಹಾಗೆಂದು ಪುರಾಣ ಮತ್ತು ಇತಿಹಾಸದ ನಡುವಿನ ವ್ಯತ್ಯಾಸ ಗೊತ್ತಿಲ್ಲದಿದ್ದರೆ ಅಪಾಯ ಕಟ್ಟಿಟ್ಟಿದ್ದು.

ಲೇಖಕಿ: ಪತ್ರಕರ್ತೆ, ಕವಯತ್ರಿ

ಬಹುಜನ ದಲಿತರ ವಾದಕ್ಕೆ ಧಕ್ಕೆ?

ಮಹಿಷಾಸುರನಿಗೂ ಮೊದಲು, ಚಂಡ ಮುಂಡ ಎನ್ನುವ ಇಬ್ಬರು ಅಸುರರನ್ನು ಕೊಂದು ಅವರ ಶಿರಗಳನ್ನು ತಂದು ಕಾಳಿಯು ಮಹಾದೇವಿ ದುರ್ಗೆಯ ಕಾಲ ಬಳಿ ಇಟ್ಟಾಗ ದೇವಿ, ಚಂಡ ಮುಂಡರನ್ನು ಕೊಂದಿದ್ದರಿಂದ ಇನ್ನುಮುಂದೆ ನೀನು ಚಾಮುಂಡಾ ಎಂದು ಪ್ರಖ್ಯಾತಿಯಾಗು ಅನ್ನುತ್ತಾಳೆ. ಮೈಸೂರಿನಲ್ಲಿ ನೆಲೆಯಾಗಿರುವವಳು ಚಾಮುಂಡೇಶ್ವರಿ. ಚಂಡಮುಂಡರನ್ನು ಕೊಂದವಳು. ಆದರೆ ಅದೊಂದು ಸಣ್ಣ ವಿವರಣೆ.

ಸೂಕ್ಷ್ಮ ವಿವರಗಳನ್ನು ಬಿಟ್ಟು ಅವಳೇ ಮಹಿಷಾಸುರಮರ್ಧಿನಿ ಎಂದು ಭಾವಿಸಿದರೂ ಅವಳು ರಕ್ತವರ್ಣೆ, ದ್ರಾವಿಡ ಹೆಣ್ಣು. ಯಾಕೆಂದರೆ ಸ್ಥಳೀಯ ದ್ರಾವಿಡ ಸಂಸ್ಕೃತಿಯ ದೇವರುಗಳನ್ನು ವೈದಿಕ ದೇವಗಣಗಳಲ್ಲಿ ಮೇಳೈಸಿಕೊಳ್ಳುವ ಪರಿಪಾಟ ಬಹಳವಾಗಿದ್ದರಿಂದ ಬೇಡರ ದೇವತೆ ಚೌಡಿಯನ್ನು ಅವರು ದುರ್ಗೆ ಎಂದು ಸೇರಿಸಿಕೊಂಡುಬಿಟ್ಟರು. ತಮಿಳರು ಇನ್ನೂ ಬಲವಾಗಿ ತಮ್ಮ ಕೊಟ್ರಾವ್ವೆ ಎನ್ನುವ ಬೇಡರ ದೇವತೆಯೇ ದುರ್ಗೆ ಎಂದು ವಾದಿಸುತ್ತಿದ್ದಾರೆ. ಈ ವಾದದ ಅನುಸಾರ ದ್ರಾವಿಡ ಬೇಡರ ಹೆಣ್ಣನ್ನು ವೈದಿಕರ ಆರ್ಯ ದುರ್ಗೆಯಾಗಿ ಮಾರ್ಪಡಿಸಿಕೊಂಡರು ಎಂದು ಒಪ್ಪಿಕೊಂಡರೆ, ಮಹಿಷಾಸುರನನ್ನು ಆರ್ಯರ ಹೆಣ್ಣು ಚಾಮುಂಡಿ/ದುರ್ಗೆ ಮೋಸದಿಂದ ಸಂಹರಿಸಿದಳು ಎನ್ನುವ ವಾದಕ್ಕೆ ಧಕ್ಕೆಯಾಗುವುದಿಲ್ಲವೇ?

ಉಲ್ಲೇಖಗಳು

- ರಾಮಾಯಣದಲ್ಲಿ ದುರ್ಗಿಯ ಉಲ್ಲೇಖ - ಕ್ರಿ.ಪೂ. 8 ನೇ ಶತಮಾನ
- ಮಹಾಭಾರತದಲ್ಲಿ ದುರ್ಗಿ ಮತ್ತು ಮಹಿಷಮಂಡಲ, ಮಾಹಿಷ್ಮತಿಯ ಪ್ರಸ್ತಾಪ. - ಕ್ರಿ.ಪೂ. 3 ನೇ ಶತಮಾನ
- ಬುದ್ಧನ ಕಾಲ 563 - ಕ್ರಿ.ಪೂ. 480
- ತಮಿಳಿನ ತೊಳ್ಕಾಪ್ಪಿಯಂನಲ್ಲಿ ಎರುಮೈನಾಡು ಪ್ರಸ್ತಾಪ, ಕೊಟ್ರಾವ್ವೆ ದೇವಿ, ಇವಳೇ ದುರ್ಗೆ ಎನ್ನುತ್ತಾರೆ - ಕ್ರಿ.ಪೂ. ಕಾಲ ನಿರ್ಣಯ ನಿರ್ಧಾರವಿಲ್ಲ
- ಅಶೋಕನ ತಂದೆ ಬಿಂದುಸಾರನ ಕಾಲದಲ್ಲಿ ಮಹಿಷಮಂಡಲದ ಪ್ರಸ್ತಾಪ - ಕ್ರಿ.ಪೂ. 297 – 272
- ಅಶೋಕ ಮಹಿಷಮಂಡಲಕ್ಕೆ ಥೇರ ಮಹಾದೇವ ಭಿಕ್ಕುವನ್ನು ಕಳಿಸಿದ್ದು - ಕ್ರಿ.ಪೂ. 245
- ಹಾಗಾಗಿ ಭಿಕ್ಕು ಥೇರ ಮಹದೇವನೇ ಮಹಿಷಾಸುರನಾಗುವುದು, ಸಂಹಾರದ ನಂತರ ಮಹಿಷನೂರು - ಮಹಿಶೂರು - ಮೈಸೂರು ಎಂದು ಹೆಸರಾಗುವುದು ಎನ್ನುವ ವಾದಕ್ಕೆ ಬಲವಿಲ್ಲ.

ಮಹಿಷನಿಗಷ್ಟೇ ಸೀಮಿತವೇ?

ಮಹಿಷಾಸುರನಿಗೆ ಉಗ್ರವೀರ್ಯ, ಉಗ್ರಾಸ್ಯ, ಪ್ರಲಂಬ, ಪ್ರಭಂಜನ, ಸಾರಣ, ಕೃಕಲಾಸ, ಕಾಕವಕ್ರ, ವಿಶಂಕಟ ಎನ್ನುವ ಬಲಶಾಲೀ ಮಕ್ಕಳಿದ್ದರು. ಅವರೆಲ್ಲ ಯುದ್ಧಕ್ಕೆ ಬಂದರು. ಜೊತೆಗೆ ಭೇರುಂಡ, ಕಾಕತುಂಡ, ಕುರಂಡ, ಚಂಡ ವಿಕ್ರಮ, ಭಾಂಡೀರ, ಡಿಂಭ, ಕ್ರಕಚ, ಕಾಚಕಾಂತ, ಕಾಟೊತ್ಕಟ ಎನ್ನುವ ಒಂಬತ್ತು ಮಂತ್ರಿಗಳಿದ್ದರು. ಇವರೆಲ್ಲ ಒಬ್ಬೊಬ್ಬರೂ ಕೋಟಿಗಟ್ಟಲೆ ಸೈನ್ಯಸಹಿತ ಯುದ್ಧಕ್ಕೆ ಬಂದರು. ಅಷ್ಟೆಲ್ಲ ಸೈನ್ಯ ಮತ್ತು ಮಹಾವೀರರನ್ನು ದೇವಿ ಸಂಹರಿಸಿ, ಮಹಿಷಾಸುರನನ್ನೂ ವಧಿಸಿದ ನಂತರವೂ ಯುದ್ಧ ಮುಗಿಯಲಿಲ್ಲ. ಕೊನೆಗೆ ಶುಂಭ ನಿಶುಂಭರ ವಧೆಯಾಗುವವರೆಗೆ ಮುಂದುವರಿಯಿತು ಎಂದೂ ಪುರಾಣ ಹೇಳುತ್ತದೆ. ಈ ಎಲ್ಲಾ ಅಸುರ ವೀರರನ್ನೂ ಬಹುಜನರು ತಮ್ಮವರೆಂದು ಒಪ್ಪಿಕೊಳ್ಳುತ್ತಾರೆಯೇ? ಅಥವಾ ಮಹಿಷಾಸುರನಿಗೆ ಮಾತ್ರ ಇದು ಸೀಮಿತವೇ?

ಮಿಠಾಯಿ ಮಾರುವವನ ಕಥೆ


ದೀಕ್ಷಾ ಬೀಸೆ

ಉತ್ತರ ಕರ್ನಾಟಕ ಸೊಗಡಿನ ಭಾಷೆ, ಕಥೆಯನ್ನು ಹೊಂದಿರುವ 'ಸೈಕಲ್ ಸವಾರಿ' ಚಿತ್ರದ ಹಾಡು, ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ದೇವು ಕೆ.ಅಂಬಿಗ ನಿರ್ದೇಶನದ ಚಿತ್ರಕ್ಕೆ ಸುರೇಶ್ ಶಿವೂರ ಹಾಗೂ ಲೋಕೇಶ್ ಸವದಿ ಬಂಡವಾಳ ಹೂಡಿದ್ದಾರೆ.

'ಹಳ್ಳಿಯಲ್ಲಿ ಮಿಠಾಯಿ ಮಾರಿಕೊಂಡು ಜೀವನ ನಡೆಸುತ್ತಿದ್ದ ಯುವಕನೊಬ್ಬನನ್ನು ಶ್ರೀಮಂತ ಮನೆತನದ ಯುವತಿಯು ಪ್ರೀತಿಸಿದಾಗ ಏನಾಗಬಹುದು ಎಂಬುದನ್ನು ಈ ಚಿತ್ರದಲ್ಲಿ ಹೇಳಿದ್ದೇವೆ. ಲಾಕ್‌ಡೌನ್ ಸಮಯದಲ್ಲಿ ಎರಡು ಪಾತ್ರಗಳನ್ನಿಟ್ಟುಕೊಂಡು ಕಿರುಚಿತ್ರವೊಂದನ್ನು ನಿರ್ದೇಶನ ಮಾಡಬೇಕೆಂದು ಈ ಕಥೆ ಬರೆದಿದ್ದೆ. ನಂತರ ಅದು ಸಿನಿಮಾವಾಯಿತು. ನವೆಂಬರ್ 3ರಂದು ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ದೇಶಕರು.

ಈ ಚಿತ್ರದಲ್ಲಿ ನಿರ್ದೇಶಕ ದೇವು ನಾಯಕನಾಗಿಯೂ ನಟಿಸಿದ್ದಾರೆ. ವಿಜಯಪುರದ ದೀಕ್ಷಾ ಬೀಸೆ ನಾಯಕಿ. ರೋಹನ್ ಎಸ್. ದೇಸಾಯಿ ಅವರ ಸಂಗೀತ, ಛಾಯಾಗ್ರಹಣ ಚಿತ್ರಕ್ಕಿದೆ. ❖

ತೆರೆಗೆ ಬರಲು ಸಿದ್ಧವಾದ 'ಕಚೋರಿ'

ಬಹುತೇಕ ಹೊಸಬರೇ ನಿರ್ಮಿಸಿರುವ 'ಕಚೋರಿ' ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ನಾಯಕ ಆರ್ಯನ್ ನಿರ್ದೇಶನ, ನಿರ್ಮಾಣದ ಹೊಣೆ ಹೊತ್ತುಕೊಂಡಿದ್ದಾರೆ. ಸಿನಿವೇ ಸಿನಿ ಕ್ರಿಯೇಶನ್ಸ್ ಮೂಲಕ ಚಿತ್ರ ನಿರ್ಮಿಸಿದ್ದು, ಇಳಾ ವಿಟ್ಲ ಆರ್ಯನ್‌ಗೆ ಜೋಡಿಯಾಗಿದ್ದಾರೆ.

'ನಾನು ಸಿನಿವೇ ಸಿನಿ ಸಂಸ್ಥೆಯಲ್ಲಿ ನಟನೆ ತರಗತಿ ನಡೆಸುತ್ತಿದ್ದು, ಆರಂಭದಲ್ಲಿ ಒಂದು ಮಕ್ಕಳ ಚಿತ್ರ ಮಾಡಬೇಕೆಂದುಕೊಂಡಿದ್ದೆ. ಅನೇಕ ಗೆಳೆಯರ ಸಹಾಯದಿಂದ ಕಮರ್ಷಿಯಲ್ ಚಿತ್ರ ಮಾಡಿರುವೆ. ನಾಯಕ ಕಚೋರಿ ಮಾರುವ ಹುಡುಗ. ಆತ ಶ್ರೀಮಂತ ಹುಡುಗಿಯನ್ನು ಪ್ರೀತಿಸುತ್ತಾನೆ. ನಂತರ ಬ್ರೇಕಪ್ ಆಗುತ್ತದೆ. ಏಕೆ ಬ್ರೇಕಪ್ ಆಯ್ತು, ಅದಕ್ಕೆ ಕಾರಣ ಏನು? ಎಂಬ ಹುಡುಕಾಟವೇ ಚಿತ್ರಕಥೆ. ಗಂಗಾವತಿ ಸುತ್ತಮುತ್ತ ಚಿತ್ರೀಕರಣ ಮಾಡಿದ್ದು, ಹಾಡುಗಳನ್ನು ಮನಾಲಿಯಲ್ಲಿ ಚಿತ್ರೀಕರಿಸಿದ್ದೇವೆ' ಎಂದರು ನಿರ್ದೇಶಕರು. ನಟ ಕೀರ್ತಿರಾಜ್ ಖಳನಾಯಕನಾಗಿ, ಕೆಂಪೇಗೌಡ, ಮೋಹನ್ ಜುನೇಜಾ ಕಾಮಿಡಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಟ ಧರ್ಮ ಕೀರ್ತಿರಾಜ್ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

'ಈ ಸಿನಿಮಾ ಕಚೋರಿಯಷ್ಟೇ ಚೆನ್ನಾಗಿದೆ. ಮೊದಲು ಹೊಸಬರನ್ನು ನಾಯಕರನ್ನಾಗಿ ಮಾಡಬೇಕೆಂದುಕೊಂಡಿದ್ದರು ನಿರ್ಮಾಪಕರು. ಕಾರಣಾಂತರಗಳಿಂದ ಅವರೇ ನಟಿಸಬೇಕಾಯ್ತು. ಚಿತ್ರದಲ್ಲಿ ಎರಡು ಡ್ಯುಯೆಟ್ ಸೇರಿ ಐದು ಭಿನ್ನ ಹಾಡುಗಳಿವೆ' ಎಂದರು ಸಂಗೀತ ನಿರ್ದೇಶಕ ಕೃಪಾಕರ್. ❖


ಆರ್ಯನ್, ಇಳಾ ವಿಟ್ಲ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಇಸ್ರೇಲ್ ಹಾಗೂ ಹಮಾಸ್ ಬಂಡುಕೋರರ ಮಧ್ಯೆ ಅ.7ರಂದು ಯುದ್ಧ ಆರಂಭವಾಗಿದೆ. ಈ ಸಲುವಾಗಿ ಅಮೆರಿಕವು 8 ಕೋಟಿ ಡಾಲರ್‌ನಷ್ಟು (ಅಂದಾಜು ₹66,400 ಕೋಟಿ) ನೆರವನ್ನು ಇಸ್ರೇಲ್‌ಗೆ ನೀಡಿದೆ ಎಂಬ ಸುದ್ದಿಯು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸಂಖ್ಯೆಯಲ್ಲಿ ಹಂಚಿಕೆಯಾಗಿದೆ. ಈ ಬಗ್ಗೆ ಶ್ವೇತಭವನವು ಬಿಡುಗಡೆ ಮಾಡಲಾಗಿದೆ ಎಂಬ ಪ್ರಕಟಣೆಯನ್ನೂ ಪೋಸ್ಟ್‌ನೊಂದಿಗೆ ಲಗತ್ತಿಸಲಾಗಿದೆ. 'ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು 8 ಕೋಟಿ ಡಾಲರ್‌ನಷ್ಟು ಹಣವನ್ನು ಇಸ್ರೇಲ್‌ಗೆ ನೆರವು ನೀಡುವುದಕ್ಕಾಗಿ ಒಪ್ಪಿಗೆ ಸೂಚಿಸಿದ್ದಾರೆ. ಬಹುಶಃ ಉಕ್ರೇನ್‌ಗೆ ಹೊಸ ಸ್ಪರ್ಧಿಯೊಬ್ಬರು ಹುಟ್ಟಿಕೊಂಡಿದ್ದಾರೆ ಎಂದು ತೋರುತ್ತಿದೆ' ಎಂದು ಹಲವರು ಪೋಸ್ಟ್ ಹಾಕುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಯಾವ ಯಾವ ನಿರ್ಧಾರ ಕೈಗೊಳ್ಳುತ್ತಾರೆ, ಯಾರೊಂದಿಗೆ ಮಾತನಾಡುತ್ತಾರೆ ಹಾಗೂ ಏನು ಮಾತನಾಡುತ್ತಾರೆ ಎಂಬ ವಿವರ ಸೇರಿದಂತೆ ಹಲವು ಆಡಳಿತಾತ್ಮಕ ವಿಚಾರಗಳ ಬಗ್ಗೆ ಶ್ವೇತಭವನವು ತನ್ನ ವೆಬ್‌ಸೈಟ್‌ನಲ್ಲಿ ಮಾಹಿತಿ ನೀಡುತ್ತದೆ. ಈ ವೆಬ್‌ಸೈಟ್‌ನಲ್ಲಿ 'ಬ್ರೀಫಿಂಗ್ ರೂಂ' ಹಾಗೂ 'ಪ್ರೆಸಿಡೆನ್ಸಿಯಲ್ ಆ್ಯಕ್ಷನ್' ಎನ್ನುವ ಪೇಜ್‌ಗಳಿವೆ. ಈ ಎರಡೂ ಪೇಜ್‌ಗಳಲ್ಲಿ ಇಸ್ರೇಲ್‌ಗೆ ನೆರವು ನೀಡಿರುವ ಯಾವುದೇ ಮಾಹಿತಿ ಇಲ್ಲ. ಪೋಸ್ಟ್‌ನಲ್ಲಿರುವ ಶ್ವೇತಭವನದ ಪ್ರಕಟಣೆಯಲ್ಲಿ ಹೇಳಿರುವಂತೆ ಅ.7ರಂದು ಹಾಗೂ ನಂತರದ ದಿನಗಳಲ್ಲೂ ಈ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಇಸ್ರೇಲ್ ಪ್ರಧಾನಿಯೊಂದಿಗೆ, ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ ಮಾಹಿತಿಗಳಷ್ಟೇ ಇವೆ. ಜುಲೈ 25ರಂದು ಉಕ್ರೇನ್‌ಗೆ ನೆರವು ನೀಡಿರುವ ಮಾಹಿತಿ ಇರುವ ಪ್ರಕಟಣೆ ಇದೆ. ಈ ಪ್ರಕರಣೆಯನ್ನು ತಿರುಚಿ, ಅ.7, ಇಸ್ರೇಲ್ ಹಾಗೂ 8 ಬಿಲಿಯನ್ ಡಾಲರ್‌ಗಳೆಂದು ತಿರುಚಿ ಹಂಚಿಕೊಳ್ಳಲಾಗುತ್ತಿದೆ. ಈ ಬಗ್ಗೆ ಎನ್‌ಸಿಬಿ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ನುಡಿ ಬೆಳಗು

ಹಂಚಿ ತಿನ್ನುವ ಪಾಠ


ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ವಿನೋಬಾ ಭಾವೆಯವರು ಭಾರತದ ಮಹಾನ್ ವ್ಯಕ್ತಿಗಳಲ್ಲೊಬ್ಬರು. ಸಿರಿವಂತರ ಮನವೊಲಿಸಿ ಅವರ ಭೂಮಿಯ ಸ್ವಲ್ಪ ಭಾಗವನ್ನು ಬಡವರಿಗೆ ನೀಡುವ ಭೂದಾನ ಚಳವಳಿಯ ಆದ್ಯ ಪ್ರವರ್ತಕರು. ಗಾಂಧಿಯವರ ಕಟ್ಟಾ ಅನುಯಾಯಿಯಾದ ವಿನೋಬಾ ಸತ್ಯಾಗ್ರಹಿಯೂ ಹೌದು. ಅವರ ಬಾಲ್ಯದ ಎರಡು ಘಟನೆಗಳು ಇಲ್ಲಿವೆ. ಅವರ ಮನೆಯ ಹಿತ್ತಲಲ್ಲಿ ಬಹಳ ರುಚಿಯಾದ ಹಣ್ಣು ಬಿಡುವ ಹಲಸಿನ ಮರವೊಂದಿತ್ತು. ಅವರ ತಾಯಿ ರುಕ್ಮಿಣಿದೇವಿ ಹಲಸಿನ ಹಣ್ಣನ್ನು ಬಿಡಿಸಿ ಎಲೆಯ ದೊನ್ನೆಗಳಲ್ಲಿ ಹಾಕಿಡುತ್ತಿದ್ದರು. ಅಕ್ಕಪಕ್ಕದ ಮನೆಗಳಿಗೆ ಹೋಗಿ ಹಣ್ಣು ಕೊಟ್ಟು ಬಂದ ನಂತರವೇ ಮನೆಯವರೆಲ್ಲ ತಿನ್ನಬೇಕಿತ್ತು. ಮಗನಿಗೆ, 'ವಿನ್ಯಾ, ಮೊದಲು ಎಲ್ಲರಿಗೂ ಕೊಟ್ಟು ತಿನ್ನಬೇಕು, ಯಾರು ಕೊಡುತ್ತಾರೋ ಅವರು ದೇವತೆಗಳು, ಯಾರು ಇಟ್ಟುಕೊಳ್ಳುತ್ತಾರೋ ಅವರು ರಾಕ್ಷಸರು' ಎನ್ನುತ್ತಿದ್ದರವರು.

ಇನ್ನೊಮ್ಮೆ ಪಕ್ಕದ ಮನೆಯ ಮಹಿಳೆ ಅನಾರೋಗ್ಯದಿಂದ ನರಳುತ್ತಿರುವಾಗ ರುಕ್ಮಿಣಿದೇವಿ ತಮ್ಮ ಮನೆಯಲ್ಲಿ ಅಡುಗೆ ಮಾಡಿಟ್ಟು ನಂತರ ಅವರ ಮನೆಗೆ ಹೋಗಿ ಅಡುಗೆಮಾಡಿ ಬರುತ್ತಾರೆ. ಆಗ ಬಾಲಕ ವಿನೋಬಾ ಕೇಳುತ್ತಾರೆ, 'ಅಮ್ಮಾ, ಮೊದಲು ಬೇರೆಯವರಿಗೆ ಕೊಡಬೇಕೆಂದು ಹೇಳಿ ನೀನು ನಮ್ಮ ಮನೆಯಲ್ಲಿ ಮೊದಲು ಅಡುಗೆ ಮಾಡಿದ್ದು ತಪ್ಪಲ್ಲವಾ?' ಆಗ ತಾಯಿ ಮುಗುಳ್ನಗುತ್ತಾ ಹೇಳುತ್ತಾರೆ, 'ಇಲ್ಲ, ಮೊದಲೇ ಅಡುಗೆ ಮಾಡಿದರೆ ಆರಿ ತಣ್ಣಗಾಗುತ್ತಲ್ಲ, ಅವರು ಬಿಸಿಬಿಸಿಯಾಗಿ ಊಟ ಮಾಡಲೆಂದು ಹಾಗೆ ಮಾಡಿದೆ.'

ವಿನೋಬಾ ಹೇಳುತ್ತಾರೆ, 'ನಾನು ಸತ್ಪುರುಷರ ಸಂಗದಿಂದ, ಮಹಾನುಭಾವರ ಅನುಭವಗಳಿಂದ ಕೂಡಿದ ಗ್ರಂಥಗಳಿಂದ ಕಲಿತದ್ದನ್ನು ತಕ್ಕಡಿಯ ಒಂದು ತಟ್ಟೆಯಲ್ಲಿಟ್ಟು, ನನ್ನ ತಾಯಿಯಿಂದ ಪಡೆದ ಶಿಕ್ಷಣವನ್ನು ಎರಡನೇ ತಟ್ಟೆಯಲ್ಲಿಟ್ಟರೆ ಎರಡನೇ ತಟ್ಟೆಯ ತೂಕವೇ ಜಾಸ್ತಿ. ನಮ್ಮಮ್ಮನ ಈ ಹಂಚಿ ತಿನ್ನುವ ರೂಢಿ ಎಷ್ಟು ಪರಿಣಾಮಕಾರಿ ಆಯಿತೆಂದರೆ ಅದರಿಂದ ಭೂದಾನ ಯಜ್ಞದ ಪರಿಕಲ್ಪನೆ ನನಗೆ ಸಿಕ್ಕಿತು.'

ಬಹಳಷ್ಟು ಪಾಲಕರು, ಮಕ್ಕಳು ಓದುವುದಿಲ್ಲ, ಹೇಳಿದ ಮಾತು ಕೇಳುವುದಿಲ್ಲ ಎಂದು ದೂರುತ್ತಿರುತ್ತಾರೆ. ಅದಕ್ಕೆ ಕಾರಣ ಮಕ್ಕಳು, ತಂದೆತಾಯಿಗಳು ಹೇಳಿದ್ದನ್ನು ಕೇಳುವುದಕ್ಕಿಂತ ಜಾಸ್ತಿ ಅವರು ಮಾಡಿದ್ದನ್ನು ಅನುಕರಿಸುತ್ತಾರೆ. 'ಮಣ ಮಾತಿಗಿಂತ ತೊಲ ಕೃತಿ ಲೇಸು' ಎಂಬ ಗಾದೆಯಂತೆ ಉಪದೇಶಕ್ಕಿಂತ ಆಚರಣೆಗೆ ಒತ್ತು ಕೊಡುವುದರ ಮೂಲಕ ಬಹಳಷ್ಟು ಸಮಸ್ಯೆಯನ್ನು ಬಗೆಹರಿಸಬಹುದು. ರುಕ್ಮಿಣಿದೇವಿಯವರ ಹಂಚುವ ಸ್ವಭಾವ ಅವರಿಗೇ ಅರಿವಿಲ್ಲದಂತೆ ಅಸಂಖ್ಯ ಭೂರಹಿತರ ಬಾಳು ಬೆಳಗಲು ಕಾರಣವಾದಂತೆ, ಸಮಾಜಮುಖಿಯಾದ ನಮ್ಮ ಪುಟ್ಟ ಕೆಲಸ ಮುಂದಿನ ಪೀಳಿಗೆಗೆ ಮತ್ತಷ್ಟು ಒಳ್ಳೆಯ ಕಾರ್ಯಗಳನ್ನು ಮಾಡಲು ಸ್ಫೂರ್ತಿಯಾಗುತ್ತದೆ ಮತ್ತು ಈ ಭೂಮಿ ಬದುಕಲು ಯೋಗ್ಯವಾದ ಸ್ಥಳವಾಗುವುದು ಇಂತಹ ಸಣ್ಣ ಸಣ್ಣ ಕೆಲಸಗಳ ನಿರಂತರ ಸರಣಿಯಿಂದ ಮಾತ್ರ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಅಕ್ಟೋಬರ್ 12, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ತ್ರಯೋದಶಿ ಗಂ. 19-54 ನಕ್ಷತ್ರ: ಪೂರ್ವಫಲ್ಗುನಿ ಗಂ. 11-36 ಯೋಗ: ಶುಕ್ಲ (ಶುಕ್ರ) ಗಂ09-30 ಕರಣ: ಗರ ಗಂ. 06-48, ಕನ್ಯಾ ಮಾಸದ 25 ನೇ ದಿನ, ಮಳೆನಕ್ಷತ್ರ: ಚಿತ್ರ 1. ರಾಹುಕಾಲ : ಮಧ್ಯಾಹ್ನ 01-30 - 03-00 ಸೂರ್ಯೋದಯ : 06-24 ಸೂರ್ಯಾಸ್ತ : 06-10
ಮುಸ್ಲಿಂ ದಿನಾಂಕ : 26 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ : 7, 3

ಮೇಷ: ಉನ್ನತ ವ್ಯಕ್ತಿಗಳ ಒಡನಾಟದಲ್ಲಿನ ವಿಚಾರವು ಕಾರ್ಯಾನುಕೂಲಕ್ಕೆ ಕಾರಣವಾಗುತ್ತದೆ. ವಿದ್ಯುತ್ ವಲಯದ ಕಾರ್ಮಿಕರು ಎಚ್ಚರದಿಂದ ಕಾರ್ಯನಿರ್ವಹಿಸಿ. ಮನೆಯಲ್ಲಿ ಮಂಗಳ ಕಾರ್ಯಗಳ ಸಂಭ್ರಮವಿರುವುದು.

ವೃಷಭ: ನೆಂಟರಿಷ್ಟರ ಆಗಮನ ಹಬ್ಬದ ವಾತಾವರಣ ಮೂಡಿಸಲಿದೆ. ಹಿರಿಯರ ಅನುಗ್ರಹದಿಂದ ಇಷ್ಟಸಿದ್ಧಿಯಾಗಿ ಕ್ರಯ-ವಿಕ್ರಯದಲ್ಲಿ ಲಾಭ ತರಲಿದೆ. ಆಫೀಸಿನ ಲೆಕ್ಕದಲ್ಲಿನ ದೋಷ ಸರಿಪಡಿಸಿಕೊಳ್ಳುವ ಬಗ್ಗೆ ಗಮನಹರಿಸಿ.

ಮಿಥುನ: ಅತಿಯಾದ ಭಯದ ವಾತಾವರಣವು ಕೆಲಸಕ್ಕೆ ಅಡ್ಡಿ ಉಂಟುಮಾಡುವುದು. ಹೂವು-ಹಣ್ಣಿನ ವ್ಯಾಪಾರಿಗಳಿಗೆ ಅಧಿಕ ಲಾಭ ಉಂಟಾಗುವುದು. ಕೆಲಸ ಕಾರ್ಯಗಳ ಬಗ್ಗೆ ಸಮಾಲೋಚಿಸಿ ನಿರ್ಧಾರ ಕೈಗೊಳ್ಳಿ.

ಕರ್ಕಾಟಕ: ಕುಟುಂಬಕ್ಕೆ ನವ ಶಿಶುವಿನ ಆಗಮನದಿಂದ ಮನೆಯಲ್ಲಿ ಇರುವವರಿಗೆಲ್ಲಾ ಅಪರಿಮಿತ ಸಂತೋಷ ಉಂಟಾಗುವುದು. ಬಂಡವಾಳವನ್ನು ತೊಡಗಿಸುವ ವಿಚಾರ ಸದ್ಯಕ್ಕೆ ಮುಂದೂಡುವುದು ಒಳ್ಳೆಯದು.

ಸಿಂಹ: ಬುದ್ಧಿವಂತಿಕೆ ಮತ್ತು ವಾಕ್ಚಾತುರ್ಯದಿಂದ ಹಲವು ಕಲಹಗಳು ಅಥವಾ ಸಮಸ್ಯೆಗಳು ದೂರಾಗಲಿವೆ. ಚಿನ್ನ, ಬೆಳ್ಳಿ ಮತ್ತು ರಾಸಾಯನಿಕ ವಸ್ತುಗಳ ಮಾರಾಟಗಾರಾರಿಗೆ ಅಧಿಕ ಲಾಭ ಆಗುವುದು.

ಕನ್ಯಾ: ಸಾಮಾಜಿಕವಾಗಿ ಜನೋಪಕಾರದಿಂದ ಪ್ರಶಂಸೆ ಹಾಗೂ ಗುರು-ಹಿರಿಯರಿಂದ ಮೆಚ್ಚುಗೆಯ ನುಡಿ ಲಭಿಸಲಿದೆ. ಬಹಳ ದಿನಗಳ ನಂತರ ಮನಸ್ಸಿಗೆ ಹಿತ ಅನುಭವ ಸಿಗಲಿದೆ. ದೀರ್ಘಕಾಲೀನ ಯೋಜನೆಗಳು ಫಲದಾಯಕವೆನಿಸಲಿದೆ.

ತುಲಾ: ದುಡುಕು ಸ್ವಭಾವದಿಂದ ಅಣ್ಣತಮ್ಮಂದಿರ ಬಾಂಧವ್ಯಕ್ಕೆ ಹಾನಿಯಾಗಬಹುದು. ಎಚ್ಚರವಿರಲಿ. ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಸಿಗಲಿದೆ. ಕೃಷಿ ಕೆಲಸಗಳೆಲ್ಲವೂ ಪೂರ್ಣಗೊಳ್ಳಲಿದೆ.

ವೃಶ್ಚಿಕ: ಹೊಸ ಉದ್ಯಮ ಅಥವಾ ವ್ಯಾಪಾರ ಪ್ರಾರಂಭಿಸಲು ಆಲೋಚನೆಗಳು ಬರಲಿವೆ. ಆದರೆ ನೀವು ಯೋಚಿಸಿದಷ್ಟು ಸುಲಭವಾಗಿರುವುದಿಲ್ಲ. ವ್ಯಾಪಾರಿಗಳಿಗೆ ಸರಕು ಸಾಗಣೆಯಲ್ಲಿ ತೊಂದರೆಗಳು ಸಂಭವಿಸಲಿದೆ.

ಧನು: ಯಾವುದೇ ಕೆಲಸವನ್ನು ಗುತ್ತಿಗೆ ನೀಡುವ ರೀತಿಯಲ್ಲಿ ತೀರ್ಮಾನಿಸಬೇಡಿ. ಕಲಾವಿದರಿಗೆ ಜನಪ್ರಿಯತೆ ಜತೆಯಲ್ಲಿ ಪಾಂಡಿತ್ಯಕ್ಕೆ ತಕ್ಕ ಸಂಭಾವನೆಯೂ ಪ್ರಾಪ್ತಿ. ಗುರುಗಳ ಸ್ಮರಣೆಯು ಚೈತನ್ಯವನು ನೀಡುವುದು.

ಮಕರ: ರಾಜಕೀಯ ರಂಗಕ್ಕೆ ಸಂಬಂಧಿಸಿದಂತೆ ಒಂದು ರೀತಿಯ ಸ್ಪರ್ಧಾತ್ಮಕ ವಾತಾವರಣ ಇರುವುದು. ಮನೆಯಲ್ಲಿ ಶ್ರೀಮಹಾಲಕ್ಷ್ಮಿಯನ್ನು ಪೂಜಿಸಿ ಹೆಚ್ಚಿನ ಏಳಿಗೆಯನ್ನು ಹೊಂದುವಿರಿ. ಕಾನೂನು ವಿದ್ಯಾರ್ಥಿಗಳಿಗೆ ಯಶಸ್ಸು.


ಕುಂಭ: ವೃತ್ತಿರಂಗದಲ್ಲಿ ಅನವಶ್ಯಕವಾಗಿ ಇತರರ ಕೋಪಕ್ಕೆ ಗುರಿಯಾಗುವ ಸನ್ನಿವೇಶ ಇರುವುದು. ಕೆಲಸಗಳನ್ನು ಸಾಧಿಸಿಕೊಳ್ಳ ಬೇಕಿದ್ದರೆ ಅವಿರತ ಶ್ರಮ ಅಗತ್ಯ. ಹೊಸ ವ್ಯಕ್ತಿಯೊಬ್ಬರ ಆಗಮನವಾಗಲಿದೆ.

ಮೀನ: ಸರ್ಕಾರಿ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವವರಿಗೆ ಮೇಲಧಿಕಾರಿಗಳ ಒತ್ತಡ ಹೆಚ್ಚುವುದು. ಪ್ರಾಪ್ತ ವಯಸ್ಸಿನ ಮಕ್ಕಳಿಗೆ ವಿವಾಹ ಯೋಗ ಕೂಡಿ ಬರುವುದು. ಆಲಂಕಾರಿಕ ವಸ್ತುಗಳ ಮಾರಾಟ ಹೆಚ್ಚಲಿದೆ.

ಪದಬಂಧ 5468 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆನೆಗೂ ಆಡಿಗೂ ಇರುವಂಥಹ ವ್ಯತ್ಯಾಸ (6)
4.ವಿಷಯ ಹೇಳಿ ನಗಿಸುವ ಹಾಸ್ಯಗಾರ (4)
5.ಗಮನವಿಟ್ಟು ನೋಡಿ! ಆಕಾಶ ಕಂಡೀತು! (3)
9.ಸಾಯುವ ಸಮಯವಿದು (5)
13.ಸುಕುಮಾರತೆಯನ್ನು ಹೀಗೆನ್ನಿ (3)
14.ಹಸುವಿನ ಹತ್ತಿರವಿರುವ ಎಳೆಮಗು (4)
15.ಮನಸ್ಸನ್ನು ವಿಭಜಿಸಿ ನೋಡುವುದು! (6)

ಮೇಲಿಂದ ಕೆಳಕ್ಕೆ
1.ಜಗಲಿಯ ಬಳಿ ಕಾಣಿಸಿದ ಹೆಬ್ಬಾವು (4)
2.ಹತ್ತು ನೂರು ಉಲ್ಟಾ ಕಾಣುತ್ತಿದೆ (3)
3.ಪುಷ್ಪದಲ್ಲಿನ ಸಿಹಿರಸ (4)
6.ಹಜಾರವನ್ನು ಹೀಗೂ ಹೇಳುವರು (4)
7.ಇಣುಕುತ್ತಿರುವ ಅಳಿಲು (3)
8.ಈತ ಶಕ್ತಿಯೇ ಇಲ್ಲದವ (4)
10.ಹಣಕ್ಕಾಗಿ ಉಗ್ರ ಕಾದಾಟ (4)
11.ಮದುವೆಯಲ್ಲಿ ವಧೂವರರು ಆಡುವ ಹೂವಿನ ಚಂಡಾಟ (4)
12.ಸುಗಮವಾಗಿ ಮುಡಿದಿರುವ ಹೂವು (3)



5467ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರತ್ಯುಪಕಾರ 4.ರಗಡು
5.ಸರಕು 6.ವಪನ
7.ತಕಲಿ 9.ಸ್ಥಾನ
10.ಸೂಟ 12.ಅಸುರ
14.ಉನ್ಮಾದ 15.ವಿನೋದ
16.ಬೆರಕೆ 17.ರಸಕವಳ

ಮೇಲಿಂದ ಕೆಳಕ್ಕೆ:
1.ಪ್ರತಿಬಿಂಬ 2.ಪರ್ಯವಸಾನ
3.ರಸನ 4.ರಕುತ
8.ಕಪಟ 9.ಸ್ನಾಪಿಸು
10.ಸೂಕ್ಷ್ಮದರ್ಶಕ 11.ಅಂತರಾಳ
13.ರವಿಕೆ 14.ಉದರ

ಸುಡೊಕು 5854

	5	4		7			3	
			2		3	6		8
8		6		4			2	
4		3		1		8		6
			9		4		7	
9		8		3		4		1
1		9	3		5		8	7
	6			9				
5		7	4		1	9		3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5853 ಸುಡೊಕು

2	4	1	6	8	3	9	7	5
9	8	5	2	4	7	6	1	3
7	6	3	1	9	5	8	4	2
4	5	9	8	2	1	7	3	6
6	1	7	3	5	4	2	9	8
8	3	2	9	7	6	4	5	1
3	2	4	7	1	8	5	6	9
5	9	6	4	3	2	1	8	7
1	7	8	5	6	9	3	2	4

ಛತ್ತೀಸಗಢ: ಖರ್ಗೆ ನೇತೃತ್ವದ ಚುನಾವಣಾ ಸಮಿತಿ ಸಭೆ ಇಂದು

ಕೆಲ 'ಕೈ' ಶಾಸಕರಿಗೆ ಕೊಕ್?

ಪ್ರಜಾವಾಣಿ ವಾರ್ತೆ

ನವದೆಹಲಿ: ಛತ್ತೀಸಗಢ ವಿಧಾನ ಸಭೆಯ 90 ಕ್ಷೇತ್ರಗಳ ಪೈಕಿ 75ರಲ್ಲಿ ಗೆಲ್ಲುವ ಗುರಿ ಇರಿಸಿಕೊಂಡಿರುವ ಕಾಂಗ್ರೆಸ್, ಉತ್ತಮ ಸಾಧನೆ ಮಾಡದ ಕೆಲವು ಶಾಸಕರಿಗೆ ಟಿಕೆಟ್ ನಿರಾಕರಿಸುವ ಸಾಧ್ಯತೆ ಇದೆ.

ಅಭ್ಯರ್ಥಿಗಳ ಹೆಸರನ್ನು ಅಖೈರುಗೊಳಿಸಲು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದ ಕೇಂದ್ರ ಚುನಾವಣಾ ಸಮಿತಿಯು ಗುರುವಾರ ಸಂಜೆ ಸಭೆ ಸೇರಲಿದೆ. ಎಲ್ಲ 90 ಕ್ಷೇತ್ರಗಳಿಗೆ ಒಂದೇ ಹಂತದಲ್ಲಿ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಲಾಗುತ್ತದೆಯೇ ಎಂಬುದು ಸ್ಪಷ್ಟವಾಗಿಲ್ಲ.

ಛತ್ತೀಸಗಢ ವಿಧಾನಸಭೆಗೆ ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದೆ. ಬಸ್ತಾರ್ ಹಾಗೂ ಅಕ್ಕಪಕ್ಕದ ಪ್ರದೇಶಗಳ 20 ಕ್ಷೇತ್ರಗಳಿಗೆ ನವೆಂಬರ್ 7ರಂದು ಮತದಾನ ನಡೆಯಲಿದೆ. ಉಳಿದ 70 ಕ್ಷೇತ್ರಗಳಿಗೆ ನವೆಂಬರ್ 17ರಂದು ಮತದಾನವಿದೆ.


ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಕುಮಾರಿ ಸೆಲ್ಜಾ, '2018ರ ಚುನಾವಣೆಯಲ್ಲಿ ಪಕ್ಷವು 68 ಕ್ಷೇತ್ರಗಳಲ್ಲಿ ಜಯ ಗಳಿಸಿತ್ತು. ಬಳಿಕ ನಡೆದ ಉಪ ಚುನಾವಣೆಯಲ್ಲಿ ಮೂರು ಕ್ಷೇತ್ರಗಳಲ್ಲಿ ಗೆದ್ದಿತ್ತು. ಈ ಸಲ 75 ಕ್ಷೇತ್ರಗಳಲ್ಲಿ ಗೆಲ್ಲಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೆಲವು ಶಾಸಕರಿಗೆ ಟಿಕೆಟ್ ನಿರಾಕರಿಸಲಾಗುತ್ತದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ನಾವು ಶಾಸಕರ ವೈಯಕ್ತಿಕ ಸಾಧನೆಯನ್ನು ಪರಿಗಣಿಸುತ್ತೇವೆ. ನಾವು ನೆಲದ ಧ್ವನಿಯನ್ನು ಕೇಳುತ್ತೇವೆ. ನಾವು ಪ್ರತಿ ಕ್ಷೇತ್ರದ ಸನ್ನಿವೇಶವನ್ನು ಆಳವಾಗಿ ಅಧ್ಯಯನ ನಡೆಸಿ ಅಭ್ಯರ್ಥಿ ಆಯ್ಕೆ ಮಾಡುತ್ತೇವೆ' ಎಂದರು.

ಕೆಲವು ಶಾಸಕರಿಗೆ ಟಿಕೆಟ್ ಸಿಗುವುದು ಅನುಮಾನ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ. ಟಿಕೆಟ್ ಹಂಚಿಕೆಗೆ ಅರ್ಹತೆಯೇ ಮಾನದಂಡವಾಗಿರಲಿದೆ. ಪಕ್ಷದಲ್ಲಿ ಮಹಿಳೆಯರು ಸೇರಿದಂತೆ ಉತ್ತಮ ನಾಯಕರ ಕೊರತೆ ಇಲ್ಲ ಎಂದು ಮೂಲಗಳು ಹೇಳಿವೆ.

ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರು ಕಳೆದ ಐದು ವರ್ಷಗಳಿಂದ ಸರ್ಕಾರದ ಚುಕ್ಕಾಣಿ ಹಿಡಿದಿರುವುದರಿಂದ ಪಕ್ಷದ ಪ್ರಚಾರವನ್ನು ಮುನ್ನಡೆಸಲಿದ್ದಾರೆ ಎಂದು ಸೆಲ್ಜಾ ಸ್ಪಷ್ಟಪಡಿಸಿದರು.

'ಸಭೆ ವೇಳೆ 'ಕ್ಯಾಂಡಿ ಕ್ರಶ್' ಆಡಿದ ಬಘೇಲ್'


ಬಘೇಲ್

ರಾಯಪುರ (ಪಿಟಿಐ): ಛತ್ತೀಸಗಢ ವಿಧಾನಸಭೆ ಚುನಾವಣೆಗಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕಾಂಗ್ರೆಸ್ ನಡೆಸಿದ ಸಭೆಯಲ್ಲಿ ರಾಜ್ಯದ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರು ಮೊಬೈಲ್ ಫೋನ್‌ನಲ್ಲಿ ಗೇಮ್ ಆಡುತ್ತಿದ್ದರು ಎಂದು ಬಿಜೆಪಿ ಆರೋಪಿಸಿದೆ. ಇದಕ್ಕೆ ಪೂರಕವಾಗಿ ಚಿತ್ರವೊಂದನ್ನು ಸಾಮಾಜಿಕ ಜಾಲತಾಣದಲ್ಲಿ ಬುಧವಾರ ಬಹಿರಂಗಪಡಿಸಿದೆ.

'ರಾಜ್ಯದಲ್ಲಿ ಕಾಂಗ್ರೆಸ್ ಮರಳಿ ಅಧಿಕಾರ ಪಡೆಯುವುದಿಲ್ಲ ಎಂದು ಬಘೇಲ್ ಅವರಿಗೆ ಖಾತ್ರಿ ಇರುವುದರಿಂದ ಅವರು ಸಭೆಯನ್ನು ಗಂಭೀರವಾಗಿ ಪರಿಗಣಿಸಿಲ್ಲ' ಎಂದು ಬಿಜೆಪಿ ಲೇವಡಿ ಮಾಡಿದೆ.

ಛತ್ತೀಸಗಡ ವಿಧಾನಸಭೆ ಚುನಾವಣೆಯು ನವೆಂಬರ್ 7 ಮತ್ತು 17ರಂದು ನಡೆಯಲಿದೆ.

ಛತ್ತೀಸಗಢದ ರಾಜಧಾನಿ ರಾಯಪುರದಲ್ಲಿಯ ಪಕ್ಷದ ಕಚೇರಿ 'ರಾಜೀವ್ ಭವನ'ದಲ್ಲಿ ಕಾಂಗ್ರೆಸ್ ಮಂಗಳವಾರ ರಾತ್ರಿ ಸಭೆ ನಡೆಸಿತ್ತು. ಸಭೆಯ ಚಿತ್ರವೊಂದನ್ನು ಬಿಜೆಪಿಯ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ಕುಮಾರಿ ಸೆಲ್ಜಾ, ರಾಜ್ಯ ಕಾಂಗ್ರೆಸ್ ಘಟಕದ ಮುಖ್ಯಸ್ಥ ದೀಪಕ್ ಬೈಜ್ ಮತ್ತಿತರ ನಾಯಕರು ಸಭೆಯಲ್ಲಿರುವುದು ಹಾಗೂ ಪಕ್ಷದ ಹಿರಿಯ ನಾಯಕರಾದ ಅಜಯ್ ಮಾಕೆನ್ ಮತ್ತು ಇತರರು ವರ್ಚುವಲ್ ಆಗಿ ಸಭೆಯಲ್ಲಿ ಪಾಲ್ಗೊಂಡಿರುವುದು ಚಿತ್ರದಲ್ಲಿ ಕಾಣುತ್ತದೆ.

'ಭೂಪೇಶ್ ಬಘೇಲ್ ಅವರು ನಿಶ್ಚಿಂತಿತರಾಗಿದ್ದಾರೆ. ಅವರು ಎಷ್ಟೇ ಪ್ರಯತ್ನಿಸಿದರೂ ಅವರ ಸರ್ಕಾರ ಪುನಃ ಆಯ್ಕೆ ಆಗುವುದಿಲ್ಲ ಎಂದು ಅವರಿಗೆ ತಿಳಿದಿದೆ. ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದ ಸಭೆ ಕಡೆಗೆ ಗಮನ ಹರಿಸುವುದಕ್ಕಿಂತ ಕ್ಯಾಂಡಿ ಕ್ರಶ್ ಆಡುವುದೇ ಸೂಕ್ತ ಎಂದು ಅವರು ಭಾವಿಸಿದಂತಿದೆ' ಎಂದು ಬರೆದಿದ್ದಾರೆ. ಈ ಪೋಸ್ಟ್‌ಅನ್ನು ಬಿಜೆಪಿ ರಾಜ್ಯ ಘಟಕ ಹಂಚಿಕೊಂಡಿದೆ.

ಬಿಜೆಪಿ ಆರೋಪಕ್ಕೆ ಬಘೇಲ್ ಪ್ರತಿಕ್ರಿಯೆ ನೀಡಿದ್ದಾರೆ. 'ಇದಕ್ಕೂ ಮೊದಲು ಬಿಜೆಪಿಯು ನಾನು ಭೌರ (ಬುಗುರಿ) ಮತ್ತು ಗಿಲ್ಲಿ ದಂಡ (ಚಿನ್ನಿ ದಾಂಡು) ಆಡಿದ್ದಕ್ಕೆ ಆಕ್ಷೇಪ ಎತ್ತಿತ್ತು. ಬಳಿಕ ರಾಜ್ಯದಲ್ಲಿ ಛತ್ತೀಸಗಢ ಒಲಿಂಪಿಕ್ಸ್ ಏಕೆ ಆಯೋಜಿಸಲಾಯಿತು ಎಂದು ಪ್ರಶ್ನೆ ಎತ್ತಿತ್ತು' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ನಾನು ಕ್ಯಾಂಡಿ ಕ್ರಶ್ ಆಡುತ್ತಿದ್ದ ಫೋಟೊ ಮಂಗಳವಾರ ಸಭೆ ನಡೆಯುವ ಮೊದಲೇ ನನಗೆ ಸಿಕ್ಕಿತ್ತು. ಬಿಜೆಪಿ ಈಗ ಇದನ್ನೂ ಆಕ್ಷೇಪಿಸಿದೆ. ಅವರಿಗೆ ನನ್ನ ಅಸ್ತಿತ್ವದ ಬಗ್ಗೆಯೇ ಆಕ್ಷೇಪ ಇದೆ. ಆದರೆ, ಯಾರು ಅಧಿಕಾರದಲ್ಲಿ ಇರಬೇಕು ಎಂಬುದನ್ನು ನಿರ್ಧರಿಸುವುದು ರಾಜ್ಯದ ಜನತೆ' ಎಂದಿದ್ದಾರೆ. 'ನಾನು ಬುಗುರಿ, ಚಿನ್ನಿ ದಾಂಡು ಆಡುವುದನ್ನು ಮುಂದುವರೆಸುತ್ತೇನೆ. ಕ್ಯಾಂಡಿ ಕ್ರಶ್ ಕೂಡಾ ನನ್ನ ಇಷ್ಟದ ಆಟ. ಯಾರನ್ನು ಆಶೀರ್ವದಿಸಬೇಕು ಎಂಬುದನ್ನು ಛತ್ತೀಸಗಢದ ಜನರು ನಿರ್ಧರಿಸುತ್ತಾರೆ' ಎಂದು ಹೇಳಿದ್ದಾರೆ.

90 ಸದಸ್ಯ ಬಲದ ರಾಜ್ಯ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಇನ್ನೂ ಅಭ್ಯರ್ಥಿಗಳನ್ನು ಘೋಷಿಸಿಲ್ಲ. ಬಿಜೆಪಿ ಈಗಾಗಲೇ 85 ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದೆ.

ರಾಜಸ್ಥಾನ: ನವೆಂಬರ್ 25ಕ್ಕೆ ಮತದಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜಸ್ಥಾನ ವಿಧಾನಸಭೆ ಚುನಾವಣೆಯ ಮತದಾನದ ದಿನಾಂಕವನ್ನು ಬದಲಿಸಬೇಕೆಂಬ ರಾಜಕೀಯ ಪಕ್ಷಗಳು ಹಾಗೂ ಸಾಮಾಜಿಕ ಸಂಘಟನೆಗಳ ಒತ್ತಡಕ್ಕೆ ಕೇಂದ್ರ ಚುನಾವಣಾ ಆಯೋಗ ಮಣಿದಿದೆ. ದೊಡ್ಡ ಪ್ರಮಾಣದ ವಿವಾಹಗಳು ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಉಲ್ಲೇಖಿಸಿ ಮತದಾನದ ದಿನಾಂಕವನ್ನು ನವೆಂಬರ್ 23ರಿಂದ ನವೆಂಬರ್ 25ಕ್ಕೆ ಆಯೋಗ ಮುಂದೂಡಿದೆ.

ಐದು ರಾಜ್ಯಗಳ ಚುನಾವಣಾ ವೇಳಾಪಟ್ಟಿಯನ್ನು ಆಯೋಗವು ಸೋಮವಾರ ಪ್ರಕಟಿಸಿತ್ತು. ರಾಜಸ್ಥಾನ ವಿಧಾನಸಭೆಯ ಮತದಾನ ನವೆಂಬರ್ 23ರಂದು ನಡೆಯಲಿದೆ ಎಂದು ತಿಳಿಸಿತ್ತು. 'ರಾಜ್ಯದಲ್ಲಿ ನವೆಂಬರ್ 23ರಂದು ಮದುವೆಗಳು ಹಾಗೂ ಸಾಮಾಜಿಕ ಕಾರ್ಯಕ್ರಮಗಳು ನಡೆಯಲಿದ್ದು, ಅದೇ ದಿನ ಮತದಾನ ನಡೆಸಿದರೆ ಜನರಿಗೆ ತೊಂದರೆಯಾಗಲಿದೆ. ಮತದಾನದ ಪ್ರಮಾಣವೂ ಕಡಿಮೆಯಾಗಬಹುದು' ಎಂದು ವಿವಿಧ ರಾಜಕೀಯ ಪಕ್ಷಗಳು ಹಾಗೂ ಸಾಮಾಜಿಕ ಸಂಘಟನೆಗಳು ಆಯೋಗಕ್ಕೆ ಮನವಿ ಮಾಡಿದ್ದವು. ಈ ಅಂಶಗಳು ಹಾಗೂ ಮನವಿಗಳನ್ನು ಪರಿಗಣಿಸಿ ಮತದಾನದ ದಿನಾಂಕ ಬದಲಾಯಿಸಲು ನಿರ್ಧರಿಸಲಾಗಿದೆ ಎಂದು ಆಯೋಗದ ಪ್ರಕಟಣೆ ತಿಳಿಸಿದೆ. ಐದು ರಾಜ್ಯಗಳ ಮತ ಎಣಿಕೆ ಡಿಸೆಂಬರ್ 3 ರಂದು ನಡೆಯಲಿದೆ.

ಪ್ರಿಯಾಂಕಾ ರ‍್ಯಾಲಿ ಇಂದು

ಭೋಪಾಲ್ (ಪಿಟಿಐ): ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಇದೇ 12ರಂದು ಗುರುವಾರ ಮಧ್ಯ ಪ್ರದೇಶದ ಮಂಡಲ್ ಜಿಲ್ಲೆಯಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಮಧ್ಯಪ್ರದೇಶದ 230 ಸ್ಥಾನಗಳಿಗಾಗಿ ನ. 17 ರಂದು ಚುನಾವಣೆ ನಡೆಯಲಿದೆ. ಬಿಜೆಪಿಯು ಈಗಾಗಲೇ 136 ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದೆ.



ರೋಡ್ ಶೋ ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಬುಧವಾರ ಭೋಪಾಲ್‌ನಲ್ಲಿ ರೋಡ್ ಶೋ ನಡೆಸಿದರು –ಪಿಟಿಐ ಚಿತ್ರ

'ಮಾಮನ ಶ್ರಾದ್ಧ' ಪೋಸ್ಟ್; ಕಾಂಗ್ರೆಸ್ ವಿರುದ್ಧ ಆರೋಪ

ಭೋಪಾಲ್ (ಪಿಟಿಐ): ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಚೌಹಾಣ್ ಅವರ ಚಿತ್ರವನ್ನು 'ಮಾಮ ಕಾ ಶ್ರಾದ್ಧ್' (ಮಾಮನ ಶ್ರಾದ್ಧ) ಎಂಬ ಅಡಿಬರಹದೊಂದಿಗೆ 'ಎಕ್ಸ್'ನಲ್ಲಿ ಕಾಂಗ್ರೆಸ್ ಪೋಸ್ಟ್ ಮಾಡಿದೆ ಎಂದು ಬಿಜೆಪಿ ಆರೋಪಿಸಿದೆ. ಈ ಕೃತ್ಯಕ್ಕೆ ದೇವರು ಕಾಂಗ್ರೆಸ್ಸಿಗರನ್ನು ಕ್ಷಮಿಸುವನೇ? ಎಂದೂ ಪ್ರಶ್ನಿಸಿದೆ.

@ವಿತ್‌ಕಾಂಗ್ರೆಸ್ ಎಂಬ 'ಎಕ್ಸ್' ಖಾತೆಯಿಂದ ಈ ಪೋಸ್ಟ್ ಮಾಡಲಾಗಿದೆ. ಇದರ ಸ್ಕ್ರೀನ್‌ಶಾಟ್ ಅನ್ನು ಚೌಹಾಣ್ ಅವರ ಮಗ ಕಾರ್ತಿಕೇಯ ಸಿಂಗ್ ಅವರು ಪೋಸ್ಟ್ ಮಾಡಿದ್ದಾರೆ. ಪಿತೃಪಕ್ಷದ ಸಂದರ್ಭದಲ್ಲಿಯೇ ಚೌಹಾಣ್ ಅವರಿಗೆ ಬಿಜೆಪಿ ಟಿಕೆಟ್ ನೀಡಿದೆ ಎಂದು ಈ ಪೋಸ್ಟ್‌ನಲ್ಲಿ ಕುಹಕವಾಡಲಾಗಿದೆ.

ಈ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಕಾರ್ತಿಕೇಯ, 'ಕಾಂಗ್ರೆಸ್ ಸದಸ್ಯರು ತೀರಾ ಕೆಳಮಟ್ಟಕ್ಕೆ ಇಳಿದಿದ್ದಾರೆ. ಅವರ ಬಗ್ಗೆ ಅನುಕಂಪವಿದೆ' ಎಂದಿದ್ದಾರೆ.

ಚೌಹಾಣ್ ಅವರು ಕೂಡಾ ಈ ಪೋಸ್ಟ್‌ಗೆ ಪ್ರತಿಕ್ರಿಯಿಸಿದ್ದಾರೆ. 'ಕಾಂಗ್ರೆಸ್ಸಿಗರಿಂದ ಇದಕ್ಕಿಂತ ಹೆಚ್ಚಿನದ್ದೇನನ್ನು ನಿರೀಕ್ಷಿಸಲಾಗುತ್ತದೆ. ಅವರು ನಮ್ಮ ಸನಾತನ ಧರ್ಮವನ್ನು ಸದಾ ಜರೆಯುವ ಕೆಲಸವನ್ನೇ ಮಾಡುತ್ತಾರೆ' ಎಂದಿದ್ದಾರೆ.

ಈ ಆರೋಪವನ್ನು ಕಾಂಗ್ರೆಸ್ ತಳ್ಳಿಹಾಕಿದೆ. 'ಪ್ರಿಯ ಶಿವರಾಜ್ ಅವರೇ, ದೇವರು ನಿಮಗೆ ದೀರ್ಘಾಯುಷ್ಯ ನೀಡಲಿ. ನೀವು ಉಲ್ಲೇಖಿಸಿರುವ ಪೋಸ್ಟ್‌ಅನ್ನು ಕಾಂಗ್ರೆಸ್ ಮಾಡಿಲ್ಲ. ಆಧಾರವಿಲ್ಲದೇ ಎಲ್ಲದಕ್ಕೂ ಕಾಂಗ್ರೆಸ್ ಅನ್ನೇ ದೂರುವುದು ಕೀಳುಮಟ್ಟದ ರಾಜಕೀಯವಾಗಿದೆ. ಸುಳ್ಳು ಪ್ರಚಾರಗಳನ್ನು ಮಾಡಿ ಅನುಕಂಪ ಗಳಿಸುವುದು ನೈತಿಕತೆಯಲ್ಲ' ಎಂದು ರಾಜ್ಯ ಕಾಂಗ್ರೆಸ್ ಮುಖ್ಯಸ್ಥ ಕಮಲ್‌ನಾಥ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಹಿಂದೂಗಳನ್ನು ಕಾಂಗ್ರೆಸ್ ಒಡೆಯುತ್ತಿದೆ'

ಭೋಪಾಲ್ (ಪಿಟಿಐ): 'ಕಾಂಗ್ರೆಸ್ ಮೊದಲಿಗೆ ದೇಶವನ್ನು ವಿಭಜಿಸಿತು. ಈಗ ಜಾತಿ ಗಣತಿ ವಿಚಾರವನ್ನು ಮುನ್ನೆಲೆಗೆ ತಂದು ಹಿಂದೂಗಳಲ್ಲಿ ಒಡಕು ಮೂಡಿಸಲು ಯತ್ನಿಸುತ್ತಿದೆ' ಎಂದು ಬಿಜೆಪಿ ಬುಧವಾರ ಆರೋಪಿಸಿದೆ.

ಇತರ ಹಿಂದುಳಿದ ವರ್ಗಗಳನ್ನು (ಒಬಿಸಿ) ಹಿಂದೂಗಳು ಎಂದು ಬಿಜೆಪಿ ಪರಿಗಣಿಸುತ್ತದೆಯೇ ಎಂದು ಕಾಂಗ್ರೆಸ್ ಕೇಳಿದ್ದ ಪ್ರಶ್ನೆಗೆ ಬಿಜೆಪಿ ಹೀಗೆ ಪ್ರತ್ಯುತ್ತರ ನೀಡಿದೆ.

ಬಿಜೆಪಿಯ ಮಾಧ್ಯಮ ಕೇಂದ್ರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಮಧ್ಯಪ್ರದೇಶ ಗೃಹ ಸಚಿವ ನರೋತ್ತಮ್ ಮಿಶ್ರಾ ಅವರು, 'ಕಾಂಗ್ರೆಸ್ ಮೊದಲಿಗೆ ದೇಶವನ್ನು ಇಬ್ಭಾಗ ಮಾಡಿತು. ನಂತರ ಜಮ್ಮು ಮತ್ತು ಕಾಶ್ಮೀರದಲ್ಲಿ ಹಾಗೂ ಪಂಜಾಬ್‌ನಲ್ಲಿ ಒಡಕುಂಟು ಮಾಡಿತು. ಈಗ ಹಿಂದೂಗಳ ಮಧ್ಯೆ ಒಡಕು ಮೂಡಿಸಲು ಯತ್ನಿಸುತ್ತಿದೆ. ಹಿಂದೂಗಳನ್ನು ಮಾತ್ರ ಒಡೆಯಲು ಕಾಂಗ್ರೆಸ್ ಏಕೆ ಯತ್ನಿಸುತ್ತಿದೆ. ಬೇರೆ ಧರ್ಮಗಳ ವಿಚಾರದಲ್ಲೂ ಇದನ್ನೇ ಮಾಡಬಹುದಲ್ಲ' ಎಂದು ಪ್ರಶ್ನಿಸಿದ್ದಾರೆ.

ಮಿಶ್ರಾ ಅವರ ಹೇಳಿಕೆಗೆ ಕಾಂಗ್ರೆಸ್ ಪ್ರತಿಕ್ರಿಯಿಸಿ, 'ಒಬಿಸಿಗಳು ಹಿಂದೂಗಳು ಹೌದೊ, ಅಲ್ಲವೋ ಎಂಬುದನ್ನು ಬಿಜೆಪಿ ಮೊದಲು ಸ್ಪಷ್ಟಪಡಿಸಲಿ. ಬಿಜೆಪಿಯು ಒಡೆದು ಆಳುವ ಮೂಲಕವೇ ಮಧ್ಯಪ್ರದೇಶದಲ್ಲಿ ಅಧಿಕಾರ ಹಿಡಿದಿದೆ. ಹೀಗಾಗಿ ಒಡಕಿನ ಕುರಿತು ಮಾತನಾಡುವ ನೈತಿಕ ಹಕ್ಕು ಮಿಶ್ರಾ ಅವರಿಗಿಲ್ಲ' ಎಂದು ಮಧ್ಯಪ್ರದೇಶ ಕಾಂಗ್ರೆಸ್‌ನ ಮಾಧ್ಯಮ ವಿಭಾಗದ ವಕ್ತಾರ ಕೆ.ಕೆ. ಮಿಶ್ರಾ ಹೇಳಿದ್ದಾರೆ.

ರಾಜಸ್ಥಾನ: 48 ಗಂಟೆಯೊಳಗೆ 500 ದೂರು

ಜೈಪುರ (ಪಿಟಿಐ): ವಿಧಾನಸಭೆ ಚುನಾವಣೆಗೆ ಸಜ್ಜಾಗುತ್ತಿರುವ ರಾಜಸ್ಥಾನದಲ್ಲಿ ನೀತಿ ಸಂಹಿತೆ ಜಾರಿ ಮಾಡಿದ 48 ಗಂಟೆಯೊಳಗೆ ಸಿ–ವಿಜಿಲ್ ಆ್ಯಪ್ ಮೂಲಕ 500ಕ್ಕೂ ಹೆಚ್ಚು ದೂರುಗಳು ದಾಖಲಾಗಿವೆ ಎಂದು ಅಧಿಕಾರಿಗಳು ಬುಧವಾರ ಹೇಳಿದ್ದಾರೆ.

ಅವುಗಳಲ್ಲಿ 134 ದೂರುಗಳನ್ನು ಸಮಯೋಚಿತ ದೂರುಗಳು ಎಂದು ಪರಿಗಣಿಸಿದ ಜಿಲ್ಲಾ ಚುನಾವಣಾ ಅಧಿಕಾರಿಗಳು, ನಿಗದಿತ ಸಮಯದಲ್ಲಿ ದೂರುಗಳನ್ನು ಇತ್ಯರ್ಥಪಡಿಸಿದರು. 115 ದೂರುಗಳನ್ನು ಅವರು ತಿರಸ್ಕರಿಸಿದ್ದಾರೆ. ಇನ್ನೂ ಆರು ದೂರುಗಳನ್ನು ಇತ್ಯರ್ಥಗೊಳಿಸಿಲ್ಲ. ಜಿಲ್ಲಾ ನಿಯಂತ್ರಣ ಕೊಠಡಿಯು 242 ದೂರುಗಳನ್ನು ತಿರಸ್ಕರಿಸಿದೆ ಎಂದು ಮುಖ್ಯ ಚುನಾವಣಾಧಿಕಾರಿ ಪ್ರವೀಣ್ ಗುಪ್ತಾ ಅವರು ಹೇಳಿದ್ದಾರೆ.

ಒಟ್ಟು ದೂರುಗಳಲ್ಲಿ 79 ದೂರುಗಳು ಜೈಪುರ ಜಿಲ್ಲೆಯಿಂದ ಬಂದಿವೆ ಎಂದು ಅಧಿಕಾರಿ ಹೇಳಿದ್ದಾರೆ.

ಮಿಜೋರಾಂ ವಿಧಾನಸಭೆ ಸ್ಪೀಕರ್ ರಾಜೀನಾಮೆ

ಐಜ್ವಾಲ್ (ಪಿಟಿಐ): ಮಿಜೋರಾಂ ವಿಧಾನಸಭೆಯ ಸ್ಪೀಕರ್ ಮತ್ತು ಎಂಎನ್‌ಎಫ್ ನಾಯಕ ಲಾಲ್‌ರಿನ್‌ಲಿಯಾನಾ ಸೈಲೊ ಅವರು ಶಾಸಕ ಸ್ಥಾನಕ್ಕೆ ಬುಧವಾರ ರಾಜೀನಾಮೆ ನೀಡಿದ್ದಾರೆ. ರಾಜ್ಯದ ಅಭಿವೃದ್ಧಿಗಾಗಿ ಬಿಜೆಪಿ ಸೇರುವುದಾಗಿ ಹೇಳಿದ್ದಾರೆ.

2018ರ ವಿಧಾನಸಭಾ ಚುನಾವಣೆಯಲ್ಲಿ ಚಾಲ್‌ಫಿಲ್ಹ್ ಕ್ಷೇತ್ರದಿಂದ ಗೆದ್ದಿದ್ದ ಸೈಲೊ ಅವರಿಗೆ ಈ ಬಾರಿ ಟಿಕೆಟ್ ನಿರಾಕರಿಸಲಾಗಿತ್ತು. ಅವರು ಗುರುವಾರ ಬಿಜೆಪಿಗೆ ಸೇರ್ಪಡೆಗೊಳ್ಳುವ ಸಾಧ್ಯತೆ ಇದೆ ಎಂದು ಪಕ್ಷದ ಮೂಲಗಳು ಹೇಳಿವೆ. 'ಮಿಜೋರಾಂನ 40 ಸ್ಥಾನಗಳ ವಿಧಾನಸಭೆಗೆ ನವೆಂಬರ್ 7ರಂದು ಒಂದು ಹಂತದಲ್ಲಿ ಚುನಾವಣೆ ನಡೆಯಲಿದೆ.

41 ರ‍್ಯಾಲಿಗಳಲ್ಲಿ ಕೆಸಿಆರ್ ಭಾಗಿ

ಹೈದರಾಬಾದ್ (ಪಿಟಿಐ): ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರು ವಿಧಾನಸಭೆ ಚುನಾವಣೆಗಾಗಿ ಬಿರುಸಿನ ಪ್ರಚಾರ ಕೈಗೊಳ್ಳಲಿದ್ದು ಇದೇ 15ರಿಂದ 41 ಸಾರ್ವಜನಿಕ ರ‍್ಯಾಲಿಗಳಲ್ಲಿ ಭಾಷಣ ಮಾಡಲಿದ್ದಾರೆ.

ಒತ್ತೆಯಾಳುಗಳನ್ನು ಬಂಡುಕೋರರು ಏನು ಮಾಡುತ್ತಾರೆ?– ಸಂಬಂಧಿಕರ ಪ್ರಶ್ನೆ

ಪ್ರೀತಿಪಾತ್ರರ ಸುಳಿವಿನ ನಿರೀಕ್ಷೆಯಲ್ಲಿ...

ಜೆರುಸಲೇಂ (ಎಎಫ್‌ಪಿ): ಸೈನಿಕರು, ನಾಗರಿಕರು, ಮಕ್ಕಳು, ಮಹಿಳೆಯರು, ವಿದೇಶಿ ಪ್ರಜೆಗಳು ಸೇರಿ ಇಸ್ರೇಲ್‌ನ ಸುಮಾರು 150 ನಿವಾಸಿಗಳು ಗಾಜಾದ ಹಮಾಸ್ ಬಂಡುಕೋರರ ಒತ್ತೆಯಲ್ಲಿದ್ದಾರೆ ಎನ್ನಲಾಗಿದೆ. ಅವರಲ್ಲಿ ಬಹುತೇಕರ ಸುಳಿವು ಪತ್ತೆಯಾಗಿಲ್ಲ. ಪ್ರೀತಿಪಾತ್ರರ ಸುಳಿವಿಗಾಗಿ ಕುಟುಂಬ ಸದಸ್ಯರು ಕಾಯುತ್ತಲೇ ಇದ್ದಾರೆ.

ಪ್ಯಾಲೆಸ್ಟೀನ್‌ನಿಂದ ಬಿಡುಗಡೆಯಾದ ಕೆಲ ವಿಡಿಯೊಗಳಲ್ಲಿ ತಮ್ಮ ಸಂಬಂಧಿಕರ ಗುರುತನ್ನು ಇಸ್ರೇಲ್ ನಿವಾಸಿಗಳು ಪತ್ತೆ ಮಾಡಿದ್ದಾರೆ. ಇನ್ನೂ ಹಲವರು ಸಂಬಂಧಿಗಳ ಬಗ್ಗೆ ನಿರ್ದಿಷ್ಟ ಮಾಹಿತಿಗಾಗಿ ಕಾಯುತ್ತಲೇ ಇದ್ದಾರೆ.

ಇದೇ ವೇಳೆ, ಇಸ್ರೇಲ್‌ನ ಬೆನ್–ಗುರಿಯಾನ್ ವಿಶ್ವವಿದ್ಯಾಲಯ 26 ವರ್ಷ ವಯಸ್ಸಿನ ವಿದ್ಯಾರ್ಥಿನಿಯೊಬ್ಬಳು 'ನನ್ನನ್ನು ಕೊಲ್ಲಬೇಡಿ' ಎಂದು ಹಮಾಸ್ ಬಂಡುಕೋರ ಮುಂದೆ ಆಕ್ರಂದಿಸುವ ದೃಶ್ಯಗಳು, ಮೋಟಾರ್ ಬೈಕ್‌ನಲ್ಲಿ ಕರೆದೊಯ್ಯುವ ದೃಶ್ಯಗಳು ಜಗತ್ತಿನಾದ್ಯಂತ ಹರಿದಾಡಿವೆ.

ವಿದ್ಯಾರ್ಥಿನಿ ಜೊತೆಗೆ ಆಕೆಯ ಪ್ರಿಯಕರ ಕೂಡಾ ಇದ್ದಾನೆ. ಇಬ್ಬರನ್ನು ಬಂಡುಕೋರರು ಗಾಜಾ ಗಡಿ ಬಳಿ ಅಪಹರಿಸಿದ್ದಾರೆ ಎನ್ನಲಾಗಿದೆ.



ಇಸ್ರೇಲ್ ಸೇನೆಯು ಗಾಜಾ ಗಡಿಯಲ್ಲಿ ಫಿರಂಗಿ ಮೂಲಕ ಬುಧವಾರ ದಾಳಿ ನಡೆಸಿತು –ಎಪಿಎಫ್ ಚಿತ್ರ

ಬದುಕನ್ನು ಅಗಾಧವಾಗಿ ಪ್ರೀತಿಸುತ್ತಿದ್ದ ಆಕೆಯನ್ನು ಸ್ನೇಹಿತರು ಪ್ರೀತಿಯಿಂದ ಸ್ಮರಿಸಿದ್ದಾರೆ.

ಪಾರ್ಟಿಗಳಿಗೆ ತೆರಳುತ್ತಿದ್ದ ಸುಮಾರು 270 ಮಂದಿಯನ್ನು ಬಂಡುಕೋರರು ಹತ್ಯೆಗೈದಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪ್ಯಾಲೆಸ್ಟೀನ್‌ನಲ್ಲಿ ಶಾಂತಿ ಸ್ಥಾಪಿಸುವುದನ್ನು ಪ್ರತಿಪಾದಿಸುತ್ತಿದ್ದ ಹೋರಾಟಗಾರ್ತಿ, ಕೆನಡಾ ಮೂಲದ ಇಸ್ರೇಲ್ ನಿವಾಸಿ ಸಿಲ್ವರ್ (74) ಕೂಡಾ ಕಾಣೆಯಾಗಿದ್ದಾರೆ. ಗಾಜಾ ಗಡಿ ಬಳಿಯ ಕಬ್ಬುಟ್ಜ್‌ನಲ್ಲಿ (ಕೃಷಿಕ ಸಮುದಾಯ ವಾಸಿಸುವ ಪ್ರದೇಶ) ಇವರು ನೆಲೆಸಿದ್ದರು. ಇವರ ಸಮುದಾಯದ ಹಲವರು ನಾಪತ್ತೆಯಾಗಿದ್ದಾರೆ.

ತಮ್ಮನ್ನು ಕಾಪಾಡಿಕೊಳ್ಳಲು ಪ್ರತಿ ದಾಳಿ ನಡೆಸುವುದು ದಾಳಿಗೊಳಗಾದವರ ಹಕ್ಕಾಗಿರುತ್ತದೆ. ಆದರೆ, ಗಾಜಾದ ಮುಗ್ಧ ಸಂತ್ರಸ್ತರ ಸ್ಥಿತಿ ನೆನೆಸಿಕೊಂಡರೆ ಆತಂಕವಾಗುತ್ತದೆ
ಪೋಪ್ ಫ್ರಾನ್ಸಿಸ್

'ನ್ಯಾಯಕ್ಕಾಗಿ ಹೋರಾಡುತ್ತಿದ್ದ ಆಕೆ ಅತ್ಯುತ್ತಮ ತಾಯಿ ಮತ್ತು ಅಜ್ಜಿ' ಎಂದು ಅವರ ಮಗ ನೆನೆಯುತ್ತಾರೆ.

ಪೋಷಕರನ್ನು ಕಾಣಲು ನಿರ್ ಓಜ್‌ಗೆ ಬಂದಿದ್ದ ಆಶೆರ್ ಕಾಟ್ಜ್ (34) ಅವರು ಈವರೆಗೂ ತಮ್ಮ ಸಂಬಂಧಿಗಳ ಸಂಪರ್ಕಕ್ಕೆ ಸಿಕ್ಕಿಲ್ಲ. 'ಗಾಜಾದಿಂದ ಬಿಡುಗಡೆಯಾದ ವಿಡಿಯೊವೊಂದರಲ್ಲಿ ಆಶೆರ್ ಅವರನ್ನು ಅವರ ಕುಟುಂಬ ಸದಸ್ಯರ ಜೊತೆ ನೋಡಿದೆವು. ಅವರೆಲ್ಲ ಎಲ್ಲಿದ್ದಾರೆ. ಅವರನ್ನು ಬಂಡುಕೋರರು ಏನು ಮಾಡುತ್ತಾರೆ' ಎಂದು ಆಶೆರ್ ಸಂಬಂಧಿ ಆತಂಕದಿಂದ ಪ್ರಶ್ನಿಸುತ್ತಾರೆ.

ಪೂಜಾ ಕುಟುಂಬಕ್ಕೆ ಧೈರ್ಯ ತುಂಬಿದ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಇಸ್ರೇಲ್‌ನಲ್ಲಿ ಸಿಲುಕಿರುವ ರಬಕವಿಯ ಸಾಫ್ಟ್‌ವೇರ್ ಎಂಜಿನಿಯರ್ ಪೂಜಾ ಉಮದಿ ಅವರ ತಾಯಿ ನಿರ್ಮಲಾ ಉಮದಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಧೈರ್ಯ ತುಂಬಿದ್ದಾರೆ.

'ಪೂಜಾ ಅವರೊಂದಿಗೆ ಮಾತನಾಡಿದ್ದೇನೆ. ಅವರು ಸುರಕ್ಷಿತವಾಗಿ ಇರುವುದಾಗಿ ತಿಳಿಸಿದ್ದಾರೆ. ನೀವು ಯಾವುದೇ ಆತಂಕಕ್ಕೆ ಒಳಗಾಗಬೇಡಿ' ಎಂದು ಅವರು ಮೊಬೈಲ್ ಕರೆ ಮಾಡಿ ತಿಳಿಸಿದರು.

ಬೆಂಗಳೂರಿನಲ್ಲಿ ಸಿದ್ದರಾಮಯ್ಯ ಅವರನ್ನು ಭೇಟಿಯಾದ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ತಮ್ಮ ಮೊಬೈಲ್‌ನಿಂದ ಕರೆ ಮಾಡಿ, ಮಾತನಾಡಿಸಿದರು.

ಸಚಿವ ತಿಮ್ಮಾಪುರ ಕೂಡ ಪೂಜಾ ಜೊತೆ ಮಾತನಾಡಿ, 'ಇಸ್ರೇಲ್‌ನಲ್ಲಿ ಯಾವುದೇ ರೀತಿಯ ತೊಂದರೆಯಾದರೆ ನಮ್ಮನ್ನು ಸಂಪರ್ಕಿಸಿ. ಸರ್ಕಾರ ನಿಮ್ಮ ಜೊತೆಗಿದೆ' ಎಂದರು.

ಸರ್ವಪಕ್ಷ ಸರ್ಕಾರ ರಚಿಸಿದ ಇಸ್ರೇಲ್

ಜೆರುಸಲೇಂ (ಪಿಟಿಐ): ಹಮಾಸ್ ಬಂಡುಕೋರರ ವಿರುದ್ಧದ ಯುದ್ಧದ ಅವಧಿಯಲ್ಲಿ ಮಿಲಿಟರಿ ಕಾರ್ಯಾಚರಣೆಯ ಮೇಲ್ವಿಚಾರಣೆ ನಡೆಸಲು ಸರ್ವಪಕ್ಷ ಸರ್ಕಾರವನ್ನು ರಚಿಸಲು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮತ್ತು ವಿರೋಧ ಪಕ್ಷದ ನಾಯಕ ಬೆನ್ನಿ ಗೆಂಟ್ಜ್ ಸಮ್ಮತಿ ಸೂಚಿಸಿದ್ದಾರೆ.

ಇಸ್ರೇಲ್‌ನ ನ್ಯಾಷನಲ್ ಯೂನಿಟಿ ಪಾರ್ಟಿಯ ನಾಯಕ ಬೆನ್ನಿ ಗೆಂಟ್ಜ್ ಅವರು ಹೇಳಿಕೆಯೊಂದನ್ನು ಬಿಡುಗಡೆ ಮಾಡಿದ್ದಾರೆ. ಇದು ನೆತನ್ಯಾಹು ಅವರೊಂದಿಗಿನ ಜಂಟಿ ಹೇಳಿಕೆ ಎಂದು ಗೆಂಟ್ಜ್ ತಿಳಿಸಿದ್ದಾರೆ.

ಐವರು ಸದಸ್ಯರ ಯುದ್ಧ ನಿರ್ವಹಣಾ ಸಂಪುಟವನ್ನು ರಚಿಸುವುದಾಗಿ ಅವರು ಹೇಳಿದ್ದಾರೆ. ಕಾರ್ಯಾಚರಣೆ ನಡೆಯುತ್ತಿರುವಷ್ಟು ಕಾಲ ಈ ಸರ್ಕಾರವು ಯುದ್ಧಕ್ಕೆ ಸಂಬಂಧಿಸದೆ ಇರುವ ಯಾವುದೇ ತೀರ್ಮಾನ ಕೈಗೊಳ್ಳುವುದಿಲ್ಲ ಹಾಗೂ ಯುದ್ಧಕ್ಕೆ ಸಂಬಂಧಿಸಿರದ ಶಾಸನ ರೂಪಿಸುವುದಿಲ್ಲ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ವಿರೋಧ ಪಕ್ಷದ ನಾಯಕ ಯಾಯಿರ್ ಲಾಪಿಡ್ ಅವರಿಗೂ ಸರ್ಕಾರ ಸೇರುವಂತೆ ಆಹ್ವಾನ ನೀಡಲಾಗಿದೆ. ಆದರೆ ಅವರು ಇದುವರೆಗೆ ಇದಕ್ಕೆ ಪ್ರತಿಕ್ರಿಯೆ ನೀಡಿಲ್ಲ.

'ಬಿಕ್ಕಟ್ಟು ಶಮನಕ್ಕೆ ಅಮೆರಿಕ ವಿಫಲ'

ಮಾಸ್ಕೊ (ರಾಯಿಟರ್ಸ್): ಇಸ್ರೇಲ್– ಪ್ಯಾಲೆಸ್ಟೀನ್ ಬಿಕ್ಕಟ್ಟು ಇತ್ಯರ್ಥಗೊಳಿಸಲು ಅಮೆರಿಕ ವಿಫಲವಾಗಿದೆ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಆರೋಪಿಸಿದ್ದಾರೆ.

ಪ್ಯಾಲೆಸ್ಟೀಯನ್ನರ ರಾಷ್ಟ್ರ ಸ್ಥಾಪನೆಯಂತಹ ವಿಷಯಗಳತ್ತ ಗಮನಹರಿಸದೆ ಸಂಘರ್ಷವನ್ನು ತಿಳಿಗೊಳಿಸಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ.

- **ವಿಮಾನಗಳು ಸ್ಥಗಿತ:** ಹಮಾಸ್ ಬಂಡುಕೋರರು ಇಸ್ರೇಲ್ ಮೇಲೆ ದಾಳಿ ನಡೆಸಿದ ಬಳಿಕ ಅಂತರರಾಷ್ಟ್ರೀಯ ವಿಮಾನಯಾನ ಸಂಸ್ಥೆಗಳು ಟೆಲ್‌ಅವೀವ್‌ಗೆ ಹೋಗುವ ಮತ್ತು ಅಲ್ಲಿಂದ ಹೊರಡುವ ನೂರಾರು ವಿಮಾನಗಳ ಸಂಚಾರವನ್ನು ಸ್ಥಗಿತಗೊಳಿಸಿವೆ.
- **ಆನ್‌ಲೈನ್‌ನಲ್ಲಿ ಶಾಲೆ:** ಇಸ್ರೇಲ್‌ನಲ್ಲಿ ಶಾಲೆಗಳನ್ನು ಆನ್‌ಲೈನ್ ಮೂಲಕ ನಡೆಸಲಾಗುತ್ತದೆ ಎಂದು ಶಿಕ್ಷಣ ಸಚಿವಾಲಯ ಹೇಳಿದೆ.



ಇಸ್ರೇಲ್ ಮೇಲೆ ಹಮಾಸ್ ಬಂಡುಕೋರರು ನಡೆಸುತ್ತಿರುವ ರಾಕೆಟ್ ದಾಳಿಯಿಂದ ಆಸ್ಕೆಲಾನ್ ನಗರದಲ್ಲಿ ಬುಧವಾರ ರಕ್ಷಣೆ ಪಡೆದ ಇಸ್ರೇಲಿಯನ್ನರು –ಎಪಿ/ಪಿಟಿಐ ಚಿತ್ರ

ಜೈಶಂಕರ್ ಮಾತುಕತೆ

ನವದೆಹಲಿ (ಪಿಟಿಐ): ಇಸ್ರೇಲ್– ಪ್ಯಾಲೆಸ್ಟೀನ್ ದಾಳಿಯಿಂದ ಪಶ್ಚಿಮ ಏಷ್ಯಾದಲ್ಲಿ ಉದ್ಭವಿಸಿರುವ ಬಿಕ್ಕಟ್ಟಿನ ಬಗ್ಗೆ ವಿದೇಶಾಂಗ ವ್ಯವಹಾರಗಳ ಸಚಿವ ಜೈಶಂಕರ್ ಅವರು ಯುನೈಟೆಡ್ ಅರಬ್ ಎಮಿರೇಟ್ಸ್‌ನ (ಯುಎಇ)ತಮ್ಮ ಸಹವರ್ತಿ ಶೇಖ್ ಅಬ್ದುಲ್ಲಾ ಬಿನ್ ಜಯೇದ್ ನಹ್ಯಾನ್ ಅವರ ಜತೆ ದೂರವಾಣಿ ಮೂಲಕ ಮಾತುಕತೆ ನಡೆಸಿದರು.

ಜೈಶಂಕರ್ ಅವರು ಈಗ ಶ್ರೀಲಂಕಾ ಪ್ರವಾಸದಲ್ಲಿದ್ದಾರೆ. ಮಾತುಕತೆ ನಡೆಸಿದ ಬಗ್ಗೆ ಟ್ವೀಟ್ ಮಾಡಿರುವ ಅವರು, ಪರಸ್ಪರ ಸಂಪರ್ಕದಲ್ಲಿರಲು ತಾವಿಬ್ಬರೂ ನಿರ್ಧರಿಸಿದ್ದಾಗಿ ತಿಳಿಸಿದ್ದಾರೆ.

'ಆಪರೇಷನ್ ಅಜಯ್' ಆರಂಭ



ನವದೆಹಲಿ (ಪಿಟಿಐ): ಇಸ್ರೇಲ್‌ನಲ್ಲಿ ಸಿಲುಕಿರುವ 18 ಸಾವಿರ ಭಾರತೀಯರು ತಾಯ್ನಾಡಿಗೆ ಮರಳುವುದಕ್ಕೆ ಅನುಕೂಲ ಮಾಡಿಕೊಡುವುದಕ್ಕಾಗಿ 'ಆಪರೇಷನ್ ಅಜಯ್' ಕಾರ್ಯಾಚರಣೆಗೆ ಚಾಲನೆ ನೀಡಲಾಗಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಬುಧವಾರ ಘೋಷಿಸಿದ್ದಾರೆ.

ಭಾರತೀಯರ ಮೊದಲ ತಂಡವನ್ನು ಹೊತ್ತ ವಿಶೇಷ ವಿಮಾನ ಗುರುವಾರ ಭಾರತಕ್ಕೆ ಬಂದಿಳಿಯುವ ನಿರೀಕ್ಷೆ ಇದೆ.

ಸದ್ಯ, ಶ್ರೀಲಂಕಾ ಪ್ರವಾಸದಲ್ಲಿರುವ ಅವರು, ಈ ಕುರಿತು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಇಸ್ರೇಲ್ ಮತ್ತು ಹಮಾಸ್ ಬಂಡುಕೋರರ ನಡುವಿನ ಕಾಳಗ ಐದನೇ ದಿನವೂ ಮುಂದುವರಿದಿದೆ. ಅಲ್ಲದೇ, ಇಸ್ರೇಲ್ ಪಟ್ಟಣಗಳ ಮೇಲೆ ಹಮಾಸ್ ಹೊಸದಾಗಿ ದಾಳಿಗಳನ್ನು ಆರಂಭಿಸಿದ ಬೆನ್ನಲ್ಲೇ ಭಾರತ ಈ ಘೋಷಣೆ ಮಾಡಿದೆ.

'ಇಸ್ರೇಲ್‌ನಿಂದ ಮರಳಲು ಇಚ್ಛಿಸುವ ಭಾರತೀಯರಿಗೆ ನೆರವಾಗುವುದಕ್ಕಾಗಿ ಈ ಕಾರ್ಯಾಚರಣೆಗೆ ಚಾಲನೆ ನೀಡಲಾಗಿದೆ. ವಿಶೇಷ ಖಾಸಗಿ ವಿಮಾನಗಳ ವ್ಯವಸ್ಥೆ ಮಾಡಲಾಗಿದ್ದು, ನಮ್ಮ ಪ್ರಜೆಗಳ ಸುರಕ್ಷತೆಯನ್ನು ಖಾತರಿಪಡಿಸಲು ಬದ್ಧ' ಎಂದಿದ್ದಾರೆ.

'ಗುರುವಾರ ಹೊರಡಲಿರುವ ವಿಮಾನದ ಮೂಲಕ ಭಾರತಕ್ಕೆ ತೆರಳಿರುವ ಮೊದಲ ತಂಡದಲ್ಲಿರುವವರಿಗೆ ಇ–ಮೇಲ್ ಮೂಲಕ ಮಾಹಿತಿ ನೀಡಲಾಗಿದೆ' ಎಂದು ಇಸ್ರೇಲ್‌ನಲ್ಲಿರುವ ಭಾರತ ರಾಯಭಾರ ಕಚೇರಿ ಹೇಳಿದೆ.

'ಭಾರತಕ್ಕೆ ಮರಳಲು ನೋಂದಣಿ ಮಾಡಿಸಿಕೊಂಡಿರುವ ಇತರರಿಗೆ ಶೀಘ್ರವೇ ಮಾಹಿತಿ ನೀಡಲಾಗುತ್ತದೆ' ಎಂದು ರಾಯಭಾರ ಕಚೇರಿ ಹೇಳಿದೆ.

ಇಸ್ರೇಲ್ ದಾಳಿ: ಗಾಜಾ ಧ್ವಂಸ

ಒಂದನೇ ಪುಟದಿಂದ...

ಪ್ಯಾಲೆಸ್ಟೀನ್ ಜನರು ವಿಶ್ವಸಂಸ್ಥೆಯ ಶಾಲೆಗಳಲ್ಲಿ ಆಶ್ರಯ ಪಡೆದುಕೊಂಡಿದ್ದಾರೆ. ಅವರಿಗೆ ಸುರಕ್ಷಿತವಾದ ಸ್ಥಳಗಳು ಕಡಿಮೆಯಾಗುತ್ತಿವೆ. ಅಗತ್ಯ ವಸ್ತುಗಳ ಪೂರೈಕೆಗೆ ಮಾರ್ಗವೊಂದನ್ನು ನಿರ್ಮಿಸಿಕೊಡಬೇಕು ಎಂದು ನೆರವು ಒದಗಿಸುವ ತಂಡಗಳು ಮನವಿ ಮಾಡಿವೆ.

ಡಾಕ್ಟರ್ಸ್ ವಿದೌಟ್ ಬಾರ್ಡರ್ಸ್ ಸಂಘಟನೆಯು ಗಾಜಾದಲ್ಲಿ ಎರಡು ಆಸ್ಪತ್ರೆಗಳನ್ನು ನಡೆಸುತ್ತಿದೆ. ಆದರೆ ಅಲ್ಲಿ ಕೆಲವು ಉಪಕರಣಗಳು, ಔಷಧಿಗಳು ಮತ್ತು ಇಂಧನ ಖಾಲಿಯಾಗುತ್ತಿದೆ ಎಂದು ತಿಳಿಸಿದೆ.

'ಎಲ್ಲ ಬಗೆಯ ನಿರ್ಬಂಧಗಳನ್ನೂ ನಾನು ತೆಗೆದುಹಾಕಿದ್ದೇನೆ. ನಮ್ಮ ವಿರುದ್ಧವಾಗಿ ಹೋರಾಡುವ ಎಲ್ಲರನ್ನೂ ನಾವು ಇಲ್ಲವಾಗಿಸುತ್ತೇವೆ. ನಮ್ಮ ಕೈಯಲ್ಲಿರುವ ಎಲ್ಲ ಅಸ್ತ್ರಗಳನ್ನೂ ಬಳಸಿಕೊಳ್ಳುತ್ತೇವೆ' ಎಂದು ಇಸ್ರೇಲ್ ರಕ್ಷಣಾ ಸಚಿವ ಯೊವಾವ್ ಗ್ಯಾಲಂಟ್ ಹೇಳಿದ್ದಾರೆ.

'ಹಮಾಸ್‌ಗೆ ಬದಲಾವಣೆ ಬೇಕಿತ್ತು. ಬದಲಾವಣೆಯು ಅದಕ್ಕೆ ಸಿಗಲಿದೆ. ಗಾಜಾದಲ್ಲಿ ಹಿಂದೆ ಇದ್ದಿದ್ದು ಮುಂದೆ ಇರುವುದಿಲ್ಲ. ನಾವು ವೈಮಾನಿಕ ದಾಳಿ ಆರಂಭಿಸಿದ್ದೇವೆ. ಮುಂದೆ ನಾವು ಭೂಸೇನೆಯ ದಾಳಿಯನ್ನೂ ಆರಂಭಿಸುತ್ತೇವೆ' ಎಂದು ಅವರು ಎಚ್ಚರಿಸಿದ್ದಾರೆ.

ಗಾಜಾ ಪಟ್ಟಿಯ ಖಾನ್ ಯೂನಿಸ್ ಮೇಲೆ ಮಂಗಳವಾರ ನಡೆದ ವೈಮಾನಿಕ ದಾಳಿಯಲ್ಲಿ ಹಮಾಸ್‌ನ ಮಿಲಿಟರಿ ವಿಭಾಗದ ನಾಯಕ ಮೊಹಮ್ಮದ್ ದೈಫ್‌ನ ತಂದೆ, ಸಹೋದರ ಮತ್ತು ಇತರ ಇಬ್ಬರು ಸಂಬಂಧಿಗಳು ಮೃತಪಟ್ಟಿದ್ದಾರೆ ಎಂದು ಹಮಾಸ್‌ನ ಹಿರಿಯ ನಾಯಕ ಬಸ್ಸೆಂ ನಯೀಂ ತಿಳಿಸಿದ್ದಾರೆ. ದೈಫ್ ಯಾವತ್ತೂ ಸಾರ್ವಜನಿಕವಾಗಿ ಕಾಣಿಸಿಕೊಂಡಿಲ್ಲ. ಆತ ಎಲ್ಲಿದ್ದಾನೆ ಎಂಬುದು ಗೊತ್ತಿಲ್ಲ.

ಇಸ್ರೇಲ್‌ನ ಉತ್ತರ ಭಾಗದಲ್ಲಿ ಲೆಬನಾನ್ ಹಾಗೂ ಸಿರಿಯಾದ ಉಗ್ರರ ಜೊತೆ ಕೂಡ ಗುಂಡಿನ ಚಕಮಕಿ ನಡೆದಿದೆ. ಇದು ಈಗಿನ ಸಂಘರ್ಷವು ವ್ಯಾಪಕಗೊಳ್ಳುವ ಭೀತಿಯನ್ನು ಸೃಷ್ಟಿಸಿದೆ. ಇಸ್ರೇಲ್‌ನ ಶೆಲ್ ದಾಳಿಯು ಲೆಬನಾನ್‌ನ ದಕ್ಷಿಣ ಭಾಗದ ಪಟ್ಟಣಗಳಿಗೆ ಹಾನಿ ಮಾಡಿದೆ.

'ಇಸ್ರೇಲ್‌ನಲ್ಲಿ ಇದ್ದೇವೆ': ಈ ನಡುವೆ, 'ಇಸ್ರೇಲ್‌ನ ಗಡಿಯ ಒಳಗೆ ನಾವು ಇನ್ನೂ ಹೋರಾಟ ನಡೆಸುತ್ತಿದ್ದೇವೆ' ಎಂದು ಹಮಾಸ್ ಸಂಘಟನೆಯು ಹೇಳಿಕೊಂಡಿದೆ.

ದೆಹಲಿ, ಟೆಲ್ ಅವೀವ್‌ನಲ್ಲಿ ಸಹಾಯವಾಣಿ

ನವದೆಹಲಿ/ಟೆಲ್ ಅವೀವ್ (ಪಿಟಿಐ): ಇಸ್ರೇಲ್–ಹಮಾಸ್ ಯುದ್ಧದ ಸಂದರ್ಭದಲ್ಲಿ ನೆರವಿನ ಅಗತ್ಯವಿರುವ ಭಾರತೀಯರಿಗಾಗಿ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ದೆಹಲಿಯಲ್ಲಿ ಪ್ರತ್ಯೇಕ ನಿಯಂತ್ರಣ ಕೊಠಡಿ ಆರಂಭಿಸಿದೆ. ಅಲ್ಲದೆ, ಇಸ್ರೇಲ್ ರಾಜಧಾನಿ ಟೆಲ್ ಅವೀವ್ ಹಾಗೂ ವೆಸ್ಟ್ ಬ್ಯಾಂಕ್‌ನ ರಮಲ್ಲಾದಲ್ಲಿ ಸಹಾಯವಾಣಿ ಆರಂಭಿಸಿದೆ.

ಇಸ್ರೇಲ್‌ನಲ್ಲಿ 18 ಸಾವಿರ ಭಾರತೀಯರು ಇದ್ದಾರೆ ಎಂದು ಅಂದಾಜಿಸಲಾಗಿದೆ. 'ನಿಯಂತ್ರಣ ಕೊಠಡಿಯು ದಿನದ 24 ಗಂಟೆಗಳೂ ಕಾರ್ಯ ನಿರ್ವಹಿಸುತ್ತದೆ' ಎಂದು ಸಚಿವಾಲಯ ಹೇಳಿದೆ.

ದೆಹಲಿ ನಿಯಂತ್ರಣ ಕೊಠಡಿಯ ಸಂಖ್ಯೆ: 1800118797, +91-11 23012113, +91-11-23014104, +91-11-23017905, +919968291988. ಇಮೇಲ್ ವಿಳಾಸ: situationroom@mea.gov.in.

ಟೆಲ್ ಅವೀವ್ ಸಹಾಯವಾಣಿ ಸಂಖ್ಯೆ: +97235226748, +972-543278392. ಇಮೇಲ್ ವಿಳಾಸ: cons1.telaviv@mea.gov.in.

ರಮಲ್ಲಾದಲ್ಲಿನ ಸಹಾಯವಾಣಿ ಸಂಖ್ಯೆ: +970-592916418, ಇಮೇಲ್ ವಿಳಾಸ: rep.ramallah@mea.gov.in

ಭಾರತೀಯರಿಗೆ ನೆರವು: 'ಶಾಂತವಾಗಿರಿ, ಎಚ್ಚರಿಕೆಯಿಂದ ಇರಿ' ಎಂದು ಇಸ್ರೇಲ್‌ನಲ್ಲಿನ ಭಾರತೀಯರಿಗೆ ಮತ್ತೊಮ್ಮೆ ಮನವಿ ಮಾಡಿರುವ ಅಲ್ಲಿನ ಭಾರತೀಯ ರಾಯಭಾರ ಕಚೇರಿಯು 'ಇಲ್ಲಿರುವ ಭಾರತೀಯರಿಗೆ ನೆರವು ನೀಡಲು ನಿರಂತರವಾಗಿ ಶ್ರಮಿಸಲಾಗುತ್ತಿದೆ' ಎಂದು ತಿಳಿಸಿದೆ.

ಇಸ್ರೇಲ್‌ನಲ್ಲಿ ಭಾರತದ ರಾಯಭಾರಿ ಆಗಿರುವ ಸಂಜೀವ್ ಸಿಂಗ್ಲಾ ಅವರು 'ಎಕ್ಸ್' ವೇದಿಕೆಯಲ್ಲಿ ಸಂದೇಶವೊಂದನ್ನು ಪ್ರಕಟಿಸಿದ್ದು, 'ನಾವೆಲ್ಲರೂ ಬಹಳ ಕಷ್ಟದ ಸಮಯ ಎದುರಿಸುತ್ತಿದ್ದೇವೆ. ಆದರೆ ಶಾಂತವಾಗಿರಿ, ಎಚ್ಚರಿಕೆಯಿಂದ ಇರಿ. ಸ್ಥಳೀಯ ಭದ್ರತಾ ಮಾರ್ಗಸೂಚಿಗಳನ್ನು ಪಾಲಿಸಿ' ಎಂದು ಮನವಿ ಮಾಡಿದ್ದಾರೆ.

- ಅಮೆರಿಕವು ಇಸ್ರೇಲ್‌ಗೆ ಹೆಚ್ಚುವರಿ ಮಿಲಿಟರಿ ನೆರವನ್ನು ರವಾನಿಸಿದೆ. ಇಸ್ರೇಲ್‌ನ ಕ್ಷಿಪಣಿ ನಿರೋಧಕ ವ್ಯವಸ್ಥೆಗೆ ಅಗತ್ಯವಿರುವ ಇಂಟರ್‌ಸೆಪ್ಟರ್‌ಗಳನ್ನು ಕೂಡ ಕಳುಹಿಸುತ್ತಿದೆ.
- ನಾಗರಿಕರ ಜೀವಕ್ಕೆ ಹಾನಿ ಆಗದಂತೆ ಇಸ್ರೇಲ್ ನಿಗಾ ವಹಿಸಬೇಕು ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.
- ಗಾಜಾದಲ್ಲಿ 1.80 ಲಕ್ಷಕ್ಕಿಂತ ಹೆಚ್ಚು ಜನರು ನಿರಾಶ್ರಿತರಾಗಿದ್ದಾರೆ ಎಂದು ವಿಶ್ವಸಂಸ್ಥೆ ಹೇಳಿದೆ.

ಭಿನ್ನ ಅಭಿಪ್ರಾಯದ ಆದೇಶ ನೀಡಿದ ಸುಪ್ರೀಂ ಕೋರ್ಟ್ ದ್ವಿಸದಸ್ಯ ನ್ಯಾಯಪೀಠ

ಗರ್ಭಪಾತ: ಸಿಜೆಐ ಮುಂದೆ ಅರ್ಜಿ

ಪ್ರಜಾವಾಣಿ ವಾರ್ತೆ



ನವದೆಹಲಿ: 26 ವಾರಗಳು ತುಂಬಿದ ಗರ್ಭಿಣಿಗೆ ಗರ್ಭಪಾತ ಮಾಡಿಸಿಕೊಳ್ಳಲು ಅನುಮತಿ ನೀಡಿ ಅಕ್ಟೋಬರ್ 9ರಂದು ನೀಡಿದ್ದ ಆದೇಶವನ್ನು ಹಿಂಪಡೆಯಬೇಕು ಎಂದು ಕೋರಿ ಕೇಂದ್ರ ಸರ್ಕಾರ ಸಲ್ಲಿಸಿದ್ದ ಅರ್ಜಿಗೆ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ನ್ಯಾಯಪೀಠವು ಬುಧವಾರ ಭಿನ್ನ ಅಭಿಪ್ರಾಯದ ಆದೇಶ ಹೊರಡಿಸಿದೆ.

ಪೀಠದಲ್ಲಿದ್ದ ಇಬ್ಬರು ಮಹಿಳಾ ನ್ಯಾಯಮೂರ್ತಿಗಳು ಭಿನ್ನ ಆದೇಶ ಹೊರಡಿಸಿದ್ದಾರೆ. ಕೇಂದ್ರ ಸರ್ಕಾರ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸೂಕ್ತ ನ್ಯಾಯಪೀಠಕ್ಕೆ ವಹಿಸಲು ಅದನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರಿಗೆ ವರ್ಗಾಯಿಸಲಾಗಿದೆ ಎಂದು ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಮತ್ತು ಬಿ.ವಿ. ನಾಗರತ್ನ ಅವರಿದ್ದ ಪೀಠ ಹೇಳಿದೆ.

ಭ್ರೂಣವು ಬದುಕುಳಿಯುವ ಸಾಧ್ಯತೆಯು ಬಲವಾಗಿದೆ ಎಂದು ಹೊಸ ವೈದ್ಯಕೀಯ ವರದಿ ಹೇಳಿದೆ.

'ಭ್ರೂಣದ ಹೃದಯ ಬಡಿತವನ್ನು ನಿಲ್ಲಿಸಿ ಎಂದು ಯಾವ ಕೋರ್ಟ್ ಹೇಳುತ್ತದೆ' ಎಂದು ಕೊಹ್ಲಿ ಅವರು ತಮ್ಮ ಆದೇಶದಲ್ಲಿ ಹೇಳಿದ್ದಾರೆ. ಹೊಸದಾಗಿ ಸಲ್ಲಿಸಿದ ವೈದ್ಯಕೀಯ ವರದಿಯನ್ನು ಆಧರಿಸಿ ಕೊಹ್ಲಿ ಅವರು ಹೀಗೆ ಹೇಳಿದ್ದಾರೆ.

ಆದರೆ, ಅಕ್ಟೋಬರ್ 9ರಂದು ನೀಡಿದ್ದ ತೀರ್ಪನ್ನು ಹಿಂಪಡೆಯಬೇಕು ಎಂದು ಕೇಂದ್ರ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ನಾಗರತ್ನ ಅವರು ವಜಾಗೊಳಿಸಿದರು. ಅರ್ಜಿದಾರ ಮಹಿಳೆಯ ವಾದಕ್ಕೆ ಮಾನ್ಯತೆ ನೀಡಿ ನಾಗರತ್ನ ಅವರು, ಹಿಂದಿನ ತೀರ್ಪು ಸಮರ್ಪಕವಾಗಿದೆ ಎಂದರು. ಇಲ್ಲಿ ಅರ್ಜಿದಾರರ ಹಿತಾಸಕ್ತಿಗಳು ಹಾಗೂ ಆಕೆಯ ಅನಿಸಿಕೆಯನ್ನು ಪರಿಗಣಿಸಬೇಕು. ಆಕೆಯು ತನ್ನ ಮಾನಸಿಕ ಸ್ಥಿತಿಯನ್ನು ಮತ್ತು ತನಗಿರುವ ಕಾಯಿಲೆಗಳನ್ನು ಹೇಳಿದ್ದಾರೆ. ಅರ್ಜಿದಾರರ ತೀರ್ಮಾನವನ್ನು ಗೌರವಿಸಬೇಕು ಎಂದು ನಾಗರತ್ನ ಅವರು ಹೇಳಿದ್ದಾರೆ.

ಇದೇ ನ್ಯಾಯಪೀಠವು ಅ.9ರಂದು ಈ ಪ್ರಕರಣದಲ್ಲಿ ಆದೇಶ ನೀಡಿತ್ತು. ಮಹಿಳೆಯು ಖಿನ್ನತೆಯಿಂದ ಬಳಲುತ್ತಿದ್ದಾರೆ. ಅವರಿಗೆ ಈಗಾಗಲೇ ಇಬ್ಬರು ಮಕ್ಕಳಿದ್ದು, ಮೂರನೇ ಮಗುವನ್ನು ಬೆಳೆಸಲು ಮಾನಸಿಕವಾಗಿ ಮತ್ತು ಆರ್ಥಿಕವಾಗಿ ಶಕ್ತರಾಗಿಲ್ಲ ಎಂಬ ಅಂಶಗಳನ್ನು ಗಮನಿಸಿ ಗರ್ಭಪಾತಕ್ಕೆ ಅನುಮತಿ ನೀಡಿತ್ತು.

'ಸಂಬಂಧ ಹಾಳಾಗಿದೆ ಎಂಬುದೇ ವಿಚ್ಛೇದನಕ್ಕೆ ಆಧಾರವಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ವಿವಾಹ ಸಂಬಂಧವು ಸರಿಪಡಿಸಲು ಆಗದಷ್ಟು ಹಾಳಾಗಿದೆ ಎಂಬುದು ಮಾತ್ರವೇ ಸಂವಿಧಾನದ 142ನೆಯ ವಿಧಿಯ ಅಡಿಯಲ್ಲಿ ವಿವಾಹ ವಿಚ್ಛೇದನ ನೀಡುವುದಕ್ಕೆ ಕಾರಣವಾಗಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ವಿವಾಹ ವಿಚ್ಛೇದನ ಕೋರಿ ಸಲ್ಲಿಕೆಯಾಗುತ್ತಿರುವ ಅರ್ಜಿಗಳ ಸಂಖ್ಯೆ ಹೆಚ್ಚಾಗಿದೆಯಾದರೂ, ಭಾರತೀಯ ಸಮಾಜದಲ್ಲಿ ವಿವಾಹವನ್ನು ಇಂದಿಗೂ ಅಧ್ಯಾತ್ಮಿಕ ಮಹತ್ವದ, ಪವಿತ್ರವಾದ ಹಾಗೂ ಬೆಲೆ ಕಟ್ಟಲು ಸಾಧ್ಯವಿಲ್ಲದ ಬೆಸುಗೆ ಎಂಬಂತೆ ಕಾಣಲಾಗುತ್ತದೆ ಎಂದು ಕೋರ್ಟ್ ಹೇಳಿದೆ.

ವಿವಾಹ ಸಂಬಂಧವು ಕಾನೂನಿಗೆ ಮಾತ್ರ ಅನುಗುಣವಾಗಿ ಇರಬೇಕಾದುದಲ್ಲ. ಬದಲಿಗೆ, ಸಮಾಜದ ನಿಯಮಗಳಿಗೂ ಅದು ಅನುಗುಣವಾಗಿ ಇರಬೇಕಾಗಿರುತ್ತದೆ ಎಂದು ಹೇಳಿದ ಕೋರ್ಟ್, 89 ವರ್ಷ ವಯಸ್ಸಿನ ವ್ಯಕ್ತಿಯೊಬ್ಬರು ವಿಚ್ಛೇದನ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಲು ನಿರಾಕರಿಸಿತು.

ಸಂವಿಧಾನದ 142ನೆಯ ವಿಧಿಯು ಸುಪ್ರೀಂ ಕೋರ್ಟ್‌ಗೆ ನೀಡಿರುವ ಅಧಿಕಾರವನ್ನು ಬಳಸಿ, ತಮಗೆ ವಿವಾಹ ವಿಚ್ಛೇದನ ನೀಡಬೇಕು ಎಂದು ನಿವೃತ್ತ ವಿಂಗ್ ಕಮಾಂಡರ್ ಒಬ್ಬರು ಅರ್ಜಿ ಸಲ್ಲಿಸಿದ್ದರು. 'ನಾನು ಮತ್ತು ಪತ್ನಿ ಹಲವು ವರ್ಷಗಳಿಂದ ಪ್ರತ್ಯೇಕವಾಗಿ ವಾಸವಿದ್ದೇವೆ' ಎಂದು ಅವರು ಹೇಳಿದ್ದರು. ಆದರೆ ವಿಚ್ಛೇದನಕ್ಕೆ ತನ್ನ ಸಮ್ಮತಿ ಇಲ್ಲ ಎಂದು ಹೇಳಿದ್ದ ಪತ್ನಿ, 'ವಿಚ್ಛೇದಿತೆ' ಎಂಬ ಹಣೆಪಟ್ಟಿ ಹೊತ್ತುಕೊಂಡು ಸಾಯಲು ತನಗೆ ಇಷ್ಟವಿಲ್ಲ ಎಂದು ತಿಳಿಸಿದ್ದರು.

ನಿವೃತ್ತ ವಿಂಗ್ ಕಮಾಂಡರ್ 1996ರಲ್ಲಿ ಮೊದಲ ಬಾರಿಗೆ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರು. '1984ರಲ್ಲಿ ನನಗೆ ಮದ್ರಾಸ್‌ಗೆ (ಈಗಿನ ಚೆನ್ನೈ) ವರ್ಗವಾದಾಗಿನಿಂದ ಪತ್ನಿಯು ನನ್ನನ್ನು ನೋಡಿಕೊಂಡಿಲ್ಲ. ವಾಯುಪಡೆಯ ಅಧಿಕಾರಿಗಳಿಗೆ ನನ್ನ ವಿರುದ್ಧ ದೂರು ನೀಡಿ ನನ್ನ ಹೆಸರು ಹಾಳು ಮಾಡಲು ಯತ್ನಿಸಿದ್ದಾಳೆ' ಎಂದು ಕೂಡ ಅವರು ಅರ್ಜಿಯಲ್ಲಿ ಪತ್ನಿಯ ವಿರುದ್ಧ ದೂರಿದ್ದರು.

'1963ರಲ್ಲಿ ಮದುವೆ ಆದಾಗಿನಿಂದ ಮಕ್ಕಳನ್ನು ನೋಡಿಕೊಂಡಿದ್ದೇನೆ. ಈಗಲೂ ನಾನು ಪತಿಯ ಆರೈಕೆಗೆ ಸಿದ್ಧಳಿದ್ದೇನೆ. ಈ ವಯಸ್ಸಿನಲ್ಲಿ ಅವರನ್ನು ಬಿಟ್ಟುಬಿಡಲು ಸಿದ್ಧಳಿಲ್ಲ' ಎಂದು ಪತ್ನಿ ಹೇಳಿದರು. ವಿವಾಹ ಸಂಬಂಧವು ಮತ್ತೆ ಸರಿಪಡಿಸಲಾಗದಷ್ಟು ಹಾಳಾಗಿದ್ದರೂ, ಅದನ್ನು ವಿಚ್ಛೇದನದ ಮೂಲಕ ಕೊನೆಗೊಳಿಸಲೇಬೇಕೇ ಎಂಬ ಪ್ರಶ್ನೆಯನ್ನು ನ್ಯಾಯಪೀಠ ಕೇಳಿಕೊಂಡಿತು.

'ಸಮಾಜದಲ್ಲಿ ವಿವಾಹ ಸಂಬಂಧವು ಬಹಳ ಮಹತ್ವದ ಪಾತ್ರವನ್ನು ಹಾಗೂ ಮಹತ್ವದ ಸ್ಥಾನವನ್ನು ಹೊಂದಿದೆ ಎಂಬುದನ್ನು ಮರೆಯುವಂತಿಲ್ಲ. ವೈವಾಹಿಕ ಸಂಬಂಧದ ಕಾರಣದಿಂದಾಗಿಯೇ ಸಮಾಜದಲ್ಲಿ ಇತರ ಹಲವು ಸಂಬಂಧಗಳು ಜೀವ ಪಡೆಯುತ್ತವೆ. ಹೀಗಾಗಿ, ವಿವಾಹ ಸಂಬಂಧವು ಸರಿಪಡಿಸಲಾಗದಷ್ಟು ಹಾಳಾಗಿದೆ ಎಂಬುದೊಂದನ್ನೇ ಆಶ್ರಯಿಸಿ ಸಂವಿಧಾನದ 142ನೆಯ ವಿಧಿಯ ಅಡಿಯಲ್ಲಿ ವಿಚ್ಛೇದನ ನೀಡಲು ಆಗದು' ಎಂದು ಪೀಠ ಹೇಳಿತು.

ಪತ್ನಿಯ ಭಾವನೆಗಳಿಗೆ ಗೌರವ ನೀಡಿದ ಪೀಠವು, ವಿವೇಚನಾ ಅಧಿಕಾರವನ್ನು ಪತಿಯ ಪರವಾಗಿ ಚಲಾಯಿಸುವುದರಿಂದ ಪತ್ನಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ ಎಂದು ಕೂಡ ಹೇಳಿತು.

ಕೊಲಿಜಿಯಂನಿಂದ 18 ಹೆಸರು ಶಿಫಾರಸು

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ವಿವಿಧ ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳ ನೇಮಕಕ್ಕಾಗಿ 13 ನ್ಯಾಯಾಂಗ ಅಧಿಕಾರಿಗಳು ಹಾಗೂ ಐವರು ಅಡ್ವೊಕೇಟ್‌ಗಳ ಹೆಸರುಗಳನ್ನು ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿದೆ.

ನ್ಯಾಯಾಂಗ ಅಧಿಕಾರಿಗಳಾದ ಶಾಲಿಂದರ್ ಕೌರ್ ಹಾಗೂ ರವೀಂದ್ರ ಡುಡೇಜಾ ಅವರನ್ನು ದೆಹಲಿ ಹೈಕೋರ್ಟ್ ನ್ಯಾಯಮೂರ್ತಿಗಳನ್ನಾಗಿ ನೇಮಕ ಮಾಡಲು ಶಿಫಾರಸು ಮಾಡಿರುವ ಕೊಲಿಜಿಯಂ, ಈ ಇಬ್ಬರು ಅಧಿಕಾರಿಗಳಿಗಿಂತ ಹಿರಿಯ ಅಧಿಕಾರಿಯೊಬ್ಬರ ಪದೋನ್ನತಿಗೆ ಒಪ್ಪಿಗೆ ನೀಡಿಲ್ಲ.

ಕೇಂದ್ರ ಸರ್ಕಾರದ ಆಕ್ಷೇಪದ ಹೊರತಾಗಿಯೂ ಅಡ್ವೊಕೇಟ್ ರವೀಂದ್ರಕುಮಾರ್ ಅಗ್ರವಾಲ್ ಅವರನ್ನು ಛತ್ತೀಸಗಢ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಕ್ಕೆ ಶಿಫಾರಸು ಮಾಡಲಾಗಿದೆ.

ಕೇರಳ, ಗುಜರಾತ್, ತ್ರಿಪುರಾ ಹಾಗೂ ಆಂಧ್ರಪ್ರದೇಶ ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳ ನೇಮಕಕ್ಕೂ ಹೆಸರುಗಳನ್ನು ಶಿಫಾರಸು ಮಾಡಲಾಗಿದೆ.

ಉಗ್ರ ಶಾಹಿದ್ ಲತೀಫ್ ಹತ್ಯೆ

ನವದೆಹಲಿ (ಪಿಟಿಐ): ಪಠಾನ್‌ಕೋಟ್ ವಾಯು ನೆಲೆ ಮೇಲೆ 2016ರಲ್ಲಿ ನಡೆದ ದಾಳಿಯ ಸಂಚುಕೋರ ಜೈಷ್-ಎ-ಮೊಹಮ್ಮದ್ (ಜೆಇಎಂ) ಸಂಘಟನೆಯ ಭಯೋತ್ಪಾದಕ ಶಾಹಿದ್ ಲತೀಫ್‌ನನ್ನು ಹಾಗೂ ಈತನ ಸಹೋದರನನ್ನು ಪಾಕಿಸ್ತಾನದ ಸಿಯಾಲ್‌ಕೋಟ್ ಜಿಲ್ಲೆಯ ದಸ್ಕಾ ಪಟ್ಟಣದ ಮಸೀದಿಯ ಹೊರಭಾಗದಲ್ಲಿ ಬುಧವಾರ ಹತ್ಯೆ ಮಾಡಲಾಗಿದೆ.

ಲತೀಫ್ ತನ್ನ ಸಹೋದರನೊಂದಿಗೆ ದಸ್ಕಾ ಪಟ್ಟಣದಲ್ಲಿನ ನೂರ್ ಮಸೀದಿಯಲ್ಲಿ ನಸುಕಿನಲ್ಲಿ ನಮಾಜ್ ಮಾಡಿ ಹೊರಗೆ ಬಂದಾಗ ದಾಳಿಕೋರರು ಗುಂಡು ಹಾರಿಸಿದ್ದಾರೆ.

ಮೋಟಾರ್ ಸೈಕಲ್‌ನಲ್ಲಿದ್ದ ಮೂವರು ದಾಳಿಕೋರರು 53 ವರ್ಷದ ಲತೀಫ್ ಹಾಗೂ ಸಹೋದರ ಹ್ಯಾರಿಸ್ ಹಾಶಿಮ್ ಮೇಲೆ ಗುಂಡಿನ ಸುರಿಮಳೆಗೈದರು. ಸ್ಥಳದಲ್ಲಿ ಇದ್ದ ಮತ್ತೊಬ್ಬ ವ್ಯಕ್ತಿ ಗುಂಡೇಟಿನಿಂದ ಗಾಯಗೊಂಡಿದ್ದಾರೆ.



ಶಕ್ತಿ ಸ್ಕೂಟರ್

ಒಡಿಶಾದಲ್ಲಿ ಮಹಿಳಾ ಸ್ವಸಹಾಯ ಗುಂಪುಗಳಿಗೆ ಉತ್ತೇಜನ ನೀಡಲು ಅಲ್ಲಿನ ರಾಜ್ಯ ಸರ್ಕಾರ 'ಮಿಷನ್ ಶಕ್ತಿ ಸ್ಕೂಟರ್ ಯೋಜನೆ' ಜಾರಿಗೊಳಿಸಿದೆ. ಇದರ ಭಾಗವಾಗಿ ಭುವನೇಶ್ವರದಲ್ಲಿ ಬುಧವಾರ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು, ಎಸ್‌ಎಚ್‌ಜಿ ಸದಸ್ಯೆಯರಿಗೆ ಸ್ಕೂಟರ್ ವಿತರಿಸಿದರು ಪಿಟಿಐ ಚಿತ್ರ

ನ್ಯೂಸ್‌ಕ್ಲಿಕ್ ವಿರುದ್ಧ ಸಿಬಿಐ ಎಫ್‌ಐಆರ್

ನವದೆಹಲಿ (ಪಿಟಿಐ): ವಿದೇಶಿ ದೇಣಿಗೆ (ನಿಯಂತ್ರಣ) ಕಾಯ್ದೆ (ಎಫ್‌ಸಿಆರ್‌ಎ) ಉಲ್ಲಂಘನೆ ಆರೋಪದಡಿ ಸುದ್ದಿ ಪೋರ್ಟಲ್ 'ನ್ಯೂಸ್ ಕ್ಲಿಕ್' ವಿರುದ್ಧ ಸಿಬಿಐ ಬುಧವಾರ ಎಫ್‌ಐಆರ್ ದಾಖಲಿಸಿದೆ.

ಜತೆಗೆ, ಸಂಸ್ಥೆಯ ಸ್ಥಾಪಕರೂ ಆದ ಸಂಪಾದಕ ಪ್ರಬೀರ್ ಪುರಕಾಯಸ್ಥ ಅವರ ನಿವಾಸ ಮತ್ತು ಕಚೇರಿ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಲಾಗಿದೆ.

'ಪಿಪಿಕೆ ನ್ಯೂಸ್‌ಕ್ಲಿಕ್ ಸ್ಟುಡಿಯೋ ಪ್ರೈವೇಟ್ ಲಿಮಿಟೆಡ್', ಪುರಕಾಯಸ್ಥ, 'ವರ್ಲ್ಡ್‌ವೈಡ್ ಮೀಡಿಯಾ ಹೋಲ್ಡಿಂಗ್ಸ್'ನ ವ್ಯವಸ್ಥಾಪಕ ಜೇಸನ್ ಪಿಫೆಚರ್ ಮತ್ತು ಐಟಿ ಸಲಹಾ ಸಂಸ್ಥೆ ನಡೆಸುತ್ತಿರುವ ಅಮೆರಿಕದ ನೆವಿಲ್ಲೆ ರಾಯ್ ಸಿಂಘಮ್ ಮತ್ತು ಇತರರನ್ನು ಆರೋಪಿಗಳೆಂದು ಸಿಬಿಐ ತನ್ನ ಎಫ್‌ಐಆರ್‌ನಲ್ಲಿ ಉಲ್ಲೇಖಿಸಿದೆ.

ಎಸ್‌ಇಪಿ ಆಯೋಗಕ್ಕೆ ಪ್ರೊ. ಥೋರಟ್

ಒಂದನೇ ಪುಟದಿಂದ...

ರಾಷ್ಟ್ರೀಯ ಕಾನೂನು ಶಾಲೆಯ ಕುಲಪತಿ ಸುಧೀರ್ ಕೃಷ್ಣಸ್ವಾಮಿ, ಕುವೆಂಪು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ರಾಜೇಂದ್ರ ಚೆನ್ನಿ, ನಿವೃತ್ತ ಪ್ರಾಧ್ಯಾಪಕ ತುಮಕೂರಿನ ನಟರಾಜ್ ಬೂದಾಳು, ನವದೆಹಲಿಯ ರಾಷ್ಟ್ರೀಯ ಶಿಕ್ಷಣ, ಯೋಜನೆ ಮತ್ತು ಆಡಳಿತ (ಎನ್‌ಐಇಪಿಎ) ಪ್ರಾಧ್ಯಾಪಕರಾದ ಪ್ರಣತಿ ಪಾಂಡಾ, ಜಾಮೀಯಾ ಮಿಲಿಯಾ ವಿಶ್ವವಿದ್ಯಾಲಯದ ಮ್ಯಾನೇಜ್‌ಮೆಂಟ್ ಸ್ಟಡೀಸ್ ಕೇಂದ್ರದ ಪ್ರಾಧ್ಯಾಪಕ ಫುರ್ಖಾನ್ ಖಮರ್, ಹೈದರಾಬಾದ್ ವಿಶ್ವವಿದ್ಯಾಲಯದ ಭೌತವಿಜ್ಞಾನ ವಿಭಾಗದ ಪ್ರೊ. ಶರತ್ ಅನಂತಮೂರ್ತಿ, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಎ. ನಾರಾಯಣ, ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ, ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಎಂ.ಎಸ್. ತಳವಾರ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಸಂತೋಷ್ ನಾಯ್ಕ್, ದಾಂಡೇಲಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕಿ ವಿನಯ ಒಕ್ಕುಂದ ಸದಸ್ಯರಾಗಿದ್ದಾರೆ.

ಆಯೋಗದ ಸದಸ್ಯ ಕಾರ್ಯದರ್ಶಿಯಾಗಿ ಉನ್ನತ ಶಿಕ್ಷಣ ವಿಭಾಗದ ವಿಶೇಷ ಅಧಿಕಾರಿ ಭಾಗ್ಯವಾನ ಎಸ್. ಮುದಿಗೌಡ್ರ ಕಾರ್ಯನಿರ್ವಹಿಸಲಿದ್ದಾರೆ.

ಅಲ್ಲದೆ, ಈ ಆಯೋಗಕ್ಕೆ ದೆಹಲಿಯ ಅಭಿವೃದ್ಧಿಶೀಲ ಸಮಾಜಗಳ ಅಧ್ಯಯನ ಕೇಂದ್ರದ (ಸಿಎಸ್‌ಡಿಎಸ್) ಹಿರಿಯ ಫೆಲೋ ಪ್ರೊ. ಯೋಗೇಂದ್ರ ಯಾದವ್, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ರಹಮತ್ ತರೀಕೆರೆ, ಜೆಎನ್‌ಯು ಇತಿಹಾಸ ಅಧ್ಯಯನ ಕೇಂದ್ರದ ನಿವೃತ್ತ ಪ್ರಾಧ್ಯಾಪಕಿ ಜಾನಕಿ ನಾಯರ್, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ. ಎಸ್. ಚಂದ್ರಶೇಖರ ಶೆಟ್ಟಿ, ಲಡಾಕ್‌ನಲ್ಲಿರುವ ಹಿಮಾಲಯ ಇನ್‌ಸ್ಟಿಟ್ಯೂಟ್ ಆಫ್ ಆಲ್ಟರ್‌ನೇಟಿವ್ಸ್‌ನ ನಿರ್ದೇಶಕರಾದ ಸೋನಮ್ ವಾಂಗ್‌ಚುಕ್, ಜೆಎನ್‌ಯು ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ವಲೇರಿಯನ್ ರೋಡ್ರಿಗಸ್, ವಿಜಯನಗರದ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಪ್ರೊ. ಸಬಿಹಾ ಭೂಮಿಗೌಡ ಮತ್ತು ಧಾರವಾಡದಲ್ಲಿರುವ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿಯ ನಿರ್ದೇಶಕರನ್ನು ಸಲಹೆ ನೀಡಲು ವಿಷಯ ತಜ್ಞರನ್ನಾಗಿ ಗುರುತಿಸಲಾಗಿದೆ.

ರಾಜ್ಯದ ಶಾಲೆ ಮತ್ತು ಉನ್ನತ ಶಿಕ್ಷಣ ಕ್ರಮವನ್ನು ಪರಿಶೀಲಿಸಿ, ಶಾಲೆಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ನೋಂದಣಿ ಪ್ರಮಾಣ ಹೆಚ್ಚಿಸುವ ನಿಟ್ಟಿನಲ್ಲಿ ಗುರಿ ಸಾಧಿಸಲು ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಆಯೋಗವು ಸಲಹೆ ನೀಡಲಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಗುಣಮಟ್ಟ ಸುಧಾರಣೆಗಾಗಿ ಸಂಸ್ಥೆಗಳ ವಿವಿಧ, ಶಿಸ್ತು ಮತ್ತು ಅಳವಡಿಸಿಕೊಳ್ಳಬೇಕಾದ ವಿಷಯಗಳು, ಕಲಿಕಾ ಮಾಧ್ಯಮದ ಬಗ್ಗೆಯೂ ಆಯೋಗ ಸಲಹೆಗಳನ್ನು ನೀಡಲಿದೆ. ಶಾಲೆ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಕ್ರಮ, ಪರೀಕ್ಷೆ, ಮೌಲ್ಯಮಾಪನ, ಕಂಪ್ಯೂಟರ್‌ಗಳ ಲಭ್ಯತೆ, ಹಣಕಾಸು ವ್ಯವಸ್ಥೆಯ ಬಗ್ಗೆಯೂ ಶಿಫಾರಸು ಮಾಡಲಿದೆ. ಆ ಮೂಲಕ, ಪರಿಣಾಮಕಾರಿ ಶಿಕ್ಷಣ ವ್ಯವಸ್ಥೆಯ ಅನುಷ್ಠಾನಕ್ಕೆ ಪೂರಕವಾದ ಸಲಹೆಗಳನ್ನು ಆಯೋಗ ನೀಡಲಿದೆ.

ರೆಸಾರ್ಟ್, ತೋಟದ ಮನೆಗೆ ಅವಕಾಶ

ಬೆಂಗಳೂರು: 'ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡ ಒಂದು ಕಿ.ಮೀ ವ್ಯಾಪ್ತಿಯಲ್ಲಿ ಮನೆ, ಕಟ್ಟಡಗಳು ನಿರ್ಮಿಸಲು ಇದ್ದ ನಿರ್ಬಂಧವನ್ನು ಸರ್ಕಾರ ಸಡಿಲಿಸಲಿದೆ' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಸಂಪುಟ ಉಪಸಮಿತಿ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಈವರೆಗೆ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಂತಿದ್ದ ಒಂದು ಕಿ.ಮೀ ವ್ಯಾಪ್ತಿಯಲ್ಲಿ ಮನೆ, ಕಟ್ಟಡಗಳನ್ನು ನಿರ್ಮಿಸಲು ಅನುಮತಿ ಇರಲಿಲ್ಲ. ಈ ವ್ಯಾಪ್ತಿಯಲ್ಲಿರುವ ಖಾಸಗಿ ಭೂಮಿಯಲ್ಲಿ ಫಾರಂ ಹೌಸ್, ರೆಸಾರ್ಟ್, ಸಾ ಮಿಲ್, ಪವನ ವಿದ್ಯುತ್ ಘಟಕಗಳನ್ನು ನಿರ್ಮಾಣ ಮಾಡಬಹುದು. ಅದಕ್ಕೆ ಅನುಮತಿ ದೊರೆಯಲಿದೆ' ಎಂದರು.

ರಾಜ್ಯದಲ್ಲಿ ಸುಮಾರು 35 ಪ್ರದೇಶಗಳನ್ನು ಗುರುತಿಸಲಾಗಿದ್ದು, ಈ ಪೈಕಿ 29 ಪ್ರದೇಶಗಳಲ್ಲಿ ಇಂತಹ ಚಟುವಟಿಕೆಗಳಿಗೆ ಅನುಮತಿ ನೀಡಲು ಸಹಮತ ವ್ಯಕ್ತವಾಗಿತ್ತು. ನಾಗರಹೊಳೆ ಸೇರಿ ಇನ್ನೂ 6 ಪ್ರದೇಶಗಳಲ್ಲಿ ಈ ನಿಯಮವನ್ನು ಸಡಿಲಿಸುವ ಕುರಿತು ಸಹಮತ ವ್ಯಕ್ತವಾಗಿದೆ ಎಂದು ಅವರು ತಿಳಿಸಿದರು.

ಮಾಹಿತಿ ಹಕ್ಕು ವ್ಯವಸ್ಥೆ ಜಾರಿಗೆ ಬಂದು ಇಂದಿಗೆ 18 ವರ್ಷ; ಪರಿಸ್ಥಿತಿ ಕುರಿತು ಎಸ್‌ಎನ್‌ಎಸ್ ವರದಿ

ಆರ್‌ಟಿಐ: 3.21 ಲಕ್ಷ ದೂರುಗಳು ವಿಚಾರಣೆಗೆ ಬಾಕಿ

ಪ್ರಜಾವಾಣಿ ವಾರ್ತೆ



ನವದೆಹಲಿ: ದೇಶದಲ್ಲಿ ಮಾಹಿತಿ ಹಕ್ಕು ವ್ಯವಸ್ಥೆಯು ಜಾರಿಗೆ ಬಂದು ಗುರುವಾರಕ್ಕೆ 18 ವರ್ಷಗಳು ತುಂಬುತ್ತಿದೆ. ಈ ಹೊತ್ತಿನಲ್ಲಿ ಮೂರು ರಾಜ್ಯ ಮಾಹಿತಿ ಆಯೋಗಗಳು ಕೆಲಸ ಮಾಡುತ್ತಿಲ್ಲ, ಕೇಂದ್ರ ಮಾಹಿತಿ ಆಯೋಗ (ಸಿಐಸಿ) ಸೇರಿದಂತೆ ಆರು ಆಯೋಗಗಳಿಗೆ ಮುಖ್ಯಸ್ಥರಿಲ್ಲ. 3.21 ಲಕ್ಷ ದೂರುಗಳು ಹಾಗೂ ಮೇಲ್ಮನವಿಗಳು ವಿಚಾರಣೆಯ ಹಂತದಲ್ಲಿ ಬಾಕಿ ಇವೆ.

'2022ರಿಂದ 2023ರ ನಡುವೆ ದೇಶದ ಮಾಹಿತಿ ಆಯೋಗಗಳ ಸಾಧನೆಯ ವಿವರ' ಹೆಸರಿನಲ್ಲಿ 'ಸತರ್ಕ ನಾಗರಿಕ ಸಂಘಟನೆ' (ಎಸ್‌ಎನ್‌ಎಸ್) ಸಿದ್ಧಪಡಿಸಿರುವ ವರದಿಯು ಆರ್‌ಟಿಐ ವ್ಯವಸ್ಥೆಯ ಸ್ಥಿತಿಯನ್ನು ತಿಳಿಸಿದೆ. 2022ರ ಜುಲೈನಿಂದ 2023ರ ಜೂನ್‌ವರೆಗಿನ ಪರಿಸ್ಥಿತಿಯನ್ನು ಈ ವರದಿಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಮಾಹಿತಿ ಆಯೋಗವು ಕೆಲಸ ಮಾಡುತ್ತಿಲ್ಲದ ರಾಜ್ಯಗಳ ಸಂಖ್ಯೆ ಎರಡು ಪಟ್ಟಾಗಿದೆ, ಬಾಕಿ ಉಳಿದಿರುವ ಪ್ರಕರಣಗಳ/ಅರ್ಜಿಗಳ ಸಂಖ್ಯೆಯು ಏಳು ಸಾವಿರದಷ್ಟು ಹೆಚ್ಚಾಗಿದೆ ಮತ್ತು ಮುಖ್ಯಸ್ಥರು ಇಲ್ಲದ ಆಯೋಗಗಳ ಸಂಖ್ಯೆಯು ಶೇಕಡ 50ರಷ್ಟು ಹೆಚ್ಚಾಗಿದೆ ಎಂದು ವರದಿ ಹೇಳಿದೆ.


ಜಾರ್ಖಂಡ್‌ನಲ್ಲಿ 37 ತಿಂಗಳುಗಳಿಂದ, ತ್ರಿಪುರದಲ್ಲಿ 27 ತಿಂಗಳುಗಳಿಂದ, ತೆಲಂಗಾಣದಲ್ಲಿ ಏಳು ತಿಂಗಳುಗಳಿಂದ ಮತ್ತು ಮಿಜೋರಾಂನಲ್ಲಿ ಹತ್ತು ದಿನಗಳಿಂದ (ಜೂನ್ 30ಕ್ಕೆ ಅನ್ವಯವಾಗುವಂತೆ) ಮಾಹಿತಿ ಆಯೋಗಗಳು ಸಂಪೂರ್ಣವಾಗಿ ನಿಷ್ಕ್ರಿಯವಾಗಿವೆ ಎಂದು ವರದಿಯಲ್ಲಿ ಹೇಳಲಾಗಿದೆ. ಅಕ್ಟೋಬರ್ 5ರಂದು ಮಿಜೋರಾಂನಲ್ಲಿ ಮುಖ್ಯ ಮಾಹಿತಿ ಆಯುಕ್ತ ಹಾಗೂ ಆಯುಕ್ತ ಅಧಿಕಾರ ವಹಿಸಿಕೊಂಡಿದ್ದಾರೆ.

ಐದು ರಾಜ್ಯಗಳಲ್ಲಿ ಮಾಹಿತಿ ಆಯೋಗಕ್ಕೆ ಮುಖ್ಯಸ್ಥರಿಲ್ಲ. ಮಣಿಪುರದಲ್ಲಿ 56 ತಿಂಗಳುಗಳಿಂದ, ಛತ್ತೀಸಗಢದಲ್ಲಿ 2022ರ ಡಿಸೆಂಬರ್‌ನಿಂದ, ಮಹಾರಾಷ್ಟ್ರದಲ್ಲಿ ಏಪ್ರಿಲ್‌ನಿಂದ, ಬಿಹಾರದಲ್ಲಿ ಮೇ ತಿಂಗಳಿನಿಂದ ಮತ್ತು ಪಂಜಾಬ್‌ನಲ್ಲಿ ಸೆಪ್ಟೆಂಬರ್‌ನಿಂದ ಮಾಹಿತಿ ಆಯೋಗಕ್ಕೆ ಮುಖ್ಯಸ್ಥರು ಇಲ್ಲ. ಆಯುಕ್ತರನ್ನು ಸಕಾಲದಲ್ಲಿ ನೇಮಕ ಮಾಡದೆ ಇರುವುದರಿಂದ ಮೇಲ್ಮನವಿಗಳು ಹಾಗೂ ದೂರುಗಳು ಬಾಕಿ ಉಳಿಯುವುದು ಹೆಚ್ಚುತ್ತ ಸಾಗುತ್ತದೆ ಎಂದು ವರದಿ ಹೇಳಿದೆ.

ಪಶ್ಚಿಮ ಬಂಗಾಳದಲ್ಲಿ ಒಟ್ಟು 11,871 ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇವೆ. ಪ್ರತಿ ತಿಂಗಳು ಇತ್ಯರ್ಥವಾಗುವ ಮೇಲ್ಮನವಿಗಳ ಸರಾಸರಿ ಸಂಖ್ಯೆಯ ಆಧಾರದಲ್ಲಿ ಹೇಳುವುದಾದರೆ, ಈ ವರ್ಷದ ಜುಲೈ 1ರಂದು ಅಲ್ಲಿ ಸಲ್ಲಿಕೆಯಾದ ಮೇಲ್ಮನವಿಯು ಇನ್ನು 24 ವರ್ಷಗಳ ನಂತರದಲ್ಲಿ ವಿಲೇವಾರಿ ಕಾಣಲಿದೆ!

ಇದಕ್ಕೆ ಹೋಲಿಸಿದರೆ ಕರ್ನಾಟಕದ ಸ್ಥಿತಿ ಉತ್ತಮವಾಗಿದೆ. ಇಲ್ಲಿ 41,047 ಪ್ರಕರಣಗಳು ಬಾಕಿ ಇವೆಯಾದರೂ, ಈ ವರ್ಷದ ಜುಲೈ 1ರಂದು ಸಲ್ಲಿಕೆಯಾದ ಮೇಲ್ಮನವಿಯು ಒಂದು ವರ್ಷ ಹನ್ನೊಂದು ತಿಂಗಳುಗಳಲ್ಲಿ ಇತ್ಯರ್ಥವಾಗಬಹುದು ಎಂದು ವರದಿಯು ಅಂದಾಜು ಮಾಡಿದೆ. ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆಯ ಪಟ್ಟಿಯಲ್ಲಿ ಮಹಾರಾಷ್ಟ್ರವು ಮೊದಲ ಸ್ಥಾನದಲ್ಲಿದೆ. ಅಲ್ಲಿ ಒಟ್ಟು 1.11 ಲಕ್ಷ ಪ್ರಕರಣಗಳು ಇತ್ಯರ್ಥ ಆಗಬೇಕಿವೆ. ದಂಡ ವಿಧಿಸುವ ಸಾಧ್ಯತೆ ಇದ್ದ ಶೇಕಡ 91ರಷ್ಟು ಪ್ರಕರಣಗಳಲ್ಲಿ ಮಾಹಿತಿ ಆಯೋಗಗಳು ದಂಡ ವಿಧಿಸಿಲ್ಲ.

ಷೇರುಪೇಟೆ ವಹಿವಾಟು 394



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,689
ಇಂದಿನ ಅಂತ್ಯ	19,811
▲	122
ದಿನದ ಗರಿಷ್ಠ	19,839

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹555
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹562

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1570 (1590)
ಸೋಯಾ (ರಿಫೈನ್ಡ್)	₹855 (855)
ಸೂರ್ಯಕಾಂತಿ (ರಿಫೈನ್ಡ್)	₹865 (870)
ಪಾಮೋಲಿನ್	₹805 (807)

ವಿನಿಮಯ ದರ

$ ಡಾಲರ್	83.18
£ ಪೌಂಡ್	102.13
€ ಯುರೊ	88.24
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಮಂಗಳೂರು	₹4633-6813
ತಿಪಟೂರು	₹7000-8415
ತುಮಕೂರು	₹7400-8350
ತುರುವೇಕೆರೆ	₹8500-8500

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹144
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹127

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹10400
ಎಸಿ	₹6075
ಆರ್‌ಪಿ	₹9000
ಆರ್‌ಸಿ	₹5830

ಗರಿಷ್ಠ ಸಾಲ: ಭಾರತಕ್ಕೆ ಕಮ್ಮಿ ಅಪಾಯ–ಐಎಂಎಫ್



ವಾಷಿಂಗ್ಟನ್ (ಪಿಟಿಐ): ಚೀನಾದಂತೆಯೇ ಭಾರತವೂ ಗರಿಷ್ಠ ಪ್ರಮಾಣದ ಸಾಲ ಹೊಂದಿದೆ. ಆದರೆ, ಚೀನಾದ ಮೇಲೆ ಬೀರುವಷ್ಟು ಪರಿಣಾಮ ಭಾರತದ ಮೇಲೆ ಆಗುವುದಿಲ್ಲ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಆರ್ಥಿಕ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕ ರುಡ್ ಡೆ. ಮೂಯ್ಜ್ ಹೇಳಿದ್ದಾರೆ.

ಅಲ್ಪಾವಧಿಗೆ ಉತ್ತಮವಾದ ವಿತ್ತೀಯ ಬಲವರ್ಧನೆ ಯೋಜನೆಯನ್ನು ಹಾಕಿಕೊಂಡಲ್ಲಿ ಭಾರತವು ತನ್ನ ಸಾಲದ ಪ್ರಮಾಣವನ್ನು ಕಡಿಮೆ ಮಾಡಿಕೊಳ್ಳಬಹುದು ಎಂದು ಅವರು ಸಲಹೆ ನೀಡಿದ್ದಾರೆ.

ಭಾರತದ ಸಾಲವು ಜಿಡಿಪಿಯ ಶೇ 81.9ರಷ್ಟು ಇದೆ. ಚೀನಾದ ಸಾಲವು ಶೇ 83ರಷ್ಟು ಇದೆ. ಎರಡು ದೇಶಗಳ ಸಾಲದ ಪ್ರಮಾಣದಲ್ಲಿ ಭಾರಿ ವ್ಯತ್ಯಾಸವೇನೂ ಇಲ್ಲ. 2019ರಲ್ಲಿ ಭಾರತದ ಸಾಲದ ಪ್ರಮಾಣವು ಶೇ 75ರಷ್ಟು ಇತ್ತು ಎಂದು ಅವರು ತಿಳಿಸಿದ್ದಾರೆ.

2023ಕ್ಕೆ ಭಾರತದ ವಿತ್ತೀಯ ಕೊರತೆ ಶೇ 8.8ರಷ್ಟು ಆಗುವ ಅಂದಾಜು ಮಾಡಲಾಗಿದೆ. ಇದರಲ್ಲಿ ಬಡ್ಡಿ ಮೇಲಿನ ವೆಚ್ಚಕ್ಕೆ ಬಹುಪಾಲು ಇದೆ. ದೇಶದ ಜಿಡಿಪಿಯಲ್ಲಿ ಶೇ 5.4ರಷ್ಟನ್ನು ಸಾಲದ ಮೇಲಿನ ಬಡ್ಡಿ ರೂಪದಲ್ಲಿ ಪಾವತಿಸಬೇಕಾಗುತ್ತದೆ. ಸಾಲದ ಮೇಲಿನ ಬಡ್ಡಿದರಕ್ಕೆ ಮಾಡುವ ವೆಚ್ಚವನ್ನು ಹೊರತುಪಡಿಸಿದರೆ ವಿತ್ತೀಯ ಕೊರತೆಯು ಶೇ 3.4ರಷ್ಟು ಆಗಲಿದೆ ಎಂದು ಅವರು ವಿವರಿಸಿದ್ದಾರೆ.

ಭಾರತದ ಸಾಲವು ಚೀನಾದಷ್ಟು ಏರಿಕೆ ಆಗುವುದಿಲ್ಲ. 2028ರಲ್ಲಿ ಭಾರತದ ಸಾಲವು ಶೇ 1.5ರಷ್ಟು ಇಳಿಕೆ ಕಂಡು ಶೇ 80.4ಕ್ಕೆ ಬರುವ ಅಂದಾಜು ಮಾಡಿರುವುದಾಗಿ ಅವರು ಹೇಳಿದ್ದಾರೆ.

ಭಾರತದ ಆರ್ಥಿಕ ಬೆಳವಣಿಗೆಯು ಚೀನಾಕ್ಕಿಂತಲೂ ಹೆಚ್ಚಿಗೆ ಇದೆ. ಇದು ಜಿಡಿಪಿ ಮತ್ತು ಸಾಲದ ಅನುಪಾತದ ಮೇಲೆ ಸಕಾರಾತ್ಮಕ ಪ್ರಭಾವ ಬೀರುತ್ತದೆ ಎಂದಿದ್ದಾರೆ.

ಜೋಯ್ ಅಲುಕ್ಕಾಸ್‌ಗೆ ವಿಶೇಷ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣ ಉದ್ಯಮದಲ್ಲಿ ಭಾರತ ಮತ್ತು ಜಾಗತಿಕ ಮಟ್ಟದಲ್ಲಿ ನೀಡಿರುವ ಕೊಡುಗೆಯನ್ನು ಪರಿಗಣಿಸಿ ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಜೋಯ್ ಅಲುಕ್ಕಾಸ್ ಅವರಿಗೆ ವಿಶ್ವ ಚಿನ್ನಾಭರಣ ಒಕ್ಕೂಟವು ವಿಶೇಷ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಜೈಪುರದಲ್ಲಿ ಈಚೆಗೆ ನಡೆದ ಸಮಾವೇಶದಲ್ಲಿ ಜೋಯ್ ಅಲುಕ್ಕಾಸ್ ಅವರ ಪರವಾಗಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಜಾನ್ ಪಾಲ್ ಅಲುಕ್ಕಾಸ್ ಅವರು ಪ್ರಶಸ್ತಿಯನ್ನು ಸ್ವೀಕರಿಸಿದ್ದಾರೆ. 'ಜೋಯಾಲುಕ್ಕಾಸ್ ತಂಡದ ಕಠಿಣ ಪರಿಶ್ರಮಕ್ಕೆ ಸಂದ ಪ್ರತಿಫಲ ಇದಾಗಿದೆ' ಎಂದು ಸಮೂಹದ ಅಧ್ಯಕ್ಷ ಜೋಯ್ ಅಲುಕ್ಕಾಸ್ ಪ್ರತಿಕ್ರಿಯೆ ನೀಡಿದ್ದಾರೆ.

ಮುಂಬೈ ಧಾರಣೆ

ಶೇಂಗಾ

11-10-2023

ಜಾವಾ 70/80(ಹೊಸ)	12200-12300
ಜಾವಾ 80/90(ಹೊಸ)	12900-12000
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	11300-11400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1600)
ಒಂದು ವಾರದ ಡೆಲಿವರಿ	1575 (1595)
ಸೋಯಾ ಕಚ್ಚಾ	820 (820)
ಪಾಮ್ ವಾರದ ಡೆಲಿವರಿ	803 (805)
ಸೂರ್ಯಕಾಂತಿ ಎಣ್ಣೆ ಕಚ್ಚಾ	790(800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

57,650 (57,200)

ಬೆಳ್ಳಿ ಕೆ.ಜಿ 69,450 (68,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಜಿಆರ್‌ಟಿ ಜುವೆಲರ್ಸ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಆರ್‌ಟಿ ಜುವೆಲರ್ಸ್ ಕಂಪನಿಯು ಈಚೆಗೆ ನಡೆದ ಎಫ್‌ಯುಆರ್‌ಎ ರಿಟೇಲ್ ಜುವೆಲರ್ ಇಂಡಿಯಾ ಅವಾರ್ಡ್–2023ರಲ್ಲಿ 'ಬ್ರೈಡಲ್ ಸ್ಟೇಟ್ಮೆಂಟ್ ಜುವೆಲರಿ ಆಫ್ ದಿ ಇಯರ್' ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ.

ಡಬ್ಲ್ಯುಜಿಸಿ ಮತ್ತು ಸಾಲಿಟೇರ್ ಜೆಮೊಲಾಜಿಕಲ್ ಲ್ಯಾಬೊರೇಟರೀಸ್ ಪ್ರಾಯೋಜಕತ್ವ ದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಲಾಯಿತು. 'ನಮ್ಮ ಚಿನ್ನಾಭರಣಗಳಲ್ಲಿ ಸಂಪ್ರದಾಯ ಮತ್ತು ಆಧುನೀ ಕತೆಯ ಅಂಶಗಳನ್ನು ಹದವಾಗಿ ಬೆರೆಸುತ್ತೇವೆ. ಹೀಗಾಗಿ ಸ್ಪರ್ಧೆಯಲ್ಲಿ ಮುಂಚೂಣಿಯಲ್ಲಿ ಇದ್ದೇವೆ' ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಅನಂತ ಪದ್ಮನಾಭನ್ ತಿಳಿಸಿದ್ದಾರೆ.

ಹೆಚ್ಚು ಹೂಡಿಕೆ ಆಕರ್ಷಿಸಿದ ವ್ಯವಸ್ಥಿತ ಹೂಡಿಕೆ ಯೋಜನೆ: ಎಎಂಎಫ್‌ಐ

ಈಕ್ವಿಟಿ ಎಂಎಫ್: ತಗ್ಗಿದ ಹೂಡಿಕೆ



ಬೆಂಗಳೂರು (ರಾಯಿಟರ್ಸ್): ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಸೆಪ್ಟೆಂಬರ್‌ನಲ್ಲಿ ಬಂಡವಾಳ ಹೂಡಿಕೆ ಪ್ರಮಾಣ ಕಡಿಮೆ ಆಗಿದೆ ಎಂದು ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಬುಧವಾರ ತಿಳಿಸಿದೆ.

ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಆಗಸ್ಟ್‌ನಲ್ಲಿ ₹20,245 ಕೋಟಿ ಹೂಡಿಕೆ ಆಗಿತ್ತು. ಸೆಪ್ಟೆಂಬರ್‌ನಲ್ಲಿ ₹14,091 ಕೋಟಿ ಹೂಡಿಕೆ ಆಗಿದ್ದು, ಶೇ 30.4ರಷ್ಟು ಇಳಿಕೆಯಾಗಿದೆ ಎಂದು ಅದು ಮಾಹಿತಿ ನೀಡಿದೆ.

ಹೂಡಿಕೆದಾರರು ಉತ್ತಮ ಗಳಿಕೆಯ ನಿರೀಕ್ಷೆಯಿಂದಾಗಿ ಲಾರ್ಜ್ ಕ್ಯಾಪ್‌ಗೆ ಬದಲಾಗಿ ಸ್ಮಾಲ್ ಮತ್ತು ಮಿಡ್ ಕ್ಯಾಪ್ ಫಂಡ್‌ಗಳನ್ನು ಹೆಚ್ಚಾಗಿ ಆಯ್ಕೆ ಮಾಡಿಕೊಂಡರು. ಇದರಿಂದಾಗಿಯೇ ಹೂಡಿಕೆ ತಗ್ಗಿದೆ ಎಂದು ಹೇಳಿದೆ.

ಜಾಗತಿಕ ಆರ್ಥಿಕತೆಯ ಮಂದಗತಿಯ ಬೆಳವಣಿಗೆ ಕುರಿತಾದ ಆತಂಕ ಮತ್ತು ಅಮೆರಿಕದ ಬಾಂಡ್ ಗಳಿಕೆ ಹೆಚ್ಚಾಗಿರುವುದೇ ವಿದೇಶಿ ಹೂಡಿಕೆದಾರರು ಈಚೆಗೆ ಮಾರಾಟ ಮಾಡುತ್ತಿರುವುದಕ್ಕೆ ಪ್ರಮುಖ ಕಾರಣಗಳಾಗಿವೆ. ಭಾರತದ ಆರ್ಥಿಕ ಬೆಳವಣಿಗೆ ಮುನ್ನೋಟ ಉತ್ತಮವಾಗಿ ಇರುವುದರಿಂದ ಶೀಘ್ರದಲ್ಲೇ ವಿದೇಶಿ ಹೂಡಿಕೆದಾರರು ಮತ್ತೆ ಭಾರತದ ಷೇರುಪೇಟೆಗಳಲ್ಲಿ ಹೂಡಿಕೆ ಮಾಡಲಿದ್ದಾರೆ ಎಂದು ಮ್ಯಾರಥಾನ್ ಟ್ರೆಂಡ್ಸ್‌ನ ಪೋರ್ಟ್‌ಫೋಲಿಯೊ ಮ್ಯಾನೇಜ್‌ಮೆಂಟ್ ಸರ್ವಿಸಸ್‌ನ ಮುಖ್ಯ ಕಾರ್ಯನಿರ್ವಾಹಕ ಅತುಲ್ ಸೂರಿ ತಿಳಿಸಿದ್ದಾರೆ.

ಸೆಪ್ಟೆಂಬರ್‌ನಲ್ಲಿ ಹೂಡಿಕೆ

₹2,678 ಕೋಟಿ ಸ್ಮಾಲ್ ಕ್ಯಾಪ್ ಫಂಡ್‌ಗಳಲ್ಲಿ ಹೂಡಿಕೆ

₹2,000 ಕೋಟಿ ಮಿಡ್ ಕ್ಯಾಪ್ ಫಂಡ್‌ಗಳಲ್ಲಿ ಹೂಡಿಕೆ

₹111 ಕೋಟಿ ಲಾರ್ಜ್ ಕ್ಯಾಪ್ ಫಂಡ್‌ಗಳಿಂದ ಆಗಿರುವ ಬಂಡವಾಳ ಹೊರಹರಿವು

ರಿಟೇಲ್ ಹೂಡಿಕೆದಾರರು ನಿರಂತರವಾಗಿ ಖರೀದಿ ನಡೆಸುತ್ತಿದ್ದಾರೆ. ಹೀಗಾಗಿ ವಿದೇಶಿ ಬಂಡವಾಳ ಹೊರಹರಿವಿನ ಪರಿಣಾಮವು ಮಾರುಕಟ್ಟೆಯ ಮೇಲೆ ಹೆಚ್ಚಿನ ಮಟ್ಟದಲ್ಲಿ ಆಗಿಲ್ಲ. ಸೆಪ್ಟೆಂಬರ್‌ನಲ್ಲಿ ಸ್ಮಾಲ್ ಕ್ಯಾಪ್ ಶೇ 4.12 ಮತ್ತು ಮಿಡ್ ಕ್ಯಾಪ್ ಶೇ 3.63ರಷ್ಟು ಗಳಿಕೆ ಕಂಡಿವೆ. 2023ರಲ್ಲಿ ಈವರೆಗೆ ಸ್ಮಾಲ್ ಕ್ಯಾಪ್ ಶೇ 32.54ರಷ್ಟು ಮತ್ತು ಮಿಡ್ ಕ್ಯಾಪ್ ಶೇ 29ರಷ್ಟು ಏರಿಕೆ ಕಂಡಿವೆ.

ಎಸ್‌ಐಪಿ ಆಕರ್ಷಣೆ: ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಮೂಲಕ ಸೆಪ್ಟೆಂಬರ್‌ನಲ್ಲಿ ದಾಖಲೆಯ ₹16,042 ಕೋಟಿ ಹೂಡಿಕೆ ಆಗಿದೆ. ಸೆಪ್ಟೆಂಬರ್‌ನಲ್ಲಿ 36.8 ಲಕ್ಷ ಹೊಸ ಎಸ್‌ಐಪಿ ಖಾತೆಗಳನ್ನು ತೆರೆಯಲಾಗಿದೆ ಎಂದು ಒಕ್ಕೂಟವು ತಿಳಿಸಿದೆ.

ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದ ಆರ್ಥಿಕ ಸಾಧನೆ

ಟಿಸಿಎಸ್ ಲಾಭ ಶೇ 8.7ರಷ್ಟು ಹೆಚ್ಚಳ



ಟಿ. ಕೃತಿವಾಸನ್

ಮುಂಬೈ / ಬೆಂಗಳೂರು (ರಾಯಿಟರ್ಸ್/ಪಿಟಿಐ): ದೇಶದ ಪ್ರಮುಖ ಸಾಫ್ಟ್‌ವೇರ್ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್‌ನ (ಟಿಸಿಎಸ್) ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 8.9ರಷ್ಟು ಏರಿಕೆ ಕಂಡಿದ್ದು, ₹11,342 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯ ನಿವ್ವಳ ಲಾಭವು ₹10,431 ಕೋಟಿಯಷ್ಟು ಇತ್ತು.

ಕಂಪನಿಯ ಕಾರ್ಯಾಚರಣಾ ವರಮಾನವು ಶೇ 7.9ರಷ್ಟು ಏರಿಕೆ ಕಂಡಿದ್ದು, ₹59,692 ಕೋಟಿಗೆ ತಲುಪಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ವರಮಾನ ₹55,309 ಕೋಟಿ ಇತ್ತು.

ಎಲ್‌ಎಸ್‌ಇಜಿ ಸಂಸ್ಥೆಯ ಪ್ರಕಾರ, ಕಂಪನಿಯ ಲಾಭವು ಮಾರುಕಟ್ಟೆ ನಿರೀಕ್ಷೆಗಿಂತಲೂ ಅಲ್ಪ ಹೆಚ್ಚಳ ಕಂಡಿದೆ. ಆದರೆ ವರಮಾನವು ನಿರೀಕ್ಷೆಗಿಂತಲೂ ಕಡಿಮೆ ಆಗಿದೆ. ಲಾಭವು ₹11,317 ಕೋಟಿ ಆಗುವ ಅಂದಾಜು ಮಾಡಲಾಗಿತ್ತು. ಆದರೆ, ₹11,342 ಕೋಟಿಗೆ ಅಲ್ಪ ಏರಿಕೆ ಕಂಡಿದೆ. ವರಮಾನವು ₹60,244 ಕೋಟಿ ಆಗಬೇಕು ಎನ್ನುವುದು ಮಾರುಕಟ್ಟೆ ವಿಶ್ಲೇಷಕರ ಅಂದಾಜು ಆಗಿತ್ತು. ಆದರೆ ₹59,692 ಕೋಟಿ ಆಗಿದೆ ಎಂದು ಅದು ತಿಳಿಸಿದೆ.

ಬ್ಯಾಂಕಿಂಗ್, ಹಣಕಾಸು ಸೇವೆಗಳು ಮತ್ತು ವಿಮೆ (ಬಿಎಫ್‌ಎಸ್‌ಐ) ವಲಯಗಳಿಂದ ಬರುವ ವರಮಾನವು ಶೇ 0.5ರಷ್ಟು ಇಳಿಕೆ ಕಂಡಿದೆ.

ಜಾಗತಿಕ ಮಾರುಕಟ್ಟೆಗಳಲ್ಲಿ ಮೂಡಿರುವ ಅನಿಶ್ಚಿತ ಪರಿಸ್ಥಿತಿಯಿಂದಾಗಿ ವರಮಾನದಲ್ಲಿ ನಿರೀಕ್ಷಿತ ಬೆಳವಣಿಗೆ ಸಾಧ್ಯವಾಗುತ್ತಿಲ್ಲ ಎಂದು ಕಂಪನಿಯ ಸಿಇಒ ಕೆ. ಕೃತಿವಾಸನ್ ತಿಳಿಸಿದ್ದಾರೆ. ಹೊಸ ಯೋಜನೆಗಳಿಗೆ ಸಹಿ ಮಾಡಲಾಗಿದೆ. ಆದರೆ, ಕಂಪನಿ ಗಳು ಕೆಲವು ಯೋಜನೆಗಳನ್ನು ಸದ್ಯದ ಮಟ್ಟಿಗೆ ತಡೆಹಿಡಿಯುವುದಷ್ಟೇ ಅಲ್ಲದೆ ಮುಂದಕ್ಕೂ ಹಾಕುತ್ತಿವೆ. ಇದು ವರಮಾನದ ಮೇಲೆ ಪರಿಣಾಮ ಬೀರಿದೆ ಎಂದು ಹೇಳಿದ್ದಾರೆ.

ಷೇರು ಮರುಖರೀದಿ: ₹17,000 ಕೋಟಿ ಮೌಲ್ಯದ ಷೇರುಗಳನ್ನು ಮರಳಿ ಖರೀದಿಸಲು ಕಂಪನಿಯು ಒಪ್ಪಿಗೆ ನೀಡಿದೆ.

ಕಚೇರಿಯಿಂದ ಕೆಲಸ: ಉದ್ಯೋಗಿಗಳಿಗೆ ಸೂಚನೆ

ಮುಂಬೈ: 6.14 ಲಕ್ಷಕ್ಕೂ ಅಧಿಕ ಉದ್ಯೋಗಿಗಳಿಗೆ ಕಚೇರಿಯಿಂದ ಕೆಲಸ ಮಾಡುವಂತೆ ಸೂಚನೆ ನೀಡಲಾಗಿದೆ ಎಂದು ಕಂಪನಿಯು ಬುಧವಾರ ತಿಳಿಸಿದೆ. ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ಮನೆಯಿಂದ ಕೆಲಸ ಮಾಡಲು ಅವಕಾಶವನ್ನು ಕಂಪನಿ ಕಲ್ಪಿಸಿತ್ತು.

ಹೊಸದಾಗಿ ಕಂಪನಿ ಸೇರಿರುವವರೊಂದಿಗೆ ಬೆರೆತು ಕೆಲಸ ಮಾಡಲು ಮನೆಯಿಂದ ಕೆಲಸ ಮಾಡುತ್ತಿರುವವರು ಕಚೇರಿಗೆ ಬರುವ ಅಗತ್ಯ ಇದೆ. ಕಂಪನಿಯ ಮೌಲ್ಯವನ್ನು ಅರ್ಥ ಮಾಡಿಕೊಳ್ಳಲು ಹೊಸಬರಿಗೆ ಇದರಿಂದ ಅನುಕೂಲ ಆಗಲಿದೆ. ಹೀಗಾಗಿ ವಾರದ ಎಲ್ಲ ದಿನವೂ ಕಚೇರಿಗೆ ಬರುವಂತೆ ಸೂಚನೆ ನೀಡಲಾಗಿದೆ ಎಂದು ಕಂಪನಿಯ ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿ ಮಿಲಿಂದ್ ಲಕ್ಕಡ್ ಅವರು ಹೇಳಿದ್ದಾರೆ.

ಹಿಂದಿನ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ಉದ್ಯೋಗಿಗಳ ಸಂಖ್ಯೆ 6.16 ಲಕ್ಷ ಇತ್ತು. ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ 6.08 ಲಕ್ಷಕ್ಕೆ ಇಳಿಕೆ ಕಂಡಿದೆ ಎಂದು ಕಂಪನಿ ತಿಳಿಸಿದೆ.

ಭಾರತದಲ್ಲಿ ವಹಿವಾಟು ವಿಸ್ತರಣೆ: 'ಓರಿಯನ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದ ಓರಿಯನ್ ಇನೊವೇಷನ್ ಕಂಪನಿಯು ಭಾರತದಲ್ಲಿ ತನ್ನ ಹಣಕಾಸು ಸೇವೆಗಳ ವಹಿವಾಟಿನ ವಿಸ್ತರಣೆಗೆ ಮುಂದಾಗಿದೆ. ಸದ್ಯ 400 ಸಿಬ್ಬಂದಿ ಕೆಲಸ ಮಾಡುತ್ತಿದ್ದು ಎರಡು ವರ್ಷದಲ್ಲಿ ಸಿಬ್ಬಂದಿ ಸಂಖ್ಯೆಯನ್ನು 800ಕ್ಕೆ ಹೆಚ್ಚಿಸುವುದಾಗಿ ಕಂಪನಿಯ ಹಣಕಾಸು ಸೇವೆಗಳ ಜಾಗತಿಕ ಮುಖ್ಯಸ್ಥ ಅನೂಪ್ ಗಾಲಾ ತಿಳಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ಹಣಕಾಸು ಸೇವೆಗೆ ಸಂಬಂಧಿಸಿದಂತೆ 2028ರ ಅಂತ್ಯದ ವೇಳೆಗೆ ಭಾರತದಿಂದ ಶೇ 10ರಷ್ಟು ವರಮಾನ ಬೆಳವಣಿಗೆ ಆಗುವ ನಿರೀಕ್ಷೆ ಇಟ್ಟುಕೊಳ್ಳಲಾಗಿದೆ. ಇದಕ್ಕಾಗಿ ಫಿನ್‌ತಾರ್ ಟೆಕ್ನಾಲಜೀಸ್ ಮತ್ತು ಬಿಜ್‌ಅಮಿಕಾ ಸಾಫ್ಟ್‌ವೇರ್ ಪ್ರೈವೇಟ್ ಲಿಮಿಟೆಡ್ ಜೊತೆ ಪಾಲುದಾರಿಕೆ ಮಾಡಿಕೊಳ್ಳಲಾಗಿದೆ ಎಂದರು.

ರಾಮನಗರ ರೇಷ್ಮೆಗೂಡು ಧಾರಣೆ




ಮಿಶ್ರತಳಿ (ಸಿ.ಬಿ)	₹277-439
ದ್ವಿತಳಿ (ಬಿ.ವಿ)	₹333-590

ಸುದ್ದಿ 2 ನಿಮಿಷ

ಭಾರತದಲ್ಲಿ ವಹಿವಾಟು ಪುನರ್‌ರಚಿಸಿದ ಓರ್ಕ್ಲಾ

ಬೆಂಗಳೂರು: ಎಂಟಿಆರ್, ಈಸ್ಟರ್ನ್ ಕಾಂಡಿಮೆಂಟ್ಸ್ ಮತ್ತು ಅಂತರರಾಷ್ಟ್ರೀಯ ವಹಿವಾಟುಗಳನ್ನು ಓರ್ಕ್ಲಾ ಇಂಡಿಯಾದ ಅಡಿಯಲ್ಲಿ ತರುವ ಮೂಲಕ ಭಾರತದಲ್ಲಿ ತನ್ನ ವಹಿವಾಟನ್ನು ಪುನರ್‌ರಚನೆ ಮಾಡಿರುವುದಾಗಿ ನಾರ್ವೆಯ ಓರ್ಕ್ಲಾ ಎಎಸ್‌ಎ ಕಂಪನಿಯು ಬುಧವಾರ ಹೇಳಿದೆ.

ಎಂಟಿಆರ್‌ನಲ್ಲಿ ಸಿಇಒ ಆಗಿದ್ದ ಸಂಜಯ್ ಶರ್ಮ ಅವರು ಇನ್ನು ಮುಂದೆ ಓರ್ಕ್ಲಾ ಇಂಡಿಯಾದ ಸಿಇಒ ಆಗಿ ಸಂಸ್ಥೆಯನ್ನು ಮುನ್ನಡೆಸಲಿದ್ದಾರೆ. ಎಂಟಿಆರ್, ಈಸ್ಟರ್ನ್ ಮತ್ತು ಅಂತರರಾಷ್ಟ್ರೀಯ ವಹಿವಾಟಿಗೆ ತಲಾ ಒಬ್ಬರು ಸಿಇಒ ಇರಲಿದ್ದಾರೆ. ಮೂರು ಬ್ರ್ಯಾಂಡ್‌ಗಳು ಸ್ವತಂತ್ರವಾಗಿಯೇ ಮಾರುಕಟ್ಟೆಯಲ್ಲಿ ಗುರುತಿಸಿಕೊಳ್ಳಲಿವೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.



2007ರಲ್ಲಿ ಎಂಟಿಆರ್ ಫುಡ್ಸ್ ಅನ್ನು ಸ್ವಾಧೀನಪಡಿಸಿಕೊಳ್ಳುವ ಮೂಲಕ ಓರ್ಕ್ಲಾ ಕಂಪನಿಯು ಭಾರತದ ಮಾರುಕಟ್ಟೆಯನ್ನು ಪ್ರವೇಶಿಸಿತು. 2020ರಲ್ಲಿ ಕೇರಳ ಮೂಲದ ಈಸ್ಟರ್ನ್ ಕಾಂಡಿಮೆಂಟ್ಸ್ ಕಂಪನಿಯಲ್ಲಿ ಶೇ 67.8ರಷ್ಟು ಷೇರು ಖರೀದಿಸುವ ಮೂಲಕ ವಹಿವಾಟನ್ನು ಮತ್ತಷ್ಟು ವಿಸ್ತರಣೆ ಮಾಡಿತು. ಸದ್ಯ ಓರ್ಕ್ಲಾ ₹2,200 ಕೋಟಿ ಮೌಲ್ಯದ ವಹಿವಾಟು ನಡೆಸುತ್ತಿದೆ.

ಸೆನ್ಸೆಕ್ಸ್ 393 ಅಂಶ ಏರಿಕೆ

ಮುಂಬೈ (ಪಿಟಿಐ): ಎಫ್‌ಎಂಸಿಜಿ, ಇಂಧನ ಮತ್ತು ಬಂಡವಾಳ ಸರಕುಗಳ ವಲಯಗಳ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದರು.

ಇದರಿಂದಾಗಿ ಬುಧವಾರವೂ ಷೇರುಪೇಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆಯಿತು. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 394 ಅಂಶ ಏರಿಕೆ ಕಂಡು 66,473 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 122 ಅಂಶ ಹೆಚ್ಚಾಗಿ 19,811 ಅಂಶಗಳಿಗೆ ತಲುಪಿತು.

ಮುಂಬರುವ ದಿನಗಳಲ್ಲಿ ಬಡ್ಡಿದರ ಹೆಚ್ಚಳದ ಸಾಧ್ಯತೆ ತೀರಾ ಕಡಿಮೆ ಎಂದು ಅಮೆರಿಕದ ಫೆಡರಲ್ ರಿಸರ್ವ್‌ನ ಅಧಿಕಾರಿಗಳು ಹೇಳಿಕೆ ನೀಡಿದ್ದಾರೆ. ಇದು ಸಕಾರಾತ್ಮಕ ಪರಿಣಾಮ ಬೀರಿತು ಎಂದು ಎಮ್‌ಕೆ ಗ್ಲೋಬಲ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯಸ್ಥ ಜಯ್‌ಕೃಷ್ಣ ಗಾಂಧಿ ಹೇಳಿದ್ದಾರೆ. ಸೆನ್ಸೆಕ್ಸ್‌ನಲ್ಲಿ ವಿಪ್ರೊ ಶೇ 3.29ರಷ್ಟು ಗರಿಷ್ಠ ಗಳಿಕೆ ಕಂಡಿತು. ಬಿಎಸ್‌ಇ ಮಿಡ್ ಕ್ಯಾಪ್ ಶೇ 0.55 ಮತ್ತು ಸ್ಮಾಲ್ ಕ್ಯಾಪ್ ಶೇ 0.77ರಷ್ಟು ಏರಿಕೆ ಕಂಡಿತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಹಳತು	46000-48500
ಕೋಕ	15000-27500
ಹೊನ್ನಳ್ಳಿ	
ರಾಶಿ	46509-46509
ಹೊನ್ನಾವರ	
ಹಳೆಚಾಲಿ	37500-41000
ಹೊಸಚಾಲಿ	31000-34000
ಕಾರ್ಕಳ	
ಹಳತು	30000-48500
ಕುಮಟ	
ಚಿಪ್ಪು	31869-35019
ಕೋಕ	20109-31899
ಫ್ಯಾಕ್ಟರಿ	12509-25511
ಹಳೆಚಾಲಿ	39509-40769
ಹೊಸಚಾಲಿ	37169-40019
ಶಿವಮೊಗ್ಗ	
ಬೆಟ್ಟೆ	47109-52599
ಗೊರಬಾಳು	25009-38133
ಹೊಸತು	44299-45981
ರಾಶಿ	42233-47121
ಸಿದ್ದಾಪುರ	
ಬಿಳಿಗೋಟು	32899-34899
ಚಾಲಿ	37419-40499
ಕೋಕ	29019-32899
ಕೆಂಪುಗೋಟು	31699-31699
ರಾಶಿ	43489-45109
ತಟ್ಟಿಬೆಟ್ಟೆ	38099-41019
ಶಿರಸಿ	
ಬೆಟ್ಟೆ	42899-43919
ಬಿಳಿಗೋಟು	26700-36899
ಚಾಲಿ	37699-41298
ಕೆಂಪುಗೋಟು	32969-34499
ರಾಶಿ	44218-46861

ಸುಶೀಲಾ ಚಾನುಗೆ ಗಾಯ: ಎಸಿಟಿ ಹಾಕಿ ಟೂರ್ನಿಗೆ ಅಲಭ್ಯ



ಸುಶೀಲಾ ಚಾನು

ನವದೆಹಲಿ (ಪಿಟಿಐ): ಇದೇ 27ರಿಂದ ನ.5 ರವರೆಗೆ ರಾಂಚಿಯಲ್ಲಿ ನಡೆಯಲಿರುವ ಏಷ್ಯನ್ ಚಾಂಪಿಯನ್ಸ್ ಟ್ರೋಫಿಗೆ (ಎಸಿಟಿ) 20 ಸದಸ್ಯರ ಭಾರತ ಮಹಿಳಾ ಹಾಕಿ ತಂಡವನ್ನು ಪ್ರಕಟಿಸಲಾಗಿದ್ದು, ಗಾಯದ ಕಾರಣದಿಂದ ಅನುಭವಿ ಮಿಡ್‌ಫೀಲ್ಡರ್ ಸುಶೀಲಾ ಚಾನು ಅವರಿಗೆ ವಿಶ್ರಾಂತಿ ನೀಡಲಾಗಿದೆ

ರಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ತಂಡವನ್ನು ಮುನ್ನಡೆಸಿದ್ದ ಅವರು, ಕಳೆದ ವಾರ ನಡೆದ ಹಾಂಗ್‌ಝೌ ಏಷ್ಯನ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆದ್ದ ಭಾರತ ತಂಡದಲ್ಲಿದ್ದರು. ಮೊಣಕಾಲಿನ ನೋವಿನಿಂದ ಬಳಲುತ್ತಿರುವ ಅವರು, ಶೀಘ್ರದಲ್ಲೇ ವೈದ್ಯರನ್ನು ಸಂಪರ್ಕಿಸಲಿದ್ದಾರೆ ಎಂದು ಹಾಕಿ ಇಂಡಿಯಾದ ಮೂಲಗಳು ತಿಳಿಸಿವೆ.

ಸುಶೀಲಾ ಸ್ಥಾನಕ್ಕೆ ಬಲ್‌ಜೀತ್ ಕೌರ್ ಅವಕಾಶ ಪಡೆದಿದ್ದಾರೆ. ಏಷ್ಯನ್ ಕ್ರೀಡಾಕೂಟದಲ್ಲಿ ತಂಡದಲ್ಲಿದ್ದ ವೈಷ್ಣವಿ ವಿಠಲ್ ಫಾಲ್ಕೆ ಅವರನ್ನು ಶರ್ಮಿಳಾ ದೇವಿ ಜೊತೆಗೆ ಬದಲಿ ಆಟಗಾರ್ತಿಯರಾಗಿ ಹೆಸರಿಸಲಾಗಿದೆ. ಸವಿತಾ ಪೂನಿಯಾ ತಂಡವನ್ನು ಮುನ್ನಡೆಸಲಿದ್ದು, ದೀಪ್ ಗ್ರೇಸ್ ಎಕ್ಕಾ ಉಪ ನಾಯಕಿಯಾಗಿದ್ದಾರೆ.

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಭಾರತ, ಜಪಾನ್, ಚೀನಾ, ಕೊರಿಯಾ, ಮಲೇಷ್ಯಾ ಮತ್ತು ಥಾಯ್ಲೆಂಡ್ ತಂಡಗಳು ಪಾಲ್ಗೊಳ್ಳಲಿವೆ. ಅ.27ರಂದು ಭಾರತ ಮೊದಲ ಪಂದ್ಯದಲ್ಲಿ ಥಾಯ್ಲೆಂಡ್ ತಂಡವನ್ನು ಎದುರಿಸಲಿದೆ. ಅ.28ರಂದು ಮಲೇಷ್ಯಾ ವಿರುದ್ಧ, ಅ.30ರಂದು ಚೀನಾ ವಿರುದ್ಧ, ಅ.31ರಂದು ಜಪಾನ್ ವಿರುದ್ಧ, ನ.2ರಂದು ಕೊರಿಯಾ ವಿರುದ್ಧ ಸೆಣಸಲಿದೆ. ನ.4 ಮತ್ತು 5ರಂದು ಕ್ರಮವಾಗಿ ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳು ನಡೆಯಲಿವೆ.

ತಂಡ: ಗೋಲ್‌ಕೀಪರ್‌ಗಳು: ಸವಿತಾ ಪೂನಿಯಾ (ನಾಯಕಿ), ಬಿಚು ದೇವಿ ಖರಿಬಮ್; **ಡಿಫೆಂಡರ್ಸ್:** ನಿಕ್ಕಿ ಪ್ರಧಾನ್, ಉದಿತಾ, ಇಶಿಕಾ ಚೌಧರಿ, ದೀಪ್ ಗ್ರೇಸ್ ಎಕ್ಕಾ (ಉಪನಾಯಕಿ); **ಮಿಡ್‌ಫೀಲ್ಡರ್‌ಗಳು:** ನಿಶಾ, ಸಲೀಮಾ, ನೇಹಾ, ನವನೀತ್ ಕೌರ್, ಸೋನಿಕಾ, ಮೋನಿಕಾಜೆ, ಜ್ಯೋತಿ ಕೌರ್; **ಫಾರ್ವರ್ಡ್ಸ್:** ಲಾಲ್‌ರೆಮ್ಸಿಯಾಮಿ, ಸಂಗೀತಾ ಕುಮಾರಿ, ದೀಪಿಕಾ, ವಂದನಾ ಕಟಾರಿಯ; **ಬದಲಿ ಆಟಗಾರರು:** ಶರ್ಮಿಳಾ ದೇವಿ, ವೈಷ್ಣವಿ ವಿಠಲ್ ಫಾಲ್ಕೆ



ಅಭಿನಂದನೆ ಚೀನಾದ ಹಾಂಗ್‌ಝೌನಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ಪದಕ ವಿಜೇತ ಕ್ರೀಡಾಪಟುಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ನವದೆಹಲಿಯಲ್ಲಿ ಅಭಿನಂದಿಸಿದರು. ಭಾರತ ಪುರುಷರ ಮತ್ತು ಮಹಿಳೆಯರ ಹಾಕಿ ತಂಡದ ಆಟಗಾರರು ಇದ್ದಾರೆ –ಪಿಟಿಐ ಚಿತ್ರ

ಒಂದು ಪಂದ್ಯಕ್ಕೆ ಬೇಕು 40 ಸಾವಿರ ಲೀಟರ್ ನೀರು

ಹಾಕಿ ಟರ್ಫ್ ಅಂಗಣಕ್ಕೆ ನೀರಿನ ಕೊರತೆ

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಇಲ್ಲಿನ ಗಾಂಧಿನಗರದಲ್ಲಿ ₹ 9.49 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ಮಹಾತ್ಮ ಗಾಂಧಿ ಹಾಕಿ ಕ್ರೀಡಾಂಗಣವು ಅಂತರ ರಾಷ್ಟ್ರೀಯ ಮಟ್ಟದ ಟರ್ಫ್ ಹೊಂದಿದೆ. ಆದರೆ, ನೀರಿನ ಕೊರತೆಯಿಂದ ಅದರ ನಿರ್ವಹಣೆಯೇ ಸವಾಲಾಗಿದೆ.

ಕ್ರೀಡಾಂಗಣದಲ್ಲಿ ಸದ್ಯ 70 ಸಾವಿರ ಲೀಟರ್ ಸಾಮರ್ಥ್ಯದ ನೀರಿನ ಟ್ಯಾಂಕ್ ಇದೆ. ಇಲ್ಲಿ ಒಂದು ಪಂದ್ಯ ಆಡಿಸಲು 40 ಸಾವಿರ ಲೀಟರ್ ನೀರು ಸಿಂಪಡಿಸಬೇಕು. ದಿನಕ್ಕೆ ಮೂರು ಪಂದ್ಯಗಳಾದರೆ, 1.20 ಲಕ್ಷ ಲೀಟರ್ ನೀರು ಬೇಕು. ಪಂದ್ಯಗಳು ಇರದ ಸಂದರ್ಭದಲ್ಲಿ ಟರ್ಫ್ ಒದ್ದೆಯಾಗಿಡಲು ಕನಿಷ್ಠ 20 ಸಾವಿರ ಲೀಟರ್ ನೀರು ಬೇಕು.

'ಗದಗ ಬೆಟಗೇರಿ ಅವಳಿ ನಗರದಲ್ಲಿ ನೀರಿನ ಸಮಸ್ಯೆಯಿದೆ. 24/7 ಕುಡಿಯುವ ನೀರು ಪೂರೈಸುವ ಎರಡು ನಳಗಳನ್ನು ಕ್ರೀಡಾಂಗಣದ ಬಳಿ ಅಳವಡಿಸಲಾಗಿದ್ದು, ವಾರಕ್ಕೊಮ್ಮೆ ನೀರು ಪೂರೈಯಾಗುತ್ತದೆ. ಒಮ್ಮೆ ನೀರು ಸಿಂಪಡಿಸಿದರೆ ಅದರಲ್ಲಿ ಗರಿಷ್ಠ ಶೇ 25ರಷ್ಟು ನೀರು ಮರುಬಳಕೆಗೆ ಸಿಗುತ್ತದೆ. ಕ್ರೀಡಾಂಗಣದಲ್ಲಿ ಮೂರು ಕೊಳವೆ ಬಾವಿಗಳಿದ್ದು, ಒಂದರಲ್ಲಿ ಮಾತ್ರ ಅರ್ಧ ಇಂಚಿನಷ್ಟು ನೀರಿದೆ. ಸಮಸ್ಯೆ ಹೀಗಿರುವಾಗ, ಅಗತ್ಯ ಪ್ರಮಾಣದಷ್ಟು ನೀರನ್ನು ಎಲ್ಲಿ ಮತ್ತು ಹೇಗೆ ಸಂಗ್ರಹಿಸಿ ಇಡುತ್ತಾರೆ' ಎಂಬ ಕಳವಳ ಹಾಕಿ ಆಟಗಾರರದ್ದು.

'ಟರ್ಫ್ ನಿರ್ವಹಣೆಗೆ ನೀರಿನ ಸಮಸ್ಯೆಯಿದೆ. ಸೆಪ್ಟೆಂಬರ್ 3ರಂದು ಉದ್ಘಾಟನೆಗೊಂಡ ಹಾಕಿ ಕ್ರೀಡಾಂಗಣವು ಕ್ರೀಡಾ ಇಲಾಖೆಗೆ ಹಸ್ತಾಂತರ ಆಗಬೇಕಿದೆ. ಕ್ರೀಡಾಂಗಣಕ್ಕೆ ಫ್ಲಡ್‌ಲೈಟ್ ವ್ಯವಸ್ಥೆ, ಪ್ರಾಕ್ಟೀಸ್ ಪಿಚ್, ಪೆವಿಲಿಯನ್‌ಗೆ ಚಾವಣಿ ನಿರ್ಮಾಣ ಸೇರಿ ಇನ್ನಿತರ ಕೆಲಸಗಳಿಗೆ ₹2 ಕೋಟಿ ಬೇಕು. ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಶರಣು ಗೋಗೇರಿ ತಿಳಿಸಿದ್ದಾರೆ.



ಗದಗ ಬೆಟಗೇರಿಯ ಗಾಂಧಿ ನಗರದಲ್ಲಿರುವ ಮಹಾತ್ಮ ಗಾಂಧಿ ಹಾಕಿ ಕ್ರೀಡಾಂಗಣದ ಟರ್ಫ್‌ಗೆ ನೀರು ಸಿಂಪಡಿಸುತ್ತಿರುವುದು

ಟರ್ಫ್ ನಿರ್ವಹಣೆಗೆ ಕಾಡುತ್ತಿರುವ ನೀರಿನ ಸಮಸ್ಯೆಯನ್ನು ಬೇಗನೇ ಬಗೆಹರಿಸಬೇಕು. ಟರ್ಫ್‌ಗೆ ನೀರು ಹಾಯಿಸುವ ಸ್ಪ್ರಿಂಕ್ಲರ್‌ನ ಪೈಪ್ ಕೆಟ್ಟಿದ್ದು, ಅದನ್ನು ಬೇಗನೇ ದುರಸ್ತಿ ಮಾಡಬೇಕು.
ಟಿ.ಎಸ್.ಮಣಿ
ಹಾಕಿ ಆಟಗಾರ

ಅನುದಾನ ಸಿಕ್ಕ ಬಳಿಕ ಹೊಸದಾಗಿ ಕೊಳವೆಬಾವಿ ಕೊರೆಸಲಾಗುವುದು. 1 ಲಕ್ಷ ಲೀಟರ್ ಸಂಗ್ರಹಣಾ ಸಾಮರ್ಥ್ಯದ ಟ್ಯಾಂಕ್ ನಿರ್ಮಿಸಿ ನೀರಿನ ಸಮಸ್ಯೆ ಬಗೆಹರಿಸಲಾಗುವುದು.
ಶರಣು ಗೋಗೇರಿ
ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ

ಯುನೈಟೆಡ್ ತಂಡ ಜಯಭೇರಿ

ಬೆಂಗಳೂರು: ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 6-1ರಿಂದ ಎಫ್‌ಸಿ ಅಗ್ನಿಪುತ್ರ ವಿರುದ್ಧ ಜಯ ಗಳಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ಯುನೈಟೆಡ್ ಪರ ಅಕ್ಷುನ್ನ ತ್ಯಾಗಿ (44, 60ನೇ ನಿ) ಎರಡು ಗೋಲು ಗಳಿಸಿದರೆ, ಜೈಸನ್ ಜೋರ್ಡಾನ್ ವಾಜ್ (21ನೇ), ಒಮೆಗಾ ವನ್‌ಲಾಲ್ (42ನೇ), ಜೆರ್ರಿ ಒನ್ ಸೆಮಾಸ್ (62ನೇ), ಉರಾಜ್ ಹಡ್ಕೊಂಕರ್ (87ನೇ) ತಲಾ ಒಂದೊಂದು ಗೋಲು ದಾಖಲಿಸಿದರು. ಲಾಲ್ನುಂಜಮಾ (75ನೇ) ಅಗ್ನಿಪುತ್ರ ಪರ ಏಕೈಕ ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ ತಂಡವು 1-1ರಿಂದ ರೆಬೆಲ್ಸ್ ಎಫ್‌ಸಿ ಜತೆ ಡ್ರಾ ಸಾಧಿಸಿತು.

ಇಂಡಿಪೆಂಡೆಂಟ್ಸ್ ಪರ ಎ.ಮೊಹಮ್ಮದ್ ಮೊಯಿನುದ್ದೀನ್ (3ನೇ), ರೆಬೆಲ್ಸ್ ಪರ ಬಿಬಿನ್ ಬಾಬು (41ನೇ) ಚೆಂಡನ್ನು ಗುರಿ ಸೇರಿಸಿದರು.

ಭಾರತಕ್ಕೆ 8 ವಿಕೆಟ್‌ಗಳ ಜಯ • ದಾಖಲೆಗಳ ಪೇರಿಸಿದ ನಾಯಕ ರೋಹಿತ್ ಶರ್ಮಾ • ಬೂಮ್ರಾಗೆ ನಾಲ್ಕು ವಿಕೆಟ್

‘ಹಿಟ್‌ಮ್ಯಾನ್’ ಆಟಕ್ಕೆ ಬೆಚ್ಚಿದ ಅಫ್ಗನ್

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಟ್‌ಮ್ಯಾನ್ ಖ್ಯಾತಿಯ ರೋಹಿತ್ ಶರ್ಮಾ ಅವರ ಸಿಡಿಲಬ್ಬರದ ಬ್ಯಾಟಿಂಗ್‌ಗೆ ದೇಶದ ರಾಜಧಾನಿಯ ಕ್ರೀಡಾಂಗಣ ವೇದಿಕೆಯಾಯಿತು.

ಬುಧವಾರ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ರೋಹಿತ್ ಮಿಂಚಿನ ಶತಕದ ಮುಂದೆ ಅಫ್ಗಾನಿಸ್ತಾನ ತಂಡವು ಬಸವಳಿಯಿತು. ಪಂದ್ಯದಲ್ಲಿ ಇನ್ನೂ 90 ಎಸೆತಗಳು ಬಾಕಿಯಿರುವಾಗಲೇ 8 ವಿಕೆಟ್‌ಗಳಿಂದ ಜಯಿಸಿತು.

272 ರನ್‌ಗಳ ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ಆರಂಭಿಕ ಜೋಡಿ ರೋಹಿತ್ (131; 84ಎ) ಮತ್ತು ಇಶಾನ್ ಕಿಶನ್ (47; 47ಎ) ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 156 ರನ್‌ಗಳನ್ನು ಸೇರಿಸಿದರು. ಇದರಿಂದಾಗಿ ತಂಡವು 35 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 273 ರನ್ ಗಳಿಸಿತು.

ಇದಕ್ಕಾಗಿ ಅವರಿಬ್ಬರೂ ಸೇರಿ 112 ಎಸೆತಗಳನ್ನು ಆಡಿದರು. ಇದರಲ್ಲಿ ರೋಹಿತ್ ಅವರದ್ದೇ ಸಿಂಹಪಾಲು. ಇಶಾನ್ ಹೆಚ್ಚು ಶ್ರಮಪಡದೇ ರೋಹಿತ್ ಆಟದ ಸೊಬಗನ್ನು ಸವಿದರು.

ಮುಂಬೈಕರ್ ರೋಹಿತ್ 63 ಎಸೆತಗಳಲ್ಲಿ ಶತಕದ ಗಡಿ ದಾಟಿದರು. ವಿಶ್ವಕಪ್ ಕ್ರಿಕೆಟ್‌ನಲ್ಲಿ ಇದು ಅವರ ಏಳನೇ ಶತಕ. ಇದರೊಂದಿಗೆ ಅವರು ಸಚಿನ್ ತೆಂಡೂಲ್ಕರ್ (6) ದಾಖಲೆಯನ್ನು ಮೀರಿದರು. ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ಇದು ಅವರಿಗೆ 31ನೇ ಶತಕವಾಗಿದೆ.

ಮುಖ್ಯಾಂಶಗಳು

- ಟೂರ್ನಿಯಲ್ಲಿ ಭಾರತಕ್ಕೆ ಸತತ ಎರಡನೇ ಜಯ
- ಅರ್ಧಶತಕ ಗಳಿಸಿದ ವಿರಾಟ್ ಕೊಹ್ಲಿ
- ಮೂರು ರನ್‌ಗಳಿಂದ ಅರ್ಧಶತಕ ಕೈತಪ್ಪಿಸಿಕೊಂಡ ಇಶಾನ್ ಕಿಶನ್

ಈ ಪಂದ್ಯದಲ್ಲಿ ಐದು ಸಿಕ್ಸರ್ ಬಾರಿಸಿದ ರೋಹಿತ್ ಮೂರು ಮಾದರಿಗಳ ಕ್ರಿಕೆಟ್‌ನಲ್ಲಿ ಒಟ್ಟು 556 ಸಿಕ್ಸರ್ ದಾಖಲಿಸಿದರು. ಇದರೊಂದಿಗೆ ಕ್ರಿಸ್ ಗೇಲ್ (553) ದಾಖಲೆ ಮುರಿದರು.

ಅಫ್ಗನ್ ಬೌಲರ್‌ಗಳ ಶಾಟ್ ಪಿಚ್ ಎಸೆತಗಳು, ಕಟರ್, ಸ್ಪಿನ್ ಎಸೆತಗಳು ರೋಹಿತ್ ಲಯದ ಮುಂದೆ ಬಲ ಕಳೆದುಕೊಂಡವು. ಬೌಂಡರಿಗೆರೆಯಾಚೆ ಹೋಗಿ ಬಿದ್ದವು.


ಜಸ್‌ಪ್ರೀತ್ ಬೂಮ್ರಾ ಮತ್ತು ಹಾರ್ದಿಕ್ ಪಾಂಡ್ಯ –ಪಿಟಿಐ ಚಿತ್ರ

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ನ್ಯೂಜಿಲೆಂಡ್	2	2	0	0	4	1.958
ಭಾರತ	2	2	0	0	4	1.500
ಪಾಕಿಸ್ತಾನ	2	2	0	0	4	0.927
ದಕ್ಷಿಣ ಆಫ್ರಿಕಾ	1	1	0	0	2	2.040
ಇಂಗ್ಲೆಂಡ್	2	1	1	0	2	0.553
ಬಾಂಗ್ಲಾದೇಶ	2	1	1	0	2	-0.653
ಆಸ್ಟ್ರೇಲಿಯಾ	1	0	1	0	0	-0.883
ಶ್ರೀಲಂಕಾ	2	0	2	0	0	-1.161
ನೆದರ್ಲೆಂಡ್ಸ್	2	0	2	0	0	-1.438
ಅಫ್ಗಾನಿಸ್ತಾನ	2	0	2	0	0	-1.907

ಚೆನ್ನೈನಲ್ಲಿ ಆಸ್ಟ್ರೇಲಿಯಾ ಎದುರು ರೋಹಿತ್ ಮತ್ತು ಇಶಾನ್ ಇಬ್ಬರೂ ಸೊನ್ನೆ ಸುತ್ತಿದ್ದರು. ಆದರೆ ಇಲ್ಲಿ ಮಿಂಚಿದರು. ಅರ್ಧಶತಕದತ್ತ ಹೆಜ್ಜೆಯಿಟ್ಟಿದ ಇಶಾನ್ ವಿಕೆಟ್ ಗಳಿಸಿದ ರಶೀದ್ ಜೊತೆಯಾಟವನ್ನು ಮುರಿದರು. ರೋಹಿತ್ ಜೊತೆಗೂಡಿದ ವಿರಾಟ್ ಕೊಹ್ಲಿ ರನ್ ಗಳಿಕೆಯ ವೇಗವನ್ನು ಮುಂದುವರಿಸಿದರು.

26ನೇ ಓವರ್‌ನಲ್ಲಿ ರೋಹಿತ್ ವಿಕೆಟ್ ಗಳಿಸಿದ ರಶೀದ್ ನಿಟ್ಟುಸಿರುಬಿಟ್ಟರು. ಆದರೆ ವಿರಾಟ್ ಆಟ ರಂಗೇರಿತು. ಅವರು ಅಜೇಯ ಅರ್ಧಶತಕ (55; 56ಎ) ಗಳಿಸಿದರು. ಶ್ರೇಯಸ್ ಅಯ್ಯರ್ (ಔಟಾಗದೆ 25) ಜೊತೆಗೂಡಿ ತಂಡವನ್ನು ಗೆಲುವಿನ ಗಡಿ ಮುಟ್ಟಿಸಿದರು.

ಹಷ್ಮತ್– ಅಜ್ಮತ್ ಜೊತೆಯಾಟ: ಟಾಸ್ ಗೆದ್ದ ಅಫ್ಗನ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕ ಹಷ್ಮತ್ ಉಲ್ಲಾ ಶಾಹೀದಿ (80; 88ಎ) ಮತ್ತು ಅಜ್ಮತ್ ಉಲ್ಲಾ ಒಮರ್‌ಝೈ (62; 69ಎ) ಅವರ ಅರ್ಧಶತಕಗಳ ಬಲದಿಂದ 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 272 ರನ್ ಗಳಿಸಿತು.

ಹಾರ್ದಿಕ್ ಪಾಂಡ್ಯ, ಜಸ್‌ಪ್ರೀತ್ ಬೂಮ್ರಾ ಹಾಗೂ ಶಾರ್ದೂಲ್ ಠಾಕೂರ್ ಅವರ ದಾಳಿಯಿಂದಾಗಿ ಅಫ್ಗನ್ ತಂಡವು ಆರಂಭದಲ್ಲಿ ಆಘಾತ ಅನುಭವಿಸಿತ್ತು.

63 ಎಸೆತಗಳಿಗೆ ಮೂರು ವಿಕೆಟ್ ಕಳೆದುಕೊಂಡಿತ್ತು. ಆದರೆ, ಮಧ್ಯಮ ಕ್ರಮಾಂಕದಲ್ಲಿ ಹಷ್ಮತ್ ಮತ್ತು ಅಜ್ಮತ್ ಮಿಂಚಿದರು. 4ನೇ ವಿಕೆಟ್ ಜೊತೆಯಾಟದಲ್ಲಿ 121 ರನ್ ಸೇರಿಸಿದರು. ಇದರಿಂದಾಗಿ ತಂಡ ಹೋರಾಟದ ಮೊತ್ತ ಗಳಿಸಿತು.

ಒಂದು ಹಂತದಲ್ಲಿ ತಂಡವು 300 ರನ್‌ಗಳ ಗಡಿ ದಾಟುವ ಸಾಧ್ಯತೆಯೂ ಕಂಡುಬಂದಿತ್ತು. ಆದರೆ ಬೂಮ್ರಾ (39ಕ್ಕೆ4) ಹಾಗೂ ಕುಲದೀಪ್ ಯಾದವ್ 40ಕ್ಕೆ1) ರನ್ ಗಳಿಕೆಗೆ ಕಡಿವಾಣ ಹಾಕಿದರು. ಅವರಿಗೆ ಜಡೇಜ ಕೂಡ ಉತ್ತಮ ಜೊತೆ ನೀಡಿದರು.

ವೇಗಿ ಮೊಹಮ್ಮದ್ ಸಿರಾಜ್ ಒಂಬತ್ತು ಓವರ್‌ಗಳಲ್ಲಿ 76 ರನ್ ನೀಡಿ ದುಬಾರಿಯಾದರು. ಅವರು ಒಂದೂ ವಿಕೆಟ್ ಪಡೆಯಲಿಲ್ಲ.


ರೋಹಿತ್ ಶರ್ಮಾ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ವಿಶ್ವಕಪ್: ಸಾವಿರಕ್ಕೂ ಹೆಚ್ಚು ರನ್ ಪೇರಿಸಿದ ಭಾರತೀಯರು

ರನ್	ಆಟಗಾರ
2278	ಸಚಿನ್ ತೆಂಡೂಲ್ಕರ್
1115	ವಿರಾಟ್ ಕೊಹ್ಲಿ
1009	ರೋಹಿತ್ ಶರ್ಮಾ
1006	ಸೌರವ್ ಗಂಗೂಲಿ

ವಿಶ್ವಕಪ್: ಕಡಿಮೆ ಇನಿಂಗ್ಸ್‌ಗಳಲ್ಲಿ ಸಾವಿರ ರನ್

ಇನ್ನಿಂಗ್ಸ್	ಆಟಗಾರ
19	ಡೇವಿಡ್ ವಾರ್ನರ್ (ಆಸ್ಟ್ರೇಲಿಯಾ)
19	ರೋಹಿತ್ ಶರ್ಮಾ (ಭಾರತ)
20	ಸಚಿನ್ ತೆಂಡೂಲ್ಕರ್ (ಭಾರತ)
20	ಎಬಿ ಡಿವಿಲಿಯರ್ಸ್ (ದ.ಆಫ್ರಿಕಾ)
21	ವಿವಿಯನ್ ರಿಚರ್ಡ್ಸ್ (ವೆಸ್ಟ್ ಇಂಡೀಸ್)
21	ಸೌರವ್ ಗಂಗೂಲಿ (ಭಾರತ)

ಕೊಹ್ಲಿಗೆ ಬಡ್ತಿ

ದುಬೈ (ಪಿಟಿಐ): ಭಾರತದ ವಿರಾಟ್ ಕೊಹ್ಲಿ ಐಸಿಸಿ ಬುಧವಾರ ಪ್ರಕಟಿಸಿದ ಬ್ಯಾಟಿಂಗ್ ರ‍್ಯಾಂಕಿಂಗ್‌ನಲ್ಲಿ ಎರಡು ಸ್ಥಾನ ಬಡ್ತಿ ಪಡೆದು, ಏಳನೇ ಸ್ಥಾನಕ್ಕೆ ತಲುಪಿದ್ದಾರೆ.

ವಿಶ್ವಕಪ್ ಟೂರ್ನಿಯಲ್ಲಿ ಆಸ್ಟ್ರೇಲಿಯಾ ವಿರುದ್ಧದ ಮೊದಲ ಪಂದ್ಯದಲ್ಲಿ ಕೊಹ್ಲಿ 85 ರನ್ ಗಳಿಸಿದ್ದರು. ಅದೇ ಪಂದ್ಯದಲ್ಲಿ ಔಟಾಗದೆ 97 ರನ್ ಗಳಿಸಿದ್ದ ಕೆ.ಎಲ್. ರಾಹುಲ್ 15 ಸ್ಥಾನಗಳ ಬಡ್ತಿಯೊಂದಿಗೆ 19ನೇ ಸ್ಥಾನ ಪಡೆದಿದ್ದಾರೆ. ಬೌಲರ್‌ಗಳ ಪೈಕಿ ಮೊಹಮ್ಮದ್ ಸಿರಾಜ್ ಅಗ್ರಸ್ಥಾನದಿಂದ 2ನೇ ಸ್ಥಾನಕ್ಕೆ ಜಾರಿದ್ದಾರೆ.

ಸ್ಕೋರ್ ಕಾರ್ಡ್

ಅಫ್ಗಾನಿಸ್ತಾನ 8ಕ್ಕೆ 272 (50 ಓವರ್‌ಗಳಲ್ಲಿ)
ರೆಹಮಾನುಲ್ಲಾ ಸಿ ಠಾಕೂರ್ ಬಿ ಹಾರ್ದಿಕ್ 21 (28ಎ, 4X3, 6X1)
ಇಬ್ರಾಹಿಂ ಸಿ ರಾಹುಲ್ ಬಿ ಬೂಮ್ರಾ 22 (28ಎ, 4X4)
ರೆಹಮತ್ ಎಲ್‌ಬಿಡಬ್ಲ್ಯು ಬಿ ಠಾಕೂರ್ 16 (22ಎ, 4X3)
ಹಷ್ಮತ್‌ಉಲ್ಲಾ ಎಲ್‌ಬಿಡಬ್ಲ್ಯು ಬಿ ಕುಲದೀಪ್ 80 (88ಎ, 4X8, 6X1)
ಅಜ್ಮತ್‌ಉಲ್ಲಾ ಬಿ ಹಾರ್ದಿಕ್ 62 (69ಎ, 4X2, 6X4)
ನಬಿ ಎಲ್‌ಬಿಡಬ್ಲ್ಯು ಬಿ ಬೂಮ್ರಾ 19 (27ಎ, 4X1)
ನಜೀಬುಲ್ಲಾ ಸಿ ಕೊಹ್ಲಿ ಬಿ ಬೂಮ್ರಾ 2 (8ಎ)
ರಶೀದ್ ಸಿ ಕುಲದೀಪ್ ಬಿ ಬೂಮ್ರಾ 16 (12ಎ, 4X1, 6X1)
ಮುಜೀಬ್ ಔಟಾಗದೆ 10 (12ಎ, 4X2)
ನವೀನ್ ಉಲ್ ಹಕ್ ಔಟಾಗದೆ 9 (8ಎ, 4X1)
ಇತರೆ: 15 (ಬೈ 2, ಲೆಗ್‌ಬೈ 3, ವೈಡ್ 8, ನೋಬಾಲ್ 2)
ವಿಕೆಟ್ ಪತನ: 1–32 (ಇಬ್ರಾಹಿಂ ಜದ್ರಾನ್;6.4), 2–63 (ರೆಹಮಾನುಲ್ಲಾ ಗುರ್ಬಾಜ್; 12.4), 3–63 (ರೆಹಮತ್ ಷಾ; 13.1), 4–184 (ಅಜ್ಮತ್‌ಉಲ್ಲಾ ಒಮರ್‌ಝೈ; 34.2), 5–225 (ಹಷ್ಮತ್‌ಉಲ್ಲಾ ಶಾಹೀದಿ; 42.4), 6–229 (ನಜೀಬುಲ್ಲಾ ಜದ್ರಾನ್; 44.2), 7–235 (ಮೊಹಮ್ಮದ್ ನಬಿ;44.6), 8–261 (ರಶೀದ್ ಖಾನ್; 48.1)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 10–0–39–4, ಮೊಹಮ್ಮದ್ ಸಿರಾಜ್ 9–0–76–0, ಹಾರ್ದಿಕ್ ಪಾಂಡ್ಯ 7–0–43–2, ಶಾರ್ದೂಲ್ ಠಾಕೂರ್ 6–0–31–1, ಕುಲದೀಪ್ ಯಾದವ್ 10–0–40–1, ರವೀಂದ್ರ ಜಡೇಜ 8–0–38–0

ಭಾರತ 2 ಕ್ಕೆ 273 (35 ಓವರ್‌ಗಳಲ್ಲಿ)
ರೋಹಿತ್ ಬಿ ರಶೀದ್ 131 (84ಎ, 4X16, 6X5)
ಇಶಾನ್ ಸಿ ಇಬ್ರಾಹಿಮ್ ಬಿ ರಶೀದ್ 47 (47ಎ, 4X5, 6X2)
ವಿರಾಟ್ ಔಟಾಗದೆ 55 (56ಎ, 4X6)
ಶ್ರೇಯಸ್ ಔಟಾಗದೆ 25 (23ಎ, 4X1, 6X1)
ಇತರೆ: 15 (ಬೈ 1, ಲೆಗ್‌ಬೈ 4, ವೈಡ್ 10)
ವಿಕೆಟ್ ಪತನ: 1–156 (ಇಶಾನ್ ಕಿಶನ್; 18.4), 2–205 (ರೋಹಿತ್ ಶರ್ಮಾ; 25.4)
ಬೌಲಿಂಗ್: ಫಜಲ್‌ಹಕ್ ಫಾರೂಖಿ 6–0–50–0, ಮುಜೀಬ್ ಉರ್ ರೆಹಮಾನ್ 8–0–64–0, ನವೀನ್ ಉಲ್ ಹಕ್ 5–0–31–0, ಅಜಮತ್‌ಉಲ್ಲಾ ಒಮರ್‌ಝೈ 4–0–34–0, ಮೊಹಮ್ಮದ್ ನಬಿ 4–0–32–0, ರಶೀದ್ ಖಾನ್ 8–0–57–2

ಫಲಿತಾಂಶ: ಭಾರತಕ್ಕೆ 8 ವಿಕೆಟ್ ಜಯ, ಎರಡು ಅಂಕ

ಅಹಮದಾಬಾದ್‌ಗೆ ಗಿಲ್

ನವದೆಹಲಿ (ಪಿಟಿಐ): ಡೆಂಗಿ ಜ್ವರದಿಂದ ಚೇತರಿಸಿಕೊಳ್ಳುತ್ತಿರುವ ಭಾರತ ಕ್ರಿಕೆಟ್ ತಂಡದ ಆಟಗಾರ ಶುಭಮನ್ ಗಿಲ್ ಅವರು ಬುಧವಾರ ರಾತ್ರಿ ಅಹಮದಾಬಾದ್‌ಗೆ ಬಂದಿಳಿದಿದ್ದಾರೆ. ಆದರೆ ಅವರು ಶನಿವಾರ ಪಾಕಿಸ್ತಾನ ವಿರುದ್ಧ ನಡೆಯಲಿರುವ ವಿಶ್ವಕಪ್ ಪಂದ್ಯದಲ್ಲಿ ಆಡುವುದು ಇನ್ನೂ ಅನಿಶ್ಚಿತವಾಗಿದೆ.

‘ಗಿಲ್ ಈಗ ಚೇತರಿಸಿಕೊಂಡಿದ್ದಾರೆ. ಗುರುವಾರ ಅವರು ಮೊಟೇರಾದಲ್ಲಿ ಲಘು ತಾಲೀಮಿನಲ್ಲಿ ಭಾಗವಹಿಸುವರೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಜೊತೆಗೆ ಪಾಕಿಸ್ತಾನ ವಿರುದ್ಧದ ಪಂದ್ಯ ಆಡುವರೇ ಎಂಬ ಬಗ್ಗೆ ಖಚಿತವಿಲ್ಲ’ ಎಂದು ಬಿಸಿಸಿಐ ಮೂಲವೊಂದು ತಿಳಿಸಿದೆ.


ಶುಭಮನ್ ಗಿಲ್

ಪ್ಲೇಟ್ಲೆಟ್ ಸಂಖ್ಯೆ ಗಣನೀಯವಾಗಿ ಇಳಿದ ಕಾರಣ 24 ವರ್ಷದ ಗಿಲ್ ಚೆನ್ನೈನ ಆಸ್ಪತ್ರೆಗೆ ದಾಖಲಾಗಿದ್ದರು. ಹೀಗಾಗಿ ತಂಡದೊಂದಿಗೆ ದೆಹಲಿಗೆ ಪ್ರಯಾಣಿಸಿರಲಿಲ್ಲ.

ದಕ್ಷಿಣ ಆಫ್ರಿಕಾಕ್ಕೆ ಹುಮ್ಮಸ್ಸು, ಆಸ್ಟ್ರೇಲಿಯಾಕ್ಕೆ ಒತ್ತಡ

ಲಖನೌದಲ್ಲಿ ಇಂದು ಮುಖಾಮುಖಿ • ಉಭಯ ತಂಡಗಳಿಂದ ಉತ್ತಮ ಹೋರಾಟ ನಿರೀಕ್ಷೆ

ಲಖನೌ (ಪಿಟಿಐ): ಶ್ರೀಲಂಕಾ ವಿರುದ್ಧ ಮೊದಲ ಪಂದ್ಯದಲ್ಲಿ ಭರ್ಜರಿ ಜಯಗಳಿಸಿದ ಹುಮ್ಮಸ್ಸಿನಲ್ಲಿರುವ ದಕ್ಷಿಣ ಆಫ್ರಿಕಾ ತಂಡ, ವಿಶ್ವಕಪ್ ಪಂದ್ಯದಲ್ಲಿ ಗುರುವಾರ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ. ಭಾರತ ವಿರುದ್ಧ ಸೋಲಿನಿಂದ ಪಾಠ ಕಲಿತಿರುವ ಆಸ್ಟ್ರೇಲಿಯಾ ಈ ಪಂದ್ಯಕ್ಕೆ ಬ್ಯಾಟಿಂಗ್ ಬಲಪಡಿಸಲು ಆಲ್‌ರೌಂಡರ್ ಮಾರ್ಕಸ್ ಸ್ಟೊಯಿನಿಸ್ ಅವರನ್ನು ಆಡಿಸುವ ಸಾಧ್ಯತೆಯಿದೆ.

ಐದು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ, ವಿಶ್ವಕಪ್ ಆರಂಭವನ್ನು ನಿರೀಕ್ಷಿಸದ ರೀತಿ ಆರು ವಿಕೆಟ್ ಸೋಲಿನೊಡನೆ ಆರಂಭಿಸಿದೆ.

ಬ್ಯಾಟಿಂಗ್‌ನಲ್ಲಿ ಯಾರೂ ಆಕ್ರಮಣಕಾರಿ ಮನೋಭಾವ ತೋರಲಿಲ್ಲ. ಹಿರಿಯ ಬ್ಯಾಟರ್‌ಗಳಾದ ಡೇವಿಡ್ ವಾರ್ನರ್ ಮತ್ತು ಸ್ಟೀವ್ ಸ್ಮಿತ್ ಅವರನ್ನು ಬಿಟ್ಟರೆ ಉಳಿದವರು 30 ರನ್‌ಗಳ ಗಡಿ ಕೂಡ ದಾಟಲಿಲ್ಲ. ತಂಡ ಸೋತ ರೀತಿ ‘ಚಿಂತಕರ ಚಾವಡಿ’ಯ ಕಳವಳಕ್ಕೆ ಕಾರಣವಾಗಿದೆ.

ಚೆನ್ನೈ ಪಿಚ್‌ನಲ್ಲಿ ಭಾರತದ ಗುಣಮಟ್ಟದ ಸ್ಪಿನ್ ಎದುರಿಸಲು ಆಟಗಾರರು ಪರದಾಡಿದರು. ಜೊತೆಗೆ ಆ ತಂಡದಲ್ಲಿ ಆ್ಯಡಂ ಜಂಪಾ ಬಿಟ್ಟರೆ ನುರಿತ ಸ್ಪಿನ್ನರ್ ಇರಲಿಲ್ಲ. ಮ್ಯಾಕ್ಸ್‌ವೆಲ್ ಅವರ ಪಾರ್ಟ್‌ಟೈಂ ಸ್ಪಿನ್ ಪರಿಣಾಮಕಾರಿಯಾಗಲಿಲ್ಲ. ಇದೆಲ್ಲರ ಜೊತೆಗೆ ಸುರಕ್ಷಿತ ಫೀಲ್ಡರ್ ಎನಿಸಿದ ಮಿಚೆಲ್ ಮಾರ್ಷ್, ಕೊಹ್ಲಿ ಬ್ಯಾಟಿನಿಂದ ಚಿಮ್ಮಿದ ಕ್ಯಾಚ್ ನೆಲಕ್ಕೆ ಚೆಲ್ಲಿ ಎಡವಟ್ಟು ಮಾಡಿದ್ದು ಪಂದ್ಯದ ಗತಿಯನ್ನು ತಿರುಗಿಸಿತು.

ಮಂಡಿನೋವಿನಿಂದ ಚೇತರಿಸಿಕೊಂಡಿರುವ ಸ್ಟೊಯಿನಿಸ್, ಕ್ಯಾಮೆರಾನ್ ಗ್ರೀನ್ ಜಾಗದಲ್ಲಿ ಆಡಬಹುದು. ತಂಡಕ್ಕೆ ಹಲವು ಪಂದ್ಯಗಳನ್ನು ಗೆಲ್ಲಿಸಿಕೊಟ್ಟಿರುವ ಅವರಿಗೆ ಈ ಕ್ರೀಡಾಂಗಣ ಪರಿಚಿತ. ಐಪಿಎಲ್‌ನಲ್ಲಿ ಅವರು ಇಲ್ಲಿನ ಲಖನೌ ಸೂಪರ್‌ಜೈಂಟ್ಸ್‌ಗೆ ಆಡಿದ್ದಾರೆ. ಇದೂ ಅವರಿಗೆ ನೆರವಾಗಬಹುದು. ಬೌಲಿಂಗ್‌ನಲ್ಲೂ ಅವರು ಕಮಿನ್ಸ್, ಹ್ಯಾಜಲ್‌ವುಡ್, ಸ್ಟಾರ್ಕ್ ಅವರಿಗೆ ಹೆಗಲು ನೀಡಬಲ್ಲರು.


ತೆಂಬಾ ಬವುಮಾ

ಇನ್ನೊಂದೆಡೆ, ದಕ್ಷಿಣ ಆಫ್ರಿಕಾ, ಮೂವರ ಶತಕದೊಡನೆ ಮೊದಲ ಪಂದ್ಯದ ಅಮೋಘ ಗೆಲುವಿನಿಂದ ಉಮೇದಿನಲ್ಲಿದೆ. ಯಾವುದೇ ದಾಳಿಯನ್ನು ಪುಡಿಗಟ್ಟಬಲ್ಲ ಕ್ವಿಂಟನ್ ಡಿಕಾಕ್ ಈ ಮೂವರಲ್ಲಿ ಒಬ್ಬರಾಗಿದ್ದಾರೆ. ಅವರೂ, ಐಪಿಎಲ್‌ನಲ್ಲಿ ಲಖನೌ ತಂಡಕ್ಕೆ ಆಡುವವರು. ಅವರಿಗೂ ಇದು ಪರಿಚಿತ ತಾಣವೇ.

ರಸಿ ವಾನ್ ಡರ್‌ಡಸೆ ಮತ್ತು ಏಡನ್ ಮರ್ಕರಂ ಕೂಡ ಅಪಾಯಕಾರಿ ಎಂಬುದು ಮೊದಲ ಪಂದ್ಯದಲ್ಲಿ ಸಾಬೀತಾಗಿದೆ. ನಾಯಕ ತೆಂಬಾ ಬವುಮಾ, ಆಕ್ರಮಣಕಾರಿ ಆಟಗಾರ ಡೇವಿಡ್ ಮಿಲ್ಲರ್, ಹೆನ್ರಿಕ್ ಕ್ಲಾಸೆನ್ ಹೀಗೆ ತಂಡದ ಬ್ಯಾಟಿಂಗ್ ಸರದಿ ಆಳವಾಗಿದೆ.

ಟೀಕೆಗಳ ನಂತರ ಲಖನೌ ಕ್ರೀಡಾಂಗಣದ ಮಂದಗತಿಯ ಪಿಚ್ ಮರುನಿರ್ಮಾಣ ಮಾಡಲಾಗಿದೆ. ಇದು ಹೇಗೆ ವರ್ತಿಸಬಹುದೆಂಬುದು ನಿಗೂಢ. ಸ್ಪಿನ್‌ಗೆ ನೆರವಾದರೆ ದಕ್ಷಿಣ ಆಫ್ರಿಕನ್ನರು ತಬ್ರೇಜ್ ಸಂಶಿ ಅವರನ್ನು ಆಡಿಸಬೇಕಾದ ಪ್ರಲೋಭನೆಗೆ ಒಳಗಾಗಬಹುದು. ಕೇಶವ ಮಹಾರಾಜ್ ತಂಡದಲ್ಲಿರುವ ಕಾಯಂ ಎಡಗೈ ಸ್ಪಿನ್ನರ್.

ಆದರೆ ವೇಗದ ಬೌಲಿಂಗ್ ವಿಭಾಗ ಅಷ್ಟೇನೂ ಬಲಿಷ್ಠವಾಗಿಲ್ಲ. ಆ್ಯನ್ರಿಚ್ ನಾಕಿಯಾ ಅವರ ಅನುಪಸ್ಥಿತಿಯಲ್ಲಿ ಅನುಭವಿ ಕಗಿಸೊ ರಬಾಡಾ ಅವರು ಲುಂಗಿ ಗಿಡಿ ಮತ್ತು ಮಾರ್ಕೊ ಜಾನ್ಸೆನ್ ಅವರೊಂದಿಗೆ ಉತ್ತಮ ಪ್ರದರ್ಶನ ನೀಡಬೇಕಾದ ಒತ್ತಡದಲ್ಲಿದ್ದಾರೆ.

ಮೊದಲ ಪಂದ್ಯದಲ್ಲಿ ಗೆದ್ದ ರೀತಿ ಮತ್ತು ಕಳೆದ ತಿಂಗಳು ಏಕದಿನ ಸರಣಿಯಲ್ಲಿ ಇದೇ ಎದುರಾಳಿ ಎದುರು 0–2 ಹಿನ್ನಡೆಯಿಂದ ಪುಟಿದೆದ್ದು 3–2ರಿಂದ ಸಾಧಿಸಿದ ಗೆಲುವು– ಈ ಅಂಶಗಳು ಗುರುವಾರದ ಪಂದ್ಯಕ್ಕೆ ದಕ್ಷಿಣ ಆಫ್ರಿಕಾದ ಮನೋಬಲ ಹೆಚ್ಚಿಸಬಲ್ಲವು.

ಆದರೆ ಆಸ್ಟ್ರೇಲಿಯಾ ಛಲದ ಆಟಕ್ಕೆ ಹೆಸರಾಗಿದ್ದು, ಯಾವುದೇ ಹಂತದಲ್ಲಿ ಪುಟಿದೇಳಬಲ್ಲ ಸಾಮರ್ಥ್ಯ ಹೊಂದಿದೆ.

ಮುಖಾಮುಖಿ

50	ಆಸ್ಟ್ರೇಲಿಯಾ ಗೆಲುವು
54	ದಕ್ಷಿಣ ಆಫ್ರಿಕಾ ಗೆಲುವು
3	ಟೈ
1	ಫಲಿತಾಂಶವಿಲ್ಲ

ಇವೆರಡು ತಂಡಗಳ ನಡುವೆ ಕೊನೆಯ 10 ಪಂದ್ಯಗಳಲ್ಲಿ ಎಂಟರಲ್ಲಿ ದಕ್ಷಿಣ ಆಫ್ರಿಕಾ ಜಯಗಳಿಸಿದೆ. ಆಸ್ಟ್ರೇಲಿಯಾ ಎರಡು ಬಾರಿ ಜಯಗಳಿಸಿದೆ.


ನೆಟ್ಸ್‌ನಲ್ಲಿ ಅಭ್ಯಾಸ ನಡೆಸಿದ ಸ್ಟೊಯಿನಿಸ್ –ಪಿಟಿಐ ಚಿತ್ರ

ತಂಡಗಳು

ದಕ್ಷಿಣ ಆಫ್ರಿಕಾ: ತೆಂಬಾ ಬವುಮಾ (ನಾಯಕ), ಜೆರಾಲ್ಡ್ ಕೊಯಟ್ಜಿ, ಕ್ವಿಂಟನ್ ಡಿ ಕಾಕ್, ರೀಜಾ ಹೆಂಡ್ರಿಕ್ಸ್, ಮಾರ್ಕೊ ಜಾನ್ಸೆನ್, ಹೆನ್ರಿಚ್ ಕ್ಲಾಸೆನ್, ಕೇಶವ ಮಹಾರಾಜ್, ಏಡನ್ ಮರ್ಕರಂ, ಡೇವಿಡ್ ಮಿಲ್ಲರ್, ಲುಂಗಿ ಗಿಡಿ, ಆ್ಯಂಡಿಲೊ ಪಿಶುವಾಯೊ, ಕಗಿಸೊ ರಬಾಡ, ತಬ್ರೇಜ್ ಶಂಶಿ, ರಸಿ ವಾನ್‌ಡರ್ ಡಸೆ, ಲಿಝಾಡ್ ವಿಲಿಯಮ್ಸ್.

ಆಸ್ಟ್ರೇಲಿಯಾ: ಪ್ಯಾಟ್ ಕಮಿನ್ಸ್ (ನಾಯಕ), ಸ್ಟೀವ್ ಸ್ಮಿತ್, ಅಲೆಕ್ಸ್ ಕ್ಯಾರಿ, ಜೋಶ್ ಇಂಗ್ಲಿಷ್, ಸೀನ್ ಅಬೋಟ್, ಆ್ಯಷ್ಟನ್ ಅಗರ್, ಕ್ಯಾಮೆರಾನ್ ಗ್ರೀನ್, ಜೋಶ್ ಹೇಜಲ್‌ವುಡ್, ಟ್ರಾವಿಡ್ ಹೆಡ್, ಮಿಚೆಲ್ ಮಾರ್ಷ್, ಗ್ಲೆನ್ ಮ್ಯಾಕ್ಸ್‌ವೆಲ್, ಮಾರ್ಕಸ್ ಸ್ಟೊಯಿನಿಸ್, ಡೇವಿಡ್ ಮಿಲ್ಲರ್, ಆ್ಯಡಂ ಜಂಪಾ ಮತ್ತು ಮಿಚೆಲ್ ಸ್ಟಾರ್ಕ್.

ಪಂದ್ಯ ಆರಂಭ: ಮಧ್ಯಾಹ್ನ 2.00
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಕ್ ಮಾಧ್ಯಮ ವರ್ಗಕ್ಕೂ ವೀಸಾ

ಇಂದು ಭಾರತಕ್ಕೆ ತೆರಳುವೆ: ಝಕಾ

ಲಾಹೋರ್ (ಪಿಟಿಐ): ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಅಧ್ಯಕ್ಷ ಝಕಾ ಅಶ್ರಫ್ ಅವರು ಅಹಮದಾಬಾದ್‌ನಲ್ಲಿ ಶನಿವಾರ ನಡೆಯಲಿರುವ ಬಹುನಿರೀಕ್ಷಿತ ಭಾರತ– ಪಾಕಿಸ್ತಾನ ಏಕದಿನ ವಿಶ್ವಕಪ್ ಪಂದ್ಯ ನೋಡಲು ಗುರುವಾರ ಭಾರತಕ್ಕೆ ಬರಲಿದ್ದಾರೆ.


ಝಕಾ ಅಶ್ರಫ್

ವಿಶ್ವಕಪ್ ವೀಕ್ಷಿಸಲು ಪಾಕಿಸ್ತಾನದ ಮಾಧ್ಯಮದವರಿಗೂ ವೀಸಾ ನೀಡುವ ಪ್ರಕ್ರಿಯೆಗೆ ಹಸಿರುನಿಶಾನೆ ತೋರಲಾಗಿದೆ. ಸುಮಾರು 60 ಮಂದಿ ಪಾಕ್ ಪತ್ರಕರ್ತರು ವೀಸಾಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಈ ಪ್ರಕ್ರಿಯೆಯಲ್ಲಿ ವಿಳಂಬವಾದಲ್ಲಿ ಅವರು ಶನಿವಾರ ಅಹಮದಾಬಾದ್‌ನಲ್ಲಿ ನಡೆಯಲಿರುವ ಮಹತ್ವದ ಪಂದ್ಯ ಕಳೆದುಕೊಳ್ಳಲಿದ್ದಾರೆ.

‘ಭಾರತಕ್ಕೆ ನನ್ನ ಪ್ರಯಾಣ ತಡಮಾಡಿದೆ. ಪಾಕಿಸ್ತಾನದ ಪತ್ರಕರ್ತರಿಗೆ ವೀಸಾ ಪಡೆಯಲು ಪಾಸ್‌ಪೋರ್ಟ್ ಸಲ್ಲಿಸಬೇಕೆಂಬ ಮಾಹಿತಿ ಖಚಿತವಾದ ನಂತರ ನಾನು ಗುರುವಾರ ಭಾರತಕ್ಕೆ ಹೋಗುತ್ತಿದ್ದೇನೆ’ ಎಂದು ಅಶ್ರಫ್ ಹೇಳಿಕೆಯನ್ನು ಪಿಸಿಬಿ ಬಿಡುಗಡೆ ಮಾಡಿದೆ.

‘ತಂಡಕ್ಕೆ ಪ್ರೇರಣೆ ನೀಡಲು ನಾನು ಭಾರತಕ್ಕೆ ಹೋಗುತ್ತಿದ್ದೇನೆ. ಎಲ್ಲ ಪಂದ್ಯಗಳ ರೀತಿ ಭಾರತ ವಿರುದ್ಧ ಪಂದ್ಯವನ್ನೂ ನಿರ್ಭೀತಿಯಿಂದ ಆಡಿ ಎಂಬುದು ತಂಡಕ್ಕೆ ನನ್ನ ಸಂದೇಶ’ ಎಂದರು ಝಕಾ.

ಗಾಜಾದ ಸೋದರ– ಸೋದರಿಯರಿಗೆ ಪಾಕ್ ಗೆಲುವು ಅರ್ಪಿಸಿದ ರಿಜ್ವಾನ್

ಹೈದರಾಬಾದ್ (ಪಿಟಿಐ): ಶ್ರೀಲಂಕಾ ವಿರುದ್ಧ ಇಲ್ಲಿ ಮಂಗಳವಾರ ಏಕದಿನ ಕ್ರಿಕೆಟ್ ವಿಶ್ವಕಪ್ ಪಂದ್ಯದಲ್ಲಿ ಪಾಕ್ ತಂಡದ ದಾಖಲೆ ಗೆಲುವನ್ನು, ತಂಡದ ವಿಕೆಟ್ ಕೀಪರ್ ಬ್ಯಾಟರ್ ಮೊಹಮ್ಮದ್ ರಿಜ್ವಾನ್ ಅವರು ‘ಗಾಜಾದ ಸೋದರ– ಸೋದರಿಯರಿಗೆ ಅರ್ಪಿಸುತ್ತೇನೆ’ ಎಂದು ಹೇಳಿದ್ದಾರೆ. ಈ ಬಗ್ಗೆ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಹಾಕಿದ್ದಾರೆ.

ರಿಜ್ವಾನ್ ಅವರು ಅವರು 131 ರನ್ ಬಾರಿಸಿ, ಅಬ್ದುಲ್ಲಾ ಶಫೀಕ್ (113) ಅವರೊಂದಿಗೆ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇವರಿಬ್ಬರು ಮೂರನೇ ವಿಕೆಟ್‌ಗೆ 176 ರನ್ ಸೇರಿಸಿದ್ದರು. ಹೈದರಾಬಾದ್ ಪ್ರೇಕ್ಷಕರ ಬೆಂಬಲದ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ

ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್ ● ಅಮಿಯ ಮಲಿಕ್ ದಾಖಲೆ ಮೀರಿದ ಕನ್ನಡಿಗ

100 ಮೀ. ಓಟ: ರಾಷ್ಟ್ರೀಯ ದಾಖಲೆ ಮುರಿದ ಮಣಿಕಂಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ವಿಸಸ್ ತಂಡವನ್ನು ಪ್ರತಿನಿಧಿಸುತ್ತಿರುವ ಕನ್ನಡಿಗ ಎಚ್‌.ಎಚ್‌.ಮಣಿಕಂಠ ಅವರು ಬುಧವಾರ ಆರಂಭವಾದ 62ನೇ ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ದಿನ 100 ಮೀ. ಓಟದಲ್ಲಿ ರಾಷ್ಟ್ರೀಯ ದಾಖಲೆ ಸ್ಥಾಪಿಸಿದ ಗೌರವಕ್ಕೆ ಪಾತ್ರರಾದರು.

ಮಧ್ಯಾಹ್ನದ ನಂತರ ಮಳೆಯಿಂದಾಗಿ ಕಂಠೀರವ ಕ್ರೀಡಾಂಗಣದಲ್ಲಿ ಕೆಲವು ಸ್ಪರ್ಧೆಗಳಿಗೆ ಅಡ್ಡಿಯಾಯಿತು. ಉಡುಪಿ ಜಿಲ್ಲೆ ನಾವುಂದ ಮೂಲದ ಮಣಿಕಂಠ ಅವರು ಮೂರನೇ ಸೆಮಿಫೈನಲ್ ಹೀಟ್ಸ್‌ನಲ್ಲಿ ಈ ಓಟವನ್ನು 10.23 ಸೆಕೆಂಡುಗಳಲ್ಲಿ ಪೂರೈಸಿದರು. ಈ ಹಿಂದಿನ ದಾಖಲೆಯನ್ನು (10.26 ಸೆ.) ಒಡಿಶಾದ ಅಮಿಯ ಕುಮಾರ್ ಮಲಿಕ್ ಅವರು ಏಳು ವರ್ಷಗಳ ಹಿಂದೆ ರಾಷ್ಟ್ರೀಯ ಫೆಡರೇಷನ್ ಕಪ್‌ನಲ್ಲಿ ಸ್ಥಾಪಿಸಿದ್ದರು. ಕೂಟ ದಾಖಲೆ (ವಾರಂಗಲ್‌ನಲ್ಲಿ 10.34 ಸೆ.) ಆಮ್ಲನ್ ಬೋರ್ಗೊಹೈನ್ ಅವರ ಹೆಸರಿನಲ್ಲಿತ್ತು.



ಎಚ್‌.ಎಚ್‌. ಮಣಿಕಂಠ

'ಬಾಲ್ಯವನ್ನು ಉಡುಪಿಯಲ್ಲಿ ಕಳೆದಿದ್ದೆ. ಕ್ರೀಡಾ ಹಾಸ್ಟೆಲ್‌ನಲ್ಲಿ ನಾನು ಓಟದ ಸ್ಪರ್ಧೆಗಳಲ್ಲಿ ಭಾಗ ವಹಿಸಲು ಆರಂಭಿಸಿದೆ. ಬೆಂಗಳೂರಿಗೆ ಬಂದು ಒಂದು ವರ್ಷದ ನಂತರ ಸೇನೆಗೆ ಸೇರ್ಪಡೆಯಾದೆ' ಎಂದು ಮಣಿಕಂಠ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಹೈದರಾಬಾದ್‌ನ ಸೇನಾ ಕ್ರೀಡಾಕೇಂದ್ರದಲ್ಲಿ ಅವರು ಈ ಓಟದಲ್ಲಿ ಉತ್ತಮ ಸಾಧನೆ ತೋರಲು ಶ್ರಮ ಹಾಕುತ್ತಿದ್ದಾರೆ. ಕಳೆದ ತಿಂಗಳು ಸರ್ವಿಸಸ್ ಕ್ರೀಡಾಕೂಟದಲ್ಲಿ ಅವರು 10.31 ಸೆ.ಗಳಲ್ಲಿ ಓಡಿದ್ದರು. ಅವರು ಶೀಘ್ರ 10.10 ಸೆ. ಅವಧಿಯೊಳಗೆ ಓಡಬಲ್ಲರೆಂಬ ವಿಶ್ವಾಸವಿದೆ' ಎಂದು ಮಣಿಕಂಠ ಅವರ ಕೋಚ್ ಅಬೂಬಕ್ಕರ್ ಟಿ. ತಿಳಿಸಿದರು.

ಮಹಾರಾಷ್ಟ್ರದ ದಿನೇಶ್ ಅವರು ಪುರುಷರ 10,000 ಮೀ. ಓಟದಲ್ಲಿ ಸರ್ವಿಸಸ್‌ನ ಇಬ್ಬರು ಸ್ಪರ್ಧಿಗಳಾದ ಮೋಹನ್ ಸೈನಿ ಮತ್ತು ಸಂದೀಪ್ ಸಿಂಗ್ ಅವರಿಂದ ತೀವ್ರ ಪೈಪೋಟಿ ಎದುರಿಸಿದರೂ ಅಂತಿಮ ಕ್ಷಣಗಳಲ್ಲಿ ಸ್ಪಷ್ಟ ಮುನ್ನಡೆ ಸಾಧಿಸಿ ಚಿನ್ನ ಗೆದ್ದರು. ಮೊದಲ ದಿನ ನಾಲ್ಕು ಫೈನಲ್‌ಗಳು ನಡೆದವು.

ಫಲಿತಾಂಶಗಳು ಇಂತಿವೆ:

ಪುರುಷರು: 10,000 ಮೀ. ಓಟ: ದಿನೇಶ್ (ಮಹಾರಾಷ್ಟ್ರ, ಕಾಲ: 29 ನಿ, 10.11 ಸೆ.)–1, ಮೋಹನ್ ಸೈನಿ (ಎಸ್‌ಎಸ್‌ಸಿಬಿ, ಕಾಲ: 29ನಿ.10.82 ಸೆ.)–2, ಸಂದೀಪ್ ಸಿಂಗ್ (ಎಸ್‌ಎಸ್‌ಸಿಬಿ, ಕಾಲ: 29ನಿ. 11.21 ಸೆ)–3; ಪೋಲ್‌ವಾಲ್ಟ್: ದೇವ್ ಮೀನಾ (ಮಧ್ಯಪ್ರದೇಶ)–1, ಶೇಖರ್ ಪಾಂಡೆ (ಉತ್ತರ ಪ್ರದೇಶ)–2, ತನುಜ್ ಕುಮಾರ್ (ಹರಿಯಾಣ)–3, ಎತ್ತರ: 5.05 ಮೀ.

ಮಹಿಳೆಯರು: 10,000 ಮೀ. ಓಟ: ಸೀಮಾ (ಹಿಮಾಚಲಪ್ರದೇಶ, ಕಾಲ: 33ನಿ.26.90 ಸೆ.)–1, ಕವಿತಾ ಯಾದವ್ (ರೈಲ್ವೇಸ್, ಕಾಲ: 33ನಿ.35.56 ಸೆ.)–2, ಫೂಲನ್ ಪಾಲ್ (ಉತ್ತರ ಪ್ರದೇಶ, ಕಾಲ: 34ನಿ.55.13 ಸೆ.); ಹ್ಯಾಮರ್ ಥ್ರೋ: ಅನ್ಮೋಲ್ ಕೌರ್ (ಪೊಲೀಸ್ ಕ್ರೀಡಾ ಮಂಡಳಿ)–1, ತಾನ್ಯಾ ಚೌಧರಿ (ಉತ್ತರ ಪ್ರದೇಶ)–2, ಸರಿತಾ ಸಿಂಗ್ (ರೈಲ್ವೇಸ್)–3, ದೂರ: 60.19 ಮೀ.



10,000 ಮೀ. ಓಟದಲ್ಲಿ ಚಿನ್ನ ಗೆದ್ದ ಹಿಮಾಚಲ ಪ್ರದೇಶದ ಸೀಮಾ
ಪ್ರಜಾವಾಣಿ ಚಿತ್ರ/ ಬಿ.ಎಚ್‌ ಶಿವಕುಮಾರ್